prajavani.net prajavani | ಮಂಗಳವಾರ, ಡಿಸೆಂಬರ್ 30, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 360 | ಪುಟ 14 | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಸಮರ್ಥ್ ಶತಕ
ವಿದರ್ಭ ತಂಡಕ್ಕೆ ಆಡುತ್ತಿರುವ ಕರ್ನಾಟಕದ ಸಮರ್ಥ್ ಆರ್. (114 ರನ್) ವಿಜಯ್ ಹಜಾರೆ ಟ್ರೋಫಿ ಟೂರ್ನಿಯಲ್ಲಿ ಶತಕ ದಾಖಲಿಸಿದರು. ವಿದರ್ಭ 5 ವಿಕೆಟ್‌ಗಳಿಂದ ಜಮ್ಮು ಕಾಶ್ಮೀರ ತಂಡವನ್ನು ಮಣಿಸಿತು

ಸೆನ್ಸೆಕ್ಸ್ 84,695 | ನಿಫ್ಟಿ 25,942 | $/₹ 89.98 | ಚಿನ್ನ (Std. 10g) ₹1,45,950 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,64,700 (ಬೆಂಗಳೂರು)

ಅತ್ಯಾಚಾರಿ ಸೆಂಗರ್ ಶಿಕ್ಷೆಗೆ ತಡೆ ಇಲ್ಲ

ಇದು ವಿಶಿಷ್ಟ ಪ್ರಕರಣ, ಸಮಗ್ರ ಪರಿಶೀಲನೆ ಅಗತ್ಯ: ಸುಪ್ರೀಂ ಕೋರ್ಟ್

ಪ್ರಜಾವಾಣಿ ವಾರ್ತೆ

ನವದೆಹಲಿ: ಉನ್ನಾವೊ ಅತ್ಯಾಚಾರ ಪ್ರಕರಣದ ಆರೋಪಿ, ಬಿಜೆಪಿಯ ಉಚ್ಚಾಟಿತ ನಾಯಕ ಕುಲದೀಪ್ ಸಿಂಗ್ ಸೆಂಗರ್‌ಗೆ ವಿಧಿಸಿದ್ದ ಜೀವಾವಧಿ ಶಿಕ್ಷೆಯನ್ನು ಅಮಾನತುಗೊಳಿಸಿ, ಜಾಮೀನು ನೀಡಿ ದೆಹಲಿ ಹೈಕೋರ್ಟ್ ಹೊರಡಿಸಿದ್ದ ಆದೇಶಕ್ಕೆ ಸುಪ್ರೀಂ ಕೋರ್ಟ್ ಸೋಮವಾರ ತಡೆ ನೀಡಿದೆ.

ಈ ಕುರಿತು ನಾಲ್ಕು ವಾರಗಳ ಒಳಗಾಗಿ ಪ್ರತಿಕ್ರಿಯೆ ಸಲ್ಲಿಸುವಂತೆ ಸೆಂಗರ್‌ಗೆ ನೋಟಿಸ್ ನೀಡಿರುವ ಸುಪ್ರೀಂ ಕೋರ್ಟ್, ಹೈಕೋರ್ಟ್‌ನ ಆದೇಶದ ಅನುಸಾರ ಪ್ರತಿವಾದಿಯನ್ನು(ಸೆಂಗರ್) ಕಸ್ಟಡಿಯಿಂದ ಬಿಡುಗಡೆ ಮಾಡಕೂಡದು ಎಂದೂ ಆದೇಶಿಸಿದೆ.

ಸೆಂಗರ್‌ಗೆ ವಿಧಿಸಿದ್ದ ಜೀವಾವಧಿ ಶಿಕ್ಷೆಯನ್ನು ಅಮಾನತುಗೊಳಿಸಿ ಡಿಸೆಂಬರ್ 23ರಂದು ದೆಹಲಿ ಹೈಕೋರ್ಟ್ ಹೊರಡಿಸಿದ್ದ ಆದೇಶ ಪ್ರಶ್ನಿಸಿ ಸಿಬಿಐ ಅರ್ಜಿ ಸಲ್ಲಿಸಿತ್ತು. ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜೆ.ಕೆ ಮಾಹೇಶ್ವರಿ ಮತ್ತು ಅಗಸ್ಟಿನ್ ಜಾರ್ಜ್ ಮಸೀಹ್ ಅವರು ಇದ್ದ ರಜಾ ಕಾಲದ ಪೀಠವು ಈ ಅರ್ಜಿ ವಿಚಾರಣೆ ನಡೆಸಿತು.

ಸಿಬಿಐ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ವಾದ ಆಲಿಸಿದ ಪೀಠವು, 'ಈ ಪ್ರಕರಣದಲ್ಲಿ ಜನ ಸೇವಕನ ವ್ಯಾಖ್ಯಾನ ಸೇರಿ ಕಾನೂನಿಗೆ ಸಂಬಂಧಿಸಿ ಕೆಲವು ಗಮನಾರ್ಹ ಪ್ರಶ್ನೆಗಳು ಉದ್ಭವಿಸಿವೆ. ಇವುಗಳ ಕುರಿತು ಪರಿಶೀಲನೆ ಅಗತ್ಯ' ಎಂದು ಅಭಿಪ್ರಾಯಪಟ್ಟಿತು.



ಕುಲದೀಪ್ ಸಿಂಗ್ ಸೆಂಗರ್

'ಶಿಕ್ಷೆಗೆ ತಡೆ ನೀಡುವ ಆದೇಶಗಳನ್ನು ಸಾಮಾನ್ಯವಾಗಿ ರದ್ದು ಮಾಡಲಾಗುವುದಿಲ್ಲ. ಆದರೆ, ಮತ್ತೊಂದು ಪ್ರಕರಣಕ್ಕೆ ಸಂಬಂಧಿಸಿ ಸೆಂಗರ್ ಕಸ್ಟಡಿಯಲ್ಲಿ ಇರುವ ಕಾರಣ ಇದೊಂದು ವಿಶಿಷ್ಟ ಪ್ರಕರಣವಾಗಿದೆ' ಎಂದು ಪೀಠ ಹೇಳಿತು.

ವಿಚಾರಣೆ ವೇಳೆ, 'ಸಂತ್ರಸ್ತೆಯ ತಂದೆ ಹಾಗೂ ಇತರ ಕೆಲ ವ್ಯಕ್ತಿಗಳನ್ನು ಅಪರಾಧಿಯು ಕೊಲೆ ಮಾಡಿರುವ ಕಾರಣ, ಆತ ಜೈಲಿನಿಂದ ಹೊರಬರಕೂಡದು. ಹೀಗಾಗಿ, ಹೈಕೋರ್ಟ್ ಆದೇಶಕ್ಕೆ ತಡೆಯಾಜ್ಞೆ ನೀಡಬೇಕು' ಎಂದು ಮೆಹ್ತಾ ಕೋರಿದರು.

▶7

> **ತಡೆಯಾಜ್ಞೆ ನೀಡಿರುವುದು ನಮಗೆ ನಿರಾಳ ತಂದಿದೆ. ಇದಕ್ಕಾಗಿ ಸುಪ್ರೀಂ ಕೋರ್ಟ್‌ಗೆ ಧನ್ಯವಾದ ಹೇಳುವೆ. ನನ್ನ ಪತಿಯನ್ನು ಕೊಂದವರಿಗೆ ಮರಣ ದಂಡನೆ ವಿಧಿಸಬೇಕು**
> **ಸಂತ್ರಸ್ತೆಯ ತಾಯಿ**

'ಆತನನ್ನು ಗಲ್ಲಿಗೇರಿಸುವವರೆಗೆ ವಿರಮಿಸೆ'

ಉನ್ನಾವೊ/ನವದೆಹಲಿ: ಸೆಂಗರ್‌ಗೆ ವಿಧಿಸಿದ್ದ ಶಿಕ್ಷೆಗೆ ತಡೆ ನೀಡಿದ್ದ ದೆಹಲಿ ಹೈಕೋರ್ಟ್ ಆದೇಶವನ್ನು ಸುಪ್ರೀಂ ಕೋರ್ಟ್ ರದ್ದುಪಡಿಸಿರುವುದಕ್ಕೆ ತೃಪ್ತಿ ವ್ಯಕ್ತಪಡಿಸಿರುವ ಅತ್ಯಾಚಾರ ಸಂತ್ರಸ್ತೆ, 'ಆತನನ್ನು ಗಲ್ಲಿಗೇರಿಸುವವರೆಗೆ ವಿರಮಿಸುವುದಿಲ್ಲ' ಎಂದು ಸೋಮವಾರ ಹೇಳಿದರು.

ಪಿಟಿಐ ಜೊತೆ ದೂರವಾಣಿ ಮೂಲಕ ಮಾತನಾಡಿದ ವೇಳೆ ಈ ವಿಷಯ ತಿಳಿಸಿದ ಸಂತ್ರಸ್ತೆ, 'ಈಗಲೂ ನಮ್ಮ ಕುಟುಂಬಕ್ಕೆ ಬೆದರಿಕೆ ಕರೆಗಳು ಬರುತ್ತಿವೆ. ಆದರೆ, ಆತನನ್ನು ಗಲ್ಲು ಶಿಕ್ಷೆಗೆ ಗುರಿಪಡಿಸುವವರೆಗೆ ನಾನು ಹೋರಾಡುವೆ. ಆಗ ಮಾತ್ರ ನನಗೆ ಮತ್ತು ನನ್ನ ಕುಟುಂಬಕ್ಕೆ ನ್ಯಾಯ ಸಿಕ್ಕಂತಾಗಲಿದೆ' ಎಂದಿದ್ದಾರೆ.

'ನನಗೆ ನ್ಯಾಯಾಂಗದ ಮೇಲೆ ವಿಶ್ವಾಸ ಇದೆ. ಈ ಆದೇಶದಿಂದ ನನಗೆ ಖುಷಿಯಾಗಿದೆ. ನಾನು ಯಾವ ನ್ಯಾಯಾಲಯದ ವಿರುದ್ಧವೂ ಆರೋಪಗಳನ್ನು ಮಾಡುವುದಿಲ್ಲ' ಎಂದೂ ಹೇಳಿದ್ದಾರೆ.

'ಕೆಲವರಿಂದ ರಾಜಕೀಯ ಲಾಭದ ಯತ್ನ'

'ಕುಲದೀಪ್ ಸಿಂಗ್ ಸೆಂಗರ್‌ಗೆ ವಿಧಿಸಿದ್ದ ಶಿಕ್ಷೆಗೆ ತಡೆ ನೀಡಿ ದೆಹಲಿ ಹೈಕೋರ್ಟ್ ಆದೇಶ ಹೊರಡಿಸಿದ ವಿಚಾರ ಮುಂದಿಟ್ಟುಕೊಂಡು ಕೆಲವರು ರಾಜಕೀಯ ಲಾಭ ಮಾಡಿಕೊಳ್ಳಲು ಯತ್ನಿಸುತ್ತಿದ್ದಾರೆ' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

'ನಮ್ಮ ಕಕ್ಷಿದಾರನಿಗೆ ನೀಡಿದ್ದ ಶಿಕ್ಷೆಯನ್ನು ಅಮಾನತು ಮಾಡಿರುವ ಹೈಕೋರ್ಟ್ ನ್ಯಾಯಮೂರ್ತಿಗಳ ವಿರುದ್ಧ ಕೆಲವರು ಆರೋಪಗಳನ್ನು ಮಾಡುತ್ತಿದ್ದಾರೆ' ಎಂಬ ಸೆಂಗರ್ ಪರ ವಕೀಲರ ಮಾತಿಗೆ ಸುಪ್ರೀಂ ಕೋರ್ಟ್ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

'ಇದು ನಮಗೆ ಅರ್ಥವಾಗುತ್ತದೆ. ನಾವೇನು ದಂತಗೋಪುರದಲ್ಲಿ ಕುಳಿತಿಲ್ಲ. ಕೆಲವರು ರಾಜಕೀಯ ಲಾಭ ಪಡೆಯಲು ಯತ್ನಿಸುತ್ತಿದ್ದಾರೆ ಎಂಬ ಅರಿವು ನಮಗಿದೆ' ಎಂದು ಸಿಜೆಐ ಸೂರ್ಯಕಾಂತ್ ಹೇಳಿದರು.

ಇದೇ ವೇಳೆ, 'ಕೆಲ ವಕೀಲೆಯರು ಪ್ರತ್ಯೇಕ ಮೇಲ್ಮನವಿ ಸಲ್ಲಿಸಿದ್ದಾರೆ. ಅವರು ಸಾರ್ವಜನಿಕ ವೇದಿಕೆಗಳಲ್ಲಿ ನ್ಯಾಯಮೂರ್ತಿಗಳ ವಿರುದ್ಧ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಹೀಗಾಗಿ ಅವರು ಸಲ್ಲಿಸಿರುವ ಅರ್ಜಿಗಳನ್ನು ವಜಾ ಮಾಡಬೇಕು' ಎಂದು ಸೆಂಗರ್ ಪರ ವಕೀಲ ಎನ್. ಹರಿಹರನ್ ಕೋರಿದರು.

'ಶಿಕ್ಷೆಗೆ ತಡೆ ನೀಡಿ ಆದೇಶಿಸಿರುವ ಹೈಕೋರ್ಟ್ ನ್ಯಾಯಮೂರ್ತಿಗಳ ಭಾವಚಿತ್ರಗಳನ್ನು ಹಂಚಿಕೊಳ್ಳಲಾಗುತ್ತಿದೆ. ನ್ಯಾಯಮೂರ್ತಿಗಳ ವಿರುದ್ಧ ಆರೋಪಗಳನ್ನು ಮಾಡಿರುವ ವಿಡಿಯೊ ಕೂಡ ಹರಿದಾಡುತ್ತಿದೆ. ಇದು ಆತಂಕಕ್ಕೆ ಕಾರಣವಾಗಿದೆ. ಪ್ರಾಮಾಣಿಕವಾಗಿ ಹೇಳಬೇಕು ಎಂದರೆ, ಇವರು ಕೂಡ ನಮ್ಮಲ್ಲಿರುವ ಅತ್ಯುತ್ತಮ ನ್ಯಾಯಮೂರ್ತಿಗಳಾಗಿದ್ದಾರೆ' ಎಂದು ಪೀಠ ಹೇಳಿತು.



ಸೆಂಗರ್‌ಗೆ ವಿಧಿಸಿದ್ದ ಶಿಕ್ಷೆಗೆ ತಡೆ ನೀಡಿ ಹೈಕೋರ್ಟ್ ಹೊರಡಿಸಿದ್ದ ಆದೇಶ ಪ್ರಶ್ನಿಸಿ ವಕೀಲರಾದ ಅಂಜಲಿ ಪಟೇಲ್ ಹಾಗೂ ಪೂಜಾ ಶಿಲ್ಪಕರ್ ಅವರು ಪ್ರತ್ಯೇಕ ಮೇಲ್ಮನವಿ ಸಲ್ಲಿಸಿದ್ದಾರೆ.

ಬೃಹತ್ ಪ್ರತಿಭಟನೆ

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್



ಪರಿಶಿಷ್ಟ ಪಂಗಡಕ್ಕೆ ಸೇರಿಸುವಂತೆ ಆಗ್ರಹಿಸಿ ಕೋಲಿ–ಕಬ್ಬಲಿಗ ಸಮುದಾಯದಿಂದ ಕಲಬುರಗಿಯಲ್ಲಿ ಸೋಮವಾರ ನಡೆದ 'ಸ್ವಾಭಿಮಾನ ಪ್ರತಿಭಟನೆ'ಯಲ್ಲಿ ಪಾಲ್ಗೊಂಡಿದ್ದ ಜನಸ್ತೋಮ ▶6

ಅರಾವಳಿ: ಹೊಸ ವ್ಯಾಖ್ಯೆಗೆ ತಡೆ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಅರಾವಳಿ ಪರ್ವತಶ್ರೇಣಿ ಕುರಿತ ಕೇಂದ್ರ ಪರಿಸರ ಸಚಿವಾಲಯದ ವ್ಯಾಖ್ಯೆಯನ್ನು ಅಂಗೀಕರಿಸಿ ನವೆಂಬರ್ 20ರಂದು ತಾನು ನೀಡಿದ ನಿರ್ದೇಶನಗಳನ್ನು ಸುಪ್ರೀಂ ಕೋರ್ಟ್ ಸೋಮವಾರ ಅಮಾನತಿನಲ್ಲಿರಿಸಿದೆ.

ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜೆ.ಕೆ.ಮಾಹೇಶ್ವರಿ ಮತ್ತು ಅಗಸ್ಟಿನ್ ಜಾರ್ಜ್ ಮಸೀಹ್ ಅವರ ರಜಾಕಾಲದ ಪೀಠವು ಈ ವಿಷಯದ ಬಗ್ಗೆ ಅಧ್ಯಯನ ನಡೆಸಲು ತಜ್ಞರನ್ನೊಳಗೊಂಡ ಉನ್ನತಾಧಿಕಾರ ಸಮಿತಿ ರಚಿಸಲು ನಿರ್ದೇಶನ ನೀಡಿತು.

ಹಿಂದೆ ನೀಡಿದ್ದ ತೀರ್ಪನ್ನು ಮರುಪರಿಶೀಲಿಸಬೇಕೆಂಬ ಬೇಡಿಕೆಗಳು ಬಂದ ಕಾರಣ ಸುಪ್ರೀಂ ಕೋರ್ಟ್ ಈ ವಿಚಾರವನ್ನು ಸ್ವಯಂ ಪ್ರೇರಿತವಾಗಿ ಪರಿಗಣಿಸಿ ಈ ಆದೇಶ ನೀಡಿದೆ.

ಅರಾವಳಿ ಪರ್ವತಶ್ರೇಣಿ ಬಗೆಗಿನ ವಿಚಾರದಲ್ಲಿ ಇನ್ನಷ್ಟು ಸ್ಪಷ್ಟತೆಯ ಅಗತ್ಯವಿದೆ ಎಂದು ಹೇಳಿದ ಪೀಠ, ಕೇಂದ್ರ ಸರ್ಕಾರ ಮತ್ತು ಸಂಬಂಧಪಟ್ಟ ಇತರರಿಗೆ ನೋಟಿಸ್ ಜಾರಿ ಮಾಡಿ ವಿಚಾರಣೆಯನ್ನು ಜನವರಿ 21ಕ್ಕೆ ಮುಂದೂಡಿತು. ▶10

ನ್ಯಾಯಪೀಠ ಹೇಳಿದ್ದು...

- ನೂರು ಮೀಟರ್ ಅಥವಾ ಇನ್ನೂ ಎತ್ತರದ ಭೂರಚನೆಗಳನ್ನಷ್ಟೇ ಅರಾವಳಿ ಶ್ರೇಣಿಯಲ್ಲಿನ ಸಂರಕ್ಷಿತ ಪ್ರದೇಶಗಳಾಗಿ ಗುರುತಿಸಬಹುದು ಎಂಬ ಪರಿಸರ ಸಚಿವಾಲಯದ ಸಮಿತಿಯ ಶಿಫಾರಸಿನಲ್ಲಿರುವ 'ಗೊಂದಲ' ಬಗೆಹರಿಸಬೇಕು
- ಸಮಿತಿಯ ಹಿಂದಿನ ವರದಿಯು 'ಕೆಲವು ನಿರ್ಣಾಯಕ ವಿಷಯಗಳ ಬಗ್ಗೆ ಸ್ಪಷ್ಟ ನಿರ್ಧಾರ' ತೆಗೆದುಕೊಳ್ಳಲು ವಿಫಲವಾಗಿದೆ ಎಂದು ಮೇಲ್ನೋಟಕ್ಕೆ ಕಂಡುಬರುತ್ತದೆ. 'ಅಂತಹ ವಿಷಯಗಳ ಬಗ್ಗೆ ಹೆಚ್ಚಿನ ಅಧ್ಯಯನ'ದ ಅಗತ್ಯವಿದೆ
- ಅರಾವಳಿ ಪ್ರದೇಶದ ಪರಿಸರ ಸಮಗ್ರತೆಗೆ ಧಕ್ಕೆ ಉಂಟುಮಾಡುವ ಯಾವುದೇ ಲೋಪವು ಕಾನೂನಿನಲ್ಲಿ ಇಲ್ಲದಂತೆ ನೋಡಿಕೊಳ್ಳಬೇಕಿದೆ
- ಹೊಸ ವ್ಯಾಖ್ಯಾನ ಮತ್ತು ಈ ನ್ಯಾಯಾಲಯದ ನಿರ್ದೇಶನಗಳನ್ನು ತಪ್ಪಾಗಿ ಅರ್ಥೈಸುವ, ಅಸಮರ್ಪಕ ಅನುಷ್ಠಾನದ ಸಂಭಾವ್ಯದ ಬಗ್ಗೆ ಪರಿಸರವಾದಿಗಳಲ್ಲಿ ಆಕ್ರೋಶವಿದೆ

ಸಚಿವರ ರಾಜೀನಾಮೆಗೆ 'ಕೈ' ಆಗ್ರಹ

ಅರಾವಳಿ ಶ್ರೇಣಿಯ ಹೊಸ ವ್ಯಾಖ್ಯಾನವನ್ನು ಅಮಾನತಿನಲ್ಲಿರಿಸುವ ಸುಪ್ರೀಂ ಕೋರ್ಟ್‌ನ ನಿರ್ಧಾರವನ್ನು ಕಾಂಗ್ರೆಸ್ ಸೋಮವಾರ ಸ್ವಾಗತಿಸಿದ್ದು, ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್ ಅವರ ರಾಜೀನಾಮೆಗೆ ಆಗ್ರಹಿಸಿದೆ. ▶10



ಕೋಗಿಲು: ಅರ್ಹರಿಗಷ್ಟೇ 'ಸರ್ಕಾರಿ' ಮನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಗಿಲು ಬಡಾವಣೆಯಲ್ಲಿ ಮನೆ ಕಳೆದುಕೊಂಡಿರುವ ಅರ್ಹರಿಗೆ ಬೈಯ್ಯಪ್ಪನಹಳ್ಳಿಯ ವಸತಿ ಸಮುಚ್ಚಯದಲ್ಲಿ ತಲಾ ₹11.20 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾಗಿರುವ ಮನೆಗಳನ್ನು ಹಂಚಿಕೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.



ಸಿದ್ದರಾಮಯ್ಯ

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಸತಿ ಸಚಿವ ಜಮೀರ್ ಅಹಮದ್ ಖಾನ್ ಹಾಗೂ ಅಧಿಕಾರಿಗಳ ಜತೆ ಸೋಮವಾರ ಸಭೆ ನಡೆಸಿದ ಬಳಿಕ ಅವರು, ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು. ▶6



ಚುನಾವಣಾ ಲಾಭಕ್ಕಾಗಿ ಪಿಣರಾಯಿ ಟೀಕೆ: ಡಿಕೆಶಿ



'ಮುಂಬರುವ ಕೇರಳ ವಿಧಾನಸಭಾ ಚುನಾವಣೆಯಲ್ಲಿ ಸೋಲುವ ಭೀತಿಯಿಂದ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಕೋಗಿಲು ಬಡಾವಣೆ ಒತ್ತುವರಿ ತೆರವು ವಿಚಾರದಲ್ಲಿ ಕುತಂತ್ರ ರಾಜಕೀಯ ಮಾಡುತ್ತಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕೋಗಿಲು ಬಡಾವಣೆಯಲ್ಲಿರುವ ಕ್ವಾರಿ ಜಾಗವನ್ನು ಘನತ್ಯಾಜ್ಯ ವಿಲೇವಾರಿ ಮಾಡಲು ಸರ್ಕಾರ ಒಂಬತ್ತು ವರ್ಷಗಳ ಹಿಂದೆಯೇ ನೀಡಿತ್ತು. ಕೆಲವರು ಈಗ ಒತ್ತುವರಿ ಮಾಡಿಕೊಂಡು ಗುಡಿಸಲು, ಶೆಡ್ ಹಾಕಿದ್ದಾರೆ. ಇದು ಸರ್ಕಾರಿ ಜಾಗ. ಸರಿಯಾದ ಮಾಹಿತಿ ಪಡೆಯದೆ ರಾಜಕೀಯ ಕಾರಣಕ್ಕಾಗಿ ಪಿಣರಾಯಿ ಟೀಕೆ ಮಾಡಿದ್ದಾರೆ' ಎಂದು ದೂರಿದರು.

'ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು ಹಲವು ವಿಚಾರಗಳ ಬಗ್ಗೆ ಸಲಹೆ ನೀಡಿದ್ದಾರೆ, ಆದರೆ, ಎಂದೂ ಆಡಳಿತದಲ್ಲಿ ಹಸ್ತಕ್ಷೇಪ ಮಾಡಿಲ್ಲ. ವೇಣುಗೋಪಾಲ್ ನಮ್ಮ ನಾಯಕರು, ಸಲಹೆ ನೀಡುವ ಎಲ್ಲಾ ಅಧಿಕಾರ ಅವರಿಗಿದೆ' ಎಂದರು.

'ಕಾಂಗ್ರೆಸ್ ನಾಡ ದ್ರೋಹಿ'



'ಕರ್ನಾಟಕವನ್ನು ಕೇರಳ ಸರ್ಕಾರ ಆಳ್ವಿಕೆ ಮಾಡುತ್ತಿದೆಯೇ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಪ್ರಶ್ನಿಸಿದ್ದಾರೆ.

'ರಾಜ್ಯ ಸರ್ಕಾರವನ್ನು ಕಾಂಗ್ರೆಸ್ ಹೈಕಮಾಂಡ್ ಏಜೆಂಟ್ ಕೆ.ಸಿ.ವೇಣುಗೋಪಾಲ್ ನಡೆಸುತ್ತಿದ್ದಾರೆಯೇ? ಕರ್ನಾಟಕದ ಜಮೀನಿನ ಮೇಲೆ ಕೇರಳ ಸರ್ಕಾರಕ್ಕೆ ಅಧಿಕಾರವಿದೆಯೇ' ಎಂದು ಅವರು 'ಎಕ್ಸ್'ನಲ್ಲಿ ಕುಟುಕಿದ್ದಾರೆ. 'ಕೇರಳದ ನಿಯೋಗ ರಾಜ್ಯದ ವಿಷಯದಲ್ಲಿ ವರದಿ ಕೇಳುವಂತಾಗಿದೆ ಎಂದರೆ ಕರ್ನಾಟಕದ ನೆಲ, ಜಲದ ಮೇಲೆ ಕಾಳಜಿ ಇಲ್ಲದಿರುವ ನಾಡ ದ್ರೋಹಿ ಕಾಂಗ್ರೆಸ್ ಸರ್ಕಾರಕ್ಕೆ ನಾಚಿಕೆಯಾಗಬೇಕು' ಎಂದು ಹರಿಹಾಯ್ದಿದ್ದಾರೆ.

₹8,666 ಕೋಟಿ: ಟೆಂಡರ್‌ಗೆ ಸೂಚನೆ

ಬೆಂಗಳೂರು: ಮುಖ್ಯಮಂತ್ರಿ ವಿಶೇಷ ಅನುದಾನ ಯೋಜನೆಯಡಿ 2025-26ನೇ ಸಾಲಿನಲ್ಲಿ 205 ವಿಧಾನಸಭಾ ಕ್ಷೇತ್ರಗಳಿಗೆ ₹8,666.50 ಕೋಟಿ ಅನುದಾನ ಹಂಚಿಕೆ ಮಾಡಿದ್ದು, ಬಳಕೆಗೆ ಮೂರು ತಿಂಗಳಷ್ಟೇ ಉಳಿದಿದ್ದರೂ ಟೆಂಡರ್ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿಲ್ಲ.

ವಿವರ ▶6

ಡ್ರಗ್ಸ್ ಜಾಲ: 3 ಇನ್‌ಸ್ಪೆಕ್ಟರ್‌ಗಳ ತಲೆದಂಡ

ಬೆಂಗಳೂರು: ಮಹಾರಾಷ್ಟ್ರದ ಮಾದಕವಸ್ತು ನಿಗ್ರಹ ಕಾರ್ಯಪಡೆಯ (ಎಎನ್‌ಟಿಎಫ್) ಪೊಲೀಸರು, ಬೆಂಗಳೂರಿನ ಮೂರು ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ₹55.88 ಕೋಟಿ ಮೌಲ್ಯದ ಡ್ರಗ್ಸ್ ವಶಪಡಿಸಿಕೊಂಡ ಬೆನ್ನಲ್ಲೇ ಕರ್ತವ್ಯ ಲೋಪದ ಆರೋಪದಲ್ಲಿ ಬೆಂಗಳೂರಿನ ಮೂವರು ಪೊಲೀಸ್ ಇನ್‌ಸ್ಪೆಕ್ಟರ್‌ಗಳ ತಲೆದಂಡವಾಗಿದೆ.



ಡ್ರಗ್ಸ್ ದಂಧೆಗೆ ಕಡಿವಾಣ ಹಾಕಲು ವಿಫಲರಾದ ಹಾಗೂ ಮಾಹಿತಿ ತಿಳಿದಿದ್ದರೂ ಡ್ರಗ್ಸ್ ತಯಾರಿಕಾ ಕಾರ್ಖಾನೆಗಳ ಮೇಲೆ ದಾಳಿ ನಡೆಸದೇ ಕರ್ತವ್ಯಲೋಪ ಎಸಗಿದ್ದ ಆರೋಪದ ಮೇರೆಗೆ ಕೊತ್ತನೂರು ಠಾಣೆಯ ಇನ್‌ಸ್ಪೆಕ್ಟರ್ ಚೇತನ್‌ಕುಮಾರ್, ಬಾಗಲೂರು ಠಾಣೆಯ ಇನ್‌ಸ್ಪೆಕ್ಟರ್ ಶಬರೀಶ್, ಅವಲಹಳ್ಳಿ ಠಾಣೆಯ ಇನ್‌ಸ್ಪೆಕ್ಟರ್ ರಾಮಕೃಷ್ಣ ಅವರನ್ನು ಅಮಾನತು ಮಾಡಿ ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಅವರು ಸೋಮವಾರ ಆದೇಶಿಸಿದ್ದಾರೆ. ಮೂವರ ವಿರುದ್ಧ ಇಲಾಖೆ ತನಿಖೆಗೂ ಆದೇಶಿಸಲಾಗಿದೆ.

ಚಿನಕುರುಳಿ ಪ್ರಕಾಶ್ ಶೆಟ್ಟಿ



ಸೂರ್ಯೋದಯ: 6:40 ಸೂರ್ಯಾಸ್ತ : 6:03 ಚಂದ್ರೋದಯ: ಮ. 1:12 ಚಂದ್ರಾಸ್ತ: ರಾ. 1:10 | ಸೋಮವಾರದ ಉಷ್ಣಾಂಶ : ಗರಿಷ್ಠ 28° ಕನಿಷ್ಠ 16°

ಮಂಗಳವಾರದ ಉಷ್ಣಾಂಶ 28° ಗರಿಷ್ಠ 15° ಕನಿಷ್ಠ | ಬುಧವಾರ 28° : 15° | ಗುರುವಾರ 28° : 15° | ಶುಕ್ರವಾರ 28° : 15°

ಹವಾಮಾನ ಮುನ್ಸೂಚನೆ: ನಗರದಲ್ಲಿ ಮಂಜು ಮುಸುಕಿದ ವಾತಾವರಣ ಇರಲಿದೆ

ಹೊಸ ವರ್ಷ: ಮೇಲ್ಸೇತುವೆ ಬಂದ್

ಸುರಕ್ಷತೆಗಾಗಿ ಪೊಲೀಸರಿಂದ ಮಾರ್ಗಸೂಚಿ
ಬಿಎಂಟಿಸಿ – ಟೆಂಪೊ ಟ್ರಾವೆಲ್ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 4 ನಿಯಂತ್ರಣ ಕೊಠಡಿ ಆರಂಭ
- 78 ಕಾವಲು ಗೋಪುರ ಸ್ಥಾಪನೆ
- 164 ಮಹಿಳಾ ಸಹಾಯ ಸಹಾಯವಾಣಿ

ಬೆಂಗಳೂರು: ಹೊಸ ವರ್ಷಾಚರಣೆ ಅಂಗವಾಗಿ ನಗರ ಪೊಲೀಸರು ಮಾರ್ಗಸೂಚಿ ಹೊರಡಿಸಿದ್ದು, ನಗರದ ಹಲವು ರಸ್ತೆಗಳಲ್ಲಿ ವಾಹನಗಳ ಸಂಚಾರದಲ್ಲಿ ಮಾರ್ಪಾಡು ಮಾಡಲಾಗಿದೆ.

ಸಾರ್ವಜನಿಕರ ಹಿತದೃಷ್ಟಿಯಿಂದ ಡಿಸೆಂಬರ್ 31ರ ರಾತ್ರಿ 11ರಿಂದ ಜನವರಿ 1ರ ಬೆಳಿಗ್ಗೆ 6ರವರೆಗೆ ನಗರದ ಹಲವು ಮೇಲ್ಸೇತುವೆಗಳಲ್ಲಿ (ವಿಮಾನ ನಿಲ್ದಾಣ ಸಂಪರ್ಕಿಸುವ ಮೇಲ್ಸೇತುವೆ ಹೊರತುಪಡಿಸಿ) ಎಲ್ಲ ಮಾದರಿಯ ವಾಹನಗಳ ಸಂಚಾರಕ್ಕೆ ನಿರ್ಬಂಧ ಹೇರಲಾಗಿದೆ. ಈ ಅವಧಿಯಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸಂಪರ್ಕಿಸುವ ಮೇಲ್ಸೇತುವೆಯಲ್ಲೂ ದ್ವಿಚಕ್ರ ವಾಹನಗಳ ಸಂಚಾರ ನಿಷೇಧಿಸಲಾಗಿದೆ. ನೈಸ್ ರಸ್ತೆಯಲ್ಲಿ ರಾತ್ರಿ 8ರಿಂದಲೇ ದ್ವಿಚಕ್ರ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ರಾತ್ರಿ 10 ಗಂಟೆಯ ನಂತರ ಎಂ.ಜಿ. ರಸ್ತೆ ಮೆಟ್ರೊ ನಿಲ್ದಾಣ ಬಂದ್ ಆಗಲಿದೆ. ಟ್ರಿನಿಟಿ ಅಥವಾ ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣಗಳಿಗೆ ತೆರಳಿ ಪ್ರಯಾಣಿಕರು ಸಂಚಾರ ಮಾಡಬಹುದು.

ಹೊಸ ವರ್ಷಾಚರಣೆಗೆ ಕೈಗೊಂಡಿರುವ ಸುರಕ್ಷತೆ ಮತ್ತು ಭದ್ರತಾ ಕ್ರಮಗಳ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್, ‘ಮಹಿಳೆಯರ ಸುರಕ್ಷತೆ ಮತ್ತು ಜನಸಂದಣಿ ನಿಯಂತ್ರಣಕ್ಕೆ ಆದ್ಯತೆ ನೀಡಲಾಗುವುದು. ಸಾರ್ವಜನಿಕರ ಅನುಕೂಲಕ್ಕಾಗಿ ಸಾರಿಗೆ ಬಸ್ ಮತ್ತು ಟೆಂಪೊ ಟ್ರಾವೆಲ್‌ಗಳನ್ನು ಸೂಕ್ತ ಸ್ಥಳಗಳಲ್ಲಿ ವ್ಯವಸ್ಥೆ ಮಾಡಲಾಗಿದೆ. ಮದ್ಯ ಕುಡಿದು ಸಾರ್ವಜನಿಕವಾಗಿ ಕಿರಿಕಿರಿ ಮಾಡುವುದು, ಗಲಾಟೆ ಅಥವಾ ಅಶಾಂತಿ ಸೃಷ್ಟಿಸಿದವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದು ಎಚ್ಚರಿಕೆ ನೀಡಿದ್ದಾರೆ.

ನಗರದಾದ್ಯಂತ ಮದ್ಯಪಾನ ಮಾಡಿ ವಾಹನ ಚಾಲನೆ ತಡೆಗಟ್ಟುವ ವಿಶೇಷ ಕಾರ್ಯಾಚರಣೆಗೆ ಒಟ್ಟು 166 ಸ್ಥಳಗಳನ್ನು ಗುರುತಿಸಲಾಗಿದೆ. ವ್ಹೀಲಿಂಗ್, ಅತಿವೇಗದ ಚಾಲನೆ ತಡೆಗಟ್ಟುವ ಉದ್ದೇಶದಿಂದ ಒಟ್ಟು 92 ಸ್ಥಳಗಳನ್ನು ಗುರುತಿಸಿ, ಕಟ್ಟುನಿಟ್ಟಾಗಿ ಮೇಲ್ವಿಚಾರಣೆ ಮಾಡಲು ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ಸುಗಮ ಸಂಚಾರದ ಹಿತದೃಷ್ಟಿಯಿಂದ ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಸೇಂಟ್ ಮಾರ್ಕ್ಸ್ ರಸ್ತೆ, ರೆಸ್ಟ್‌ಹೌಸ್ ರಸ್ತೆ, ರೆಸಿಡೆನ್ಸಿ ರಸ್ತೆ ಹಾಗೂ ನಗರದ ಕೆಲವು ರಸ್ತೆಗಳಲ್ಲಿ ಸಂಚಾರ ಮಾರ್ಪಾಡು ಮಾಡಲಾಗಿದೆ.

ಎಲ್ಲೆಲ್ಲಿ ಸಂಚಾರ ನಿಷೇಧ?: ಸಂಭ್ರಮಾಚರಣೆಯ ಪ್ರಮುಖ ಸ್ಥಳವಾಗಿರುವ ಎಂ.ಜಿ. ರಸ್ತೆ ಹಾಗೂ ಬ್ರಿಗೇಡ್ ರಸ್ತೆಗಳಲ್ಲಿ ಡಿಸೆಂಬರ್ 31ರ ರಾತ್ರಿ 8ರಿಂದ ತಡರಾತ್ರಿ 2 ಗಂಟೆವರೆಗೆ ಸಾರ್ವಜನಿಕ ವಾಹನಗಳ ಸಂಚಾರ ನಿಷೇಧಿಸಲಾಗಿದೆ.

ಎಂ.ಜಿ. ರಸ್ತೆಯ ಅನಿಲ್ ಕುಂಬ್ಳೆ ವೃತ್ತದಿಂದ ಟ್ರಿನಿಟಿ ವೃತ್ತದವರೆಗೆ, ಬ್ರಿಗೇಡ್ ರಸ್ತೆಯಲ್ಲಿ ಕಾವೇರಿ ಎಂಪೋರಿಯಂ ಜಂಕ್ಷನ್‌ನಿಂದ ಅಪೇರಾ ಜಂಕ್ಷನ್‌ವರೆಗೆ, ಚರ್ಚ್ ಸ್ಟ್ರೀಟ್‌ನ ಬ್ರಿಗೇಡ್ ರಸ್ತೆ ಜಂಕ್ಷನ್‌ನಿಂದ ಮ್ಯೂಸಿಯಂ ರಸ್ತೆ ಜಂಕ್ಷನ್‌ವರೆಗೆ, ರೆಸಿಡೆನ್ಸಿ ರಸ್ತೆಯ ಆಶೀರ್ವಾದಮ್ ಜಂಕ್ಷನ್‌ನಿಂದ ಮೆಯೊ ಹಾಲ್ ಜಂಕ್ಷನ್‌ವರೆಗೆ, ಎಂ.ಜಿ. ರಸ್ತೆ ಜಂಕ್ಷನ್‌ನಿಂದ ಎಸ್‌ಬಿಐ ವೃತ್ತದವರೆಗೆ ಸಂಚಾರ ವ್ಯವಸ್ಥೆ ನಿಷೇಧಿಸಲಾಗಿದೆ.

ಎಲ್ಲೆಲ್ಲಿ ಪಾರ್ಕಿಂಗ್ ವ್ಯವಸ್ಥೆ : ಶಿವಾಜಿ ನಗರ ಬಿಎಂಟಿಸಿ ಶಾಪಿಂಗ್ ಕಾಂಪ್ಲೆಕ್ಸ್ 1ನೇ ಮಹಡಿ, ಯುಬಿ ಸಿಟಿ, ಗರುಡಾ ಮಾಲ್, ಕಾಮರಾಜ್ ರಸ್ತೆಯಲ್ಲಿ (ಕಬ್ಬನ್ ರಸ್ತೆ ಜಂಕ್ಷನ್‌ನಿಂದ ಕಮರ್ಷಿಯಲ್ ಸ್ಟ್ರೀಟ್ ಜಂಕ್ಷನ್‌ವರೆಗೆ) ವಾಹನಗಳನ್ನು ನಿಲುಗಡೆ ಮಾಡಬಹುದು.

ಬಿಎಂಟಿಸಿ ಬಸ್‌ಗಳು ಹಾಗೂ ಟಿ.ಟಿ. ವಾಹನಗಳು ಸಂಚರಿಸುವ ಮಾರ್ಗಗಳು: ಸಾರ್ವಜನಿಕರ ಅನುಕೂಲಕ್ಕಾಗಿ ಎಂ.ಜಿ. ರಸ್ತೆ ಹಾಗೂ ಬ್ರಿಗೇಡ್ ರಸ್ತೆಯ ಸುತ್ತಮುತ್ತ ನಗರದ ವಿವಿಧ ಕಡೆಗಳಲ್ಲಿ ಬಿಎಂಟಿಸಿ ಬಸ್‌ಗಳ ಸೌಲಭ್ಯ ಕಲ್ಪಿಸಲಾಗಿದೆ. ಟಿ.ಟಿ. ವಾಹನಗಳ ಮೂಲಕ ಬರುವವರು ಸಂಭ್ರಮಾಚರಣೆ ಮುಗಿದ ಬಳಿಕ ಇದೇ ಮಾರ್ಗವಾಗಿ ಹಿಂತಿರುಗಬೇಕು.

ಆಶೀರ್ವಾದಮ್‌ನಿಂದ ಬನ್ನೇರುಘಟ್ಟ, ಅನಿಲ್ ಕುಂಬ್ಳೆ ವೃತ್ತದಿಂದ ಬನಶಂಕರಿ, ನೈಸ್ ರಸ್ತೆ ಜಂಕ್ಷನ್, ಸುಂಕದ ಕಟ್ಟೆ, ಡೆಕತ್‌ಲಾನ್ ಒಪೆರಾ ಜಂಕ್ಷನ್‌ನಿಂದ ನೈಸ್ ರಸ್ತೆ ಜಂಕ್ಷನ್ (ರಿಚ್ಮಂಡ್ ಸರ್ಕಲ್ ಮೂಲಕ), ಮೆಯೋಹಾಲ್‌ನಿಂದ ಮಾದಾವರ, ಟ್ರಿನಿಟಿಯಿಂದ ಬಾಗಲೂರು, ಟ್ರಿನಿಟಿಯಿಂದ ಹೊಸಕೋಟೆ ಮಾರ್ಗಕ್ಕೆ ಬಿಎಂಟಿಸಿ ಬಸ್‌ಗಳ ಸೌಲಭ್ಯ ಕಲ್ಪಿಸಲಾಗಿದೆ.

ಕೋರಮಂಗಲದ ವೈ.ಡಿ.ಮಠ ರಸ್ತೆಯ ಸುಖಸಾಗರ ಜಂಕ್ಷನ್‌ನಿಂದ ಮೈಕ್ರೋಲ್ಯಾಂಡ್ ಜಂಕ್ಷನ್, ವೈ.ಡಿ. ಮಠ ರಸ್ತೆಗೆ ಸಂಪರ್ಕ ಕಲ್ಪಿಸುವ ಅಡ್ಡರಸ್ತೆಗಳಾದ ಜೆ.ಎನ್.ಸಿ ರಸ್ತೆ, 4ನೇ ಬಿ ಕ್ರಾಸ್‌ರಸ್ತೆ, ಟಾನಿಕ್ ಹಿಂಭಾಗದ ರಸ್ತೆ, 17ನೇ ಹೆಚ್ ಮುಖ್ಯರಸ್ತೆಗಳಲ್ಲಿ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ.

ವಾಹನಗಳ ಪಾರ್ಕಿಂಗ್ ಸ್ಥಳಗಳು: ಮುನಿರೆಡ್ಡಿ ಕಲ್ಯಾಣ ಮಂಟಪದ ಎದುರುಗಡೆಯ ಬಿಬಿಎಂಪಿ ಮೈದಾನ, ಬೆಥನಿ ಶಾಲಾ ಪಕ್ಕದ ಬಿಬಿಎಂಪಿ ಮೈದಾನ, 60 ಅಡಿ ಮಾದರಿ ರಸ್ತೆ ಎಡಭಾಗದಲ್ಲಿ (ಮುನಿರೆಡ್ಡಿ ಕಲ್ಯಾಣ ಮಂಟಪದಿಂದ ಕೆನರಾ ಬ್ಯಾಂಕ್ ಜಂಕ್ಷನ್‌ವರೆಗೆ) ವಾಹನಗಳನ್ನು ನಿಲ್ಲಿಸಬಹುದು.



ನಗರದ ಚರ್ಚ್ ಸ್ಟ್ರೀಟ್‌ನಲ್ಲಿ ಸೋಮವಾರ ಶ್ವಾನದಳ ಹಾಗೂ ಭದ್ರತಾ ಸಿಬ್ಬಂದಿ ತಪಾಸಣೆ ನಡೆಸಿದರು ಚಿತ್ರ: ಪ್ರಶಾಂತ್ ಎಚ್‌.ಜಿ.

ಪರ್ಯಾಯ ವ್ಯವಸ್ಥೆ

- ಡಿ.31ರ ರಾತ್ರಿ 8ರಿಂದ ಕ್ವೀನ್ಸ್ ವೃತ್ತದ ಕಡೆಯಿಂದ ಹಲಸೂರು ಮಾರ್ಗವಾಗಿ ಹೋಗುವ ಚಾಲಕರು ಅನಿಲ್ ಕುಂಬ್ಳೆ ವೃತ್ತದಲ್ಲಿ ಎಡ ತಿರುವು ಪಡೆದು ಸೆಂಟ್ರಲ್ ಸ್ಟ್ರೀಟ್ ಮೂಲಕ ಬಿ.ಆರ್.ವಿ ಜಂಕ್ಷನ್ ಬಳಿ ಬಲತಿರುವು ಪಡೆದು ಕಬ್ಬನ್ ರಸ್ತೆಯಲ್ಲಿ ಸಂಚರಿಸಿ ವೆಬ್ಸ್ ಜಂಕ್ಷನ್ ಬಳಿ ಎಂ.ಜಿ. ರಸ್ತೆಯನ್ನು ಸೇರಿ ಮುಂದೆ ಸಾಗಬಹುದು
- ಹಲಸೂರು ಕಡೆಯಿಂದ ಕಂಟೋನ್ಮೆಂಟ್ ಕಡೆಗೆ ಹೋಗುವ ವಾಹನಗಳು ಟ್ರಿನಿಟಿ ವೃತ್ತದಲ್ಲಿ ಬಲ ತಿರುವು ಪಡೆದು ಹಲಸೂರು ರಸ್ತೆ ಮೂಲಕ ಡಿಕನ್ಸನ್ ರಸ್ತೆ ಮಾರ್ಗವಾಗಿ ಸಂಚರಿಸಿ, ಕಬ್ಬನ್ ರಸ್ತೆ ಸೇರಿ ಸಾಗಬೇಕು
- ಕಬ್ಬನ್ ರಸ್ತೆ ಜಂಕ್ಷನ್‌ನಿಂದ ಕಮರ್ಷಿಯಲ್ ಸ್ಟ್ರೀಟ್ ಜಂಕ್ಷನ್‌ವರೆಗೆ ವಾಹನಗಳ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದೆ
- ಈಜಿಪುರ ಕಡೆಯಿಂದ ಬರುವ ವಾಹನಗಳು ಇಂಡಿಯಾ ಗ್ಯಾರೇಜ್ ಬಳಿ ಬಲತಿರುವು ಪಡೆದು, ಎ.ಎಸ್.ಸಿ. ಸೆಂಟರ್‌ನಲ್ಲಿ ಎಡತಿರುವು ಪಡೆದು ಟ್ರಿನಿಟಿ ಮೂಲಕ ಮುಂದೆ ಸಾಗಬಹುದು
- ಎಚ್‌ಎಎಲ್ ಕಡೆಯಿಂದ ಬರುವ ವಾಹನಗಳು ಎಎಸ್‌ಸಿ ಸೆಂಟರ್‌ನಲ್ಲಿ ಬಲತಿರುವು ಪಡೆದು ಟ್ರಿನಿಟಿ ಮೂಲಕ ಮುಂದೆ ಸಾಗುವುದು
- ಪಾದಚಾರಿಗಳು ಬ್ರಿಗೇಡ್ ರಸ್ತೆಯಲ್ಲಿ ಎಂ.ಜಿ.ರಸ್ತೆ ಜಂಕ್ಷನ್‌ನಿಂದ ಅಪೇರಾ ಜಂಕ್ಷನ್ ಕಡೆಗೆ ಕಾಲ್ನಡಿಗೆಯಲ್ಲಿ ಹೋಗಬಹುದು
- ಎಂ.ಜಿ ರಸ್ತೆ, ಬ್ರಿಗೇಡ್ ರಸ್ತೆ, ರೆಸ್ಟ್ ಹೌಸ್ ರಸ್ತೆ, ಚರ್ಚ್ ಸ್ಟ್ರೀಟ್, ರೆಸಿಡೆನ್ಸಿ ರಸ್ತೆ ಹಾಗೂ ಸೇಂಟ್ ಮಾರ್ಕ್ಸ್ ರಸ್ತೆಗಳಲ್ಲಿ ನಿಲುಗಡೆ ಮಾಡಿದ್ದ ವಾಹನಗಳನ್ನು ಡಿ.31ರ ಸಂಜೆ 4 ಗಂಟೆಯೊಳಗೆ ತೆರವುಗೊಳಿಸಬೇಕು. ಇಲ್ಲದಿದ್ದರೆ ದಂಡ ವಿಧಿಸಲಾಗುವುದು

ಬಿಎಂಟಿಸಿ ಬಸ್ ಹಾಗೂ ಟಿ.ಟಿ. ವಾಹನ ಸಂಚಾರ ಮಾರ್ಗ

- ಮಡಿವಾಳ ಚೆಕ್‌ಪೋಸ್ಟ್‌ನಿಂದ ಬನಶಂಕರಿ ಬಸ್‌ನಿಲ್ದಾಣ (ಬಿಟಿಎಂ ಮೂಲಕ)
- ಮಡಿವಾಳ ಚೆಕ್‌ಪೋಸ್ಟ್‌ನಿಂದ ಎಲೆಕ್ಟ್ರಾನಿಕ್ ಸಿಟಿ (ಹೊಸೂರು ರಸ್ತೆಯ ಮೂಲಕ)
- ಮಡಿವಾಳ ಚೆಕ್‌ಪೋಸ್ಟ್‌ನಿಂದ ಕೆ.ಆರ್. ಪುರ (ಹಳೇ ವಿಮಾನ ನಿಲ್ದಾಣ ರಸ್ತೆ ಮೂಲಕ, ಸುರಂಜನ್ ದಾಸ್ ರಸ್ತೆ)
- ಮಡಿವಾಳ ಚೆಕ್‌ಪೋಸ್ಟ್‌ನಿಂದ ಮೀನಾಕ್ಷಿ ಟೆಂಪಲ್, ಬನ್ನೇರುಘಟ್ಟ (ಡೈರಿ ಸರ್ಕಲ್ ಮೂಲಕ)
- ನೆಕ್ಸಸ್ ಮಾಲ್‌ನಿಂದ ದೇವನಹಳ್ಳಿ (ಮೇಕ್ರಿ ಸರ್ಕಲ್ ಮೂಲಕ)
- ನೆಕ್ಸಸ್ ಮಾಲ್‌ನಿಂದ (ಹೊಸೂರು ರಸ್ತೆ ಜಂಕ್ಷನ್) ಕೆ.ಆರ್. ಮಾರ್ಕೆಟ್ (ಜೆ.ಸಿ. ರಸ್ತೆ ಮೂಲಕ)
- ನೆಕ್ಸಸ್ ಮಾಲ್‌ನಿಂದ (ಹೊಸೂರು ರಸ್ತೆ ಜಂಕ್ಷನ್) ಮೆಜೆಸ್ಟಿಕ್ (ವಿಲ್ಸನ್ ಗಾರ್ಡನ್ ಮೂಲಕ)
- ಎನ್.ಜಿ.ವಿ., ಬ್ಯಾಕ್ ಗೇಟ್‌ನಿಂದ ಹೆಬ್ಬಾಳ (ಇಂದಿರಾನಗರ ಮೂಲಕ)
- ಎನ್.ಜಿ.ವಿ.ಯಿಂದ ವೈಟ್‌ಫೀಲ್ಡ್ (ಹೊರವರ್ತುಲ ರಸ್ತೆಯ ಮೂಲಕ) ಕಡೆಗೆ ಬಿಎಂಟಿಸಿ ಬಸ್‌ಗಳ ವ್ಯವಸ್ಥೆ ಕಲ್ಪಿಸಲಾಗಿದೆ.

ಶಾಲೆಗಳಲ್ಲಿ ದಿನಪತ್ರಿಕೆ ಓದಿಸಿ: ಶಶಿಧರ್ ಕೋಸಂಬೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಎಲ್ಲ ಸರ್ಕಾರಿ, ಅನುದಾನಿತ, ಅನುದಾನರಹಿತ ಶಾಲೆಗಳು, ವಸತಿ ಶಾಲೆ ಮತ್ತು ನಿಲಯಗಳಲ್ಲಿ ದಿನಪತ್ರಿಕೆ ಓದುವ ಆದೇಶವನ್ನು ಅನುಷ್ಠಾನಗೊಳಿಸಬೇಕು’ ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ್ ಕೋಸಂಬೆ ಒತ್ತಾಯಿಸಿದ್ದಾರೆ.



ಶಶಿಧರ್ ಕೋಸಂಬೆ

ಈ ಬಗ್ಗೆ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿರುವ ಅವರು, ‘ಪ್ರತಿದಿನ ಕನಿಷ್ಠ 10–15 ನಿಮಿಷ ದಿನಪತ್ರಿಕೆಗಳನ್ನು ಓದುವುದರಿಂದ ಮಕ್ಕಳಲ್ಲಿ ಸಾಮಾನ್ಯ ಜ್ಞಾನ ವೃದ್ಧಿಯಾಗುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಗೆ ಅಗತ್ಯ ಸಿದ್ಧತೆ, ಪ್ರಚಲಿತ ವಿದ್ಯಮಾನಗಳ ಅರಿವು ಮೂಡುತ್ತದೆ. ಶಬ್ದಕೋಶ, ಭಾಷಾ ಶೈಲಿ ಮತ್ತು ಬರವಣಿಗೆ ಕೌಶಲಗಳನ್ನು ರೂಢಿಸಿಕೊಳ್ಳಬಹುದು’ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

‘ಇಂದಿನ ಡಿಜಿಟಲ್ ಯುಗದಲ್ಲಿ ಮಕ್ಕಳು ಇಂಟರ್‌ನೆಟ್ ಶಿಕ್ಷಣ, ಮನರಂಜನೆ ಮತ್ತು ಸಾಮಾಜಿಕ ಜಾಲತಾಣಗಳ ಬಳಕೆಗೆ ಹೆಚ್ಚು ಸಮಯ ನೀಡುತ್ತಿದ್ದಾರೆ. ಮೊಬೈಲ್ ಬಳಕೆ ಮಾಡುವುದರಿಂದ ಮಕ್ಕಳ ಜ್ಞಾಪಕ ಶಕ್ತಿಯ ಕೊರತೆ, ಶ್ರವಣದೋಷ ಮತ್ತು ದೈಹಿಕ ಚಟುವಟಿಕೆಗಳಲ್ಲಿ ಆಸಕ್ತಿ ಇಲ್ಲದಿರುವ ಲಕ್ಷಣಗಳು ಕಂಡುಬರುತ್ತಿವೆ. ಆದ್ದರಿಂದ ರಾಜ್ಯದ ಎಲ್ಲ ಶಾಲಾ-ಕಾಲೇಜುಗಳಲ್ಲಿ ಕಡ್ಡಾಯವಾಗಿ ದಿನಪತ್ರಿಕೆ ಓದುವುದನ್ನು ಅನುಷ್ಠಾನಗೊಳಿಸುವಂತೆ ಸಂಬಂಧಪಟ್ಟ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಬೇಕು’ ಎಂದು ತಿಳಿಸಿದ್ದಾರೆ.

ಜ.5ಕ್ಕೆ ಬಿಜೆಪಿ ಪ್ರಮುಖರ ಸಮಿತಿ ಸಭೆ

ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ಪ್ರಮುಖರ ಸಮಿತಿ ಸಭೆ ಜನವರಿ 5 ರಂದು ನಡೆಯಲಿದೆ.

ಆ ಬಳಿಕ ಜನವರಿ 13ರವರೆಗೆ ಪಕ್ಷದ ವಿವಿಧ ಜಿಲ್ಲಾ ಘಟಕಗಳ ಸಭೆ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎನ್.ಎಸ್ ನಂದೀಶ್ ರೆಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ನಾಳೆ ಮೆಟ್ರೊ ಸಂಚಾರ ಅವಧಿ ವಿಸ್ತರಣೆ


ಬೆಂಗಳೂರು: ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ನಗರದಲ್ಲಿ ಡಿ.31ರಂದು ನಮ್ಮ ಮೆಟ್ರೊ ನೇರಳೆ, ಹಸಿರು ಹಾಗೂ ಹಳದಿ ಮಾರ್ಗಗಳ ಸಂಚಾರ ಅವಧಿಯನ್ನು ವಿಸ್ತರಿಸಲಾಗಿದೆ. ಎಂ.ಜಿ. ರಸ್ತೆಯ ಮೆಟ್ರೊ ನಿಲ್ದಾಣವನ್ನು ರಾತ್ರಿ 10 ಗಂಟೆಗೆ ಮುಚ್ಚಲಾಗುತ್ತದೆ.

ಬುಧವಾರ ರಾತ್ರಿ 11.30ರಿಂದ ವಿಸ್ತರಿತ ಸೇವೆ ಮುಗಿಯುವವರೆಗೂ ನೇರಳೆ ಮತ್ತು ಹಸಿರು ಮಾರ್ಗಗಳಲ್ಲಿ 8 ನಿಮಿಷಗಳ ಅಂತರದಲ್ಲಿ ಹಾಗೂ ಹಳದಿ ಮಾರ್ಗದಲ್ಲಿ 15 ನಿಮಿಷಗಳ ಅಂತರದಲ್ಲಿ ರೈಲುಗಳು ಸಂಚರಿಸಲಿವೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ನೇರಳೆ ಮಾರ್ಗದಲ್ಲಿ ವೈಟ್‌ಫೀಲ್ಡ್‌ನಿಂದ ಚಲ್ಲಘಟ್ಟದವರೆಗೆ ಮಧ್ಯರಾತ್ರಿ 1.45ಕ್ಕೆ ಹಾಗೂ ಚಲ್ಲಘಟ್ಟದಿಂದ ವೈಟ್‌ಫೀಲ್ಡ್‌ವರೆಗೆ ಮಧ್ಯರಾತ್ರಿ 2 ಗಂಟೆಗೆ ಕಡೆಯ ರೈಲು ಸಂಚರಿಸಲಿದೆ. ಹಸಿರು ಮಾರ್ಗದಲ್ಲಿ ಮಾದಾವರದಿಂದ ರೇಷ್ಮೆ ಸಂಸ್ಥೆಯವರೆಗೆ ರಾತ್ರಿ 2, ರೇಷ್ಮೆ ಸಂಸ್ಥೆಯಿಂದ ಮಾದಾವರದವರೆಗೆ ರಾತ್ರಿ 2ಕ್ಕೆ, ಹಳದಿ ಮಾರ್ಗದಲ್ಲಿ ಆರ್‌ವಿ ರಸ್ತೆಯಿಂದ ಬೊಮ್ಮಸಂದ್ರದವರೆಗೆ ರಾತ್ರಿ 3.10 ಹಾಗೂ ಬೊಮ್ಮಸಂದ್ರದಿಂದ ಆರ್‌ವಿ ರಸ್ತೆಯವರೆಗೆ ರಾತ್ರಿ 1.30ಕ್ಕೆ ಕಡೆಯ ರೈಲು ಸಂಚರಿಸಲಿದೆ.

ವೈಟ್‌ಫೀಲ್ಡ್ ಮತ್ತು ಚಲ್ಲಘಟ್ಟ ಕಡೆಗೆ ಹಾಗೂ ಮಾದಾವರ ಮತ್ತು ರೇಷ್ಮೆ ಸಂಸ್ಥೆ ಕಡೆಗೆ ಕೊನೆಯ ರೈಲು ರಾತ್ರಿ 2.45ಕ್ಕೆ ನಾಡಪ್ರಭು ಕೆಂಪೇಗೌಡ ನಿಲ್ದಾಣದಿಂದ ಹೊರಡಲಿದೆ.

ಪ್ರಯಾಣಿಕರ ನಿಯಂತ್ರಣಕ್ಕಾಗಿ ಎಂ.ಜಿ ರಸ್ತೆ ನಿಲ್ದಾಣವನ್ನು ರಾತ್ರಿ 10ಕ್ಕೆ ಮುಚ್ಚಲಾಗುವುದು. ಪ್ರಯಾಣಿಕರು ಟ್ರಿನಿಟಿ ಹಾಗೂ ಕಬ್ಬನ್ ಪಾರ್ಕ್ ನಿಲ್ದಾಣಗಳಲ್ಲಿ ಹತ್ತಿ-ಇಳಿಯಲು ಅವಕಾಶ ಕಲ್ಪಿಸಲಾಗಿದೆ. ಟಿಕೆಟ್ ಕೌಂಟರ್‌ಗಳಲ್ಲಿ ಜನದಟ್ಟಣೆ ತಪ್ಪಿಸಲು ಟ್ರಿನಿಟಿ ಹಾಗೂ ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣಗಳಲ್ಲಿ ರಾತ್ರಿ 11ರ ನಂತರ ಟೋಕನ್ ವಿತರಣೆ ಇರುವುದಿಲ್ಲ. ಈ ನಿಲ್ದಾಣಗಳಿಂದ ರಾತ್ರಿ 11 ಗಂಟೆಯ ನಂತರ ಪ್ರಯಾಣಿಸುವವರು ಮುಂಗಡವಾಗಿ ಟಿಕೆಟ್ ಖರೀದಿಸಬೇಕು. ಇಲ್ಲವೇ ಸ್ಮಾರ್ಟ್ ಕಾರ್ಡ್‌ಗಳನ್ನು ಬಳಸಬೇಕು ಎಂದು ಬಿಎಂಆರ್‌ಸಿಎಲ್ ಸಲಹೆ ನೀಡಿದೆ.



ನಂದಿಗಿರಿಧಾಮ: ಹೊಸವರ್ಷಕ್ಕೆ ಪ್ರವಾಸಿಗರ ಪ್ರವೇಶ ನಿಷೇಧ

ಚಿಕ್ಕಬಳ್ಳಾಪುರ: ಪ್ರಸಿದ್ಧ ಪ್ರವಾಸಿ ತಾಣ ನಂದಿಗಿರಿಧಾಮಕ್ಕೆ ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಪ್ರವಾಸಿಗರ ಪ್ರವೇಶ ನಿರ್ಬಂಧಿಸಲಾಗಿದೆ.

2025ರ ಡಿ.31ರ ಮಧ್ಯಾಹ್ನ 2ರಿಂದ 2026ರ ಜ.1 ರ ಬೆಳಿಗ್ಗೆ 10ರವರೆಗೆ ಸಾರ್ವಜನಿಕರು, ಪ್ರವಾಸಿಗರ ಪ್ರವೇಶ ನಿಷೇಧಿಸಿ ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ ಆದೇಶಿಸಿದ್ದಾರೆ.

ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ನಂದಿಗಿರಿಧಾಮಕ್ಕೆ ಮುಂಗಡವಾಗಿ ಅತಿಥಿ ಕೊಠಡಿಗಳನ್ನು ಕಾಯ್ದಿರಿಸಿರುವ ಪ್ರವಾಸಿಗರನ್ನು ಹೊರತುಪಡಿಸಿ ಉಳಿದವರಿಗೆ ಪ್ರವೇಶ ನಿಷೇಧಿಸಲಾಗಿದೆ. ಪ್ರತಿ ಹೊಸವರ್ಷದ ವೇಳೆ ಜಿಲ್ಲಾಡಳಿತ ಕಾನೂನು ಸುವ್ಯವಸ್ಥೆ ದೃಷ್ಟಿಯಿಂದ ಈ ಕ್ರಮ ವಹಿಸುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸಾವಿರಾರು ಮಂದಿ ಲಗ್ಗೆ: ಐತಿಹಾಸಿಕ ನಂದಿಗಿರಿಧಾಮಕ್ಕೆ ವಿಶೇಷ ದಿನಗಳಲ್ಲಿ ಒಂದೇ ದಿನ 20 ಸಾವಿರಕ್ಕೂ ಹೆಚ್ಚು ಪ್ರವಾಸಿಗರು ಭೇಟಿ ನೀಡಿದ ಉದಾಹರಣೆಗಳು ಇವೆ. ದೊಡ್ಡ ಸಂಖ್ಯೆಯಲ್ಲಿ ದ್ವಿಚಕ್ರವಾಹನಗಳು, ಕಾರು ಇತರೆ ವಾಹನಗಳಿಂದ ಸಂಚಾರ ದಟ್ಟಣೆ ಸಹ ಆಗುತ್ತದೆ. ಸಾಮಾನ್ಯ ದಿನಗಳಲ್ಲಿ ನಿತ್ಯ ನಾಲ್ಕರಿಂದ ಐದು ಸಾವಿರ ಜನರು ಭೇಟಿ ನೀಡುವರು.

ಹೊಸ ವರ್ಷಾಚರಣೆಗೆ ಹೊರ ರಾಜ್ಯ ಮತ್ತು ಹೊರ ಜಿಲ್ಲೆಗಳಿಂದ ನಂದಿಗಿರಿಧಾಮಕ್ಕೆ ಹೆಚ್ಚು ಪ್ರವಾಸಿಗರು ಬರುವ ಸಾಧ್ಯತೆ ಇರುತ್ತದೆ. ಈ ಎಲ್ಲ ದೃಷ್ಟಿಯಿಂದ ಪ್ರವೇಶ ನಿಷೇಧಿಸಲಾಗಿದೆ.

ಶರವಣ ಟ್ರಸ್ಟ್‌ನಿಂದ 1 ಲಕ್ಷ ಲಡ್ಡು ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶರವಣ ಚಾರಿಟಬಲ್ ಟ್ರಸ್ಟ್‌ನಿಂದ ವೈಕುಂಠ ಏಕಾದಶಿ ಅಂಗವಾಗಿ ಮಂಗಳವಾರ ಲಡ್ಡು ವಿತರಣೆಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಒಂದು ಲಕ್ಷ ಲಡ್ಡುಗಳನ್ನು ನುರಿತ ಬಾಣಸಿಗರು ತಯಾರಿಸಿದ್ದಾರೆ. ಬಸವನಗುಡಿಯ ಡಿವಿಜಿ ರಸ್ತೆಯ ಶ್ರೀ ಸಾಯಿ ಗೋಲ್ಡ್ ಪ್ಯಾಲೆಸ್‌ನ 3ನೇ ಮಹಡಿಯಲ್ಲಿರುವ ಶ್ರೀ ಸಾಯಿ ಪಾರ್ಟಿ ಹಾಲ್‌ನಲ್ಲಿ ಟ್ರಸ್ಟ್ ಅಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯ ಟಿ.ಎ. ಶರವಣ ಅವರು ಪ್ರಸಾದಕ್ಕೆ ಪೂಜೆ ನೆರವೇರಿಸಿದರು.

ಬೆಂಗಳೂರಿನ ವಿವಿಧ ಕಡೆ ಇರುವ ವೆಂಕಟೇಶ್ವರ ದೇವಾಲಯಗಳಿಗೆ ಲಡ್ಡುಗಳನ್ನು ನೀಡಿದ್ದು, ಮಂಗಳವಾರ ಭಕ್ತರಿಗೆ ವಿತರಿಸಲಾಗುತ್ತದೆ. ವೈಕುಂಠ ಏಕಾದಶಿ ದಿನ ಮಹಾವಿಷ್ಣು ವೈಕುಂಠದ ಬಾಗಿಲು ತೆರೆಯುತ್ತಾನೆಂಬ ಧಾರ್ಮಿಕ ನಂಬಿಕೆಯ ಹಿನ್ನೆಲೆಯಲ್ಲಿ ಈ ಸೇವೆಯನ್ನು ಟ್ರಸ್ಟ್‌ನಿಂದ ನಡೆಸಿಕೊಂಡು ಬರಲಾಗುತ್ತಿದೆ.

‘ಶರವಣ ಚಾರಿಟಬಲ್ ಟ್ರಸ್ಟ್ ಹಲವು ವರ್ಷಗಳಿಂದ ಧಾರ್ಮಿಕ, ಸಾಮಾಜಿಕ ಹಾಗೂ ಮಾನವೀಯ ಸೇವಾ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದೆ’ ಎಂದು ಟಿ.ಎ.ಶರವಣ ತಿಳಿಸಿದರು.



ಬಸವನಗುಡಿಯ ಶ್ರೀ ಸಾಯಿಗೋಲ್ಡ್ ಪ್ಯಾಲೆಸ್‌ನ ಪಾರ್ಟಿಹಾಲ್‌ನಲ್ಲಿ ವಿಧಾನ ಪರಿಷತ್ ಸದಸ್ಯ ಟಿ.ಎ.ಶರವಣ ಅವರು ಲಡ್ಡುಗಳನ್ನು ಪರಿಶೀಲಿಸಿದರು

ನಗರದಲ್ಲಿ ಇಂದು

ರಾಷ್ಟ್ರ ಕವಿ ಕುವೆಂಪು ಜಯಂತಿ: ಸಾನ್ನಿಧ್ಯ: ಸೌಮ್ಯನಾಥ ಸ್ವಾಮೀಜಿ, ಉದ್ಘಾಟನೆ: ಎಂ. ಕೃಷ್ಣಪ್ಪ, ಪ್ರಿಯಕೃಷ್ಣ, ಅಧ್ಯಕ್ಷತೆ: ಎಂ. ತಿಮ್ಮಯ್ಯ, ಕುವೆಂಪು ಕುರಿತು ಉಪನ್ಯಾಸ: ಸಿ. ವೀರಣ್ಣ, ಅತಿಥಿಗಳು: ಎಸ್. ಷಡಕ್ಷರಿ, ಟಿ. ತಿಮ್ಮೇಶ್, ಆಯೋಜನೆ: ಕನ್ನಡ ಸಾಹಿತ್ಯ ಪರಿಷತ್ತು ವಿಜಯನಗರ ವಿಧಾನಸಭಾ ಕ್ಷೇತ್ರ, ಕುವೆಂಪು ಕಲಾ ಕೇಂದ್ರ ಟ್ರಸ್ಟ್, ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ, ಸ್ಥಳ: ಆದಿಚುಂಚನಗಿರಿ ಸಮುದಾಯ ಭವನ, ಮನುವನ, ವಿಜಯನಗರ, ಸಂಜೆ 5



ವಾರ್ಷಿಕ ಸಾಂಸ್ಕೃತಿಕ ಕಾರ್ಯಕ್ರಮ: ಅತಿಥಿಗಳು: ವಸುಂಧರಾ ದೊರೆಸ್ವಾಮಿ, ಗೌರೀಶ್ ಅಕ್ಕಿ, ಪ್ರಿಯಾ ಸೈಮನ್ ಜಾರ್ಜ್, ಆಯೋಜನೆ: ಕಲಾದೀಪ್ತಿ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5

ನಾಡಗೀತೆ ರಚನೆಗೆ ನೂರರ ಸಂಭ್ರಮ, ಕುವೆಂಪು ಗೀತೋತ್ಸವ ‘ಶತಕಂಠಗಳ ಸಮೂಹ ಗಾಯನ’: ಉದ್ಘಾಟನೆ: ಎಲ್. ಎನ್. ಮುಕುಂದರಾಜ್, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಅತಿಥಿಗಳು: ಆರ್. ಚಂದ್ರಶೇಖರ್, ಆರ್.ವಿ. ಮಂಜುನಾಥ್, ಜಿ.ಕೆ. ಮಂಜುನಾಥ್, ಪ್ರಾಸ್ತಾವಿಕ ನುಡಿ: ಬಂಡ್ಲಹಳ್ಳಿ ವಿಜಯಕುಮಾರ್, ಉಪಸ್ಥಿತಿ: ಎನ್.ಎಸ್. ಸತೀಶ್, ಆರ್. ಮಹಾಲಕ್ಷ್ಮಿ, ಆಯೋಜನೆ: ರಂಗ ಸಂಸ್ಥಾನ, ಸ್ಥಳ: ಶೇಷಾದ್ರಿಪುರಂ ಕಾಲೇಜಿನ ಆವರಣ, ಶೇಷಾದ್ರಿಪುರ, ಸಂಜೆ 6

ಕಪ್ಪಣ್ಣ ದಶಮಾನೋತ್ಸವ: ಗೀತ ಗಾಯನ: ಕಿಕ್ಕೇರಿ ಕೃಷ್ಣಮೂರ್ತಿ ಮತ್ತು ತಂಡ, ‘ಕಾನೂರು ಹೆಗ್ಗಡಿತಿ’ ಚಲನಚಿತ್ರ ಪ್ರದರ್ಶನ: ಆಯೋಜನೆ ಮತ್ತು ಸ್ಥಳ: ಕಪ್ಪಣ್ಣ ಅಂಗಳ, ಸಂಜೆ 6.30

ವೈಕುಂಠ ಏಕಾದಶಿ ವಿಶೇಷ



ಆಯೋಜನೆ ಮತ್ತು ಸ್ಥಳ: ವಿನಾಯಕ ವೆಂಕಟೇಶ್ವರ ಸ್ವಾಮಿ ದೇವಸ್ಥಾನ, ಎಂ.ಜಿ. ರೈಲ್ವೆ ಕಾಲೊನಿ, ಮಾಗಡಿ ರಸ್ತೆ, ಬೆಳಿಗ್ಗೆ 5ಕ್ಕೆ ವೆಂಕಟೇಶ್ವರ ಸ್ವಾಮಿಗೆ ವಿಶೇಷ ಅಲಂಕಾರ, ವೈಕುಂಠ ದ್ವಾರ ಪ್ರವೇಶ, ಭಜನೆ, ಬೆಳಿಗ್ಗೆ 7.30ಕ್ಕೆ ಸಂಗೀತ ಕಛೇರಿ: ಸಂತವಾಣಿ ಸುಧಾಕರ್, 9ಕ್ಕೆ ವಿಷ್ಣು ಸಹಸ್ರನಾಮ ಪಾರಾಯಣ ಹಾಗೂ ಭಜನೆ: ಪದ್ಮಾವತಿ, 10.30ಕ್ಕೆ ಉಪನ್ಯಾಸ: ಉಮೇಶ್ ಭಾರತಿ, 11ಕ್ಕೆ ಭಜನೆ: ತಿಲಕಾವತಿ, ಮಧ್ಯಾಹ್ನ 2ಕ್ಕೆ ಭಕ್ತಿಗೀತೆಗಳು: ಉಷಾ ಮಧುಸೂದನ್, 3ಕ್ಕೆ ಸಂಗೀತ ಕಛೇರಿ: ರೂಪರಾಜು ಮತ್ತು ತಂಡ, ಸಂಜೆ 5ಕ್ಕೆ ಭರತನಾಟ್ಯ ಪ್ರದರ್ಶನ: ಅಮೃತಾ ರಮೇಶ, 7ಕ್ಕೆ ಭಕ್ತಿ ಗೀತೆಗಳು: ಭೀಮ್‌ಜಿ ತಂಡ, ರಾತ್ರಿ 9ಕ್ಕೆ ಭರತನಾಟ್ಯ ಪ್ರದರ್ಶನ: ವಂಶಿಕಾ ಆರ್ ಮತ್ತು ತಂಡ.

ವೈಕುಂಠ ದ್ವಾರ ಪ್ರವೇಶ: ಆಯೋಜನೆ ಮತ್ತು ಸ್ಥಳ: ಲಕ್ಷ್ಮೀವೆಂಕಟೇಶ್ವರ ದೇವಸ್ಥಾನ, ಮುನೇಶ್ವರನಗರ, ಉಲ್ಲಾಳು ಮುಖ್ಯರಸ್ತೆ, ಜ್ಞಾನಭಾರತಿ, ಬೆಳಿಗ್ಗೆ 5ರಿಂದ

ಉಚಿತ ಆರೋಗ್ಯ ಶಿಬಿರ: ಆಯೋಜನೆ: ಶ್ರೀ ಪಾಂಡುರಂಗ ವಿಷ್ಣುಸಹಸ್ರನಾಮ ಮಂಡಳಿ, ಸ್ಥಳ: ಮಲ್ಲೇಶ್ವರ ಆಟದ ಮೈದಾನದ ಎದುರಗಡೆ, ಬೆಳಿಗ್ಗೆ 5

ಅಖಂಡ ಭಾಗವತ ಪ್ರವಚನ: ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಸುಧೀಂದ್ರನಗರ, ಮಲ್ಲೇಶ್ವರ, ಬೆಳಿಗ್ಗೆ 6ರಿಂದ

ದೇವರ ದರ್ಶನ: ಆಯೋಜನೆ ಮತ್ತು ಸ್ಥಳ: ಇಸ್ಕಾನ್ ಬೆಂಗಳೂರು ಹರೇಕೃಷ್ಣ ಹಿಲ್, ಮಹಾಲಕ್ಷ್ಮಿ ಲೇಔಟ್, ಬೆಳಿಗ್ಗೆ 8ರಿಂದ

ಅಖಂಡ ಭಾಗವತ ಪ್ರವಚನ ಸಮಾರಂಭದ ಉದ್ಘಾಟನೆ: ವಿದ್ಯಾಶ್ರೀಶತೀರ್ಥ ಸ್ವಾಮೀಜಿ, ಸುವಿದ್ಯೇಂದ್ರತೀರ್ಥ ಸ್ವಾಮೀಜಿ, ಆಯೋಜನೆ ಮತ್ತು ಸ್ಥಳ: ಶ್ರೀವ್ಯಾಸರಾಜಮಠ (ಸೋಸಲೆ), ಬೆಣ್ಣೆ ಗೋವಿಂದಪ್ಪ ರಸ್ತೆ, ಬಸವನಗುಡಿ, ಬೆಳಿಗ್ಗೆ 8.30ರಿಂದ

‘ಶ್ರೀನಿವಾಸ ಕಲ್ಯಾಣ’ ನಾಟಕ ಪ್ರದರ್ಶನ: ಉದ್ಘಾಟನೆ: ಎಸ್. ಟಿ. ಸೋಮಶೇಖರ್, ಟಿ.ಎನ್. ಜವರಾಯಿಗೌಡ, ಅಧ್ಯಕ್ಷತೆ: ದೇವರಾಜು, ಎಚ್.ಎಸ್. ಗಣೇಶ್ ಶೆಟ್ಟಿ, ಆಯೋಜನೆ: ವಿಘ್ನೇಶ್ವರ ಕಲಾ ಸಂಘ, ಸ್ಥಳ: ಮಾತಾ ಅಮೃತಾನಂದಮಯಿ ಗೋಪುರದ ಬಳಿ, ಮರಿಯಪ್ಪನಪಾಳ್ಯ, ಮಧ್ಯಾಹ್ನ 2.30



ಮಾರ್ಗಶೀರ್ಷೋತ್ಸವ: ತಾಳವಾದ್ಯ: ವಿಶ್ವನಾಥ ಲಯಮ್, ಘಟ: ಸುರೇಶ್ ವೈದ್ಯನಾಥನ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಸುರಭಾರತೀ, ಎಚ್‌ಆರ್‌ಬಿಆರ್ ಲೇಔಟ್, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ಸೈಬರ್ ವಂಚನೆ: ವಿದ್ಯಾರ್ಥಿಗಳಿಗೆ ಜಾಗೃತಿ

‘ಸುರಕ್ಷಿತ ಬೆಂಗಳೂರು ನಿರ್ಮಿಸಲು ಒಂದಾಗೋಣ, ನಮ್ಮ ಜೊತೆಗೆ ಕೈಜೋಡಿಸಿ...’ ಕಾರ್ಯಕ್ರಮ

• ಆದಿತ್ಯ ಕೆ.ಎ.

ಬೆಂಗಳೂರು: ಸೈಬರ್ ವಂಚಕರಿಗೆ ಹಣ ದೋಚಲು ಬೆಂಗಳೂರು ನೆಚ್ಚಿನ ನಗರ ಆಗಿದೆ. ಕೇರಳ, ತೆಲಂಗಾಣ ಹಾಗೂ ಆಂಧ್ರಪ್ರದೇಶದಿಂದ ನಗರಕ್ಕೆ ಡ್ರಗ್ಸ್ ಎಗ್ಗಿಲ್ಲದೇ ಪೂರೈಕೆ ಆಗುತ್ತಿದೆ. ರಾತ್ರಿ ಪಾಳಿ ಕೆಲಸ ಮುಗಿಸಿ ಮನೆಗೆ ತೆರಳುವ ಯುವತಿಯರಿಗೆ ಕಿರುಕುಳ ನೀಡುತ್ತಿರುವ ಪ್ರಕರಣಗಳು ಆಗಾಗ್ಗೆ ನಗರದಲ್ಲಿ ವರದಿ ಆಗುತ್ತಿವೆ. ಅಪಘಾತದಿಂದ ಸಾವು, ನೋವು ಸಂಭವಿಸುತ್ತಿದ್ದು, ಸಂಚಾರ ನಿಯಮ ಉಲ್ಲಂಘನೆಯ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿವೆ...

– ಈ ರೀತಿಯ ಅಪರಾಧ ಕೃತ್ಯಗಳಿಗೆ ಕಡಿವಾಣ ಹಾಕಲು ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ವಿನೂತನ ಯೋಜನೆ ಜಾರಿಗೆ ತರಲಾಗಿದೆ.

‘ಸುರಕ್ಷಿತ ಬೆಂಗಳೂರು ನಿರ್ಮಿಸಲು ಒಂದಾಗೋಣ, ನಮ್ಮ ಜೊತೆಗೆ ಕೈಜೋಡಿಸಿ...’ ಘೋಷಣೆಯ ಅಡಿ ಮಹಿಳೆಯರ ಸುರಕ್ಷತೆ, ಮಾದಕ ವ್ಯಸನದ ನಿಯಂತ್ರಣ, ಸೈಬರ್ ಅಪರಾಧಗಳ ತಡೆ ಹಾಗೂ ಸಂಚಾರ ನಿರ್ವಹಣೆ ಕುರಿತು ಪೊಲೀಸರು ಅರಿವು ಮೂಡಿಸಲು ಆರಂಭಿಸಿದ್ದಾರೆ.

ಈ ಕಾರ್ಯಕ್ರಮದ ಭಾಗವಾಗಿ ಪೂರ್ವ, ಪಶ್ಚಿಮ, ಆಗ್ನೇಯ, ವಾಯವ್ಯ, ನೈರುತ್ಯ, ಎಲೆಕ್ಟ್ರಾನಿಕ್ ಸಿಟಿ, ಉತ್ತರ, ದಕ್ಷಿಣ, ಕೇಂದ್ರ, ಈಶಾನ್ಯ, ವೈಟ್‌ಫೀಲ್ಡ್ ಉಪ ವಿಭಾಗಗಳ ಶಾಲಾ– ಕಾಲೇಜುಗಳಿಗೆ ಆಯಾ ಠಾಣಾ ವಿಭಾಗದ ಪೊಲೀಸರು ತೆರಳಿ, ಜಾಗೃತಿ ಮೂಡಿಸುತ್ತಿದ್ದಾರೆ.

‘ಈ ಜಾಗೃತಿ ಕಾರ್ಯಕ್ರಮವು ನಿರಂತರವಾಗಿ ನಡೆಯಲಿದೆ. ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವುದರಿಂದ ಅವರು ತಮ್ಮ ಪೋಷಕರಿಗೂ ತಿಳಿಸುತ್ತಾರೆ. ನಾಗರಿಕರಲ್ಲಿ ಅರಿವು ಮೂಡಿದರೆ ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಸಾಧ್ಯ ಆಗಲಿದೆ. ಈ ಕಾರ್ಯಕ್ರಮದಲ್ಲಿ ಲಕ್ಷಾಂತರ ವಿದ್ಯಾರ್ಥಿಗಳು ಭಾಗಿ ಆಗಿದ್ದರು. ಡಿಸಿಪಿ, ಎಸಿಪಿ, ಇನ್‌ಸ್ಪೆಕ್ಟರ್ ಹಾಗೂ ಪಿಎಸ್ಐ ಹಂತದ ಅಧಿಕಾರಿಗಳು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಿದ್ದಾರೆ. ವಿದ್ಯಾರ್ಥಿಗಳೂ ಅಷ್ಟೇ ಆಸ್ಥೆಯಿಂದ ಪಾಲ್ಗೊಂಡಿದ್ದರು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಎರಡನೇ ಹಂತದಲ್ಲಿ ಸಂಘಟನೆಗಳ ಸದಸ್ಯರು, ಆಟೊ–ಕ್ಯಾಬ್ ಚಾಲಕರು, ಖಾಸಗಿ ಸಂಸ್ಥೆಗಳ ಸಿಬ್ಬಂದಿ, ಗಾರ್ಮೆಂಟ್ಸ್ ಉದ್ಯೋಗಿಗಳಿಗೆ ಈ ಕಾರ್ಯಕ್ರಮ ರೂಪಿಸಲಾಗುವುದು’ ಎಂದು ನೋಡಲ್ ಅಧಿಕಾರಿಯೊಬ್ಬರು ತಿಳಿಸಿದರು.

ವಂಚಿಸುವ ತಂತ್ರಗಾರಿಕೆ: ‘2025ರಲ್ಲಿ ಬೆಂಗಳೂರಿನಲ್ಲಿಯೇ 9,326 ಸೈಬರ್ ವಂಚನೆ ಪ್ರಕರಣಗಳು ದಾಖಲಾಗಿವೆ. ಪತ್ತೆಯಾದ ಪ್ರಕರಣಗಳು 716 ಮಾತ್ರ. ₹1,543 ಕೋಟಿ ವಂಚನೆ ನಡೆದಿದೆ. ‘ಗೋಲ್ಡನ್ ಅವರ್’ನಲ್ಲಿ ಕರೆ ಮಾಡಿ, ದೂರು ನೀಡದಿರುವ ಕಾರಣಕ್ಕೆ ಹಣ ವಾಪಸ್ ಪಡೆಯುವುದಕ್ಕೆ ಸಾಧ್ಯವಾಗುತ್ತಿಲ್ಲ. ‘ಗೋಲ್ಡನ್ ಅವರ್’ ಎಂದರೆ ಏನು? ವಂಚಕರು ಏನೆಲ್ಲ ತಂತ್ರ ಬಳಸುತ್ತಿದ್ದಾರೆ ಎಂಬುದರ ಕುರಿತು ಮಾಹಿತಿ ನೀಡಲಾಗುತ್ತಿದೆ’ ಎಂದು ಮೂಲಗಳು ಹೇಳಿವೆ.

‘ಅರೆಕಾಲಿಕ ಉದ್ಯೋಗ, ನಕಲಿ ವೆಬ್‌ಲಿಂಕ್, ಒಎಲ್ಎಕ್ಸ್, ‘ಡಿಜಿಟಲ್ ಅರೆಸ್ಟ್’, ಒಟಿಪಿ ದುರುಪಯೋಗ, ತಮ್ಮ ಹೆಸರಿನಲ್ಲಿ ಬಂದಿರುವ ಕೊರಿಯರ್‌ನಲ್ಲಿ ಡ್ರಗ್ಸ್ ಇದೆ, ಹೂಡಿಕೆಯಿಂದ ಹೆಚ್ಚಿನ ಲಾಭಾಂಶ ಬರಲಿದೆ ಎಂಬ ಆಮಿಷ, ಅರೆನಗ್ನ ದೃಶ್ಯಗಳನ್ನು ಸೆರೆ ಹಿಡಿದು ಸೈಬರ್ ವಂಚಕರು ಹಣಕ್ಕೆ ಬೇಡಿಕೆ ಇಡುವುದು ಇತ್ಯಾದಿ ಮಾಡುತ್ತಿದ್ದಾರೆ. ಶಾಲಾ–ಕಾಲೇಜು ಹಂತದಲ್ಲೇ ಈ ಸಂಬಂಧ ಅರಿವು ಮೂಡಿಸಿದರೆ ಅಪರಾಧ ಕೃತ್ಯ ತಡೆಗಟ್ಟಲು ಸಾಧ್ಯ ಆಗಲಿದೆ ಎನ್ನುವ ಕಾರಣಕ್ಕೆ ಇಲಾಖೆ ಈ ಕಾರ್ಯಕ್ಕೆ ಮುಂದಾಗಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

‘ಆಗ್ನೇಯ ವಿಭಾಗದಲ್ಲಿ 59 ಶಾಲಾ–ಕಾಲೇಜುಗಳಲ್ಲಿ ಜಾಗೃತಿ ಮೂಡಿಸಿದ್ದೇವೆ. ಈ ವಿಭಾಗದಲ್ಲಿ 11 ಸಾವಿರ ವಿದ್ಯಾರ್ಥಿಗಳು ಭಾಗಿ ಆಗಿದ್ದರು. ಕರಪತ್ರಗಳನ್ನೂ ಹಂಚಿಕೆ ಮಾಡಲಾಗಿದೆ’ ಎಂದು ಡಿಸಿಪಿ ಸಾರಾ ಫಾತಿಮಾ ತಿಳಿಸಿದರು.

ಬ್ರ್ಯಾಂಡ್ ಬೆಂಗಳೂರು

ಅರಿವು, ನೆರವು...

- ಸೇಫ್ ಕನೆಕ್ಟ್
- ಸುರಕ್ಷತಾ ದ್ವೀಪ (ಸೇಫ್ಟಿ ಐಲ್ಯಾಂಡ್ – ಪ್ರಮುಖ ಜಂಕ್ಷನ್‌ಗಳಲ್ಲಿ ಸ್ಥಾಪಿಸಲಾಗಿದ್ದು, ತೊಂದರೆಗೆ ಒಳಗಾದವರು ಬಟನ್ ಒತ್ತಿದರೆ ಪೊಲೀಸರ ನೆರವು ಸಿಗಲಿದೆ)
- ನೆರವು ಮಹಿಳಾ ಕೇಂದ್ರ–ಮಹಿಳೆಯರು ಮತ್ತು ಮಕ್ಕಳ ನೆರವಿಗೆ ‘ನಿರ್ಭಯಾ ಯೋಜನೆ’ ಅಡಿ ನಗರದಾದ್ಯಂತ 60 ನೆರವು ಕೇಂದ್ರ ಸ್ಥಾಪಿಸಲಾಗಿದೆ
- ಡ್ರಗ್ಸ್ ಫ್ರೀ ಆ್ಯಪ್ (ಈ ಆ್ಯಪ್ ಬಳಸಿ ಮಾದಕ ವಸ್ತುಗಳ ಮಾರಾಟ ಮಾಹಿತಿಯನ್ನು ಸಾರ್ವಜನಿಕರು ತಿಳಿಸಬಹುದು)
- ಕೆಎಸ್‌ಪಿ ಆ್ಯಪ್
- ‘ಬಿಟಿಪಿ ಅಸ್ತ್ರಂ’ ಆ್ಯಪ್
- ಸೈಬರ್ ವಂಚನೆ ಸಹಾಯವಾಣಿ **(1930)**
- ರಾಷ್ಟ್ರೀಯ ಮಾದಕ ವಸ್ತುಗಳ ಸಹಾಯವಾಣಿ **(1933)**
- ಮಾದಕ ವಸ್ತು ನಿಯಂತ್ರಣ ಸಹಾಯವಾಣಿ **(1908)**
- ರಾಷ್ಟ್ರೀಯ ಮಹಿಳಾ ಸಹಾಯವಾಣಿ **(14490)**
- ಮಕ್ಕಳ ಸಹಾಯವಾಣಿ **(1098)**



ಆಗ್ನೇಯ ವಿಭಾಗದ ಕಾಲೇಜೊಂದರಲ್ಲಿ ನಡೆದ ಜಾಗೃತಿ ಸಭೆಯಲ್ಲಿ ಪಾಲ್ಗೊಂಡಿದ್ದ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು



ಒಗ್ಗಟ್ಟಾಗಿ ಸುರಕ್ಷಿತ ಬೆಂಗಳೂರನ್ನು ನಿರ್ಮಿಸೋಣ ಕಾರ್ಯಕ್ರಮದಲ್ಲಿ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ

1,350	2.75	800
ಶಾಲಾ ಕಾಲೇಜುಗಳಲ್ಲಿ ಜಾಗೃತಿ	ಲಕ್ಷ ವಿದ್ಯಾರ್ಥಿಗಳು ಭಾಗಿ	ಪೊಲೀಸ್ ಅಧಿಕಾರಿಗಳಿಂದ ಜಾಗೃತಿ

ತಂತ್ರಜ್ಞಾನ ಅಳವಡಿಸಿಕೊಂಡು ಅಪರಾಧ ತಡೆಗಟ್ಟಲು ಕ್ರಮ ವಹಿಸಲಾಗಿದೆ. ಇಲಾಖೆಯ ಆ್ಯಪ್, ಸಹಾಯವಾಣಿಗಳ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಾಗಿದೆ

ಸೀಮಾಂತ್‌ಕುಮಾರ್ ಸಿಂಗ್, ನಗರ ಪೊಲೀಸ್ ಕಮಿಷನರ್

ಮಹಿಳೆಯರು, ಮಕ್ಕಳ ಸುರಕ್ಷತೆಗೆ ಸ್ಥಾಪಿಸಿರುವ ‘ರಾಣಿ ಚನ್ನಮ್ಮ ಪಡೆ’ಯಿಂದ ಸ್ವಯಂ ರಕ್ಷಣೆ ತಂತ್ರಗಳ ಬಗ್ಗೆ ತರಬೇತಿ ನೀಡಲಾಗಿದೆ. ಮಕ್ಕಳ ಪರವಾಗಿ ಇರುವಂತಹ ಕಾನೂನುಗಳ ಬಗ್ಗೆಯೂ ಅರಿವು ಮೂಡಿಸಲಾಗಿದೆ

ಸಾರಾ ಫಾತಿಮಾ, ಡಿಸಿಪಿ, ಆಗ್ನೇಯ ವಿಭಾಗ

ಹಿಂದೂ ಉತ್ತರಾಧಿಕಾರ ಕಾಯ್ದೆ ಗೊಂದಲ: ಪರಾಮರ್ಶೆಗೆ ಸಲಹೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಹಿಂದೂ ಉತ್ತರಾಧಿಕಾರ ಕಾಯ್ದೆಗೆ 2005ರಲ್ಲಿ ತರಲಾಗಿರುವ ತಿದ್ದುಪಡಿಯಲ್ಲಿ ಮೃತ ವ್ಯಕ್ತಿಯ ವಿಧವಾ ಪತ್ನಿ ಮತ್ತು ತಾಯಿಯ ಹಕ್ಕುಗಳಿಗೆ ಸಂಬಂಧಿಸಿದಂತೆ ಕೆಲ ಗೊಂದಲಗಳಿದ್ದು, ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಸೂಕ್ತ ಪರಾಮರ್ಶೆ ಮಾಡುವ ಅಗತ್ಯ ಇದೆ’ ಎಂದು ಕರ್ನಾಟಕ ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಸಿವಿಲ್ ಪ್ರಕರಣವೊಂದರಲ್ಲಿ ಗದಗ ಜಿಲ್ಲೆ ಹಿರೆಕೊಪ್ಪದ ಶರಣವ್ವ ಮತ್ತು ಕೊಪ್ಪಳ ಜಿಲ್ಲೆ ಚಿಕ್ಕಮ್ಯಾಗೇರಿಯ ಈಶ್ವರ ದೇವಪ್ಪ ಅಂಬಲಗಿ ಸಲ್ಲಿಸಿದ್ದ ಮೊದಲ ನಿಯಮಿತ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಿರುವ ನ್ಯಾಯಮೂರ್ತಿ ಆರ್. ದೇವದಾಸ್ ನೇತೃತ್ವದ ವಿಭಾಗೀಯ ನ್ಯಾಯಪೀಠ (ಧಾರವಾಡ) ಈ ಕುರಿತಂತೆ ಆದೇಶಿಸಿದೆ.

ತೀರ್ಪಿನ ಪ್ರತಿಯನ್ನು ಕೇಂದ್ರ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯಕ್ಕೆ ಕಳುಹಿಸಿಕೊಡುವಂತೆ ನ್ಯಾಯಪೀಠ ಹೈಕೋರ್ಟ್ ರಿಜಿಸ್ಟ್ರಿಗೆ ನಿರ್ದೇಶಿಸಿದೆ. ಪಿತ್ರಾರ್ಜಿತ ಆಸ್ತಿ ವಿಭಾಗದ ವ್ಯಾಜ್ಯಕ್ಕೆ ಸಂಬಂಧಿಸಿದಂತೆ ಗದಗ ಜಿಲ್ಲೆ ರೋಣ ಹಿರಿಯ ಸಿವಿಲ್ ನ್ಯಾಯಾಲಯ ಅಸಲು ದಾವೆಯಲ್ಲಿ ನೀಡಿದ್ದ ತೀರ್ಪು ಮತ್ತು ಡಿಕ್ರಿಯನ್ನು ಅರ್ಜಿದಾರರು ಪ್ರಶ್ನಿಸಿದ್ದರು.

ಕಿರುತೆರೆ ನಟಿ ನಂದಿನಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಗೇರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬಾಲಾಜಿ ನಗರದ ಪೇಯಿಂಗ್ ಗೆಸ್ಟ್‌ನಲ್ಲಿ ಕಿರುತೆರೆ ನಟಿ ನಂದಿನಿ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.



ನಂದಿನಿ

ಪೇಯಿಂಗ್ ಗೆಸ್ಟ್‌ನಲ್ಲಿ ವಾಸವಾಗಿದ್ದ 26 ವರ್ಷದ ನಂದಿನಿ ಅವರು ಭಾನುವಾರ ತಡರಾತ್ರಿ ಕೊಠಡಿಯಲ್ಲಿ ನೇಣು ಹಾಕಿಕೊಂಡಿದ್ದಾರೆ. ಈ ಸಂಬಂಧ ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ವಿಜಯನಗರ ಜಿಲ್ಲೆಯ ಕೊಟ್ಟೂರು ತಾಲ್ಲೂಕಿನ ಎಸ್. ಮಹಾಬಲೇಶ್ವರ ಮತ್ತು ಜಿ.ಆರ್.ಬಸವರಾಜೇಶ್ವರಿ ಅವರ ದ್ವಿತೀಯ ಪುತ್ರಿ ನಂದಿನಿ ಅವರು ಬಿ.ಇ ವಿದ್ಯಾಭ್ಯಾಸವನ್ನು ಅರ್ಧಕ್ಕೆ ಮೊಟಕುಗೊಳಿಸಿ, ನಟನೆಯಲ್ಲಿ ತೊಡಗಿಸಿಕೊಂಡಿದ್ದರು. ರಾಜರಾಜೇಶ್ವರಿ ನಗರದಲ್ಲಿ ನಟನೆ ಬಗ್ಗೆ ತರಬೇತಿ ಪಡೆದುಕೊಂಡು, ಪಿ.ಜಿಯಲ್ಲಿ ವಾಸವಾಗಿದ್ದರು. 2019ರಿಂದ ಕನ್ನಡದ ವಿವಿಧ ಧಾರಾವಾಹಿಗಳಲ್ಲಿ ಪಾತ್ರಗಳನ್ನು ಮಾಡಿದ್ದರು.

ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿದ್ದ ಇವರ ತಂದೆ 2021ರಲ್ಲಿ ಮೃತಪಟ್ಟಿದ್ದರು. 2023ರಲ್ಲಿ ಅನುಕಂಪದ ಆಧಾರದಲ್ಲಿ ಉದ್ಯೋಗ ದೊರಕಿತ್ತು. ಆದರೆ, ನಟನೆಯಲ್ಲಿ ಹೆಚ್ಚು ಆಸಕ್ತಿ ಇರುವ ಕಾರಣ ಉದ್ಯೋಗಕ್ಕೆ ಹೋಗದೆ, ಬೆಂಗಳೂರಿನಲ್ಲಿ ಪಿ.ಜಿಯಲ್ಲಿ ವಾಸವಾಗಿದ್ದರು.

ಭಾನುವಾರ ಸಂಜೆ ಸ್ನೇಹಿತ ಪುನೀತ್ ಎಂಬುವವರನ್ನು ಭೇಟಿ ಮಾಡಿ, ರಾತ್ರಿ 11.23ಕ್ಕೆ ವಾಪಸ್ ಪಿ.ಜಿಗೆ ಬಂದಿದ್ದರು. ಪುನೀತ್ ಕರೆ ಮಾಡಿದಾಗ, ನಂದಿನಿ ಸ್ವೀಕರಿಸಲಿಲ್ಲ. ಈ ಬಗ್ಗೆ ಪಿ.ಜಿ ಮ್ಯಾನೇಜರ್‌ಗೆ ಕರೆ ಮಾಡಿ ವಿಷಯ ತಿಳಿಸಿದ್ದರು. ಪರಿಶೀಲನೆ ನಡೆಸಿದಾಗ ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದರು.

‘ಸರ್ಕಾರಿ ಕೆಲಸ ಮಾಡಲು ಇಷ್ಟವಿಲ್ಲ, ನಟನೆ ಇಷ್ಟವಿದೆ. ಆದರೆ, ಮನೆಯಲ್ಲಿ ನನ್ನ ಮಾತನ್ನು ಯಾರೂ ಕೇಳುತ್ತಿಲ್ಲ’ ಎಂದು ಮಗಳು ತನ್ನ ಡೈರಿಯಲ್ಲಿ ಬರೆದಿದ್ದಾಳೆ. ಹಾಗಾಗಿ ಮಗಳ ಸಾವಿನ ಬಗ್ಗೆ ಯಾರ ಮೇಲೂ ಅನುಮಾನ ಮತ್ತು ಸಂಶಯ ಇಲ್ಲ’ ಎಂದು ಮೃತಳ ತಾಯಿ ಬಸವರಾಜೇಶ್ವರಿ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಕನ್ನಡದಲ್ಲಿ 'ಜೀವ ಹೂವಾಗಿದೆ’, ‘ನೀನಾದೆ ನಾ’, ‘ಸಂಘರ್ಷ’, ‘ಮಧು ಮಗಳು’ ಧಾರಾವಾಹಿಯಲ್ಲಿ ನಟಿಸಿದ್ದರು.

ಪ್ರಿಯತಮೆಯ ತಾಯಿಗೆ ಬೆಂಕಿ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಗಳನ್ನು ಮದುವೆ ಮಾಡಿಕೊಡಲು ನಿರಾಕರಿಸಿದ ಯುವತಿಯ ತಾಯಿಯ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಕೊಲೆ ಮಾಡಲು ಯತ್ನಿಸಿದ್ದ ಆರೋಪಿಯನ್ನು ಬಸವೇಶ್ವರ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸಾಣೇಗುರುವನಹಳ್ಳಿ ನಿವಾಸಿ ಮುತ್ತು ಎಂಬಾತನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ತಮಿಳುನಾಡಿನ ಗೀತಾ, ಮಗಳ ಜತೆ ಸಾಣೇಗುರುವನಹಳ್ಳಿಯಲ್ಲಿ ವಾಸವಿದ್ದು, ಮನೆಯ ಸಮೀಪವೇ ಪ್ರಾವಿಷನ್ ಸ್ಟೋರ್ ಇಟ್ಟುಕೊಂಡು ಜೀವನ ನಡೆಸುತ್ತಿದ್ದರು. ಆರೋಪಿ ಸಹ ಟೀ ಅಂಗಡಿ ಇಟ್ಟುಕೊಂಡಿದ್ದ. ಮಗಳು ಹಾಗೂ ಮುತ್ತುವಿನ ಪ್ರೀತಿಯ ವಿಚಾರ ತಿಳಿದಿದ್ದ ಅವರು, ಮಗಳನ್ನು ಆತನಿಗೆ ಕೊಟ್ಟು ಮದುವೆ ಮಾಡಲು ಮಾತುಕತೆ ನಡೆಸಿದ್ದರು. ಆರು ತಿಂಗಳಿನಿಂದ ಗೀತಾ ಅವರ ಮನೆಯಲ್ಲೇ ಆರೋಪಿ ವಾಸವಾಗಿದ್ದ. ಮದ್ಯವ್ಯಸನಿಯಾಗಿದ್ದ ಕಾರಣ ಆತನ ಜತೆ ಮಗಳ ಮದುವೆ ಮಾಡದಿರಲು ಇತ್ತೀಚೆಗೆ ಅವರು ನಿರ್ಧರಿಸಿದ್ದರು ಎಂದು ಪೊಲೀಸರು ತಿಳಿಸಿದರು.

ಈ ಕಾರಣಕ್ಕೆ ಕೋಪಗೊಂಡಿದ್ದ ಮುತ್ತು, ಅವರೊಂದಿಗೆ ಆಗಾಗ್ಗೆ ಜಗಳವಾಡುತ್ತಿದ್ದ. ಸೋಮವಾರ ರಾತ್ರಿ ಜಗಳವಾಡಿದ್ದ. ಗೀತಾ ಅವರು ನಿದ್ದೆಗೆ ಜಾರಿದಾಗ ಆರೋಪಿ ಅವರ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಪರಾರಿಯಾಗಿದ್ದ. ತೀವ್ರ ಸುಟ್ಟ ಗಾಯಗಳಿಂದ ಅಸ್ವಸ್ಥಗೊಂಡಿರುವ ಗೀತಾ ಅವರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದರು.

ಆರೋಪಿ ವಿರುದ್ಧ ಕೊಲೆಯತ್ನ ಪ್ರಕರಣ ದಾಖಲಿಸಲಾಗಿದ್ದು, ವಿಚಾರಣೆ ನಡೆಸಲಾಗುತ್ತಿದೆ ಎಂದು ಹೇಳಿದರು.

ಅಪರಾಧ ಸುದ್ದಿ

ಕೈದಿ ಬಳಿ ಮೊಬೈಲ್ ಪತ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ವಿವಿಧ ಬ್ಯಾರಕ್‌ಗಳಲ್ಲಿ ಭಾನುವಾರ ನಡೆದ ತಪಾಸಣೆ ವೇಳೆ ಮೊಬೈಲ್ ಪತ್ತೆಯಾಗಿದೆ.

‘ಕಾರಾಗೃಹ ಸುಧಾರಣಾ ಸಂಕಲ್ಪ ಅಭಿಯಾನ’ ಅಡಿ ಸಹಾಯಕ ಜೈಲರ್ ಎಸ್.ಜೆ.ಜಕಾತಿ ನೇತೃತ್ವದಲ್ಲಿ ತಪಾಸಣೆ ಕೈಗೊಂಡಾಗ ಟವರ್ ಒಂದು ವಿಭಾಗದ 9ನೇ ಬ್ಯಾರಕ್‌ನ ಕೊಠಡಿ ಸಂಖ್ಯೆಯ ಎರಡರಲ್ಲಿ ಕೈದಿ ಗಿಪ್ಸಾನಾ ಡ್ಯಾನಿಯಲ್ ಬಳಿ ಮೊಬೈಲ್ ಪತ್ತೆಯಾಗಿದ್ದು, ಅದನ್ನು ವಶಪಡಿಸಿಕೊಳ್ಳಲಾಗಿದೆ.

ಮೊಬೈಲ್ ಸಾಗಿಸಿದವರು, ಇದಕ್ಕೆ ಸಹಕರಿಸಿದವರು ಹಾಗೂ ನಿಷೇಧಿತ ವಸ್ತುವನ್ನು ಕಾರಾಗೃಹದಲ್ಲಿ ಉಪಯೋಗಿಸಿದವರ ವಿರುದ್ಧ ಪರಪ್ಪನ ಅಗ್ರಹಾರ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

ಸಿಲಿಂಡರ್ ಸ್ಫೋಟ: ಯುವಕ ಸಾವು

ಬೆಂಗಳೂರು: ಪೇಯಿಂಗ್ ಗೆಸ್ಟ್‌ವೊಂದರ (ಪಿ.ಜಿ) ಅಡುಗೆಕೋಣೆಯಲ್ಲಿ ಸಿಲಿಂಡರ್ ಸ್ಫೋಟಗೊಂಡ ಪರಿಣಾಮ ಯುವಕನೊಬ್ಬ ಸ್ಥಳದಲ್ಲೇ ಮೃತಪಟ್ಟು, ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಬಳ್ಳಾರಿಯ ಅರವಿಂದ್ (23) ಮೃತ ಯುವಕ. ವೆಂಕಟೇಶ್, ದೇವಿ, ವಿಶಾಲ್ ಗಾಯಗೊಂಡಿದ್ದು, ಈ ಪೈಕಿ ವೆಂಕಟೇಶ್ ಸ್ಥಿತಿ ಗಂಭೀರವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬ್ರೂಕ್‌ಫೀಲ್ಡ್ ರಸ್ತೆಯಲ್ಲಿದ್ದ ಸೆವೆನ್ ಹಿಲ್ಸ್ ಶ್ರೀಸಾಯಿ ಪಿ.ಜಿಯಲ್ಲಿ ಸಂಜೆ 6.15ಕ್ಕೆ ಅನಿಲ ಸೋರಿಕೆಯಾಗಿ ಸಿಲಿಂಡರ್ ಸ್ಫೋಟಗೊಂಡಿದೆ. ಪಿ.ಜಿಯಲ್ಲಿ 52 ಮಂದಿ ವಾಸವಾಗಿದ್ದರು. ಘಟನಾ ಸ್ಥಳಕ್ಕೆ ಅಗ್ನಿಶಾಮಕ, ಸುಕೋ ತಂಡ ಭೇಟಿ ನೀಡಿ, ಪರಿಶೀಲನೆ ನಡೆಸಿದೆ. ಸ್ಫೋಟದ ತೀವ್ರತೆಗೆ ಕಟ್ಟಡ ವಿವಿಧ ಕಡೆ ಬಿರುಕು ಬಿಟ್ಟಿದೆ. ಸ್ಫೋಟದ ಶಬ್ದ ಕೇಳಿದ ಪಿ.ಜಿ.ಯಲ್ಲಿದ್ದ ಯುವಕರು ಹೊರಗಡೆ ಓಡಿ ಹೋಗಿದ್ದಾರೆ. ಎಚ್‌ಎಎಲ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಪರಿಶೀಲನೆ ನಡೆಸುತ್ತಿದ್ದಾರೆ. ಸ್ಫೋಟಕ್ಕೆ ನಿಖರ ಕಾರಣ ತಿಳಿದುಬಂದಿಲ್ಲ.

ಸಿದ್ದರಾಮಯ್ಯ ಬಜೆಟ್ ಮಂಡಿಸುವ ಭರವಸೆ ಇದೆ: ಸತೀಶ್ ಜಾರಕಿಹೊಳಿ

ಪ್ರಜಾವಾಣಿ ವಾರ್ತೆ

ಯಾದಗಿರಿ: ‘ಈಗ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದು, ಮುಂಬರುವ ಬಜೆಟ್ ಅನ್ನು ಅವರೇ ಮಂಡಿಸುತ್ತಾರೆ ಎಂಬ ಭರವಸೆ ಇದೆ’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಮುಖ್ಯಮಂತ್ರಿ ಬದಲಾವಣೆ ಕುರಿತು ಪ್ರತಿಕ್ರಿಯಿಸಿದರು.



ಸತೀಶ ಜಾರಕಿಹೊಳಿ


ಇಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸಂಕ್ರಾಂತಿ ಮುಗಿದ ಮೇಲೆ ಈ ಬಗ್ಗೆ ಹೇಳೋಣ. ಅದಕ್ಕೆ ಪಕ್ಷ, ಹೈಕಮಾಂಡ್ ಇದೆ. ನಾವು ಯಾರೂ ದೆಹಲಿಗೆ ಹೋಗುವುದಿಲ್ಲ. ಮುಖ್ಯಮಂತ್ರಿ ಬಗ್ಗೆ ಹಾದಿಯಲ್ಲಿ ಹೇಳುವುದಲ್ಲ, ಅದು ಹಾದಿಯಲ್ಲಿ ಸಿಗುವುದಿಲ್ಲ. ಅದಕ್ಕೆ ತನ್ನದೇ ಆದ ದಾರಿ, ಧಾಟಿ ಇದೆ’ ಎಂದರು.

ಇದೇ ವೇಳೆ ಅವರ ಹಿಂದೆ ನಿಂತಿದ್ದ ಬೆಂಬಲಿಗರು, ‘ಮುಂದಿನ ಸಿ.ಎಂ ಸತೀಶ ಜಾರಕಿಹೊಳಿ’ ಎಂದು ಘೋಷಣೆ ಕೂಗಿದರು.

‘ಬೆಂಗಳೂರಿನಲ್ಲಿ ಅಕ್ರಮ ಒತ್ತವರಿ ಪ್ರದೇಶ ನೆಲಸಮ ಮಾಡಿರುವ ಪ್ರಕರಣದಲ್ಲಿ ಭೂಮಿಯ ಮಾಲೀಕರು ಯಾರು? ಏಕೆ ತೆರವು ಮಾಡಿದರು ಎಂಬುದನ್ನು ಚರ್ಚಿಸಿ, ಮಾನವೀಯತೆ ದೃಷ್ಟಿಯಿಂದ ವಸತಿ ವ್ಯವಸ್ಥೆ ಕಲ್ಪಿಸಬೇಕಾಗುತ್ತದೆ’ ಎಂದರು.

‘ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದಾಗ ಡ್ರಗ್ಸ್ ದಂಧೆಯೇ ಮೊದಲ ಶತ್ರು. ಎಲ್ಲ ಸರ್ಕಾರಗಳು ಅದನ್ನು ನಿಗ್ರಹ ಮಾಡಬೇಕಾಗುತ್ತದೆ. ಡ್ರಗ್ಸ್ ಮತ್ತು ಹೊಸ ವರ್ಷ ಆಚರಣೆಗೂ ಸಂಬಂಧ ಇರಬಹುದು. ಕರ್ನಾಟಕ ಮತ್ತು ಮಹಾರಾಷ್ಟ್ರ ಪೊಲೀಸರು ಜಂಟಿಯಾಗಿ ತನಿಖೆ ಮಾಡಲಿ. ಬಿಜೆಪಿಯವರು ಹೇಳಿದ ಮಾತ್ರಕ್ಕೆ ಗೃಹ ಸಚಿವರು ರಾಜೀನಾಮೆ ಕೊಡಬೇಕಾಗಿಲ್ಲ. ಅವರ ಸರ್ಕಾರದಲ್ಲಿಯೂ ಸಾಕಷ್ಟು ವೈಫಲ್ಯಗಳು ಆಗಿದ್ದವು’ ಎಂದು ಹೇಳಿದರು.

ಮೊಬೈಲ್ ಗೀಳು ಆರೋಗ್ಯ ಹಾಳು



• ರಮ್ಯಾ ಶ್ರೀಹರಿ

ಹೀಗೊಂದು ಸಂದರ್ಭವನ್ನು ಕಲ್ಪಿಸಿಕೊಳ್ಳಿ: ಯಾವುದೋ ಮಹತ್ವಪೂರ್ಣ ಕೆಲಸವೊಂದನ್ನು ಮಾಡುವುದಿರುತ್ತದೆ, ಹೊರಗಿನಿಂದ ಯಾವ ಒತ್ತಡವೂ, ಸಮಯದ ಮಿತಿಯೂ ಇರುವುದಿಲ್ಲ, 'ಇಂತಹ ಕೆಲಸವನ್ನು ಮಾಡಿದೆಯೋ ಬಿಟ್ಟೆಯೋ' ಎಂದು ಕೇಳುವವರೂ ಇರುವುದಿಲ್ಲ; ಆದರೆ ನಮ್ಮ ಪಾಲಿಗೆ ಆ ಕೆಲಸ ಮುಖ್ಯವಾಗಿರುತ್ತದೆ, ಅದು ಸೃಜನಶೀಲ ಬರವಣಿಗೆ, ಕಲೆ ಇರಬಹುದು, ಆತ್ಮೀಯರೊಂದಿಗೆ ಆಡಲೇಬೇಕಾದ ಮುಖ್ಯವಾದ ಮಾತುಕತೆಯಿರಬಹುದು, ಯಾವುದೋ ಒಂದು ಪ್ರಮುಖ ನಿರ್ಧಾರ ಕೈಗೊಳ್ಳುವುದಿರಬಹುದು ಅಥವಾ ಯಾವುದೋ ಕಷ್ಟದ ಸಂದರ್ಭಕ್ಕೊಂದು ಪರಿಹಾರವನ್ನು ಹುಡುಕುವುದಿರಬಹುದು, ಯಾವುದೋ ದುಃಖಕ್ಕೆ ಸಮಾಧಾನವನ್ನು ಅರಸುತ್ತಿರಬಹುದು- ಒಟ್ಟಿನಲ್ಲಿ ಯಾವ ಕೆಲಸದ ಫಲಿತಾಂಶ ಅನಿಶ್ಚಿತವೋ, ಯಾವುದರ ಪರಿಣಾಮವನ್ನು ಊಹಿಸುವುದು ಕಷ್ಟವೋ, ಯಾವುದನ್ನು ಹೇಗೆ ನಿರ್ವಹಿಸಬೇಕೆಂಬುದೇ ತಿಳಿಯದೋ ಅಂತಹ ಸಂದರ್ಭದಲ್ಲಿ ಏನು ಮಾಡಬೇಕೆಂಬುದೇ ತೋಚದ ವಿಹ್ವಲ ಘಳಿಗೆಗಳಲ್ಲಿ ನಿಷ್ಕ್ರಿಯರಾಗಿರುವಾಗ ಕೈಗೆ ಸ್ಮಾರ್ಟ್ ಫೋನೊಂದು ಸಿಗುತ್ತದೆ.

ಏನೂ ತೋಚದೆ ತಲೆಕೆಟ್ಟುಹೋದಾಗ ದೇಹಕ್ಕೆ ಬೇಡದಿದ್ದರೂ ಏನನ್ನಾದರೂ ತಿನ್ನಬೇಕೆಂಬ ಬಯಕೆ ಉಂಟಾಗಿ ತಿಂದಾಗ ತಾತ್ಕಾಲಿಕ ಸಮಾಧಾನವಾಗುತ್ತದಲ್ಲ, ಅಂತಹದ್ದೇ ಮಿಥ್ಯ-ಸಮಾಧಾನವೊಂದು ಸ್ಮಾರ್ಟ್‌ಫೋನನ್ನು ಕೈಯಲ್ಲಿ ಹಿಡಿದು ಸ್ಕ್ರಾಲ್ ಮಾಡುವಾಗಲೂ ಆಗುತ್ತದೆ.

ಅಂತರ್ಜಾಲವೇನು ಸಣ್ಣ ಪ್ರಪಂಚವೇ? ನೋಡಿದಷ್ಟೂ ಹೆಚ್ಚಾಗುತ್ತಲೇ ಹೋಗುವ ಕಟೆಂಟ್‌ಗಳು, ಏನನ್ನು ಬೇಕಾದರೂ, ಯಾರ ವೈಯಕ್ತಿಕ ಜೀವನವನ್ನಾದರೂ ಇಣುಕಿನೋಡಿಬಿಡಬಲ್ಲೆ ಎಂಬ ಭ್ರಮೆ ಹುಟ್ಟಿಸುವ ಸಾಮಾಜಿಕ ಜಾಲತಾಣಗಳು, ನೂರಾರು ಅಭಿಪ್ರಾಯಗಳು, ಸಾವಿರಾರು ಬಗೆಬಗೆಯ ರೀಲ್‌ಗಳು, ಯೂಟ್ಯೂಬ್ ಚಾನಲ್‌ಗಳು, ರೋಚಕ ಸುಳ್ಳುಸುದ್ದಿಗಳು, ಕೊಳ್ಳಲು, ತಿನ್ನಲು ಪ್ರೇರೇಪಿಸುವ ಹತ್ತಾರು ಆ್ಯಪ್‌ಗಳು, ಬೇಕೆಂದಾಗ ಬೇಕೆನಿಸಿದ್ದೆಲ್ಲಾ ಸಿಕ್ಕೇಬಿಡಬಹುದು ಎನಿಸುವ ಸುಖದ ಅಮಲು ಹುಟ್ಟಿಸುವ ಸಾವಿರಾರು ದಾರಿಗಳು ತೆರೆದುಕೊಳ್ಳುವ ಮಾಯಾಲೋಕದ ಹೆಬ್ಬಾಗಿಲು ಈ ಸ್ಮಾರ್ಟ್‌ಫೋನ್.

ನಮ್ಮನ್ನು ಸ್ವಲ್ಪ ಕಾಲವಾದರೂ ನಮ್ಮ ಕಗ್ಗಂಟಾದ ಜೀವನದಿಂದ ಬಿಡುಗಡೆಗೊಳಿಸುವ ಈ ಫೋನನ್ನು ಕೆಳಗಿಟ್ಟರೆ ಮತ್ತದೇ ಖಾಲಿತನ, ಬೇಜಾರು, ಸಪ್ಪೆ ಬದುಕು, ಹಾಗಾಗಿ ಫೋನನ್ನು ದೂರದಲ್ಲಿಡಲು ಮನಸ್ಸಿಲ್ಲ. ವಾಟ್ಸ್ ಆ್ಯಪ್, ಇನ್‌ಸ್ಟಾಗ್ರಾಂ, ಫೇಸ್ಬುಕ್ ನೋಟಿಫಿಕೇಶನ್ನುಗಳನ್ನು ಕಂಡಕೂಡಲೇ ಚಾಕಲೇಟನ್ನು ಕಂಡ ಮಕ್ಕಳಂತೆ ಸಂಭ್ರಮಿಸುತ್ತದೆ ಮನಸ್ಸು; ಲೈಕುಗಳು, ಕಮೆಂಟುಗಳು ಕೊಡುವ ಮನ್ನಣೆಯ ಕಾತರ. ಏನೋ ಹುಡುಕಾಟ, ಯಾವುದೋ ಬಾರದ ಸಂದೇಶಕ್ಕಾಗಿ ಕಾಯುವುದು, ಯಾವುದೋ ಅತೃಪ್ತಿಯನ್ನು ಶಮನಗೊಳಿಸಿಕೊಳ್ಳುವ ಪ್ರಯತ್ನ ಯಾವ ಮೆಸೇಜ್ ಬಂದಿರದೇ ಇದ್ದರೂ ಫೋನನ್ನು ಪದೇಪದೇ ಚೆಕ್ ಮಾಡುವುದು.

ಊಟ ಮಾಡುವಾಗಲೂ ಏನನ್ನಾದರೂ ನೋಡುತ್ತಿರಬೇಕು ಆ ಪುಟ್ಟಪರದೆಯಲ್ಲಿ, ಕೆಲವು ಬಾರಿಯಂತೂ ಇನ್ನೂ ನೋಡುವ ಭರದಲ್ಲಿ ಹೆಚ್ಚು ತಿನ್ನುವುದೂ ಉಂಟು. ಟ್ರಾಫಿಕ್ ಸಿಗ್ನಲ್‌ನಲ್ಲಿ ಏನೋ ಚಡಪಡಿಕೆ. ಯಾರ ಸಂದೇಶ ಹೊತ್ತುತಂದಿರಬಹುದು ಈ ಇ-ಮೇಲ್? 'ಅಯ್ಯೋ ತೆರೆಯುತ್ತಿಲ್ಲವಲ್ಲ ಈ ಫೈಲು'! ನಾನು ಸಂತೋಷವಾಗಿರಲು ಬೇಕಾದ ಎಲ್ಲವನ್ನೂ ನಿಜಕ್ಕೂ ಪಡೆದಿದ್ದೇನಾ? ಬೇರೆಯವರ ಜೀವನದಲ್ಲಿ ನಡೆಯುತ್ತಿರುವುದೇನು ನೋಡೋಣ – ಎಂಬ ಕೆಟ್ಟ ಕುತೂಹಲ ಕೂಗಿ ಕರೆಯುತ್ತದೆ ಯಾವುದೋ ಕೆಲಸದ ಮಧ್ಯೆಯೂ ಫೋನನ್ನು ತೆರೆಯಲು. ರಾತ್ರಿ ದಿಂಬಿಗೆ ತಲೆಯಿಟ್ಟಾಗ ನಿದ್ರೆ ಬರದಿದ್ದರೆ, ಅರ್ಧ ನಿದ್ರೆಯಲ್ಲಿ ಎಚ್ಚರವಾದರೆ ಎಂಬ ಎಲ್ಲಾ ಆತಂಕಕ್ಕೂ ಸುಲಭ ಪರಿಹಾರ 'ನಿದ್ರೆ ಬರುವವರೆಗೂ ಫೋನ್ ನೋಡುವೆ' ಎಂಬ ನಮಗೆ ನಾವೇ ಹೇಳಿಕೊಳ್ಳುವ ಸುಳ್ಳು.

ಇನ್ನು ಆಸ್ಪತ್ರೆಯಲ್ಲೋ ಮತ್ತೆಲ್ಲೋ ಕಾಯಬೇಕಾದಾಗಂತೂ ಫೋನೇ ಆತ್ಮೀಯ ಸ್ನೇಹಿತ. ಬಸ್ಸು, ರೈಲು, ಪಾರ್ಕು, ರಸ್ತೆಯಬದಿ, ಕೊನೆಗೆ ದೇವಸ್ಥಾನದ ಕಟ್ಟೆಯ ಮೇಲೂ ಪ್ರಪಂಚವನ್ನು ಮರೆತು, ಪಕ್ಕದಲ್ಲಿರುವವರ ನಿದ್ರೆ, ನೆಮ್ಮದಿ, ವಿಶ್ರಾಂತಿ, ಮೌನಕ್ಕೆ ತೊಂದರೆಯಾದೀತೆಂಬ ಸಣ್ಣ ಅಳುಕೂ ಇರದೇ, ಇಯರ್ ಫೋನ್ ಬಳಸಬೇಕೆಂಬ ಕನಿಷ್ಠ ಪ್ರಜ್ಞೆಯೂ ಇರದೇ ಜೋರಾಗಿ ಹಾಡುಗಳನ್ನು, ರೀಲುಗಳನ್ನು ಕೇಳುವ, ನೋಡುವ ದುರಭ್ಯಾಸ. ಒಟ್ಟಿನಲ್ಲಿ ಸ್ವ ನಿಯಂತ್ರಣ ಮೀರಿದರೆ ಆಹಾರ, ವಿಶ್ರಾಂತಿ, ನಿದ್ರೆ, ನೆಮ್ಮದಿ, ಅರ್ಥಪೂರ್ಣ ಬಾಂಧವ್ಯ, ಆಳವಾದ ಆಲೋಚನೆ – ಎಲ್ಲದಕ್ಕೂ ಮಾರಕವಾಗಬಹುದು, ಈ ಫೋನ್ ಗೀಳು.

ಇಂತಹ ಫೋನ್ ವ್ಯಸನದ ಕಾಲದಲ್ಲಿ ನಿಜವಾಗಲೂ ಸಂತೋಷವಾಗಿರುವವರು ಯಾರು ಎಂದು ಕೇಳಿದರೆ 'ಅತ್ಯಗತ್ಯ ಕರೆಗಳಿಗೆ, ಸಂದೇಶಗಳಿಗೆ ಬಿಟ್ಟರೆ ಬೇರೆ ಯಾವುದಕ್ಕೂ ಒಂದು ಕ್ಷಣವೂ ಫೋನ್ ನೋಡಬೇಕೆಂಬ ಆಸೆಯೇ ಆಗದಷ್ಟು ತಮ್ಮ ಕೆಲಸದಲ್ಲೋ ಹವ್ಯಾಸದಲ್ಲೋ ಬಾಂಧವ್ಯದಲ್ಲೋ ತಲ್ಲೀನರಾಗಿಬಿಟ್ಟಿರುವವರು' ಎಂದು ಸುಲಭವಾಗಿ ಹೇಳಬಹುದೇನೋ? ಇಡೀ ದಿನ ಫೋನಿನಲ್ಲಿ ಅಡಗಿಕೊಂಡಿರದೇ, ದಿನದ ಪ್ರತಿಕ್ಷಣವೂ ಜೀವನದಲ್ಲಿ ತೊಡಗಿಕೊಂಡಿರುವುದೇ ನಿಜವಾದ ಸಂತೋಷದ ಸೂತ್ರ ಎಂದರೆ ತಪ್ಪಾಗದು! ಮುಕ್ತವಾಗಲು ದುಸ್ಸಾಧ್ಯವಾದ ಈ ಫೋನ್ ಗೀಳನ್ನು ನಿಯಂತ್ರಣದಲ್ಲಿಡಲು ಕೆಲ ಉಪಾಯಗಳು ಇಲ್ಲಿವೆ:

ಫೋನ್ ಗೀಳನ್ನು ಚಾಲ್ತಿಯಲ್ಲಿರಿಸುವುದು 'ನಾನು ಬೇಡದ್ದನ್ನು ನೋಡುತ್ತಾ ಆರೋಗ್ಯ, ಸಮಯ ಹಾಳು ಮಾಡಿಕೊಳ್ಳುತ್ತಿದ್ದೇನೆ' ಎಂಬ ಅರಿವು ಉಂಟಾಗದೇ ಇರುವುದು, ಈ ಗಮನಹೀನ ಸ್ಥಿತಿಯೇ ಫೋನಿಗೆ ಅಂಟಿಕೊಂಡಿರುವುದಕ್ಕೆ ಪ್ರಮುಖ ಕಾರಣ. ಜೀವನದಲ್ಲಿ ಏನೋ ಕಾಣೆಯಾಗಿದೆಯೇ? ಖಾಲಿತನವೇ? ಹಾಗಿದ್ದರೆ ಆ ಖಾಲಿತನವೇತಕ್ಕೆ, ಅದನ್ನು ಹೋಗಲಾಡಿಸಲು ಮಾಡುವುದೇನು ಎಂದು ಯೋಚಿಸಬಹುದು, ಆ ಖಾಲಿತನವನ್ನು ಮರೆಮಾಚುವ ಫೋನ್ ಗೀಳನ್ನೇಕೆ ಹಚ್ಚಿಕೊಂಡಿದ್ದೇವೆ ಎಂದು ಪ್ರಶ್ನಿಸಿಕೊಳ್ಳಬಹುದು. ಯಾವ ಕಾರಣಕ್ಕಾಗಿ ನಾನು ಸ್ಕ್ರಾಲ್ ಮಾಡುತ್ತಿದ್ದೇನೆ, ಎಷ್ಟು ಸಮಯ ಎನ್ನುವುದು ಸ್ಪಷ್ಟವಿದ್ದರೆ ಒಳಿತು. ಉದಾಹರಣೆಗೆ 'ಕೆಲಸದ ದಣಿವಿನಿಂದ ಪಾರಾಗಲು ಇಪ್ಪತ್ತು ನಿಮಿಷ ಸ್ಕ್ರಾಲ್ ಮಾಡಿ ಬಂದಿದ್ದೆಲ್ಲವನ್ನೂ ನೋಡುವೆ' ಎನ್ನುವ ಪ್ರಜ್ಞಾಪೂರ್ವಕ ನಡೆ ಉತ್ತಮ, ಆಗ ದಣಿವಾರಿದ ಮೇಲೆ ನಾವೇ ಫೋನನ್ನು ಪಕ್ಕಕ್ಕಿಟ್ಟು ಬೇರೆ ಕೆಲಸ ಮಾಡುತ್ತೇವೆ.

ಫೋನ್ ಗೀಳಿನಿಂದ ಹೊರಬರಲು ಈ 'ಗಮನಹೀನ' (mindless) ಸ್ಕ್ರಾಲಿಂಗನ್ನು ಅರಿವಿನ / ಗಮನದ ಮುನ್ನೆಲೆಗೆ ತರುವಲ್ಲಿ ಈ ಕೆಳಕಂಡ ಕೆಲವು ಪ್ರಶ್ನೆಗಳಿಗೆ ಉತ್ತರಿಸಿಕೊಳ್ಳುವುದು ಸಹಕಾರಿ. ಬೇಕಿದ್ದರೆ ಇದನ್ನು ಒಂದು ಜರ್ನಲ್‌ನಲ್ಲಿಯೂ ದಾಖಲಿಸಬಹುದು.


'ನಾನು ಯಾವಾಗ ಫೋನ್ ನೋಡುವುದು ಹೆಚ್ಚಾಗುತ್ತದೆ? ಆಗ ನನ್ನ ಅಂತರಂಗದಲ್ಲಿ ನಡೆಯುತ್ತಿರುವುದೇನು? ಫೋನ್ ನೋಡುವುದನ್ನು ನಿಲ್ಲಿಸಿದ ಕೂಡಲೇ ಹೇಗನಿಸುತ್ತದೆ? ಆಗ ಹುಟ್ಟುವ ಭಾವಗಳು ಯಾವುವು? ಫೋನಿನಿಂದ ಬಿಡುಗಡೆ ಹೊಂದಲು ನಾನು ಆಶ್ರಯಿಸುವುದೇನನ್ನು? ಫೋನಿನೊಂದಿಗಿನ ನನ್ನ ಸಂಬಂಧವನ್ನು ನಾನು ಒಂದು ಸಾಲಿನಲ್ಲಿ ಹೇಗೆ ಬಣ್ಣಿಸಬಹುದು? ಆನ್‌ಲೈನ್‌ನಲ್ಲಿ ನಾನು ನೋಡುವ ಕಂಟೆಂಟ್‌ಗಳಲ್ಲಿ ಬೇಕಾದ್ದು, ಬೇಡದ್ದು ಎಂಬ ಪಟ್ಟಿ ತಯಾರಿಸಬಲ್ಲೆನೆ? ಆ ಪಟ್ಟಿ ಹೇಗಿರಬಹುದು?'

ಫೋನ್ ಗೀಳು ನಮ್ಮನ್ನು ನಿಷ್ಕ್ರಿಯಗೊಳಿಸದೆ ಇರಬೇಕಾದಲ್ಲಿ: ಫೋನಿನಲ್ಲಿ ನೋಡಿದ ಯಾವುದಾದರೂ ವಿಷಯದಿಂದ ಪ್ರಭಾವಿತರಾಗಿ ಅದನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಯಶಸ್ವಿಯಾಗಿರುವುದು ಏನಾದರೂ ಇದೆಯೇ ಎಂಬ ಮನನ ಆಗಾಗ ಮಾಡುತ್ತಿರಬೇಕು. ಉದಾಹರಣೆಗೆ ಇನ್‌ಸ್ಟಾಗ್ರಾಂ ನೋಡಿ ಹೊಸ ಅಡುಗೆ ಕಲಿತಿದ್ದು, ಉತ್ತಮವಾದ ಹವ್ಯಾಸ ರೂಢಿಸಿಕೊಂಡು ಚಿಂತನೆಯಲ್ಲಿ ಬದಲಾವಣೆ ತಂದುಕೊಂಡಿದ್ದು ಹೀಗೆ. ನಿಜವಾದ ಸ್ನೇಹ, ಸಂಬಂಧ, ಬಾಂಧವ್ಯಗಳು ಬೇಕಾದರೆ ಜನರನ್ನು ಭೇಟಿಮಾಡಿ, ಕಣ್ಣಲ್ಲಿ ಕಣ್ಣಿಟ್ಟು ನೋಡಿ, ಜೊತೆಗೆ ಸುತ್ತಾಡಿ ಜಗಳವಾಡಿ, ಒಟ್ಟಿಗೆ ಅಡುಗೆಮಾಡಿ ಊಟಮಾಡಿ, ಭಿನ್ನಾಭಿಪ್ರಾಯಗಳನ್ನು ಹತ್ತಿರ ಕುಳಿತು ಮಾತನಾಡಿ ಬಗೆಹರಿಸಿಕೊಳ್ಳಬಹುದು; ಬಾಂಧವ್ಯಕ್ಕೆ ಸಾಮಾಜಿಕ ಜಾಲತಾಣಗಳನ್ನು ಊಟಕ್ಕೆ ಉಪ್ಪಿನಕಾಯಿಯಂತೆ ಮಾತ್ರ ಬಳಸುವುದೊಳಿತು.

ಆತಂಕ, ಭಯಗಳನ್ನು ಉಂಟುಮಾಡುವ ದುರಂತದ ಸುದ್ದಿಗಳು, ವಿಡಿಯೊಗಳು; ಮನಸ್ಸನ್ನು ಪ್ರಕ್ಷುಬ್ಧಗೊಳಿಸುವ ಪೋಸ್ಟ್‌ಗಳು, ಚರ್ಚೆಗಳು, ಚಿತ್ರಗಳು; ಏನೇನೂ ಉಪಯೋಗವಿರದ ಯಾರನ್ನೋ ಟೀಕಿಸುವ, ಆಡಿಕೊಂಡು ನಗುವ ನಿಸ್ಸಾರ ರೀಲ್‌ಗಳು – ಇಂಥವನ್ನೆಲ್ಲಾ ಕಂಡಾಗ 'ನನ್ನ ಒಳಿತಿಗಾಗಿ ಸ್ವ-ಆರೈಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ನಾನು ಈ ವಿಷಯವನ್ನು ನೋಡುವುದಿಲ್ಲ/ಕೇಳುವುದಿಲ್ಲ' ಎಂಬ ಗಟ್ಟಿ ನಿರ್ಧಾರವನ್ನು ಮಾಡಿ, ಸ್ವಪ್ರೇಮವನ್ನು ಬೆಳೆಸಿಕೊಳ್ಳಬಹುದು. ಅದೇ ಫೋನ್ ಗೀಳಿನಿಂದ ತಪ್ಪಿಸಿಕೊಳ್ಳುವ ಪರಿಣಾಮಕಾರಿ ಮಾರ್ಗ.

ಸಲಹೆಗಳೇ ರೋಗವಾಗದಿರಲಿ

• ಡಾ. ಕುಶ್ವಂತ್ ಕೋಳಿಬೈಲು



ಆರೋಗ್ಯದ ಕುರಿತಾದ ಸಲಹೆಗಳನ್ನು ನೀಡಲು ನಮಗೆ ವೈದ್ಯರೇ ಆಗಬೇಕೆಂದಿಲ್ಲ! ನಮ್ಮ ದೇಶದಲ್ಲಿ ಹಿಂದಿನ ಕಾಲದಿಂದಲೂ ಪ್ರತಿಯೊಬ್ಬರೂ ಆರೋಗ್ಯದ ಬಗ್ಗೆ ಸಲಹೆಗಳನ್ನು ನೀಡುವವರೇ!!. ಮಗುವಿನ ಆರೈಕೆಯೇ ಇರಲಿ, ಅಥವಾ ಬಾಣಂತಿಯ ಊಟೋಪಚಾರವೇ ಇರಲಿ, ಮನೆಯ ಹಿರಿಯರು ತಮ್ಮದೇ ಪಾರಂಪರಿಕ ಅನುಭವದ ಆಧಾರದಲ್ಲಿ ಸಲಹೆ ಮತ್ತು ಸೂಚನೆಗಳನ್ನು ನೀಡುತ್ತಾ ಬಂದಿದ್ದಾರೆ. ಕುಟುಂಬದ ಹಿರಿಯ ಅಜ್ಜಿಯ ಕೊಡುವ ಮನೆಮದ್ದಿನ ಮೇಲೆ ಜನರಿಗೆ ವೈದ್ಯರ ಔಷಧಕ್ಕಿಂತಲೂ ಹೆಚ್ಚು ನಂಬಿಕೆಯಿತ್ತು. ಭಾರತದಲ್ಲಿ ಮೊದಲಿನಿಂದಲೂ ಕಡಿಮೆಯಿದ್ದ ವೈದ್ಯರ ಸಂಖ್ಯೆ ಮತ್ತು ಆರೋಗ್ಯ ವ್ಯವಸ್ಥೆಗಳು ಗ್ರಾಮೀಣ ಭಾಗದಲ್ಲಿ ಕಡಿಮೆಯಿದ್ದದ್ದು ಕೂಡ ಭಾರತೀಯರ ಈ ನಡವಳಿಕೆಗೆ ಕಾರಣವಾಗಿದ್ದಿರಬಹುದು. ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಸರಾಸರಿ ಇಲ್ಲಿ ನಮ್ಮವರ ಜೀವಿತಾವಧಿ ಮೂವತ್ತಮೂರು ವರ್ಷಗಳಷ್ಟು ಇತ್ತು. ಈ ಪ್ರಮಾಣ ನಮ್ಮಲ್ಲಿದ್ದ ವೈದ್ಯರ ಮತ್ತು ಅರೋಗ್ಯ ವ್ಯವಸ್ಥೆಗಳ ಕೊರತೆಯನ್ನು ಸೂಚಿಸುತ್ತದೆ. ಆರೋಗ್ಯ ವ್ಯವಸ್ಥೆಯಲ್ಲಿ ಸರಿಯಾದ ವ್ಯವಸ್ಥೆ ಇಲ್ಲದಿದ್ದಾಗ ಕುಟುಂಬದ ಹಿರಿಯರ ಸಲಹೆ ಮತ್ತು ಅವರಿವರು ಅಭಿಪ್ರಾಯಗಳಿಗೂ ಮನ್ನಣೆಯನ್ನು ಜನಸಾಮಾನ್ಯರು ನೀಡಬೇಕಾಗಿ ಬರುವುದು ಸಹಜವೇ.

ನಮ್ಮ ದೇಶದ ಈಗಿನ ವಾತಾವರಣವು ಬಹಳಷ್ಟು ಬದಲಾಗಿದೆ. ನಮ್ಮಲ್ಲೀಗ 'ಎಂಬಿಬಿಎಸ್ ವೈದ್ಯರು' ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಹೋಬಳಿ ಮಟ್ಟದಲ್ಲಿ ಪ್ರಾಥಮಿಕ ಅರೋಗ್ಯ ಕೇಂದ್ರಗಳು ಸ್ಥಾಪನೆಯಾಗಿವೆ; ತರಬೇತಿಯನ್ನು ಹೊಂದಿದ ಆಶಾ ಮತ್ತು ಅಂಗನವಾಡಿ ಕಾರ್ಯಕರ್ತರು ಪ್ರತಿ ಹಳ್ಳಿಯಲ್ಲಿಯೂ ಇದ್ದಾರೆ. ಮನೆ ಮನೆಗೆ ಹೋಗಿ ಪಲ್ಸ್ ಪೋಲಿಯೊ ಮುಂತಾದ ಲಸಿಕೆಯನ್ನು ನೀಡುವಲ್ಲಿಯ ತನಕ ಆರೋಗ್ಯ ಇಲಾಖೆಯ ಬೇರುಗಳು ಭಾರತದ ಮೂಲೆ ಮೂಲೆಗೆ ತಲುಪಿವೆ. ಸಿಡುಬು, ಪೋಲಿಯೊ ಮುಂತಾದ ಕಾಯಿಲೆಗಳನ್ನು ನಿರ್ಮೂಲನೆ ಮಾಡುವಲ್ಲಿಯ ತನಕ ಭಾರತ ಮುಂದುವರಿದಿದೆ. ಕೇರಳ ಮುಂತಾದ ರಾಜ್ಯಗಳ ಆರೋಗ್ಯದ ಅಂಕಿ–ಅಂಶಗಳು ಮುಂದುವರಿದ ದೇಶಗಳ ಸಾಲಿಗೆ ಸೇರಿದ ಸಣ್ಣ ಸಣ್ಣ ದೇಶಗಳಿಗೆ ಸ್ಪರ್ಧೆ ನೀಡುವಂತಿದೆ. ಭಾರತದಲ್ಲಿ ತಜ್ಞವೈದ್ಯರು ಸುಲಭವಾಗಿ ಜನರಿಗೆ ಸಿಗುತ್ತಾರೆ. ವಿದೇಶದಲ್ಲಿ ಇಂದಿಗೂ ತಜ್ಞವೈದ್ಯರನ್ನು ನೇರವಾಗಿ ಭೇಟಿಯಾಗುವಂತಿಲ್ಲ. ಭಾರತದಲ್ಲಿ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಚಿಕಿತ್ಸೆ ಸಿಗುವ ಕಾರಣ ವೈದ್ಯಕೀಯ ಪ್ರವಾಸೋದ್ಯಮದಲ್ಲೂ ಭಾರತ ಮುಂಚೂಣಿಯಲ್ಲಿದೆ. ವಿದೇಶಿಗರೂ ಭಾರತಕ್ಕೆ ಬಂದು ತಜ್ಞ ವೈದ್ಯರಿಂದ ಚಿಕಿತ್ಸೆ ಪಡೆಯುತ್ತಾರೆ. ಇಷ್ಟೆಲ್ಲ ಬದಲಾವಣೆಗಳು ಆಗಿವೆ. ಹೀಗಿದ್ದರೂ ಭಾರತೀಯರಲ್ಲಿ ಇಂದಿಗೂ ತಜ್ಞ ವೈದ್ಯರ ಮಾತುಗಳನ್ನು ಗಂಭೀರವಾಗಿ ಪರಿಗಣಿಸದೆ ಕುಟುಂಬದವರು ಮತ್ತು ನೆಂಟರಿಷ್ಟರು ನೀಡುವ ಸಲಹೆಗಳನ್ನು ಕೇಳುವವರ ಸಂಖ್ಯೆಯೇ ಜಾಸ್ತಿಯಿದೆ.

ನಮ್ಮಲ್ಲಿ ತಲೆನೋವಿನಿಂದ ಹಿಡಿದು ಗಂಭೀರವಾದ ಕ್ಯಾನ್ಸರ್ ಕಾಯಿಲೆಗೂ ಮನೆಮದ್ದನ್ನು ಹೇಳುವವರಿದ್ದಾರೆ. ಗ್ರಾಮೀಣ ಭಾಗದಲ್ಲಿ ಮಾತ್ರವಲ್ಲ, ಪಟ್ಟಣ–ನಗರಗಳಲ್ಲೂ ಅಂತಹ ಸಲಹೆಗಳನ್ನು ಪಾಲಿಸುವವರೂ ಇದ್ದಾರೆ. ವೈದ್ಯರು ಪ್ರತಿಯೊಂದು ಕಾಯಿಲೆಯನ್ನು ಹಲವು ಪರೀಕ್ಷೆಗಳ ಮೂಲಕ ಪತ್ತೆ ಹಚ್ಚಿ, ಅದನ್ನು ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗಲು ಹಣ ಮತ್ತು ಸಮಯದ ಖರ್ಚು ಬರುತ್ತದೆ. ಇಂತಹ ಸಂದರ್ಭಗಳಲ್ಲಿ ವಿಚಲಿತರಾಗುವ ಜನರು ಅವರಿವರು ಕೊಡುವ ಸಲಹೆಗಳನ್ನು ಪಾಲಿಸುತ್ತಾರೆ; ಕಾಯಿಲೆ ಗುಣವಾಗಬಹುದೆಂಬ ಭ್ರಮೆಯಲ್ಲೂ ಇರುತ್ತಾರೆ. ವೈದ್ಯರು ಚಿಕಿತ್ಸೆಯನ್ನು ರೋಗಿಗೆ ನೀಡುವ ಸಂದರ್ಭದಲ್ಲಿ ಭಾರತದಂತಹ ದೇಶದಲ್ಲಿ ಇಡೀ ಕುಟುಂಬದವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಅಗತ್ಯವಿರುತ್ತದೆ. ಪಾರ್ಶ್ವವಾಯು ಬಂದ ರೋಗಿಯನ್ನು ನರರೋಗತಜ್ಞರ ಬಳಿಗೆ ಕಳುಹಿಸದೆಯೇ ಎಣ್ಣೆ ಮಸಾಜ್ ಅನ್ನು ಮಾಡಿಸಿದರೆ ಗುಣವಾಗುತ್ತದೆ ಎಂದು ಹೇಳುವ ಆಪ್ತರು ಬಹಳಷ್ಟು ಸಂಖ್ಯೆಯಲ್ಲಿ ನಮಗೆ ಸಿಗುತ್ತಾರೆ.

ಅಸಲಿಗೆ ಪಾರ್ಶ್ವವಾಯು ಕಾಯಿಲೆಯಿಂದ ಪೆಟ್ಟು ತಿಂದ ಮಿದುಳು ತಾನೇ ಸ್ವತಃ ಕ್ರಮೇಣ ಚೇತರಿಸಿಕೊಳ್ಳುವ ಕಾರಣ, ಆ ರೋಗಿಗಳು ಸಹಜವಾಗಿಯೇ ಚೇತರಿಸಿಕೊಳ್ಳುತ್ತಾರೆ. ಇಂತಹ ಸಂದರ್ಭಗಳಲ್ಲಿ ನರರೋಗತಜ್ಞರು ತಮ್ಮ ಚಿಕಿತ್ಸೆಯನ್ನು ನೀಡಿದ ನಂತರ ಕುಟುಂಬದವರು ತಮ್ಮ ಸಂತೃಪ್ತಿಗಾಗಿ ಎಣ್ಣೆ ಮಸಾಜನ್ನು ಮಾಡುವುದಾದರೆ ಮಾಡಲಿ ಎಂಬ ನಿಲುವನ್ನು ತಾಳುವುದು ಸೂಕ್ತ.

ಇತ್ತೀಚಿನ ವರ್ಷಗಳಲ್ಲಿ ಕುಟುಂಬದ ಹಿರಿಯರು ನೀಡುವ ಸಲಹೆಗಳಿಗಿಂತ ಹೆಚ್ಚು ಮಾಹಿತಿ ಮತ್ತು ಸಲಹೆಗಳನ್ನು ಸಾಮಾಜಿಕ ಜಾಲತಾಣದಲ್ಲಿ ಇತರರೇ ನೀಡುತ್ತಿದ್ದಾರೆ. ಅದರಲ್ಲಿ ಹೆಚ್ಚಿನವರು ಆರೋಗ್ಯತಜ್ಞರು ಅಥವಾ ವೈದ್ಯರೇನೂ ಆಗಿರುವುದಿಲ್ಲ. 'ಒಂದು ತಿಂಗಳಲ್ಲಿ ಹತ್ತು ಕೆ.ಜಿ. ತೂಕವನ್ನು ಇಳಿಸುವುದು ಹೇಗೆ' – ಎಂಬುದರಿಂದ ಹಿಡಿದು, 'ನಿಂಬೆಹಣ್ಣಿನ ರಸವನ್ನು ಖಾಲಿಹೊಟ್ಟೆಯಲ್ಲಿ ಕುಡಿದರೆ ಕ್ಯಾನ್ಸರ್ ಮಾಯ' ಎನ್ನುವಲ್ಲಿಯ ತನಕ ಸಾಮಾಜಿಕ ಜಾಲತಾಣದ ಸ್ವಘೋಷಿತ 'ತಜ್ಞರು' ಮಾತನಾಡುತ್ತಿರುತ್ತಾರೆ.

ತಜ್ಞವೈದ್ಯರಿಗೆ ಆಹಾರದ ಬಗ್ಗೆ ತಿಳಿಸಿಕೊಡುವಷ್ಟು ಸಮಯವೇ ಸಿಗುತ್ತಿಲ್ಲ; ಇವರು ಎಲ್ಲರಿಗೂ ಸುಲಭವಾಗಿ ಸಿಗುವಂತೆಯೂ ಇಲ್ಲ. ಹೀಗಾಗಿ 'ಯಾವ ಆಹಾರ ದೇಹಕ್ಕೆ ಉತ್ತಮ' ಎಂದು ಆಹಾರತಜ್ಞರಿಗಿಂತಲೂ ಹೆಚ್ಚು ಮಾಹಿತಿಯನ್ನು ಹಂಚುವ ಸಾಮಾಜಿಕ ಜಾಲತಾಣದ 'ಪ್ರಭಾವಿ'ಗಳಿಗೆ (Influencers) ಹೆಚ್ಚಿನ ಬೇಡಿಕೆ ಇದೆ! ತಜ್ಞರಲ್ಲದ ಇಂಥವರ ಮಾತುಗಳನ್ನು ಗಂಭೀರವಾಗಿ ನಾವು ಸ್ವೀಕರಿಸಿ, ಅದರಂತೆ ನಡೆದುಕೊಂಡರೆ ಅದರಿಂದ ನಮಗೆ ಹಲವು ಸಮಸ್ಯೆಗಳು ಉಂಟಾಗಬಹುದು. ಅವೈಜ್ಞಾನಿಕ ಸಲಹೆಗಳನ್ನು ಪಾಲಿಸಿ ಜೀವಕ್ಕೆ ಗಂಡಾಂತರ ತಂದುಕೊಂಡ ಹಲವರು ನಮ್ಮ ಸುತ್ತಮುತ್ತ ಕಾಣಸಿಗುತ್ತಿರುತ್ತಾರೆ.

ಭಾರತದಂತಹ ದೇಶದಲ್ಲಿ ಈಗ ಗ್ರಾಮೀಣ ಭಾಗದಲ್ಲಿಯೂ ವೈದ್ಯರು ದೊರೆಯುತ್ತಿರುವಾಗ, ನಮ್ಮ ಅನಾರೋಗ್ಯಕ್ಕೆ ವೈದ್ಯರಿಂದ ಸೂಕ್ತ ಸಲಹೆಯನ್ನು ಪಡೆದು, ಅದನ್ನು ಶಿಸ್ತಿನಿಂದ ಪಾಲಿಸುವುದೇ ನಮ್ಮ ಆರೋಗ್ಯದ ಮೊದಲ ಸೂತ್ರವಾಗಬೇಕಿದೆ.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಗಣಿತ

ಅಧ್ಯಾಯ–5 ಸಮಾಂತರ ಶ್ರೇಢಿ

ಅಭ್ಯಾಸ – 5.3

2) ಇವುಗಳ ಮೊತ್ತ ಕಂಡುಹಿಡಿಯಿರಿ

(i) $7+10\frac{1}{2}+14+\ldots\ldots+84$

(ii) $34+32+30+\ldots+10$

ಪರಿಹಾರ: (i) $7+10\frac{1}{2}+14+\ldots\ldots+84$

ಇಲ್ಲಿ $a = 7$ $\quad d = 10\frac{1}{2}-7 = 3\frac{1}{2} = \frac{7}{2}$

ನಮಗೆ ಗೊತ್ತಿರುವಂತೆ $l = a+(n-1)d$

$$84 = 7+(n-1)\frac{7}{2}$$
$$=(n-1)\frac{7}{2} = 84-7$$
$$=(n-1)\frac{7}{2} = 77$$
$$=(n-1) = \frac{77}{7/2}$$
$$=(n-1) = \frac{77x2}{7}$$
$$(n-1) = 22$$
$$n = 22+1$$
$$n = 23$$
$$S_n = \frac{n}{2}[a+l]$$
$$S_{23} = \frac{23}{2}[7+84]$$
$$S_{23} = \frac{2093}{2}$$
$$S_{23} = 1046\frac{1}{2}$$

(ii) $34+32+30+\ldots\ldots\ldots+10$

ಪರಿಹಾರ: ಇಲ್ಲಿ $a = 34$ $\quad l = 10$

$$d = 32-34 = -2$$

ನಮಗೆ ಗೊತ್ತಿರುವಂತೆ $l = a+(n-1)d$

$$10 = 34+(n-1)(-2)$$
$$=(n-1)(-2) = -12$$
$$(n-1) = \frac{-24}{-2} = 12$$
$$n = 13$$
$$S_n = \frac{n}{2}[a+l]$$
$$S_{13} = \frac{13}{2}[34+10]$$
$$S_{13} = 286$$

3) ಸಮಾಂತರ ಶ್ರೇಢಿಯಲ್ಲಿ

i) $a = 5$, $d = 3$, $a_n = 50$ ಆದರೆ n ಮತ್ತು S_n ಕಂಡುಹಿಡಿಯಿರಿ

ii) $a = 7$, $a_{13} = 35$ ಆದರೆ d ಮತ್ತು S_{13} ಗಳನ್ನು ಕಂಡುಹಿಡಿಯಿರಿ

iii) $a_{12} = 37$, $d = 3$ ಆದರೆ a ಮತ್ತು S_{12} ಗಳನ್ನು ಕಂಡುಹಿಡಿಯಿರಿ

iv) $a_3 = 15$, $S_{10} = 125$ ಆದರೆ d ಮತ್ತು a_{10} ಕಂಡುಹಿಡಿಯಿರಿ

v) $d = 5$, $S_9 = 75$ ಆದರೆ a ಮತ್ತು a_9 ಕಂಡುಹಿಡಿಯಿರಿ

vi) $a = 2$, $d = 8$, $S_n = 90$ ಆದಾಗ n ಮತ್ತು a_n ಕಂಡುಹಿಡಿಯಿರಿ

vii) $a = 8$, $a_n = 62$, $S_n = 210$ ಆದಾಗ n ಮತ್ತು d ಕಂಡುಹಿಡಿಯಿರಿ

viii) $a_n = 4$, $d = 2$, $S_n = -14$ ಆದರೆ n ಮತ್ತು a ಕಂಡುಹಿಡಿಯಿರಿ

ix) $a = 3$, $n = 8$, $S = 192$ ಆದರೆ d ಕಂಡುಹಿಡಿಯಿರಿ

ಪರಿಹಾರ: i) $a = 5$, $d = 3$, $a_n = 50$ ಆದರೆ n ಮತ್ತು S_n ಕಂಡುಹಿಡಿಯಿರಿ

ಇಲ್ಲಿ $a = 5$, $\quad d = 3$, $\quad a_n = 50$

ನಮಗೆ ಗೊತ್ತಿರುವಂತೆ $a_n = a+(n-1)d$

$$50 = 5+(n-1)(3)$$
$$(n-1)(3) = 50-5$$
$$(n-1)(3) = 45$$
$$(n-1) = 45/3$$
$$n-1 = 15$$
$$n = 15+1 = 16$$

ನಮಗೆ ಗೊತ್ತಿರುವಂತೆ

$$S_n = \frac{n}{2}[2a+(n-1)d]$$
$$Sn = \frac{16}{2}[2(5)+(16-1)(3)]$$
$$Sn = 8[10+45]$$
$$= 8(55)$$
$$= 440$$

(ii) $a = 7$, $a_{13} = 35$ ಆದರೆ d ಮತ್ತು S_{13} ಗಳನ್ನು ಕಂಡುಹಿಡಿಯಿರಿ

ಪರಿಹಾರ: $a = 7$, $\quad a_{13} = 35$

ನಮಗೆ ಗೊತ್ತಿರುವಂತೆ

$$a_n = a+(n-1)d$$
$$a_{13} = a+(13-1)(d)$$
$$a_{13} = a+(12)(d)$$
$$35 = 7+12d$$
$$12d = 28$$
$$d = 28/12$$
$$d = 7/3$$

ನಮಗೆ ಗೊತ್ತಿರುವಂತೆ

$$S_n = \frac{n}{2}[2a+(n-1)d]$$
$$S_{13} = \frac{13}{2}[2(a)+(13-1)(d)]$$
$$S_{13} = \frac{13}{2}[2a+(12)(d)]$$
$$S_{13} = \frac{13}{2}\left[2(7)+(12)(\frac{7}{3})\right]$$
$$S_{13} = \frac{13}{2}[14+28]$$
$$S_{13} = \frac{13}{2}[42]$$
$$S_{13} = (13)(21)$$
$$S_{13} = 273$$

PHYSICS

CURRENT ELECTRICITY

5. A metal rod of length 10 cm and a rectangular cross-section of $1\,cm \times \frac{1}{2}\,cm$ is connected to a battery across opposite faces. The resistance will be –

a) maximum when the battery is connected across $1\,cm \times \frac{1}{2}\,cm$ faces.

b) maximum when the battery is connected across 10 cm X 1 cm faces.

c) maximum when the battery is connected across $10\,cm \times \frac{1}{2}\,cm$ faces.

d) same irrespective of the three faces.

6. Which of the following characteristics of electrons determines the current in a conductor?

a) Draft velocity alone.

b) Thermal velocity alone.


c) Both drift velocity and thermal velocity.

d) Neither drift nor thermal velocity.


Answers:- 1)b, 2)a, 3)c, 4)b, 5)a, 6)a

Problems:-

1. Calculate the current in branch *PQ, QS, PS, QR* and *SR* of the given circuit.



Soln:- STEP 1. Use junction law to mark currents in the network as shown in the figure given below.



STEP 2.

Applying *loop law to **PQSP***, we get

$-10I_1 - 5I_2 + 5(I - I_1) = 0$

$-15I_1 - 5I_2 + 5I = 0$

(or) $-3I_1 - I_2 + I = 0$ ……….(i)

Applying loop law to **QRSQ**, we get

$-5(I_1 - I_2) + 10(I - I_1 + I_2) + 5I_2 = 0$

$-15I_1 + 20I_2 + 10I = 0$

(or) $-3I_1 + 4I_2 + 2I = 0$ ……..(ii)

Applying loop law to **PQRTUP**,

we get $-10I_1 - 5(I_1 - I_2) - 10I + 10 = 0$

(or) $-15I_1 + 5I_2 - 10I = -10$

(or) $-3I_1 + I_2 - 2I = -2$ …….(iii)

Adding equation (ii) and (iii), we get

$-6I_1 + 5I_2 = -2$ ……… (iv)

Multiplying equation (i) by 2 and then adding to equation (iii), we get, $-9I_1 - I_2 = -2$

(or) $I_2 = 2 - 9I_1$ ……..(v)

Putting this in equation (iv);

$-6I_1 + 5(2 - 9I_1) = -2$

(or) $-51I_1 = -12$

Current in PQ, $I_1 = \frac{4}{17}A$

Putting this in equation (v),

Current in QS,

$$I_2 = 2-\left(9\times\frac{4}{17}\right) = -\frac{2}{17}A$$

Negative sign shows that actual direction of current is from S to Q

From equation (i),

Main Current, $I = 3I_1 + I_2$

$$= 3\times\frac{4}{17}-\frac{2}{17} = \frac{10}{17}A$$

Current in PS,

$$I - I_1 = \frac{10}{17}-\frac{4}{17} = \frac{6}{17}A$$


Current in QR,

$$I_1 - I_2 = \frac{4}{17}-\left(\frac{-2}{17}\right) = \frac{6}{17}A$$

Current in SR,

$$I - I_1 + I_2 = \frac{10}{17}-\frac{4}{17}+\left(-\frac{2}{17}\right) = \frac{4}{17}A$$

2. Calculate the currents in the two resistances shown in the figure.



Soln:- Applying Kirchhoff's loop law to the closed loop *ABCDA;*

$-2i_1 - 1.5 - 3i_2 + 3 = 0$

(or) $2i_1 + 3i_2 = 1.5$ ……..(i)

Current i_1 and i_2 are due to the net effect of two sources of e.m.f. and resistances 2 Ω and 3 Ω are in series, so $i_1 = i_2 = I$ ………(ii)

∴ Using equation (ii), eqn. (i) becomes

$2i + 3i = 1.5$ (or) $5i = 1.5$

(or) $i = \frac{1.5}{5}$

∴ $i = 0.3$ A

Hence $i_1 = i_2 = 0.3$ A

3. Obtain the total resistance between the terminals A and B of the given network.

(Contd……..)

ಡ್ರಗ್ಸ್ ಜಾಲ: ಎಂಜಿನಿಯರ್ ಸೂತ್ರಧಾರ

ನಾಲ್ವರ ಬಂಧನ, ಇಬ್ಬರು ಉದ್ಯಮಿಗಳಿಗೆ ಹುಡುಕಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾರಾಷ್ಟ್ರದ ಮಾದಕವಸ್ತು ನಿಗ್ರಹ ಕಾರ್ಯಪಡೆಯ (ಎಎನ್‌ಟಿಎಫ್) ಪೊಲೀಸರು, ಬೆಂಗಳೂರಿನ ಮೂರು ಸ್ಥಳಗಳಲ್ಲಿ ₹55.88 ಕೋಟಿ ಮೌಲ್ಯದ ಡ್ರಗ್ಸ್ ವಶಪಡಿಸಿಕೊಂಡಿದ್ದ ಪ್ರಕರಣದ ತನಿಖೆ ಚುರುಕುಕೊಂಡಿದೆ. ತಲೆಮರೆಸಿಕೊಂಡಿರುವ ಇಬ್ಬರಿಗೆ ವಿವಿಧ ರಾಜ್ಯಗಳಲ್ಲಿ ಹುಡುಕಾಟ ನಡೆಸಲಾಗುತ್ತಿದೆ.

ಮಹಾರಾಷ್ಟ್ರದ ಪ್ರಶಾಂತ್ ಯಲ್ಲಪ್ಪ ಪಾಟೀಲ ಕೆಮಿಕಲ್ ಎಂಜಿನಿಯರ್ ಆಗಿದ್ದು, ಡ್ರಗ್ಸ್ ಜಾಲದ ಸೂತ್ರಧಾರ ಎಂಬ ಶಂಕೆ ವ್ಯಕ್ತವಾಗಿದೆ.

‘ಮುಂಬೈನಲ್ಲಿ ಇತ್ತೀಚೆಗೆ ಕಾರ್ಯಾಚರಣೆ ನಡೆಸಿದ್ದ ಎಎನ್‌ಟಿಎಫ್ ಸಿಬ್ಬಂದಿ ₹1.5 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿಕೊಂಡು, ಅಬ್ದುಲ್ ಖಾದರ್ ಶೇಖ್ ಅವರನ್ನು ಬಂಧಿಸಿದ್ದರು. ಆತ ನೀಡಿದ್ದ ಮಾಹಿತಿ ಮೇಲೆ ಮಹಾರಾಷ್ಟ್ರದ ಪ್ರಶಾಂತ್ ಯಲ್ಲಪ್ಪ ಪಾಟೀಲ ಎಂಬಾತನ ಬಂಧನ ಆಗಿತ್ತು. ಅದಾದ ಮೇಲೆ ರಾಜಸ್ಥಾನದ ಸೂರಜ್ ರಮೇಶ್ ಯಾದವ್ ಮತ್ತು ಮಲ್ಖಾನ್ ರಾಮಲಾಲ್ ಬಿಷ್ಣೋಯ್ ಎಂಬುವವರನ್ನು ಬಂಧಿಸಲಾಗಿತ್ತು. ನಾಲ್ವರು ನೀಡಿದ ಸುಳಿವು ಆಧರಿಸಿ, ಡಿ.24 ಹಾಗೂ 25ರಂದು ಬೆಂಗಳೂರಿನಲ್ಲಿ ಮಹಾರಾಷ್ಟ್ರ ಪೊಲೀಸರು ಕಾರ್ಯಾಚರಣೆ ನಡೆಸಿದ್ದರು’ ಎಂದು ಮೂಲಗಳು ಹೇಳಿವೆ.

ರಾಜಸ್ಥಾನದ ಉದ್ಯಮಿಗಳಾದ ಯೋಗಿರಾಜ್ ಕುಮಾರ್, ನಯನ್ ಪವಾರ್ ಅವರು ನಾಲ್ವರ ಮೂಲಕ ಬೆಂಗಳೂರಿನಲ್ಲಿ ಡ್ರಗ್ಸ್ ತಯಾರಿಕಾ ಕಾರ್ಖಾನೆ ನಡೆಸುತ್ತಿದ್ದರು. ಇಬ್ಬರೂ ತಲೆಮರೆಸಿಕೊಂಡಿದ್ದು, ಹುಡುಕಾಟ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಆರ್‌ಜೆ ಇವೆಂಟ್ ಹೆಸರಿನಲ್ಲಿ ಡ್ರಗ್ಸ್ ಕಾರ್ಖಾನೆ ನಡೆಸುತ್ತಿರುವುದು ಪತ್ತೆಯಾಗಿದೆ. ಹೊರಮಾವು, ಯರಪ್ಪನಹಳ್ಳಿ, ಕಣ್ಣೂರು ಬಳಿ ಡ್ರಗ್ಸ್ ಕಾರ್ಖಾನೆಗಳನ್ನು ಪತ್ತೆ ಹಚ್ಚಲಾಗಿದೆ.

ದಾಳಿಯ ವೇಳೆ 4.1 ಕೆ.ಜಿ ಘನರೂಪದ ಎಂಡಿಎಂಎ ಮತ್ತು 17 ಕೆ.ಜಿ ದ್ರವರೂಪದ ಎಂಡಿಎಂಎ ಸೇರಿದಂತೆ ಒಟ್ಟು 21.4 ಕೆಜಿ ಡ್ರಗ್ಸ್ ವಶಕ್ಕೆ ಪಡೆಯಲಾಗಿದೆ. ಡ್ರಗ್ಸ್ ತಯಾರಿಸುವ ಯಂತ್ರೋಪಕರಣ ಮತ್ತು ರಾಸಾಯನಿಕ ವಶಕ್ಕೆ ಪಡೆದುಕೊಳ್ಳಲಾಗಿದೆ. ಈ ಮೂರು ಕಾರ್ಖಾನೆಗಳಿಂದ ದೇಶದ ಬೇರೆ ಬೇರೆ ರಾಜ್ಯಗಳಿಗೆ ಸಿಂಥೆಟಿಕ್ ಮಾದರಿಯ ಡ್ರಗ್ಸ್ ಪೂರೈಕೆ ಆಗುತ್ತಿರುವ ಶಂಕೆಯಿದೆ ಎಂದು ಮೂಲಗಳು ಹೇಳಿವೆ.


ಡ್ರಗ್ಸ್ ತಯಾರಿಕೆಗೆ ಬೇಕಾದ ರಾಸಾಯನಿಕಗಳ ಸಾಗಣೆ, ತಯಾರಿಕೆ ವಿಧಾನವನ್ನು ಪ್ರಶಾಂತ್ ಹೇಳಿಕೊಡುತ್ತಿದ್ದ ಎಂಬುದು ತನಿಖೆ ವೇಳೆ ಕಂಡುಬಂದಿದೆ.

ಕಾರ್ಖಾನೆಗಳಿಗೆ ಬೇಕಾದ ಯಂತ್ರೋಪಕರಣ ಹಾಗೂ ಕಟ್ಟಡ ವ್ಯವಸ್ಥೆಯನ್ನು ಯೋಗಿರಾಜ್ ಕುಮಾರ್ ಮತ್ತು ನಯನ್ ಮಾಡಿಕೊಟ್ಟಿದ್ದರು ಎಂದು ಮೂಲಗಳು ಹೇಳಿವೆ.

‘ಆರೋಪಿಗಳು ಯಾರಿಗೂ ಅನುಮಾನ ಬಾರದಂತೆ ಡ್ರಗ್ಸ್ ತಯಾರಿಸುವ ಮೂರು ಸ್ಥಳಗಳನ್ನು ಆಯ್ಕೆ ಮಾಡಿಕೊಂಡಿದ್ದರು. ಬಾಗಲೂರು, ಆವಲಹಳ್ಳಿ ಹಾಗೂ ಕೊತ್ತನೂರು ಪೊಲೀಸ್ ಠಾಣಾ ವ್ಯಾಪ್ತಿಯ 8 ಕಿ.ಮೀ ಅಂತರದಲ್ಲಿ ಈ ಕಾರ್ಖಾನೆ, ಗೋದಾಮುಗಳನ್ನು ಸ್ಥಾಪಿಸಲಾಗಿತ್ತು. ಠಾಣಾ ವ್ಯಾಪ್ತಿಗಳ ಗಡಿ ಪ್ರದೇಶಗಳನ್ನು ಉದ್ದೇಶಪೂರ್ವಕವಾಗಿ ಆಯ್ಕೆ ಮಾಡಿಕೊಂಡಿದ್ದರು’ ಎಂದು ಮೂಲಗಳು ಹೇಳಿವೆ.


ಅಬ್ದುಲ್


ಪ್ರಶಾಂತ್


ಸೂರಜ್


ಬಿಷ್ಣೋಯ್

ಸ್ಥಳಕ್ಕೆ ಕಮಿಷನರ್ ಭೇಟಿ

ಘಟನಾ ಸ್ಥಳಕ್ಕೆ ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಅವರು ಭೇಟಿ ನೀಡಿ ಪರಿಶೀಲಿಸಿದರು.

‘ಮಹಾರಾಷ್ಟ್ರದ ಎಎನ್‌ಟಿಎಫ್ ಹೇಳಿದಂತೆ ಅಲ್ಲಿ ಮಾದಕ ವಸ್ತು ತಯಾರಿಕೆ ಘಟಕ ಅಥವಾ ಕಾರ್ಖಾನೆ ಇರಲಿಲ್ಲ. ಖುದ್ದು ಸ್ಥಳ ಪರಿಶೀಲನೆ ನಡೆಸಿದ್ದು, 17 ಲೀಟರ್ ರಾಸಾಯನಿಕ ಸಂಗ್ರಹಿಸಿ ಇಡಲಾಗಿತ್ತು’ ಎಂದು ಸೀಮಾಂತ್ ಕುಮಾರ್ ಸಿಂಗ್ ತಿಳಿಸಿದರು.

ಮೂವರು ಇನ್‌ಸ್ಪೆಕ್ಟರ್‌ಗಳ ನಿಯೋಜನೆ

ಕರ್ತವ್ಯ ಲೋಪದ ಆರೋಪದಲ್ಲಿ ನಗರದ ಮೂವರು ಪೊಲೀಸ್ ಇನ್‌ಸ್ಪೆಕ್ಟರ್‌ಗಳ ತಲೆದಂಡವಾಗಿದೆ. ಈ ಕಾರಣದಿಂದಾಗಿ ಈಶಾನ್ಯ ವಿಭಾಗದ ಮಹಿಳಾ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಆರ್.ವೆಂಕಟೇಶ್ ಅವರಿಗೆ ಬಾಗಲೂರು, ಕೆ.ಆರ್. ಪುರ ಠಾಣೆಯ ಬಿ.ರಾಮಮೂರ್ತಿ ಅವರಿಗೆ ಆವಲಹಳ್ಳಿ, ಸಂಪಿಗೆಹಳ್ಳಿ ಠಾಣೆಯ ಎಂ.ಚಂದ್ರಶೇಖರ್‌ಗೆ ಕೊತ್ತನೂರು ಪೊಲೀಸ್ ಠಾಣೆಯ ಹೆಚ್ಚುವರಿ ಜವಾಬ್ದಾರಿ ವಹಿಸಲಾಗಿದೆ.


₹2.50 ಕೋಟಿ ಮೌಲ್ಯದ ಮಾದಕ ವಸ್ತು ಜಪ್ತಿ

ನೈಜೀರಿಯಾ ಪ್ರಜೆ ಸೇರಿ ಇಬ್ಬರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ವರ್ಷಾಚರಣೆಗಾಗಿ ಮಾದಕ ವಸ್ತು ಸಂಗ್ರಹ ಮಾಡಿದ್ದ ಪೆಡ್ಲರ್‌ಗಳ ಮೇಲೆ ದಾಳಿ ನಡೆಸಿದ ಸಿಸಿಬಿಯ ಮಾದಕ ದ್ರವ್ಯ ನಿಗ್ರಹ ದಳ, ವಿದೇಶಿ ಪ್ರಜೆ ಸೇರಿ ಇಬ್ಬರನ್ನು ಬಂಧಿಸಿ, ₹2.50 ಕೋಟಿ ಮೌಲ್ಯದ ಡ್ರಗ್ಸ್ ವಶಪಡಿಸಿಕೊಂಡಿದೆ.


ಓರಿಯಾ ಡಿಕಾಸ್ಟ್


ನವೀನ್‌ರಾಜ್

ನೈಜೀರಿಯಾದ ಓರಿಯಾ ಡಿಕಾಸ್ಟ್ (36) ಹಾಗೂ ತಮಿಳುನಾಡಿನ ನವೀನ್‌ರಾಜ್ (29) ಎಂಬುವವರನ್ನು ಬಂಧಿಸಲಾಗಿದೆ. ಓರಿಯಾ ಅವರಿಂದ 1.70 ಕೆ.ಜಿ. ಎಂಡಿಎಂಎ ಕ್ರಿಸ್ಟೆಲ್, 60 ಎಕ್ಸ್‌ಟಿಸಿ ಮಾತ್ರೆಗಳು, 100 ಎಲ್‌ಎಸ್‌ಡಿ ಸ್ಟ್ರಿಪ್ಸ್, 5 ಗ್ರಾಂ ಕೊಕೇನ್, 2 ಮೊಬೈಲ್ ಫೋನ್, 1 ಲ್ಯಾಪ್‌ಟಾಪ್, ₹2 ಲಕ್ಷ ನಗದು ಸೇರಿ ಒಟ್ಟು ₹2.25 ಕೋಟಿ ಮೌಲ್ಯದ ಸ್ವತ್ತು ಜಪ್ತಿ ಮಾಡಿದ್ದಾರೆ.

ಬ್ಯುಸಿನೆಸ್ ವೀಸಾದಡಿ ಭಾರತಕ್ಕೆ ಬಂದಿರುವ ಓರಿಯಾ ಡಿಕಾಸ್ಟ್, ಸೋಲದೇವನಹಳ್ಳಿ ವ್ಯಾಪ್ತಿಯಲ್ಲಿ ವಾಸವಾಗಿದ್ದು, ಹೊಸ ವರ್ಷಕ್ಕೆ ಹೆಚ್ಚಿನ ಬೆಲೆಗೆ ಡ್ರಗ್ಸ್ ಮಾರಾಟ ಮಾಡುವ ಉದ್ದೇಶದಿಂದ ಸಂಗ್ರಹಿಸಿದ್ದ ವಿವಿಧ ಮಾದರಿಯ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ. ‘ವಿಚಾರಣೆ ವೇಳೆ ಆರೋಪಿ ಪೆಡ್ಲರ್ ದೆಹಲಿ ಮತ್ತು ಮುಂಬೈನಲ್ಲಿ ವಾಸವಾಗಿರುವ ವಿದೇಶಿ ಪ್ರಜೆಗಳಿಂದ ಕಡಿಮೆ ಬೆಲೆಗೆ ಎಂಡಿಎಂಎ ಖರೀದಿಸಿ ಬೆಂಗಳೂರಿಗೆ ತಂದು ಪರಿಚಯಸ್ಥರಿಗೆ ಮಾರಾಟ ಮಾಡುತ್ತಿದ್ದ. ಈತನ ವಿರುದ್ಧ ಈ ಹಿಂದೆಯೂ ಸೋಲದೇವನಹಳ್ಳಿ ಪೊಲೀಸ್ ಠಾಣೆಯಲ್ಲಿ ಎನ್‌ಡಿಪಿಎಸ್ ಅಡಿ ಪ್ರಕರಣ ದಾಖಲಾಗಿತ್ತು. ಜೈಲಿನಿಂದ ಬಿಡುಗಡೆಯಾಗಿ ಹೊರಬಂದು ಮತ್ತೆ ಡ್ರಗ್ ಪೆಡ್ಲಿಂಗ್‌ನಲ್ಲಿ ತೊಡಗಿಕೊಂಡಿದ್ದ’ ಎಂದು ಪೊಲೀಸರು ತಿಳಿಸಿದರು.

ಬಂಡೇಪಾಳ್ಯ: ನಗರದಲ್ಲಿ ಡೆಲಿವರಿ ಬಾಯ್ ಕೆಲಸ ಮಾಡಿಕೊಂಡು ಮಾದಕ ವಸ್ತು ಮಾರಾಟ ಮಾಡಿ ಅಕ್ರಮ ಹಣ ಸಂಪಾದಿಸುತ್ತಿದ್ದ ತಮಿಳುನಾಡಿನ ನವೀನ್‌ರಾಜ್ ಅವರಿಂದ 5 ಗ್ರಾಂ ಕೊಕೇನ್, 100 ಎಲ್‌ಎಸ್‌ಡಿ ಸ್ಟ್ರಿಪ್ಸ್, ಮೊಬೈಲ್ ವಶಪಡಿಸಿಕೊಂಡಿದ್ದು, ಇದರ ಮೌಲ್ಯ ₹25 ಲಕ್ಷ. ಬಂಡೇಪಾಳ್ಯ ಪೊಲೀಸ್ ಠಾಣೆಯಲ್ಲಿ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ತಿಳಿಸಿದ್ದಾರೆ.

₹6 ಕೋಟಿ ಮೌಲ್ಯದ ಹೈಡ್ರೊ ಗಾಂಜಾ ವಶ

ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಭಾನುವಾರ ತಡರಾತ್ರಿ ಬ್ಯಾಂಕಾಕ್‌ನಿಂದ ಬಂದ ಮೂವರ ಬ್ಯಾಗ್‌ಗಳಲ್ಲಿ 17.80 ಕೆ.ಜಿ ತೂಕದ ಹೈಡ್ರೋಪೋನಿಕ್ ಗಾಂಜಾ ಪತ್ತೆಯಾಗಿದೆ. ವಶಕ್ಕೆ ಪಡೆದಿರುವ ಗಾಂಜಾ ಮೌಲ್ಯ ಸುಮಾರು ₹6.23 ಕೋಟಿ ಎಂದು ಅಂದಾಜಿಸಲಾಗಿದೆ.

ಮೂವರು ಆರೋಪಿಗಳನ್ನು ಬಂಧಿಸಿ, ಮಾದಕ ವಸ್ತು ನಿಷೇಧ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಕಳೆದ ಎರಡು ವರ್ಷಗಳಲ್ಲಿ ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಅಧಿಕಾರಿಗಳು ಒಟ್ಟು 220 ಕೆ.ಜಿ. ಹೈಡ್ರೋಪೋನಿಕ್ ಗಾಂಜಾ ವಶಕ್ಕೆ ಪಡೆದಿದ್ದಾರೆ.

ಲ್ಯಾಬ್‌ಗಳಲ್ಲಿ ನೀರು ಮತ್ತು ಪೋಷಕಾಂಶ ಬಳಸಿ ಬೆಳೆಯಲಾಗುವ ಹೈಡ್ರೋಪೋನಿಕ್ ಗಾಂಜಾಕ್ಕೆ ಮಾರುಕಟ್ಟೆಯಲ್ಲಿ ಭಾರಿ ಬೇಡಿಕೆ ಇದೆ. ಹಾಗಾಗಿ ವಿದೇಶಗಳಿಂದ ಕಳ್ಳಸಾಗಣೆ ಮಾಡಲಾಗುತ್ತಿದೆ. ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಹೈಡ್ರೊ ಗಾಂಜಾ ಕಳ್ಳಸಾಗಣೆಗೆ ಕಡಿವಾಣ ಹಾಕಲಾಗುತ್ತಿದೆ. ಮಾದಕ ವಸ್ತು ವಿರೋಧಿ ಆಂದೋಲನದ ಭಾಗವಾಗಿ ಹೊಸ ವರ್ಷದ ಸಮಯದಲ್ಲಿ ಇನ್ನಷ್ಟು ತಪಾಸಣೆಗಳು ನಡೆಯಲಿವೆ ಎಂದು ಕಸ್ಟಮ್ಸ್ ಅಧಿಕಾರಿಗಳು ತಿಳಿಸಿದ್ದಾರೆ.

ಮಾದಕ ವಸ್ತು ಪೂರೈಕೆ: ಮತ್ತೆ ನಾಲ್ವರ ಸೆರೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ರಾಜಸ್ಥಾನದಿಂದ ದಾವಣಗೆರೆಗೆ ಮಾದಕವಸ್ತು ಪೂರೈಸುತ್ತಿದ್ದ ಪ್ರಕರಣದಲ್ಲಿ ಇಲ್ಲಿನ ವಿದ್ಯಾನಗರ ಠಾಣೆ ಪೊಲೀಸರು ಭಾನುವಾರ ರಾತ್ರಿ ಮತ್ತೆ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ.

ದಾವಣಗೆರೆಯಲ್ಲಿ ನೆಲೆಸಿದ್ದ ರಾಜಸ್ಥಾನದ ಜೋದ್‌ಪುರ ಮೂಲದ ಪರಶುರಾಮ್ ಅಲಿಯಾಸ್ ಪಾರಸ್ (37), ತಮಿಳುನಾಡಿನ ಕೃಷ್ಣಮೂರ್ತಿ ಸಿಂಗಾರಾಮ್ (44) ಹಾಗೂ ದಾವಣಗೆರೆ ತಾಲ್ಲೂಕಿನ ಜರಿಕಟ್ಟೆಯ ಎಂ.ಮಂಜುನಾಥ ಅಲಿಯಾಸ್ ದೋಣಿ (38) ಹಾಗೂ ತುರ್ಚಘಟ್ಟದ ಅನ್ವರ್ ಬಾಷಾ (50) ಬಂಧಿತರು. ಪ್ರಕರಣದಲ್ಲಿ ಬಂಧಿತರ ಸಂಖ್ಯೆ ಒಟ್ಟು 8ಕ್ಕೆ ಏರಿಕೆಯಾಗಿದೆ. ಆರೋಪಿಗಳಿಂದ ನಾಲ್ಕು ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ.

‘ಬಂಧಿತರು ಅನೇಕ ವರ್ಷಗಳಿಂದ ಸಿಂಥೆಟಿಕ್ ಡ್ರಗ್ಸ್ ಸೇವಿಸುತ್ತಿದ್ದ ಬಗ್ಗೆ ಮಾಹಿತಿ ಇದೆ. ಬಂಧಿತರು ಇಲ್ಲಿನ ಯುವಜನತೆಗೆ ಡ್ರಗ್ಸ್ ಮಾರಾಟ ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದಿಲ್ಲ. ಆದರೂ, ಈ ಬಗ್ಗೆ ತನಿಖೆ ನಡೆಸುತ್ತೇವೆ. ತಲೆ ಮರೆಸಿಕೊಂಡಿರುವ ಇನ್ನೂ ಇಬ್ಬರು ಆರೋಪಿಗಳ ಪತ್ತೆಗಾಗಿ ಕಾರ್ಯಾಚರಣೆ ಮುಂದುವರಿಸಿದ್ದೇವೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ತಿಳಿಸಿದ್ದಾರೆ.

ಪಾಕಿಸ್ತಾನದ ಹೇಳಿಕೆಗೆ ಭಾರತ ಖಂಡನೆ

ನವದೆಹಲಿ (ಪಿಟಿಐ): ‘ಪಾಕಿಸ್ತಾನವು ವಿವಿಧ ಧರ್ಮಗಳ ಅಲ್ಪಸಂಖ್ಯಾತರ ಮೇಲೆ ಭಯಾನಕ ಮತ್ತು ವ್ಯವಸ್ಥಿತವಾಗಿ ದೌರ್ಜನ್ಯ ನಡೆಸುತ್ತಿರುವುದು ಸಾಬೀತಾಗಿರುವ ಸತ್ಯವಾಗಿದೆ. ಅದು ಬೇರೆಯವರತ್ತ ಬೆರಳು ತೋರಿಸಿ ವಾಸ್ತವಾಂಶವನ್ನು ಮರೆಮಾಚಲು ಸಾಧ್ಯವಿಲ್ಲ’ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಸೋಮವಾರ ಹೇಳಿದ್ದಾರೆ.

ಭಾರತದ ಕೆಲವೆಡೆ ಕ್ರಿಸ್‌ಮಸ್ ಆಚರಣೆ ಸಂದರ್ಭದಲ್ಲಿ ನಡೆದಿದ್ದ ವಿಧ್ವಂಸಕ ಕೃತ್ಯಗಳ ಕುರಿತು ಇಸ್ಲಾಮಾಬಾದ್‌ನಲ್ಲಿ ಪ್ರತಿಕ್ರಿಯಿಸಿದ್ದ ಪಾಕಿಸ್ತಾನ ವಿದೇಶಾಂಗ ಕಚೇರಿಯ ವಕ್ತಾರ ತಾಹಿರ್ ಅಂದ್ರಾಬಿ, ‘ಭಾರತದಲ್ಲಿ ಅಲ್ಪಸಂಖ್ಯಾತರ ಮೇಲಿನ ಕಿರುಕುಳ ತೀವ್ರ ಕಳವಳಕಾರಿ ವಿಷಯವಾಗಿದೆ’ ಎಂದು ಹೇಳಿದ್ದರು.

‘ಬಸವಲಿಂಗಪ್ಪ ಚಿಂತನೆ: ಅಧ್ಯಯನ ಮಾಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾಜಿ ಸಚಿವ ಬಿ.ಬಸಲಿಂಗಪ್ಪ ಅವರ ಸಾಮಾಜಿಕ ಚಿಂತನೆ, ದೂರದೃಷ್ಟಿ ಕುರಿತು ಶೈಕ್ಷಣಿಕ ಸಂಶೋಧನಾ ನೆಲೆಗಟ್ಟಿನಲ್ಲಿ ವಿದ್ಯಾರ್ಥಿಗಳು ಅಧ್ಯಯನ ನಡೆಸಬೇಕು’ ಎಂದು ಬೆಂಗಳೂರು ವಿಶ್ವವಿದ್ಯಾಲಯ ಬಿ.ಬಸವಲಿಂಗಪ್ಪ ಅಭಿವೃದ್ಧಿ ಅಧ್ಯಯನ ಸಂಸ್ಥೆ ಸಂಯೋಜಕ ಬಿ.ಎಲ್.ಮುರಳೀಧರ್ ಸಲಹೆ ನೀಡಿದರು.

ಅಭಿವೃದ್ಧಿ ಅಧ್ಯಯನ ಸಂಸ್ಥೆಯಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಬಿ.ಬಸವಲಿಂಗಪ್ಪ ಅವರ 33ನೇ ಮಹಾಪರಿನಿಬ್ಬಾಣ ಸಂಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಕರ್ನಾಟಕದಲ್ಲಿ ಬಸವಲಿಂಗಪ್ಪ ಅವರು ಮಲ ಹೊರುವ ಪದ್ಧತಿ ನಿಷೇಧಿಸಿ, ಪೌರ ಕಾರ್ಮಿಕ ಎಂದು ಘೋಷಿಸಿದರು. ಭೂ ಸುಧಾರಣೆ ನೀತಿಗಳನ್ನು ಅನುಷ್ಠಾನಗೊಳಿಸಿ ದಲಿತರಿಗೆ ವಸತಿ ಸೌಲಭ್ಯ ಕಲ್ಪಿಸಿದರು. ಬಿಸಿಯೂಟ ಯೋಜನೆ ಜಾರಿಗೆ ತಂದರು. ಆರ್ಥಿಕವಾಗಿ ಹಿಂದುಳಿದ ಪೋಷಕರಿಗೆ ಆರ್ಥಿಕ ಸಹಾಯ ಮಾಡಿ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಸಹಾಯ ಮಾಡಿದರು. ಬೂಸಾ ಚಳವಳಿ ಮೂಲಕ ದಲಿತ ಚಳವಳಿಗೆ ಹೊಸ ದಿಕ್ಕನ್ನು ನೀಡಿದ ಕ್ರಾಂತಿಕಾರಿ ಕ್ರಮಗಳ ಕುರಿತು ಅಧ್ಯಯನ ಆಗಬೇಕು’ ಎಂದರು.

ಕುಲಪತಿ ಡಾ.ಎಸ್.ಎಂ.ಜಯಕರ ಮಾತನಾಡಿ, ‘ಅಧ್ಯಯನ ಕೇಂದ್ರಗಳು ಜಯಂತಿಗಳಿಗೆ ಸೀಮಿತವಾಗಿರದೆ ಸಂಶೋಧನೆ ಮತ್ತು ಅಧ್ಯಯನಕ್ಕೆ ಪೂರಕವಾಗಿರಬೇಕು. ಬಸವಲಿಂಗಪ್ಪ ಅವರ ಪುತ್ಥಳಿ ನಿರ್ಮಾಣ ಮತ್ತು ಗ್ರಂಥಾಲಯ ಸೇರಿ ಅಧ್ಯಯನ ಕೇಂದ್ರದ ಪುನಶ್ಚೇತನಕ್ಕೆ ಒತ್ತು ನೀಡಲಾಗುವುದು’ ಎಂದು ತಿಳಿಸಿದರು.

ಕುಲಸಚಿವರಾದ ಕೆ.ಟಿ.ಶಾಂತಲಾ, ಮುಖಂಡ ಬಿ.ಗೋಪಾಲ್, ಸಿಂಡಿಕೇಟ್ ಸದಸ್ಯ ಬಿ.ಡಿ. ಗಂಗರಾಜ್, ಕೇಂದ್ರದ ಹಿಂದಿನ ಸಂಯೋಜಕ ಟಿ.ಎಚ್. ಮೂರ್ತಿ, ಕ್ಷೇಮಾಭಿವೃದ್ಧಿ ನಿರ್ದೇಶಕ ಪಿ.ಸಿ.ನಾಗೇಶ್, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿಶೇಷಾಧಿಕಾರಿ ಪಿ.ಜಿ.ಕೃಷ್ಣಮೂರ್ತಿ, ಚಂದ್ರು ಪೆರಿಯಾರ್ ಉಪಸ್ಥಿತರಿದ್ದರು.


ಬೆಂಗಳೂರು ವಿಶ್ವವಿದ್ಯಾಲಯದ ಬಸವಲಿಂಗಪ್ಪ ಅಧ್ಯಯನ ಕೇಂದ್ರದಲ್ಲಿ ಮಾಜಿ ಸಚಿವ ಬಸವಲಿಂಗಪ್ಪ ಅವರ ಸಂಸ್ಮರಣೆ ಕಾರ್ಯಕ್ರಮ ನಡೆಯಿತು

---

4 ಕಿ.ಮೀ. ಉದ್ದದ ರಸ್ತೆಯಲ್ಲಿ ಸಂಚರಿಸುವ ಸಾರ್ವಜನಿಕರಿಗೆ ಸಂಕಷ್ಟ

2 ವರ್ಷವಾದರೂ ನಿರ್ಮಾಣವಾಗದ ರಸ್ತೆ

• ಸಿ.ಜಿ.ಮೋಹನ್ ಕುಮಾರ್

ದಾಬಸ್ ಪೇಟೆ: ವಾಹನಗಳು ಓಡಾಡಿದರೆ ಏಳುವ ದೂಳು, ರಸ್ತೆಯ ತುಂಬೆಲ್ಲಾ ಹರಡಿರುವ ಜಲ್ಲಿಕಲ್ಲುಗಳು, ಅಲ್ಲಲ್ಲಿ ಬಿದ್ದಿರುವ ಗುಂಡಿಗಳು, ಸ್ವಲ್ಪ ಆಯ ತಪ್ಪಿದರೂ ದ್ವಿಚಕ್ರ ವಾಹನಗಳಿಂದ ನೆಲಕ್ಕೆ ಬೀಳುವ ಸವಾರರು. ರಸ್ತೆಯ ಬದಿಯ ತೋಟ, ಮನೆಗಳಿಗೆ ತುಂಬಿಕೊಳ್ಳುತ್ತಿರುವ ದೂಳು.

ಇದು ಸೋಂಪುರ ಹೋಬಳಿಯ ನರಸೀಪುರ ತೋಪಿನ ಮಧುಗಿರಿ ಮುಖ್ಯರಸ್ತೆಯಿಂದ ಬುಗಡಿಹಳ್ಳಿ ಕೆರೆಪಾಳ್ಯ ಬೆಂಡಗೆರೆ ಮಾರ್ಗವಾಗಿ ಎಲೆಕ್ಯಾತನಹಳ್ಳಿ ಮುಖ್ಯರಸ್ತೆ ಸಂಪರ್ಕ ಕಲ್ಪಿಸುವ ರಸ್ತೆ ಸ್ಥಿತಿ.


ನರಸೀಪುರ ತೋಪಿನ ಮಧುಗಿರಿ ಮುಖ್ಯರಸ್ತೆಯಿಂದ ಎಲೆಕ್ಯಾತನಹಳ್ಳಿ ಮುಖ್ಯರಸ್ತೆ ಸಂಪರ್ಕಿಸುವ ರಸ್ತೆಯಲ್ಲಿ ಜಲ್ಲಿ ಹರಡಿರುವುದು

ಶಾಸಕ ಎನ್.ಶ್ರೀನಿವಾಸ ಅವರು 2023ರ ಡಿಸೆಂಬರ್ 2ರಂದು ಈ ರಸ್ತೆ ಕಾಮಗಾರಿಯ ಪೂಜೆಯನ್ನು ನೆರವೇರಿಸಿದ್ದರು. ಎರಡು ವರ್ಷ ಮುಗಿದರೂ ರಸ್ತೆ ಕಾಮಗಾರಿ ಪೂರ್ಣಗೊಳ್ಳದೆ, ಸಾರ್ವಜನಿಕರಿಗೆ ತೊಂದರೆ ಅನುಭವಿಸುತ್ತಿದ್ದಾರೆ.

ಸುಮಾರು ನಾಲ್ಕು ಕಿಲೋಮೀಟರ್ ಉದ್ದದ ಈ ರಸ್ತೆಯಲ್ಲಿ ಗ್ರಾಮಗಳ ವ್ಯಾಪ್ತಿಯಲ್ಲಿ ಮಾತ್ರ ಕಾಂಕ್ರೀಟ್ ಹಾಕಲಾಗಿದೆ. ಉಳಿದ ಕಡೆ ಜಲ್ಲಿ ಹಾಕಿ ಬಿಡಲಾಗಿದೆ.

‘ಜಲ್ಲಿ ಹಾಕಿ ವರ್ಷ ಕಳೆದರೂ ಡಾಂಬರು ಹಾಕಿಲ್ಲ. ಜಲ್ಲಿ ಎಲ್ಲ ಎದ್ದು ವಾಹನ ಸಂಚಾರ ಹಾಗೂ ಜನ ಸಂಚಾರಕ್ಕೆ ಅಡಚಣೆ ಮಾಡಿದೆ. ವಾಹನಗಳು ಓಡಾಡುವಾಗ ಕಲ್ಲುಗಳು ಸಿಡಿಯುತ್ತವೆ. ದೂಳು ಏಳುತ್ತದೆ. ರಸ್ತೆ ಬದಿಯ ಮನೆ, ತೋಟಗಳಿಗೂ ದೂಳು ಆವರಿಸಿದೆ’ ಎಂದು ರೈತರು ಆತಂಕ ವ್ಯಕ್ತಪಡಿಸಿದರು.

‘ಯಾವ ಇಲಾಖೆ ಕಾಮಗಾರಿ ನಿರ್ವಹಿಸುತ್ತಿದೆ, ಎಷ್ಟು ಹಣಕ್ಕೆ ರಸ್ತೆ ಕಾಮಗಾರಿ ಕ್ರಿಯಾ ಯೋಜನೆ ಮಾಡಲಾಗಿದೆ, ಎಂಜಿನಿಯರ್ ಯಾರು ಎಂಬ ಮಾಹಿತಿ ಇಲ್ಲ. ನಾವು ಶೀಘ್ರ ರಸ್ತೆ ಸರಿಪಡಿಸಿ ಎಂದು ಯಾರಿಗೆ ದೂರುವುದು’ ಎಂದು ಸ್ಥಳೀಯರು ಪ್ರಶ್ನಿಸುತ್ತಾರೆ.

‘ಈ ರಸ್ತೆಯಲ್ಲಿ ಹಾಲಿನ ವಾಹನಗಳು, ಶಾಲಾ ವಾಹನಗಳು, ನಾಲ್ಕೈದು ಗ್ರಾಮಗಳ ಜನರು ನಿತ್ಯ ಸಂಚರಿಸುತ್ತಾರೆ. ಆದರೆ ವರ್ಷಗಳೇ ಉಳಿದರು ರಸ್ತೆ ಸರಿಪಡಿಸದೆ ಹೋಗಿರುವುದು ಸರಿಯಲ್ಲ’ ಎಂದರು ಸ್ಥಳೀಯ ರಮೇಶ್.

‘ಕುವೆಂಪುಗೆ ಭಾರತ ರತ್ನ ಘೋಷಿಸಲಿ’

ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ಸಲಹೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಕುವೆಂಪು ಅವರಿಗೆ ಸರ್ಕಾರವೇ ಪ್ರಶಸ್ತಿ ಹುಡುಕಿ ಕೊಡಬೇಕು
- ಆಗಲೇ ಪ್ರಶಸ್ತಿ ಮೌಲ್ಯ ಹೆಚ್ಚಳ
- ಕನ್ನಡಿಗರು ಅಭಿಮಾನ ಬೆಳೆಸಿಕೊಳ್ಳಬೇಕು

ಬೆಂಗಳೂರು: ‘ಸಮಾಜಕ್ಕೆ ವಿಶ್ವ ಮಾನವ ಸಂದೇಶ ನೀಡಿದ ಸಾಹಿತಿ ಕುವೆಂಪು ಅವರಿಗೆ ಭಾರತ ರತ್ನ ಪ್ರಶಸ್ತಿ ಜತೆಗೆ ನೊಬೆಲ್ ಶಾಂತಿ ಪುರಸ್ಕಾರವನ್ನೂ ನೀಡಬೇಕು’ ಎಂದು ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ಸಲಹೆ ಮಾಡಿದರು.

ಗಾಂಧಿ ನಗರದ ಗುಬ್ಬಿವೀರಣ್ಣ ರಂಗಮಂದಿರ ರಸ್ತೆಯಲ್ಲಿ ಕನ್ನಡ ಕರ್ನಾಟಕ ವೇದಿಕೆ ಸೋಮವಾರ ಆಯೋಜಿಸಿದ್ದ ಕುವೆಂಪು ಜಯಂತಿ ಬೆಳ್ಳಿಹಬ್ಬದಲ್ಲಿ ಮಾತನಾಡಿದ ಅವರು, ‘ಕುವೆಂಪು ಅಂತಹವರಿಗೆ ಭಾರತರತ್ನ ಸೇರಿದಂತೆ ಯಾವುದೇ ಪ್ರಶಸ್ತಿಯನ್ನು ಕೊಡಬೇಕು ಎಂದು ಸಂಘಟನೆಗಳು ಕೇಳಬಾರದು. ಸರ್ಕಾರವೇ ಹುಡುಕಿ ಪ್ರಶಸ್ತಿ ನೀಡಿದಾಗ ಅಂತಹ ಪ್ರಶಸ್ತಿಯ ಮೌಲ್ಯ ಹೆಚ್ಚಲಿದೆ’ ಎಂದು ತಿಳಿಸಿದರು.

‘ಬೆಂಗಳೂರು ನಗರ ಬೃಹತ್ ಆಗಿ ಬೆಳೆದಿದೆ. ಇಲ್ಲಿನ ಯುವಕರಿಗೆ ಉದ್ಯೋಗ ಸಿಗುವಂತೆ ಮಾಡಲು ಕೌಶಲವನ್ನು ವೃದ್ಧಿಸಬೇಕು. ಹಲವು ದೇಶಗಳಲ್ಲಿ ಯುವಕರ ಕೌಶಲ ಪ್ರಮಾಣ ಶೇ 90ರಷ್ಟಿದೆ. ನಮ್ಮಲ್ಲಿ ಈ ಪ್ರಮಾಣ ಶೇ 10ರಷ್ಟೂ ಇಲ್ಲ. ಉಪಮುಖ್ಯ ಮಂತ್ರಿಯಾಗಿದ್ದಾಗ ಕೌಶಲ ಶಿಕ್ಷಣಕ್ಕೆ ಒತ್ತು ನೀಡಿ ಕಾರ್ಯಕ್ರಮ ರೂಪಿಸಿದೆ. ಈಗಿನ ಸರ್ಕಾರ ಗ್ಯಾರಂಟಿ ಯೋಜನೆಯಲ್ಲಿ ಮುಳುಗಿದೆ. ಇದರ ಬದಲು ಗುಣಮಟ್ಟದ ಶಿಕ್ಷಣ, ಆರೋಗ್ಯ ಸೇವೆ, ಉದ್ಯೋಗದ ಗ್ಯಾರಂಟಿಯನ್ನು ಸರ್ಕಾರ ಕೊಡಲಿ’ ಎಂದು ಹೇಳಿದರು.

ಆದಿಚುಂಚನಗಿರಿ ವಿಜಯನಗರ ಶಾಖಾ ಮಠದ ಸೌಮ್ಯನಾಥ ಸ್ವಾಮೀಜಿ ಮಾತನಾಡಿ, ‘ಕನ್ನಡಿಗರು ಅಭಿಮಾನ ಬೆಳೆಸಿಕೊಳ್ಳಬೇಕು. ಕುವೆಂಪು ಸಹಿತ ಹಲವು ದಾರ್ಶನಿಕರು ಕನ್ನಡ ಭಾಷೆ ಉಳಿಸಿ ಬೆಳೆಸಲು ಶ್ರಮಿಸಿದ್ದಾರೆ. ಹಲವು ಸಂಘಟನೆಗಳು ನಾಡು, ನುಡಿ ವಿಚಾರದಲ್ಲಿ ತೋರುತ್ತಿರುವ ಅಭಿಮಾನ ಪ್ರತಿಯೊಬ್ಬರ ಬದುಕಿನ ಭಾಗವಾಗಬೇಕು’ ಎಂದರು.

ವೇದಿಕೆಯ ಅಧ್ಯಕ್ಷ ಕೆ.ಸಿ. ಮೂರ್ತಿ, ಕನ್ನಡ ಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಬೊಮ್ಮಸಂದ್ರ ನಟರಾಜ್, ಅಂಬೇಡ್ಕರ್ ಸೇನೆಯ ರಾಜ್ಯಾಧ್ಯಕ್ಷ ಪಿ.ಮೂರ್ತಿ, ಮಹಿಳಾ ಘಟಕದ ಅಧ್ಯಕ್ಷ ಉಮಾದೇವಿ, ಚಾಲಕರ ಒಕ್ಕೂಟದ ಅಧ್ಯಕ್ಷ ನಾರಾಯಣಸ್ವಾಮಿ, ವಿಶ್ವ ಒಕ್ಕಲಿಗರ ಒಕ್ಕೂಟದ ಅಧ್ಯಕ್ಷ ದೇವರಾಜ ಹಾಜರಿದ್ದರು. ಕಲಾವಿದ ಅಪ್ಪಗೆರೆ ತಿಮ್ಮರಾಜು ತಂಡದವರು ಗಾಯನ ಕಾರ್ಯಕ್ರಮ ನಡೆಸಿಕೊಟ್ಟರು.



ನಗರದಲ್ಲಿ ಸೋಮವಾರ ಕನ್ನಡ ಕರ್ನಾಟಕ ರಕ್ಷಣಾ ವೇದಿಕೆ ಆಯೋಜಿಸಿದ್ದ ಕುವೆಂಪು ಜಯಂತಿ ಬೆಳ್ಳಿಹಬ್ಬ ಕಾರ್ಯಕ್ರಮದಲ್ಲಿ (ಎಡದಿಂದ) ಅಪ್ಪಗೆರೆ ತಿಮ್ಮರಾಜು, ಬಾಲಕೃಷ್ಣ, ಪಿ.ಮೂರ್ತಿ, ಸೌಮ್ಯನಾಥ ಸ್ವಾಮೀಜಿ ಮತ್ತು ಕೆ.ಸಿ ಮೂರ್ತಿ ಕುವೆಂಪು ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

‘ಸಮ ಸಮಾಜ ನಿರ್ಮಾಣವಾಗಲಿ’

ಜಾನಪದ ಪರಿಷತ್ತಿನ ಅಧ್ಯಕ್ಷ ಹಿ.ಚಿ. ಬೋರಲಿಂಗಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯುವ ಸಮೂಹ ರಾಷ್ಟ್ರಕವಿ ಕುವೆಂಪು ಅವರ ವಿಶ್ವಮಾನವ ಸಂದೇಶವನ್ನು ಎತ್ತಿಹಿಡಿಯುವ ಮೂಲಕ ಸಮ ಸಮಾಜ ನಿರ್ಮಾಣಕ್ಕೆ ಭದ್ರ ಬುನಾದಿ ಹಾಕಬೇಕು’ ಎಂದು ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷ ಹಿ.ಚಿ. ಬೋರಲಿಂಗಯ್ಯ ಹೇಳಿದರು.

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಸೋಮವಾರ ನಡೆದ ವಿಶ್ವಮಾನವ ದಿನಾಚರಣೆ ಮತ್ತು ಪ್ರಸಾರಾಂಗ ಉದ್ಘಾಟನೆ ಸಮಾರಂಭದಲ್ಲಿ ಅವರು ಮಾತನಾಡಿದರು. ‘ಕುವೆಂಪು ಅವರ ಪೂರ್ಣದೃಷ್ಟಿ ಕನ್ನಡ ಸಾಹಿತ್ಯದಲ್ಲಿ ನವ ಮನ್ವಂತರಕ್ಕೆ ನಾಂದಿಯಾಯಿತು’ ಎಂದರು.

‘ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಕುವೆಂಪು ಅವರು, ಅಧ್ಯಯನಾಂಗ, ಸಂಶೋಧನಾಂಗ ಮತ್ತು ಪ್ರಸಾರಾಂಗ ಎಂಬ ಮೂರು ಆಯಾಮಗಳ ಮೂಲಕ ಉನ್ನತ ಶಿಕ್ಷಣಕ್ಕೆ ಪರಿಪೂರ್ಣತೆಯ ಮಾರ್ಗ ತೋರಿದ್ದರು. ಪ್ರಕೃತಿ ಆರಾಧಕರಾಗಿದ್ದ ಅವರು, ಕಂದಾಚಾರ, ಮೂಢನಂಬಿಕೆ, ವರ್ಣ ವ್ಯವಸ್ಥೆಯ ವಿರುದ್ಧ ಬರವಣಿಗೆ ಮೂಲಕವೇ ಸಮರ ಸಾರಿ ಮನುಜಮತ ವಿಶ್ವಪಥದ ಸಂದೇಶವನ್ನು ಸಾರಿದರು’ ಎಂದು ಹೇಳಿದರು.

ಪ್ರಶಾಂತ ನಾಯಕ್ ಅವರ ‘ನಮ್ಮ ಕುವೆಂಪು’ ಮತ್ತು ತಾಂಡವಗೌಡ ಅವರ ‘ಕೃತಕ ಬುದ್ಧಿಮತ್ತೆಯ ಮೂಲಕ ಬೋಧನಾ ಕೌಶಲ ಅಭಿವೃದ್ಧಿ’ ಎಂಬ ಪುಸ್ತಕಗಳನ್ನು ಜನಾರ್ಪಣೆಗೊಳಿಸಲಾಯಿತು.



ವಿಶ್ವಮಾನವ ದಿನಾಚರಣೆ ಸಮಾರಂಭದಲ್ಲಿ ಕುವೆಂಪು ಅವರ ಭಾವಚಿತ್ರಕ್ಕೆ ಹಿ.ಚಿ. ಬೋರಲಿಂಗಯ್ಯ, ಉಮಾಶ್ರೀ, ಬಿ. ರಮೇಶ್, ಪರೀಕ್ಷಾಂಗ ಕುಲಸಚಿವ ರಮೇಶ್ ಬಿ. ಕುಡೇನಟ್ಟಿ ಮತ್ತು ಕುವೆಂಪು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪ್ರಶಾಂತ ನಾಯಕ್ ಪುಷ್ಪನಮನ ಸಲ್ಲಿಸಿದರು

ನಾಲ್ಕು ಜಿಲ್ಲೆಗಳಲ್ಲಿ ಮಳೆ ಸಾಧ್ಯತೆ

ಬೆಂಗಳೂರು: ದಕ್ಷಿಣ ಒಳನಾಡಿನ ನಾಲ್ಕು ಜಿಲ್ಲೆಗಳಲ್ಲಿ ಬುಧವಾರದಿಂದ (ಡಿ.31) ಎರಡು ದಿನ ಹಗುರವಾಗಿ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಚಾಮರಾಜನಗರ, ಕೊಡಗು, ಮಂಡ್ಯ ಹಾಗೂ ಮೈಸೂರು ಜಿಲ್ಲೆಗಳ ಒಂದೆರಡು ಸ್ಥಳಗಳಲ್ಲಿ ಮಳೆಯಾಗಬಹುದು. ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಚಿಕ್ಕಮಗಳೂರು, ದಾವಣಗೆರೆ, ಹಾಸನ, ಕೋಲಾರ, ರಾಮನಗರ, ಶಿವಮೊಗ್ಗ, ತುಮಕೂರು ಹಾಗೂ ವಿಜಯನಗರ ಜಿಲ್ಲೆಗಳಲ್ಲಿ ಒಣ ಹವೆ ಮುಂದುವರಿಯಲಿದೆ ಎಂದು ತಿಳಿಸಿದೆ.

ಸೋಮವಾರ ಬೀದರ್‌ನಲ್ಲಿ ಕನಿಷ್ಠ ಉಷ್ಣಾಂಶ 9.5 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ವಿಜಯಪುರ 9.9, ಧಾರವಾಡ 10.4, ಗದಗ ಹಾಗೂ ರಾಯಚೂರು 11.8, ಬೆಳಗಾವಿ 12, ದಾವಣಗೆರೆ 12.5, ಮೈಸೂರು 13 ಹಾಗೂ ಶಿವಮೊಗ್ಗದಲ್ಲಿ 13.2 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ.

ಫಲಾನುಭವಿಗಳ ಆಯ್ಕೆ ಪಟ್ಟಿ ಸಲ್ಲಿಸಲು ಅಧಿಕಾರಿಗಳಿಗೆ ಜ.15ರ ಗಡುವು

ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ: ರಾಮಪ್ಪ

ಪ್ರಜಾವಾಣಿ ವಾರ್ತೆ



ರಾಮಪ್ಪ

ಬೆಂಗಳೂರು: ‘ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಸೌಲಭ್ಯಗಳನ್ನು ಪಡೆಯಲು ಅರ್ಜಿ ಸಲ್ಲಿಸಿರುವ ಫಲಾನುಭವಿಗಳ ಆಯ್ಕೆ ಪಟ್ಟಿಯನ್ನು ಜನವರಿ 15ರೊಳಗೆ ಸಲ್ಲಿಸುವಂತೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಗಡುವು ನೀಡಲಾಗಿದೆ. ಪಟ್ಟಿ ಸಲ್ಲಿಸದ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುವುದು’ ಎಂದು ನಿಗಮದ ಅಧ್ಯಕ್ಷ ಎಂ.ರಾಮಪ್ಪ ಎಚ್ಚರಿಕೆ ನೀಡಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘2025–26ನೇ ಸಾಲಿನಲ್ಲಿ ಭೋವಿ ನಿಗಮಕ್ಕೆ ₹93.75 ಕೋಟಿ ಅನುದಾನ ಬಿಡುಗಡೆಯಾಗಿದೆ. ಹಿಂದಿನ ವರ್ಷದ ಅನುದಾನ ಸೇರಿಸಿಕೊಂಡು ಒಟ್ಟು ₹164.86 ಕೋಟಿ ವೆಚ್ಚದ ಕ್ರಿಯಾ ಯೋಜನೆ ರೂಪಿಸಲಾಗಿದೆ. ಇದರಲ್ಲಿ ₹68.81 ಕೋಟಿ ಬಳಕೆಯಾಗಿದೆ. ಉಳಿದ ಅನುದಾನವನ್ನು ಮೂರು–ನಾಲ್ಕು ತಿಂಗಳಲ್ಲಿ ಸಮರ್ಪಕವಾಗಿ ಬಳಸಿಕೊಳ್ಳಲಾಗುವುದು. ನಿಗಮದ ವಿವಿಧ ಯೋಜನೆಗಳಡಿ ಆಯ್ಕೆಯಾದ ಫಲಾನುಭವಿಗಳ ಪಟ್ಟಿಯನ್ನು ಕಳುಹಿಸುವಂತೆ 224 ಶಾಸಕರಿಗೂ ಪತ್ರ ಬರೆದಿದ್ದೇನೆ’ ಎಂದು ತಿಳಿಸಿದರು.

‘ಶೇಕಡ 80ರಷ್ಟು ಫಲಾನುಭವಿಗಳನ್ನು ಶಾಸಕರು, ಶೇ 15ರಷ್ಟು ಫಲಾನುಭವಿಗಳನ್ನು ಸಮಾಜ ಕಲ್ಯಾಣ ಸಚಿವರು ಹಾಗೂ ಶೇ 5ರಷ್ಟು ಫಲಾನುಭವಿಗಳನ್ನು ನಿಗಮದ ಅಧ್ಯಕ್ಷರು ಆಯ್ಕೆ ಮಾಡುತ್ತಾರೆ. ಭೂ ಒಡೆತನ ಯೋಜನೆ ಅಡಿಯಲ್ಲಿ 2025-26ನೇ ಸಾಲಿನಲ್ಲಿ 169 ಮಹಿಳೆಯರಿಗೆ ಜಮೀನು ನೀಡಲಾಗಿದೆ. ಈ ಬಾರಿ ವಿವಿಧ ಯೋಜನೆಗಳ ಅಡಿಯಲ್ಲಿ ಒಟ್ಟು 90 ಸಾವಿರ ಅರ್ಜಿಗಳು ಬಂದಿದ್ದು, ಇದರಲ್ಲಿ 10 ಸಾವಿರ ಅರ್ಜಿಗಳನ್ನು ಪರಿಗಣಿಸಲಾಗುತ್ತದೆ’ ಎಂದು ವಿವರಿಸಿದರು.

‘ನಿಗಮದಲ್ಲಿ ಮಧ್ಯವರ್ತಿಗಳ ಹಾವಳಿ ನಿಯಂತ್ರಿಸಲು ಸಮುದಾಯದ ಮುಖಂಡರು ಹಾಗೂ ಅಧಿಕಾರಿಗಳು ಸಹಕಾರ ನೀಡಬೇಕು. ಫಲಾನುಭವಿಗಳು ನೇರವಾಗಿ ನನ್ನನ್ನು ಅಥವಾ ವ್ಯವಸ್ಥಾಪಕ ನಿರ್ದೇಶಕರನ್ನು ಸಂಪರ್ಕಿಸಬಹುದು. ನಿಗಮದಲ್ಲಿರುವ ಸ್ವಯಂ ಉದ್ಯೋಗ ನೇರಸಾಲ, ಉದ್ಯಮಶೀಲತೆ, ಮೈಕ್ರೊ ಕ್ರೆಡಿಟ್, ಭೂ ಒಡೆತನ, ಗಂಗಾ ಕಲ್ಯಾಣ ಯೋಜನೆಗಳನ್ನು ಫಲಾನುಭವಿಗಳಿಗೆ ತಲುಪಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ’ ಎಂದರು.

‘ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಭೋವಿ ಅಭಿವೃದ್ಧಿ ನಿಗಮದ ಶಾಶ್ವತ ಕಚೇರಿ ತೆರೆಯಬೇಕು ಎಂಬ ಉದ್ದೇಶ ಇದೆ. ಮುಂದಿನ ಬಜೆಟ್‌ನಲ್ಲಿ ಭೋವಿ ಅಭಿವೃದ್ಧಿ ನಿಗಮಕ್ಕೆ ₹300 ಕೋಟಿ ಅನುದಾನ ನೀಡುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು’ ಎಂದು ತಿಳಿಸಿದರು.

ಮುಂಬೈ: ಬಸ್ ಡಿಕ್ಕಿ ಹೊಡೆದು ನಾಲ್ವರ ಸಾವು

ಮುಂಬೈ (ಪಿಟಿಐ): ಇಲ್ಲಿನ ಮುಂಬೈ ಮಹಾನಗರ ಸಾರಿಗೆ ಸಂಸ್ಥೆಗೆ ಸೇರಿದ (ಬೆಸ್ಟ್) ಬಸ್ಸೊಂದು ಸೋಮವಾರ ರಾತ್ರಿ ಹಿಮ್ಮುಖವಾಗಿ ಚಲಿಸಿದ ವೇಳೆ ಮಹಿಳೆ ಸೇರಿದಂತೆ ನಾಲ್ವರು ಮೃತಪಟ್ಟಿದ್ದಾರೆ.

‘ಮುಂಬೈನ ಭಂಡಪ್ ಪ್ರದೇಶದ ಸ್ಟೇಷನ್ ರಸ್ತೆಯಲ್ಲಿ ರಾತ್ರಿ 10 ಗಂಟೆ ಸುಮಾರಿಗೆ ಬಸ್ ಹಿಮ್ಮುಖವಾಗಿ ಚಲಿಸಿದ ವೇಳೆ ಪಾದಚಾರಿಗಳಿಗೆ ಡಿಕ್ಕಿ ಹೊಡೆದಿದೆ. ಈ ವೇಳೆ ನಾಲ್ವರು ಮೃತಪಟ್ಟಿದ್ದು, ಒಂಬತ್ತು ಮಂದಿ ಗಾಯಗೊಂಡಿದ್ದಾರೆ. ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಬಸ್ ಚಾಲಕನನ್ನು ವಶಕ್ಕೆ ಪಡೆಯಲಾಗಿದ್ದು, ಎಫ್‌ಐಆರ್ ದಾಖಲಿಸಲಾಗಿದೆ.



ಆನೇಕಲ್‌ನಲ್ಲಿ ನಡೆದ ರಾಜ್ಯ ಮಟ್ಟದ ಕಬಡ್ಡಿ ಪಂದ್ಯಾವಳಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ ಬೆಂಗಳೂರು ನಗರ ತಂಡ ಟ್ರೋಫಿ ಜೊತೆ

ಕಬಡ್ಡಿ: ಬೆಂಗಳೂರು ಚಾಂಪಿಯನ್

ಪ್ರಜಾವಾಣಿ ವಾರ್ತೆ

ಆನೇಕಲ್: ವೆಂಕಟೇಶ್ ಗುರು ಗೆಳೆಯರ ಬಳಗ ಆಯೋಜಿಸಿದ್ದ ರಾಜ್ಯಮಟ್ಟದ ಕಬಡ್ಡಿ ಪಂದ್ಯಾವಳಿಯ ಫೈನಲ್ ಪಂದ್ಯದಲ್ಲಿ ಬೆಂಗಳೂರು ನಗರ ತಂಡ ಚಾಂಪಿಯನ್ ಆಗಿ ಹೊರಹೊಮ್ಮಿತು.

ಭಾನುವಾರ ರಾತ್ರಿ ನಡೆದ ಫೈನಲ್ ಪಂದ್ಯದಲ್ಲಿ ಬೆಂಗಳೂರು ನಗರ ತಂಡ ಉತ್ತರ ಕನ್ನಡ ತಂಡವನ್ನು ಮಣಿಸಿ ₹1ಲಕ್ಷ ನಗದು ಮತ್ತು ಟ್ರೋಫಿ ಎತ್ತಿ ಹಿಡಿಯಿತು. ರನ್ನರ್ ಅಪ್ ಉತ್ತರ ಕನ್ನಡ ತಂಡ ₹50 ಸಾವಿರ ನಗದು ಮತ್ತು ಟ್ರೋಫಿ ತನ್ನದಾಗಿಸಿಕೊಂಡಿತು.

ಶಿವಮೊಗ್ಗ ಮತ್ತು ದಕ್ಷಿಣ ಕನ್ನಡ ತಂಡ ಕ್ರಮವಾಗಿ ಮೂರು, ನಾಲ್ಕನೇ ಸ್ಥಾನ ಪಡೆದವು. ಈ ಎರಡೂ ತಂಡಗಳಿಗೆ ತಲಾ ₹25 ಸಾವಿರ ನಗದು ಮತ್ತು ಟ್ರೋಫಿ ವಿತರಿಸಲಾಯಿತು.

ಟ್ರಂಪ್–ನೆತನ್ಯಾಹು ಮಾತುಕತೆ ಇಂದು

ಪಾಮ್ ಬೀಚ್ (ಎಪಿ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಸೋಮವಾರ ಮಾತುಕತೆ ನಡೆಸಲಿದ್ದಾರೆ.

ಟ್ರಂಪ್ ಅವರು ಫ್ಲಾರಿಡಾದ ಮಾರ್–ಎ–ಲಾಗೊ ಎಸ್ಟೇಟ್‌ನಲ್ಲಿ ಮುಖಾಮುಖಿ ಭೇಟಿಯಾಗಿ, ಇಸ್ರೇಲ್–ಗಾಜಾ ನಡುವಣ ಸಂಘರ್ಷದ ಅಂತ್ಯಕ್ಕೆ ಶಾಂತಿ ಮಾತುಕತೆ ಪ್ರಕ್ರಿಯೆಯನ್ನು ವೇಗಗೊಳಿಸುವ ಸಂಬಂಧ ನೆತನ್ಯಾಹು ಅವರ ಮೇಲೆ ಪ್ರಭಾವ ಬೀರಲಿದ್ದಾರೆ.

ಇದಕ್ಕೂ ಮುನ್ನ ನೆತನ್ಯಾಹು ಅವರು ಅಮೆರಿಕದ ರಕ್ಷಣಾ ಸಚಿವ ಮತ್ತು ವಿದೇಶಾಂಗ ಸಚಿವರನ್ನು ಪ್ರತ್ಯೇಕವಾಗಿ ಭೇಟಿ ಮಾಡಲಿದ್ದಾರೆ. ಟ್ರಂಪ್ ಅವರ ಮಧ್ಯಸ್ಥಿಕೆಯಲ್ಲಿ ಇಸ್ರೇಲ್–ಹಮಾಸ್ ನಡುವಣ ಶಾಂತಿ ಒಪ್ಪಂದ ಮಾತುಕತೆ ನಡೆಯುತ್ತಿದೆ. ಇತ್ತೀಚೆಗೆ ಮಾತುಕತೆಯು ನಿಧಾನಗತಿಯಲ್ಲಿ ಸಾಗುತ್ತಿದೆ. ಉಭಯ ತಂಡಗಳು ಶಾಂತಿ ಮಾತುಕತೆಯ ನಿಯಮಗಳ ಉಲ್ಲಂಘನೆಯಾಗುತ್ತಿದೆ ಎಂದು ಪರಸ್ಪರ ಆರೋಪಿಸುತ್ತಿವೆ.

ಚಿತ್ರಾವಳಿ



ನಗರದ ಚಿತ್ರಕಲಾ ಪರಿಷತ್ತಿನಲ್ಲಿ ಆಯೋಜಿಸಿರುವ ಛಾಯಾಚಿತ್ರ ಪ್ರದರ್ಶನದಲ್ಲಿ ಛಾಯಾಗ್ರಾಹಕ ಕೆ.ವೆಂಕಟೇಶ್ ಅವರು ಕಡಲೆಕಾಯಿ ಪರಿಷೆಯಲ್ಲಿ ಸೆರೆ ಹಿಡಿದಿರುವ ಚಿತ್ರಗಳನ್ನು ಯುವತಿಯರು ವೀಕ್ಷಿಸಿದರು



ರಿಚ್ಮಂಡ್ ವೃತ್ತದಲ್ಲಿರುವ ಪ್ರಾದೇಶಿಕ ಭವಿಷ್ಯನಿಧಿ ಕಚೇರಿ ಆವರಣದಲ್ಲಿ ಇಪಿಎಸ್–95 ಬಿಎಂಟಿಸಿ, ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘದ ಸದಸ್ಯರು ಪ್ರತಿಭಟನೆ ನಡೆಸಿದರು

ಬೆಂಗಳೂರು ಡ್ರಗ್ಸ್ ಜಾಲದ ಕೇಂದ್ರವಾಗಿ ಮಾರ್ಪಟ್ಟಿದೆಯೇ?

- ಹೌದು, ಇದು ಆತಂಕಕಾರಿ ಬೆಳವಣಿಗೆ
- ಇಲ್ಲ, ಇದು ವಿರಳ ಪ್ರಕರಣವಷ್ಟೇ
- ಖಚಿತತೆ ಇಲ್ಲ, ಕಣ್ಗಾವಲು ಹೆಚ್ಚಿಸಬೇಕು

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

'ಕುವೆಂಪು ಕೋಮುಸೌಹಾರ್ದ ಕಾಯ್ದೆ'

'ವಿಶ್ವಮಾನವ ಧರ್ಮ ಮೊದಲ ಮಹಾಧಿವೇಶನ'ದಲ್ಲಿ ಒತ್ತಾಯ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಗಣತಿಯ ಧರ್ಮದ ಕಾಲಂನಲ್ಲಿ 'ವಿಶ್ವಮಾನವ ಧರ್ಮ' ಬರೆಸಿ
- ಶಾಲೆ, ಕಾಲೇಜುಗಳಲ್ಲಿ 'ವಿಶ್ವಮಾನವ ವೈಚಾರಿಕ ಕ್ಲಬ್' ಸ್ಥಾಪಿಸಲಿ
- ಪಠ್ಯದಲ್ಲಿ ವೈಚಾರಿಕ ಲೇಖಕರ ವಿಚಾರಗಳ ಸೇರ್ಪಡೆಗೆ ಒತ್ತಾಯ

ಯಾಚೇನಹಳ್ಳಿ (ಮೈಸೂರು ಜಿಲ್ಲೆ): 'ದ್ವೇಷ ಭಾಷಣ ಪ್ರತಿಬಂಧಕ ಕಾಯ್ದೆಗೆ 'ಕುವೆಂಪು ಕೋಮು ಸೌಹಾರ್ದ ಕಾಯ್ದೆ' ಎಂದು ಹೆಸರಿಡುವಂತೆ ಒತ್ತಡ ಹೇರುವುದು ಸೇರಿ 12 ನಿರ್ಣಯಗಳನ್ನು ಇಲ್ಲಿ ಸೋಮವಾರ ನಡೆದ 'ವಿಶ್ವಮಾನವ ಧರ್ಮ ಮೊದಲ ಮಹಾಧಿವೇಶನ'ದಲ್ಲಿ ಕೈಗೊಳ್ಳಲಾಯಿತು.

ವಿಶ್ವಮಾನವ ಧರ್ಮ ಜಾಗೃತಿ ವೇದಿಕೆಯಿಂದ ಗ್ರಾಮದ ಶ್ರೀರಾಮಕೃಷ್ಣ ಸೇವಾ ಕೇಂದ್ರದ ಶಾಲೆ ಆವರಣದಲ್ಲಿ ನಡೆದ ಮಹಾಧಿವೇಶನದಲ್ಲಿ ಕುವೆಂಪು ಅನುಯಾಯಿಗಳು ಪಾಲ್ಗೊಂಡು, ನಿರ್ಣಯಗಳಿಗೆ ಸಹಮತ ವ್ಯಕ್ತಪಡಿಸಿದರು.

ಮುಂದಿನ ಮಹಾಧಿವೇಶನವನ್ನು ಬೆಂಗಳೂರಿನಲ್ಲಿ ನಡೆಸಲು, ಕೇಂದ್ರ ಸರ್ಕಾರವು ಕೈಗೊಳ್ಳುವ ಜನಗಣತಿಯಲ್ಲಿ ಧರ್ಮದ ಕಾಲಂನಲ್ಲಿ, 'ವಿಶ್ವಮಾನವ ಧರ್ಮ' ಎಂದು ದಾಖಲಿಸುವಂತೆ ಜಾಗೃತಿ ಅಭಿಯಾನ ಕೈಗೊಳ್ಳಲು, ಎಲ್ಲಾ ಶಾಲಾ- ಕಾಲೇಜುಗಳಲ್ಲಿ ಕಡ್ಡಾಯವಾಗಿ 'ವಿಶ್ವಮಾನವ ವೈಚಾರಿಕ ಕ್ಲಬ್' ಸ್ಥಾಪಿಸಲು ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರಲು ನಿರ್ಧರಿಸಲಾಯಿತು.

ಕುವೆಂಪು ಜನ್ಮದಿನವನ್ನು (ಡಿ.29) ಸರ್ಕಾರಿ ಹಾಗೂ ಖಾಸಗಿ ಶಾಲಾ ಕಾಲೇಜು ಮತ್ತು ಇಲಾಖೆಗಳಲ್ಲಿ ವಿಶ್ವಮಾನವ ದಿನವನ್ನಾಗಿ ಆಚರಿಸಲು ಸುತ್ತೋಲೆ ಹೊರಡಿಸಬೇಕು ಎಂದು ಒತ್ತಾಯಿಸಲಾಯಿತು.

'ಕೋಮು ಸಾಮರಸ್ಯಕ್ಕಾಗಿ, ವೇದಿಕೆಯಿಂದ ಆಗಾಗ ವಿವಿಧ ಧರ್ಮಗಳ ಧರ್ಮಾಧಿಕಾರಿಗಳನ್ನು ಒಂದೆಡೆ ಸೇರಿಸಿ ಸ್ನೇಹ ಸಂವಾದಗಳನ್ನು ಏರ್ಪಡಿಸಬೇಕು. ಕುವೆಂಪು ವಿಚಾರಗಳನ್ನು ಸರಳೀಕರಿಸಿ ಕಿರುಹೊತ್ತಿಗೆ ಸಿದ್ಧಪಡಿಸಿ ಜನರಿಗೆ ತಲುಪಿಸಬೇಕು. ಶಾಲಾ ಪಠ್ಯಕ್ರಮದಲ್ಲಿ ಕುವೆಂಪು ಒಳಗೊಂಡಂತೆ ಎಲ್ಲಾ ವೈಚಾರಿಕ ಲೇಖಕರ ವಿಚಾರಗಳು ಹೆಚ್ಚು ಇರುವಂತೆ ಪಠ್ಯಕ್ರಮ ಸಮಿತಿಗೆ ಶಿಫಾರಸು ಮಾಡಬೇಕು. ವೇದಿಕೆಯಿಂದ ಮನೆ ಮನೆಗೆ ಕುವೆಂಪು ಎಂಬ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ನಡೆಸಬೇಕು. ಕವಿ, ಸಾಹಿತಿ ಮತ್ತು ವಿದ್ವಾಂಸರನ್ನು ಒಳಗೊಂಡ ವಿಚಾರಗೋಷ್ಠಿಗಳನ್ನು ನಡೆಸಿ ಕುವೆಂಪು ಸಾಹಿತ್ಯವನ್ನು ಸಾಮಾನ್ಯರಿಗೆ ತಲುಪಿಸಬೇಕು' ಎಂದು ನಿರ್ಧರಿಸಲಾಯಿತು.

ವೇದಿಕೆಯನ್ನು ರಾಜಕೀಯ, ಮತೀಯ ಮತ್ತು ಜಾತಿಯ ಸೋಂಕಿಲ್ಲದ, ಕುವೆಂಪು ಆಶಯದ ಪೂರ್ಣ ದೃಷ್ಟಿ, ಸಮಾನತೆ ಮತ್ತು ಸಮನ್ವಯದ ಟ್ರಸ್ಟ್ ಆಗಿ ರೂಪಿಸಿ, ಬೈಲಾ ಸಿದ್ಧಪಡಿಸಿ ನೋಂದಣಿ ಮಾಡಿಸಲು ತೀರ್ಮಾನಿಸಲಾಯಿತು.

ನಾದಾನಂದನಾಥ ಸ್ವಾಮೀಜಿ, ಕೆಂಗೇರಿ ವಿಶ್ವಮಾನವ ಪೀಠದ ನಿಶ್ಚಲಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್, ವಿಮರ್ಶಕ ಚಂದ್ರಶೇಖರ ನಂಗಲಿ, ಸಹಕಾರಿ ಧುರೀಣ ವೈ.ಎನ್. ಶಂಕರೇಗೌಡ ಪಾಲ್ಗೊಂಡಿದ್ದರು.



ಮೈಸೂರು ಜಿಲ್ಲೆಯ ಯಾಚೇನಹಳ್ಳಿಯಲ್ಲಿ ಸೋಮವಾರ ನಡೆದ 'ವಿಶ್ವಮಾನವ ಧರ್ಮ ಮೊದಲ ಮಹಾಧಿವೇಶನ'ದಲ್ಲಿ ಪಾಲ್ಗೊಂಡಿದ್ದ ಶ್ರೀಗಳು ಹಾಗೂ ಗಣ್ಯರು ಕುವೆಂಪು ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು

ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ರದ್ದತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಕಾರವಾರ: ಉದ್ದೇಶಿತ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಕೈಗೊಳ್ಳಬೇಕಿರುವ ಪ್ರದೇಶಕ್ಕೆ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸದಸ್ಯರಾದ ಎಚ್.ಎಸ್.ಸಿಂಗ್ ಮತ್ತು ಆರ್.ಸುಕುಮಾರ್ ಮತ್ತು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ಐಜಿಎಫ್ ಶಿವಕುಮಾರ ಸಿ.ಎಂ ಸೋಮವಾರ ಭೇಟಿ ನೀಡಿ ಪರಿಶೀಲಿಸಿದರು. ಅವರನ್ನು ಭೇಟಿಯಾದ ಸ್ಥಳೀಯರು, ಯೋಜನೆಗೆ ಅನುಮತಿ ನೀಡದಂತೆ ಕೋರಿದರು.

ತಂಡದ ಸದಸ್ಯರು ಭಾನುವಾರ ಬೇಗೋಡಿ ಗ್ರಾಮಕ್ಕೆ ಭೇಟಿ ನೀಡಿದ್ದರು.

ಗೇರುಸೊಪ್ಪದ ಸಿಂಗಳೀಕ ಉದ್ಯಾನದಲ್ಲಿ ಜನರ ಜೊತೆ ಚರ್ಚಿಸಿದರು. ಶಾಸಕ ದಿನಕರ ಶೆಟ್ಟಿ, ಶ್ರೀ ಕ್ಷೇತ್ರ ಬಂಗಾರಮಕ್ಕಿಯ ಧರ್ಮಾಧಿಕಾರಿ ಮಾರುತಿ ಗುರೂಜಿ, ಶರಾವತಿ ಕೊಳ್ಳ ಉಳಿಸಿ ಹೋರಾಟ ಸಮಿತಿಯ ಚಂದ್ರಕಾಂತ ಕೋಚರೇಕರ್, ಸ್ಥಳೀಯರು ವನ್ಯಜೀವಿ ಹಾಗೂ ಪರಿಸರಕ್ಕೆ ಉಂಟಾಗುವ ಹಾನಿಯ ಕುರಿತು ವಿವರಿಸಿ ಲಿಖಿತ ಮನವಿ ಸಲ್ಲಿಸಿದರು.

ತಜ್ಞರ ತಂಡ ಸಾಗರದಲ್ಲಿ ನಡೆಸಿದ ಸಭೆಯಲ್ಲಿ ಮಾತನಾಡಿದ ಜೀವವೈವಿಧ್ಯ ಮಂಡಳಿಯ ಮಾಜಿ ಅಧ್ಯಕ್ಷ ಅನಂತ ಹೆಗಡೆ ಅಶೀಸರ, 'ಕೇಂದ್ರ ತಂಡ ಶರಾವತಿ ಕಣಿವೆ ಅಧ್ಯಯನ ವರದಿ ಹಾಗೂ ರಾಜ್ಯ ಸರ್ಕಾರವೇ ನಡೆಸಿದ ಭೂಕುಸಿತ ಅಧ್ಯಯನ ಸಮಿತಿ ವರದಿ ಪರಿಶೀಲಿಸಬೇಕು' ಎಂದರು.



ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಸ್ಥಳದ ಪರಿಶೀಲನೆಗೆ ಹೊನ್ನಾವರಕ್ಕೆ ಭೇಟಿ ನೀಡಿದ್ದ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸದಸ್ಯರಾದ ಎಚ್.ಎಸ್.ಸಿಂಗ್, ಆರ್.ಸುಕುಮಾರ್ ಮತ್ತು ಹುಲಿ ಸಂರಕ್ಷಣಾ ಪ್ರಾಧಿಕಾರದ ಐಜಿಎಫ್ ಶಿವಕುಮಾರ್ ಸಿ.ಎಂ ಅವರೊಂದಿಗೆ ಕುಮಟಾ ಶಾಸಕ ದಿನಕರ ಶೆಟ್ಟಿ ಚರ್ಚಿಸಿದರು

ಚಟಿಕೆ ಸುದ್ದಿ

ತಿಮರೋಡಿಗೆ ಬಂಧನ ವಾರಂಟ್

ಬೆಳ್ತಂಗಡಿ (ದಕ್ಷಿಣ ಕನ್ನಡ): ತಾಲ್ಲೂಕಿನ ಇಂದಬೆಟ್ಟುವಿನಲ್ಲಿ ನಡೆದಿದ್ದ ಖಾಸಗಿ ಕಾರ್ಯಕ್ರಮವೊಂದರಲ್ಲಿ ದ್ವೇಷ ಭಾಷಣ ಮಾಡಿದ್ದ ಕುರಿತು ದಾಖಲಾಗಿದ್ದ ಪ್ರಕರಣದಲ್ಲಿ ರಾಷ್ಟ್ರೀಯ ಹಿಂದೂ ಜಾಗರಣ ವೇದಿಕೆ ಅಧ್ಯಕ್ಷ ಮಹೇಶ್ ಶೆಟ್ಟಿ ತಿಮರೋಡಿ ಬಂಧನಕ್ಕೆ ಬೆಳ್ತಂಗಡಿ ನ್ಯಾಯಾಲಯ ವಾರಂಟ್ ಜಾರಿ ಮಾಡಿದೆ.

ಬೆಳ್ತಂಗಡಿ ಠಾಣೆಯಲ್ಲಿ ಕಿಶೋರ್ ಕುಮಾರ್ ಎಂಬವರು ನೀಡಿದ್ದ ದೂರಿನ ಅನ್ವಯ ಬೆಳ್ತಂಗಡಿ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿತ್ತು. ಈ ಬಗ್ಗೆ ಪೊಲೀಸರು ಆರೋಪಪಟ್ಟಿ ಸಲ್ಲಿಸಿದ್ದರು. ವಿಚಾರಣೆಗೆ ತಿಮರೋಡಿ ಗೈರಾಗಿದ್ದರು ಎಂದು ಮೂಲಗಳು ತಿಳಿಸಿವೆ.

ತಿಮರೋಡಿ ವಿರುದ್ಧ ಗಡಿಪಾರು ಆದೇಶವನ್ನೂ ಪುತ್ತೂರು ಉಪವಿಭಾಗಾಧಿಕಾರಿ ಹೊರಡಿಸಿದ್ದಾರೆ. ತಿಮರೋಡಿ ತಲೆಮರೆಸಿಕೊಂಡಿದ್ದು, ಗಡಿಪಾರು ಆದೇಶ ಜಾರಿ ಮಾಡಲು ಪೊಲೀಸರು ಹುಡುಕುತ್ತಿದ್ದಾರೆ.

'ಗೃಹಲಕ್ಷ್ಮಿ' ಹಣಕ್ಕಾಗಿ ಹೋರಾಟ

ಹುಬ್ಬಳ್ಳಿ: 'ಗೃಹಲಕ್ಷ್ಮಿ' ಯೋಜನೆಯ ಫೆಬ್ರುವರಿ, ಮಾರ್ಚ್ ತಿಂಗಳ ಹಣವನ್ನು ಫಲಾನುಭವಿಗಳ ಖಾತೆಗೆ ತ್ವರಿತವಾಗಿ ಜಮೆ ಮಾಡದಿದ್ದರೆ ಪಕ್ಷದ ವತಿಯಿಂದ ಪ್ರತಿಭಟಿಸಲಾಗುವುದು' ಎಂದು ಶಾಸಕ ಮಹೇಶ ಟೆಂಗಿನಕಾಯಿ ಸೋಮವಾರ ಇಲ್ಲಿ ಎಚ್ಚರಿಸಿದರು.



ಮಹೇಶ ಟೆಂಗಿನಕಾಯಿ

'ಅಧಿವೇಶನದಲ್ಲಿ ಈ ವಿಷಯ ಪ್ರಸ್ತಾಪಿಸಿ 20 ದಿನ ಕಳೆದರೂ ಫಲಾನುಭವಿಗಳ ಖಾತೆಗೆ ಹಣ ಜಮಾ ಆಗಿಲ್ಲ. ಹಾಗಾದರೆ ₹5 ಸಾವಿರ ಕೋಟಿ ಹಣ ಎಲ್ಲಿ ಹೋಯಿತು?' ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.


ಮರ್ಯಾದೆಗೇಡು ಹತ್ಯೆ ಖಂಡಿಸಿ ಜ.5ಕ್ಕೆ ಪ್ರತಿಭಟನೆ

ಹುಬ್ಬಳ್ಳಿ: 'ತಾಲ್ಲೂಕಿನ ಇನಾಂ ವೀರಾಪುರದಲ್ಲಿ ಈಚೆಗೆ ನಡೆದ ಮರ್ಯಾದೆಗೇಡು ಹತ್ಯೆ ಖಂಡಿಸಿ ಹುಬ್ಬಳ್ಳಿಯಲ್ಲಿ ಜನವರಿ 5ರಂದು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ' ಎಂದು ಕ್ರಾಂತಿಕಾರಿ ಒಳ ಮೀಸಲಾತಿ ರಾಜ್ಯ ಸಮಿತಿ ಮುಖಂಡ ಬಿ.ಆರ್. ಭಾಸ್ಕರ್ ಪ್ರಸಾದ ಹೇಳಿದರು.

'ಇದು ಯಾವುದೇ ಜಾತಿ ಪರ ಅಥವಾ ವಿರೋಧಿ ಹೋರಾಟವಲ್ಲ' ಎಂದು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

ಸೀತಾರಾಮ್‌ಗೆ ಪಂಚಮಿ ಪುರಸ್ಕಾರ

ಉಡುಪಿ: ಇಲ್ಲಿನ ಸಂಸ್ಕೃತಿ ವಿಶ್ವ ಪ್ರತಿಷ್ಠಾನ ನೀಡುವ ಪಂಚಮಿ ಟ್ರಸ್ಟ್ ಉಡುಪಿ ಪ್ರಾಯೋಜಿತ 'ಪಂಚಮಿ ಪುರಸ್ಕಾರ 2026'ಕ್ಕೆ ಕಿರುತೆರೆ ನಿರ್ದೇಶಕ ಟಿ.ಎನ್. ಸೀತಾರಾಮ್ ಆಯ್ಕೆಯಾಗಿದ್ದಾರೆ.



ಟಿ.ಎನ್. ಸೀತಾರಾಮ್

ಜನವರಿಯಲ್ಲಿ ನಡೆಯುವ ಸಂಸ್ಕೃತಿ ಉತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಪ್ರಶಸ್ತಿ ₹ 1 ಲಕ್ಷ ನಗದು ಒಳಗೊಂಡಿದೆ ಎಂದು ಪ್ರತಿಷ್ಠಾನದ ಸಂಚಾಲಕ ರವಿರಾಜ್ ಎಚ್.ಪಿ. ಸೋಮವಾರ ಇಲ್ಲಿ ತಿಳಿಸಿದರು.

ಬಾಲಕಿ ಅಪಹರಣ ಆರೋಪಿ ಬಂಧನ

ಕಡೂರು (ಚಿಕ್ಕಮಗಳೂರು): ನಾಲ್ಕೂವರೆ ವರ್ಷ ವಯಸ್ಸಿನ ಬಾಲಕಿಯನ್ನು ಅಪಹರಿಸಿದ್ದ ವ್ಯಕ್ತಿಯನ್ನು ಯಗಟಿ ಠಾಣೆ ಪೊಲೀಸರು ಬಂಧಿಸಿದ್ದು, ಆತನ ವಿರುದ್ಧ ಪೋಕ್ಸೊ ಅನ್ವಯ ಪ್ರಕರಣ ದಾಖಲಿಸಿದ್ದಾರೆ.

ಪಕ್ಕದ ಮನೆಯಲ್ಲಿ ಬಾಲಕಿ ಬಿಟ್ಟು ದಂಪತಿ ಕೆಲಸಕ್ಕೆ ಹೋಗಿದ್ದರು. ಮಧ್ಯಾಹ್ನ ಮರಳಿದಾಗ ಇರಲಿಲ್ಲ. ತುಮಕೂರು ಜಿಲ್ಲೆ ಶಿರಾದ ರಂಗಸ್ವಾಮಿ ಹೆಸರಿನ ಕುರಿಗಾಹಿ ಕರೆದೊಯ್ದಿದ್ದನ್ನು ನೋಡಿದ್ದಾಗಿ ಕೆಲವರು ತಿಳಿಸಿದರು.

ಹುಡುಕಾಡಿದಾಗ ಪಕ್ಕದ ಊರಿನ ದೇವಸ್ಥಾನ ಸಮೀಪದ ಪಾಳು ಮನೆಯಲ್ಲಿ ಬಾಲಕಿ ಜತೆ ಆರೋಪಿ ಇದ್ದುದು ಪತ್ತೆ ಆಯಿತು. ಬಾಲಕಿಯನ್ನು ವಶಕ್ಕೆ ಪಡೆದ ಪೊಲೀಸರು, ವೈದ್ಯಕೀಯ ಪರೀಕ್ಷೆ ಮಾಡಿಸಿದರು.

ಪ್ರವೇಶ ನಿರ್ಬಂಧ ತೆರವು: ಕನೇರಿಶ್ರೀಗೆ ವಿಜಯಪುರ ಜಿಲ್ಲೆಗೆ ಅದ್ದೂರಿ ಸ್ವಾಗತ

'ಬಸವಾದಿ ಶರಣರು ಹಿಂದೂಗಳು'

ಪ್ರಜಾವಾಣಿ ವಾರ್ತೆ

ವಿಜಯಪುರ: 'ಬಸವಾದಿ ಶರಣರು ಹಿಂದೂ ಧರ್ಮದ ಭಾಗವಾಗಿಯೇ ಇದ್ದವರು. ಬಸವಣ್ಣ ದಾರ್ಶನಿಕ ವ್ಯಕ್ತಿಯೇ ಹೊರತು ನಾಸ್ತಿಕ ಅಲ್ಲ. ಈ ಬಗ್ಗೆ ಬಹಿರಂಗ ಚರ್ಚೆಗೆ ಸಿದ್ಧ' ಎಂದು ಕನೇರಿ ಕಾಡಸಿದ್ದೇಶ್ವರ ಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಅವರು ಸೋಮವಾರ ಇಲ್ಲಿ ಹೇಳಿದರು.

ವಿಜಯಪುರ ಜಿಲ್ಲಾ ಪ್ರವೇಶ ನಿರ್ಬಂಧ ತೆರವಾದ ಎರಡು ವಾರದ ಬಳಿಕ ಬಬಲೇಶ್ವರದಲ್ಲಿ 'ಬಸವಾದಿ ಶರಣರ ಹಿಂದೂ ಸಮಾವೇಶ'ದಲ್ಲಿ ಮಾತನಾಡಿದ ಅವರು, 'ಎಲ್ಲ ವಚನಕಾರರ ಅಂಕಿತನಾಮ ಅವರ ಮನೆ ದೇವರೇ ಆಗಿವೆ. ಆ ದೇವರುಗಳೆಲ್ಲರೂ ಹಿಂದೂಗಳ ಆರಾಧ್ಯ ದೇವರು' ಎಂದರು.

'ಬಸವಣ್ಣ ದೇವಾಲಯ, ದೇವರು, ವೇದ ಮತ್ತು ಉಪನಿಷತ್ ಒಪ್ಪುವುದಿಲ್ಲ ಎಂದು ಕೆಲವರು ಕೆಲ ವಚನಗಳನ್ನು ಉದಾಹರಿಸಿ ಪ್ರತಿಪಾದಿಸುತ್ತಾರೆ. ಆದರೆ, ಬಸವಣ್ಣನವರು ರಚಿಸಿದ 72 ವಚನಗಳಲ್ಲಿ ಹಿಂದೂ ಧರ್ಮದ ದೇವರುಗಳನ್ನು ಪ್ರಸ್ತಾಪಿಸಿದ್ದಾರೆ' ಎಂದರು.

'ಕೆಲವರು ಕೆಲ ವಚನಗಳನ್ನು ಓದಿ, ಜನರ ದಾರಿ ತಪ್ಪಿಸುತ್ತಾರೆ, ಜನರನ್ನು ಭ್ರಮಿತರನ್ನಾಗಿಸುತ್ತಾರೆ. ಜನರ ತಲೆ ಕೆಡಿಸುವ ಕೆಲಸ ಮಾಡುತ್ತಾರೆ.

> **ಬಸವಣ್ಣ ತಮ್ಮ ವಚನಗಳಲ್ಲಿ ಕರ್ಮ ಮತ್ತು ಮೋಕ್ಷ ಸಿದ್ಧಾಂತದ ಬಗ್ಗೆ ಪ್ರಸ್ತಾಪಿಸಿದ್ದಾರೆ. ವೇದವನ್ನು ಒಪ್ಪಿದ್ದಾರೆ. ಹಿಂದೂ ಸಮಾಜದ ಅಂಕುಡೊಂಕು ತಿದ್ದಿ ಶುದ್ಧ ಹಿಂದೂ ಸಮಾಜ ಕೊಟ್ಟಿದ್ದಾರೆ**
> **ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ**
> ಕನೇರಿ ಕಾಡಸಿದ್ದೇಶ್ವರ ಮಠ

ಪ್ರಾಸಂಗಿಕವಾಗಿ ಕೆಲ ವಚನಗಳ ಮೂಲಕ ಉಪದೇಶಿಸಿದ್ದನ್ನು ಸಾರ್ವತ್ರಿಕ ಮಾಡುತ್ತಾರೆ' ಎಂದು ಆರೋಪಿಸಿದರು.

'ವೀರಶೈವ ಲಿಂಗಾಯತ ಎರಡೂ ಒಂದೇ, ಬೇರೆಯಲ್ಲ. ವೀರಶೈವ ಲಿಂಗಾಯತರು ಹಿಂದೂಗಳೇ. ಲಿಂಗಾಯತ ಹೊಸ ಧರ್ಮ ಕಟ್ಟುವುದಾದರೆ ತಾವು ಈಗಿರುವ ಮಠವನ್ನು ಬಿಟ್ಟು ಹೊಸಮಠಗಳನ್ನು ಕಟ್ಟಿ, ಕಾವಿಯನ್ನು ತೊರೆದು ಹೊಸ ಬಟ್ಟೆ ಹುಡುಕಿಕೊಳ್ಳಿ, ಲಿಂಗ, ಭಸ್ಮ, ರುದ್ರಾಕ್ಷಿ ತೊರೆದು, ಹೊಸದನ್ನು ಹುಡುಕಿಕೊಳ್ಳಿ. ಇಲ್ಲವೇ, ನಿಮ್ಮ ಬುಡುಬುಡುಕೆ ಕೆಲಸ ಬಿಡಿ' ಎಂದು ಪ್ರತ್ಯೇಕ ಧರ್ಮ ಪ್ರತಿಪಾದಕರಿಗೆ ಎಚ್ಚರಿಕೆ ನೀಡಿದರು.

'ಬಬಲೇಶ್ವರದಲ್ಲಿ ಆರಂಭಿಸಿರುವ ಬಸವಾದಿ ಶರಣರ ಹಿಂದೂ ಸಮಾವೇಶವನ್ನು ಮುಂದಿನ ದಿನಗಳಲ್ಲಿ ನಾಡಿನಾದ್ಯಂತ ಮಾಡಲಾಗುವುದು' ಎಂದು ಸ್ವಾಮೀಜಿ ಹೇಳಿದರು.



ವಿಜಯಪುರ ಜಿಲ್ಲೆ ಬಬಲೇಶ್ವರದಲ್ಲಿ ಸೋಮವಾರ 'ಬಸವಾದಿ ಶರಣರ ಹಿಂದೂ ಸಮಾವೇಶ'ಕ್ಕೆ ಬಂದ ಕನೇರಿ ಕಾಡಸಿದ್ದೇಶ್ವರ ಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಅವರನ್ನು ಭಕ್ತರು ಸ್ವಾಗತಿಸಿದರು. ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ, ಬಿಜೆಪಿ ಮುಖಂಡ ವಿಜುಗೌಡ ಪಾಟೀಲ ಇದ್ದಾರೆ

ಪ್ರಜಾವಾಣಿ ಚಿತ್ರ

'ಕರ್ನಾಟಕದ ಯೋಗಿ' ಘೋಷಣೆ

ಸಮಾವೇಶದಲ್ಲಿ ಕನೇರಿ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿಯವರ ಕಟೌಟ್, ಚಿತ್ರಗಳು ರಾರಾಜಿಸಿದವು. ಕರ್ನಾಟಕದ ಯೋಗಿ ಕನೇರಿ ಸ್ವಾಮೀಜಿ, ಜೈ ಶ್ರೀರಾಮ್, ಭಾರತ್ ಮಾತಾಕಿ ಜೈ ಎಂಬ ಘೋಷಣೆಗಳು ಮೊಳಗಿದವು. ವಿವಿಧ ಮಠಾಧೀಶರು ಪಾಲ್ಗೊಂಡಿದ್ದರು.

ವಿಜಯಪುರದಿಂದ ಬಬಲೇಶ್ವರದವರೆಗೆ ಯುವಕರು ಬೈಕ್ ರ‍್ಯಾಲಿ ನಡೆಸಿದರು. ಬಬಲೇಶ್ವರದ ಶಾಂತವೀರ ವೃತ್ತದಿಂದ ಸಮಾವೇಶ ಸ್ಥಳ ಶಾರದಾ ಶಾಲೆಯ ಆವರಣದವರೆಗೆ ಸಾವಿರಕ್ಕೂ ಮಹಿಳೆಯರು ಪೂರ್ಣಕುಂಭ ಮೆರವಣಿಗೆಯಲ್ಲಿ ಮಠಾಧೀಶರನ್ನು ಸ್ವಾಗತಿಸಿದರು.

'ಪ್ರಧಾನಿ ಆಗಬೇಕೆಂದು ಅರ್ಜಿ ಹಾಕಿದ್ನಾ?'

ಹಾಸನ: 'ಪ್ರಧಾನ ಮಂತ್ರಿ ಆಗಬೇಕೆಂದು ನಾನು ಅರ್ಜಿ ಹಾಕಿದ್ನಾ? ಈ ಬಗ್ಗೆ ಚರ್ಚೆಯಾಗಲಿ' ಎಂದು ರಾಜ್ಯಸಭಾ ಸದಸ್ಯ ಎಚ್.ಡಿ.ದೇವೇಗೌಡ ಹೇಳಿದರು.

ಹುಟ್ಟೂರು ಹರದನಹಳ್ಳಿಯಲ್ಲಿ ಸೋಮವಾರ ಮನೆದೇವರಿಗೆ ಪೂಜೆ ಸಲ್ಲಿಸಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಚರಣ್‌ಸಿಂಗ್ ಪ್ರಧಾನಿಯಾಗಿದ್ದ ಸಂದರ್ಭದ ರಾಜಕೀಯವನ್ನು ನೆನಪಿಸಿಕೊಳ್ಳಲಿ. ಇವರ ಹೊಡೆತ ತಡೆದುಕೊಂಡು ಇನ್ನೂ ಬದುಕಿದ್ದೇನೆ. ಜನತೆಯ ಆಶೀರ್ವಾದದಿಂದ ಇದ್ದೇನೆ' ಎಂದರು.

ಮಹಾರಾಷ್ಟ್ರದಲ್ಲಿ ಜೆಡಿಎಸ್‌ನ ಐವರು ಗೆದ್ದಿರುವುದನ್ನು ಉಲ್ಲೇಖಿಸಿ, 'ಅಲ್ಲಿನ ಬಿಜೆಪಿ ಮುಖ್ಯಮಂತ್ರಿ ಹಾಗೂ ಅಧ್ಯಕ್ಷರಿಗೆ ಅಭಿನಂದನೆ ಸಲ್ಲಿಸುತ್ತೇನೆ. ನಾವು ಎನ್‌ಡಿಎಯಲ್ಲಿದ್ದೇವೆ. ಲೋಕಸಭೆ ಸೇರಿ ಎಲ್ಲೆಲ್ಲೂ ಒಟ್ಟಿಗೆ ಇರುತ್ತೇವೆ. ನಿಮಗೆ ಶಕ್ತಿ ಇಲ್ಲ ಎಂದು ಕಾಂಗ್ರೆಸ್‌ನವರು ಹೇಳಿದ್ದರಿಂದ ನಾವು ಎನ್‌ಡಿಎ ಜೊತೆ ಹೋಗಿದ್ದೇವೆ. ನೀವೇಕೆ ಸ್ಟಾಲಿನ್ ಮನೆ ಬಾಗಿಲಿಗೆ ಹೋಗುತ್ತಿದ್ದೀರಾ' ಎಂದು ಕಾಂಗ್ರೆಸ್ ನಾಯಕರನ್ನು ಪ್ರಶ್ನಿಸಿದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಿಲ್ಲೆಯಲ್ಲಿ ಎರಡು ಬಾರಿ ಸಮಾವೇಶ ನಡೆಸಿದ್ದಾರೆ. 'ಅವರ ಸಮಾವೇಶಕ್ಕಿಂತ ದೊಡ್ಡ ಮಟ್ಟದ ಸಭೆ ಜ. 24ರಂದು ಮಾಡುತ್ತೇವೆ. ರೇವಣ್ಣಗೂ ಹೇಳಿದ್ದೇನೆ' ಎಂದರು.

'ನನಗೀಗ 93 ವರ್ಷ. ಕೊನೆಯ ಉಸಿರು ಇರುವವರೆಗೂ ಹೋರಾಟ ಮುಂದುವರಿಸುತ್ತೇನೆ. ನಾನು ಅಧಿಕಾರಕ್ಕೆ ಅಂಟಿಕೊಂಡ ವ್ಯಕ್ತಿಯಲ್ಲ' ಎಂದರು.

ಬಂದಕುಂಟೆ ನಾಗರಾಜಯ್ಯ ಇನ್ನಿಲ್ಲ

ತುಮಕೂರು: ದಲಿತ ಸಂಘರ್ಷ ಸಮಿತಿ ಸ್ಥಾಪಕರಲ್ಲಿ ಒಬ್ಬರಾದ ಬಂದಕುಂಟೆ ನಾಗರಾಜಯ್ಯ (70) ನಗರದ ತಮ್ಮ ಮನೆಯಲ್ಲಿ ಸೋಮವಾರ ನಿಧನರಾದರು.

ಅನಾರೋಗ್ಯದಿಂದ ಬಳಲುತ್ತಿದ್ದು, ಪಾರ್ಶ್ವವಾಯುವಿಗೆ ತುತ್ತಾಗಿ ಚೇತರಿಸಿಕೊಳ್ಳುತ್ತಿರುವ ಹೊತ್ತಿನಲ್ಲೇ ಹೃದಯಾಘಾತದಿಂದ ಮೃತಪಟ್ಟಿದ್ದಾರೆ ಎಂದು ಕುಟುಂಬದವರು ತಿಳಿಸಿದ್ದಾರೆ.



ಬಂದಕುಂಟೆ ನಾಗರಾಜಯ್ಯ

ಮೃತರಿಗೆ ಪತ್ನಿ, ಮೂವರು ಪುತ್ರರು ಇದ್ದಾರೆ. ಶಿರಾ ತಾಲ್ಲೂಕಿನ ಸ್ವಗ್ರಾಮ ಬಂದಕುಂಟೆಯಲ್ಲಿ ಅಂತ್ಯಕ್ರಿಯೆ ನೆರವೇರಿತು.

ಶಿಕ್ಷಕರಾಗಿದ್ದ ಅವರು, ಪ್ರವೃತ್ತಿಯಲ್ಲಿ ಹೋರಾಟಗಾರರಾಗಿದ್ದರು.

ದಲಿತರ ಮೇಲಿನ ಶೋಷಣೆ ವಿರುದ್ಧ ಹೋರಾಟ ನಡೆಸಲು ದಲಿತ ಸಂಘರ್ಷ ಸಮಿತಿ ಸ್ಥಾಪಿಸಲು ಶ್ರಮಿಸಿದ್ದರು.



ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳಿಯಲ್ಲಿ ಸೋಮವಾರ ನಡೆದ 'ವಿಶ್ವಮಾನವ ದಿನ' ಕಾರ್ಯಕ್ರಮದಲ್ಲಿ ಕೊಂಕಣಿ ಸಾಹಿತಿ ಮಹಾಬಲೇಶ್ವರ ಸೈಲ್ ಅವರಿಗೆ ಕುವೆಂಪು ರಾಷ್ಟ್ರೀಯ ಪುರಸ್ಕಾರ ನೀಡಿ ಗೌರವಿಸಲಾಯಿತು. ಪ್ರಶಸ್ತಿ ₹5 ಲಕ್ಷ ನಗದು, ಫಲಕ ಒಳಗೊಂಡಿದೆ. ಸಚಿವ ಮಧು ಬಂಗಾರಪ್ಪ, ಶಾಸಕರಾದ ಆರಗ ಜ್ಞಾನೇಂದ್ರ, ಬಲ್ಕೀಶ್ ಬಾನು, ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಅಧ್ಯಕ್ಷ ಬಿ.ಎಲ್. ಶಂಕರ್, ಕುವೆಂಪು ವಿ.ವಿ ಕುಲಪತಿ ಪ್ರೊ.ಶರತ್ ಅನಂತಮೂರ್ತಿ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷ ಆರ್.ಎಂ.ಮಂಜುನಾಥಗೌಡ, ಕಾಡಾ ಅಧ್ಯಕ್ಷ ಡಾ.ಅಂಶುಮಂತ್, ಪೂರ್ಣಚಂದ್ರ ಕನ್ನಡ ಅಧ್ಯಯನ ಕೇಂದ್ರದ ಶೈಕ್ಷಣಿಕ ಸಂಚಾಲಕ ಕೇಶವ ಮಳಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ. ಗಾಯತ್ರಿ ಪಾಲ್ಗೊಂಡಿದ್ದರು

ಚಿಟಿಕೆ ಸುದ್ದಿ

ಹೊಸ ವರ್ಷಾಚರಣೆ ತುರ್ತು ಚಿಕಿತ್ಸಾ ಸೇವೆಗೆ ಸಿದ್ಧತೆ

ಬೆಂಗಳೂರು: ಹೊಸ ವರ್ಷ ಆಚರಣೆ ವೇಳೆ ರಾಜ್ಯದ ವಿವಿಧ ಸ್ಥಳಗಳಲ್ಲಿ ಸಾರ್ವಜನಿಕರು ಅಸ್ವಸ್ಥಗೊಳ್ಳುವ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ಇತರ ಸಮಸ್ಯೆಗಳಿಗೆ ಸಿಲುಕುವ ಸಾಧ್ಯತೆ ಇರುವುದರಿಂದ ಎಲ್ಲಾ ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿ ಆಂಬುಲೆನ್ಸ್ ಮತ್ತು ತುರ್ತು ವೈದ್ಯಕೀಯ ಚಿಕಿತ್ಸೆಯ ಸೇವೆ ಒದಗಿಸುವ ಸಂಬಂಧ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಆರೋಗ್ಯ ಇಲಾಖೆ ಸುತ್ತೋಲೆ ಹೊರಡಿಸಿದೆ.



ತುರ್ತು ಕರ್ತವ್ಯಕ್ಕಾಗಿ ಜಿಲ್ಲಾ ಮಟ್ಟದ ಎಲ್ಲ ಆಸ್ಪತ್ರೆಗಳಲ್ಲಿ ಪುರುಷ ಮತ್ತು ಮಹಿಳೆಯರಿಗೆ ಪ್ರತ್ಯೇಕ ಕೊಠಡಿ ವ್ಯವಸ್ಥೆ ಮಾಡಬೇಕು. ಮಹಿಳೆಯರಿಗಾಗಿ ಮಹಿಳಾ ಸಿಬ್ಬಂದಿಯನ್ನೇ ನಿಯೋಜಿಸಬೇಕು. ಆಂಬುಲೆನ್ಸ್ ಅನ್ನು ಸದಾ ಸನ್ನದ್ಧ ಸ್ಥಿತಿಯಲ್ಲಿ ಇರಿಸಬೇಕು ಹಾಗೂ ಔಷಧಗಳು ಲಭ್ಯ ಇರುವಂತೆ ನೋಡಿಕೊಳ್ಳಬೇಕು ಎಂದು ಸುತ್ತೋಲೆಯಲ್ಲಿ ನಿರ್ದೇಶನ ನೀಡಲಾಗಿದೆ.

ಹೊಸ ವರ್ಷ: ರಾಜ್ಯದ ಎಲ್ಲೆಡೆ ಬಿಗಿ ಭದ್ರತೆ

ಬೆಂಗಳೂರು: ಹೊಸ ವರ್ಷಾಚರಣೆ ವೇಳೆ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಕಣ್ಗಾವಲಿಗಾಗಿ ಬೆಂಗಳೂರಿನಲ್ಲಿ 20 ಸಾವಿರ, ಜಿಲ್ಲೆಗಳಿಗೆ ತಲಾ 1,200 ಪೊಲೀಸರನ್ನು ನಿಯೋಜಿಸಲಾಗುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಹೊಸ ವರ್ಷಾಚರಣೆಗೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವ ಕುರಿತು ಚರ್ಚಿಸಲು ಕರೆಯಲಾಗಿದ್ದ ಸಭೆಯಲ್ಲಿ ಅವರು ಮಾತನಾಡಿದರು. ಮಹಿಳೆಯರ ಸುರಕ್ಷತೆಗೆ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ಅಗತ್ಯ ಇರುವ ಸ್ಥಳಗಳಲ್ಲಿ ಮಹಿಳಾ ಪೊಲೀಸರನ್ನು ನಿಯೋಜನೆ ಮಾಡಬೇಕು. ಕಿಡಿಗೇಡಿಗಳ ಮೇಲೆ ನಿರಂತರ ನಿಗಾ ಇರಿಸಬೇಕು. ವ್ಹೀಲಿಂಗ್ ಮಾಡುವುದಕ್ಕೆ ಅವಕಾಶ ನೀಡಬಾರದು. ಮಾದಕ ದ್ರವ್ಯ ಚಟುವಟಿಕೆಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸೂಚಿಸಿದರು.



ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ, ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತ ಮಹೇಶ್ವರ ರಾವ್ ಉಪಸ್ಥಿತರಿದ್ದರು.

ಲಿಗಾಡೆ, ಕಂಬಳಿವಾಲೆ ಹೆಸರಲ್ಲಿ ಟ್ರಸ್ಟ್

ಬೆಂಗಳೂರು: ಸಾಹಿತಿ ಜಯದೇವಿ ತಾಯಿ ಲಿಗಾಡೆ ಮತ್ತು ಕನ್ನಡ ಪರ ಹೋರಾಟಗಾರ ಪ್ರಭುರಾವ್ ಕಂಬಳಿವಾಲೆ ಅವರ ಹೆಸರಿನಲ್ಲಿ ಟ್ರಸ್ಟ್ ರಚಿಸಲು ನಿರ್ಧರಿಸಲಾಗಿದ್ದು, ಈ ಸಂಬಂಧ ಶೀಘ್ರವೇ ಆದೇಶ ಹೊರಡಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಹೇಳಿದ್ದಾರೆ.

ಕಲ್ಯಾಣ ಕರ್ನಾಟಕದ ಭಾಗದ ಜನತೆಯ ಬಹುದಿನದ ಅಪೇಕ್ಷೆಯಂತೆ ಈ ಎರಡು ಟ್ರಸ್ಟ್‌ಗಳನ್ನು ರಚಿಸುವ ಪ್ರಸ್ತಾವಕ್ಕೆ ಈಗಾಗಲೇ ಅನುಮೋದನೆ ನೀಡಲಾಗಿದೆ. ಇವರು ಕನ್ನಡ ಭಾಷೆ ಮತ್ತು ಸಾಂಸ್ಕೃತಿಕ ಜಗತ್ತಿಗೆ ನೀಡಿದ ಕೊಡುಗೆ ಅನನ್ಯವಾದುದು. ಹೀಗಾಗಿ ಈ ಟ್ರಸ್ಟ್‌ಗಳನ್ನು ಅವರ ಆಶಯಗಳಿಗೆ ಅನುಗುಣವಾಗಿ ರಚಿಸಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಟ್ರಸ್ಟ್‌ಗಳಿಗೆ ಅಧ್ಯಕ್ಷರು ಮತ್ತು ಸದಸ್ಯರನ್ನು ಬೀದರ್ ಜಿಲ್ಲೆಯ ಉಸ್ತುವಾರಿ ಸಚಿವರ ಜತೆ ಚರ್ಚಿಸಿ ನೇಮಕ ಮಾಡಲಾಗುವುದು ಎಂದು ತಂಗಡಗಿ ಹೇಳಿದ್ದಾರೆ.

ಸೂರು ಕಳೆದುಕೊಂಡವರ ಗೋಳು

ಕೋಗಿಲು: ಮನೆ ನೆಲಸಮಗೊಳಿಸಿ 10 ದಿನ ಕಳೆದರೂ ಸ್ಥಳ ಬಿಟ್ಟು ಕದಲದ ಜನರು

• ಬಾಲಕೃಷ್ಣಪಿ.ಎಚ್.

ಬೆಂಗಳೂರು: ಬಯಲಿನ ಬಿಸಿಲಲ್ಲೇ ಮೂರು ಕಲ್ಲು ಇಟ್ಟು ತಯಾರಿಸಿದ ಒಲೆಯಲ್ಲಿ ನೀರು ಕಾಯಿಸುತ್ತಿದ್ದಾರೆ. ಪಕ್ಕದಲ್ಲಿ ಟಾರ್ಪಲ್ ಅಡಿಯಲ್ಲಿ ಅನಾರೋಗ್ಯದ ವ್ಯಕ್ತಿ ಮಲಗಿದ್ದಾರೆ. ನೆಲಸಮಗೊಳಿಸಿದ ಮನೆ, ಶೆಡ್‌ಗಳ ಇಟ್ಟಿಗೆಗಳು ರಾಶಿ ಬಿದ್ದಿವೆ. ಅದರ ಮಧ್ಯೆಯೇ ಅಲ್ಲಲ್ಲಿ ಟಾರ್ಪಲ್ ಹಾಕಿಕೊಂಡು ಜನರು ವಾಸ ಮಾಡುತ್ತಿದ್ದಾರೆ...

ಇವು ಬೆಂಗಳೂರು ಉತ್ತರ ನಗರ ಪಾಲಿಕೆಯ ಯಲಹಂಕ ಹೋಬಳಿಯ ಕೋಗಿಲು ಬಂಡೆ ಕ್ವಾರಿ ಪ್ರದೇಶದಲ್ಲಿ ಸೋಮವಾರ ಕಂಡು ಬಂದ ದೃಶ್ಯಗಳು. ಇಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ಶೆಡ್, ಮನೆಗಳನ್ನು ನೆಲಸಮಗೊಳಿಸಿ 10 ದಿನಗಳು ಕಳೆದರೂ ಸಂತ್ರಸ್ತರ ಪರಿಸ್ಥಿತಿ ಬದಲಾಗಿಲ್ಲ.

ಈ ಸಂತ್ರಸ್ತರಿಗೆ ಕೆಲವು ಸಂಘ ಸಂಸ್ಥೆಗಳು ಊಟ, ಉಪಾಹಾರದ ವ್ಯವಸ್ಥೆ ಮಾಡಿವೆ. ಯುವಕರು ಅಲ್ಲಿ ಇಲ್ಲಿ ಅಡ್ಡಾಡುತ್ತಿದ್ದಾರೆ. ಮಹಿಳೆಯರು ಆತಂಕ ಇಟ್ಟುಕೊಂಡೇ ನೀರು ಹೊತ್ತು ತರುತ್ತಾ, ಪಾತ್ರೆ ತೊಳೆಯುತ್ತಾ ದಿನ ದೂಡುತ್ತಿದ್ದಾರೆ.

ಏನಿದು ವಿವಾದ: ಕಲ್ಲು ಕ್ವಾರಿ ನಡೆಸಿದ್ದ ಈ ಜಾಗಕ್ಕೆ ಮಣ್ಣು ತುಂಬಿಸಲಾಗಿತ್ತು. ಆ ಜಾಗದಲ್ಲಿ ಮನೆಗಳು ತಲೆ ಎತ್ತಿದ್ದವು. ಕೆಲವು ಮನೆಗಳು ಹಳೆಯದ್ದಾಗಿದ್ದರೆ, ಕೆಲವು ಇತ್ತೀಚಿನವು. ಎಲ್ಲವನ್ನು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತವು ನೆಲಸಮ ಮಾಡಿದೆ. ಬದಲಿ ವ್ಯವಸ್ಥೆ ಮಾಡದೇ ತೆರವು ಮಾಡಿರುವುದು ಒಂದೆಡೆ ಆಕ್ರೋಶಕ್ಕೆ ಕಾರಣವಾಗಿದ್ದರೆ, ಕೇರಳ ಸರ್ಕಾರದ ಪ್ರತಿನಿಧಿಗಳ ಪ್ರವೇಶದಿಂದಾಗಿ ಈ ಪ್ರಕರಣವು ರಾಜಕೀಯ ಆಯಾಮವನ್ನು ಪಡೆದುಕೊಂಡಿದೆ.

ಬೆಂಗಳೂರಿಗರಲ್ಲದೇ ಉತ್ತರಪ್ರದೇಶ, ಪಶ್ಚಿಮ ಬಂಗಾಳದಿಂದ ಬಂದವರೆಲ್ಲ ಇಲ್ಲಿ ನೆಲಸಿದ್ದಾರೆ. ಊರೂರು ತಿರುಗುತ್ತಾ ಖವ್ವಾಲಿ ಹಾಡುವ ದರ್ವೇಶಿ ಫಕೀರರೇ ಒಂದೆಡೆ ನೆಲೆಸಿರುವುದರಿಂದ ಇದಕ್ಕೆ ಫಕೀರ್ ಲೇಔಟ್ ಎಂದೂ ಕರೆಯಲಾಗುತ್ತಿದೆ. ಇದರ ಕೆಳ ಭಾಗದಲ್ಲಿ ಫಕೀರರಲ್ಲದ ಮುಸ್ಲಿಮರ ಮನೆಗಳೇ ಹೆಚ್ಚಿದ್ದರೂ ಪರಿಶಿಷ್ಟ ಜಾತಿ ಸಮುದಾಯದ ಮನೆಗಳು, ಬೆರಳೆಣಿಕೆಯ ಕ್ರೈಸ್ತ ಧರ್ಮೀಯರ ಮನೆಗಳೂ ಇವೆ. ಕ್ವಾರಿಯ ಇನ್ನೊಂದು ಭಾಗವನ್ನು ವಸೀಂ ಕಾಲೊನಿ ಎಂದು ಹೆಸರಿಡಲಾಗಿದ್ದು, ಅಲ್ಲಿಯೂ ಹಲವು ಮನೆಗಳು ತಲೆ ಎತ್ತಿದ್ದವು.

‘ಒಂಬತ್ತು ವರ್ಷಗಳ ಹಿಂದೆ ಈ ಜಾಗವನ್ನು ತ್ಯಾಜ್ಯ ತುಂಬಿಸುವುದಕ್ಕಾಗಿ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತಕ್ಕೆ ಅಂದಿನ ಬಿಬಿಎಂಪಿ ಹಸ್ತಾಂತರಿಸಿತ್ತು. ಆಗ ಇಲ್ಲಿ ಕೆಲವೇ ಮನೆಗಳಿದ್ದವು. ಆನಂತರ ಎಲ್ಲೆಲ್ಲಿಂದಲೋ ಬಂದವರು ಇಲ್ಲಿ ಸೇರಿಕೊಂಡಿದ್ದಾರೆ. ಇವರಲ್ಲಿ ಸ್ಥಳೀಯರ ಸಂಖ್ಯೆ ಕಡಿಮೆ ಇದ್ದು, ಹೊರಗಿನಿಂದ ಬಂದವರೇ ಹೆಚ್ಚಿದ್ದಾರೆ’ ಎಂದು ಅಧಿಕಾರಿ ಯೊಬ್ಬರು ಮಾಹಿತಿ ನೀಡಿದರು. ‘ಒಂದು ನೋಟಿಸ್ ಕೂಡ ನೀಡದೇ ಡಿ. 20ರಂದು ಬೆಳಿಗ್ಗೆ 6 ಗಂಟೆಗೆ ಬಂದು ಎಲ್ಲ ಮನೆಗಳನ್ನು ಕೆಡವಿದ್ದಾರೆ. ನಾವು ಯಾರೂ ಇತ್ತೀಚೆಗೆ ಬಂದವರಲ್ಲ. 25–30 ವರ್ಷಗಳ ಹಿಂದೆಯೇ ಬಂದವರು’ ಎಂದು ಅನೇಕ ಸಂತ್ರಸ್ತರು ತಮ್ಮ ಅಳಲು ಹೇಳಿಕೊಂಡರು.


‘ನಾವು 10 ವರ್ಷಗಳ ಹಿಂದೆ ಬಂದಿದ್ದೇವೆ’ ಎಂದು ಕೆಲವರಷ್ಟೇ ತಿಳಿಸಿದರು.

ಎಲ್ಲ ದಾಖಲೆ ಇದೆ: ‘ನಮ್ಮ ಹತ್ತಿರ ಆಧಾರ್ ಕಾರ್ಡ್, ಪಡಿತರ ಚೀಟಿ, ಮತದಾರರ ಚೀಟಿ ಎಲ್ಲವೂ ಇದೆ. ಕೆಲವು ವರ್ಷಗಳ ಹಿಂದೆ ಈಗ ಸಚಿವರಾಗಿರುವ, ಸ್ಥಳೀಯ ಶಾಸಕರಾದ ಕೃಷ್ಣ ಬೈರೇಗೌಡ ಸಹಿತ ಕೆಲವು ಮುಖಂಡರು ಬಂದು ನಮಗೆ ತಾತ್ಕಾಲಿಕ ಹಕ್ಕುಪತ್ರ ನೀಡಿದ್ದರು. ಅಧಿಕೃತ ಪತ್ರ ನೀಡುತ್ತೇವೆ ಎಂದು ಭರವಸೆಯನ್ನೂ ಕೊಟ್ಟಿದ್ದರು. ಈಗ ನೋಡಿದರೆ ಮನೆ ಒಡೆದು ಹಾಕಿದ್ದಾರೆ’ ಎಂದು ಖಾದರ್‌ಬಿ ತಮ್ಮ ಅಸಹಾಯಕತೆ ತೋಡಿಕೊಂಡರು.



ನೆಲಸಮಗೊಂಡಿರುವ ಕೋಗಿಲು ಬಂಡೆ ಪ್ರದೇಶದಲ್ಲಿ ಹಾಕಲಾಗಿರುವ ತಾತ್ಕಾಲಿಕ ಟೆಂಟ್ ಮನೆಗಳು

ಸಂತ್ರಸ್ತರು ಏನಂತಾರೆ?



ನಾನು ಕೂಲಿ ಕೆಲಸ ಮಾಡಿ ಕುಟುಂಬ ಸಾಕುತ್ತಿದ್ದೇನೆ. ಬಾಡಿಗೆಗೆ ಮನೆ ಪಡೆಯುವಷ್ಟು ಸಾಮರ್ಥ್ಯ ನನ್ನಲ್ಲಿಲ್ಲ. ನಮಗೆ ಬೇರೆ ಕಡೆ ಮನೆ ಕಟ್ಟಿಕೊಡಬೇಕು. ಇಲ್ಲದೇ ಇದ್ದರೆ ಇಲ್ಲೇ ಇರುತ್ತೇವೆ. ಇಲ್ಲಿಯೇ ಸತ್ತರೂ ಪರವಾಗಿಲ್ಲ.
ಮಹಮ್ಮದ್ ಇಲ್ಯಾಸ್



ಗಂಡ ತೀರಿಕೊಂಡಿದ್ದಾರೆ. ನಾನು, ಮಗ, ಅಕ್ಕ 15 ವರ್ಷಗಳಿಂದ ಇಲ್ಲಿದ್ದೇವೆ. ಡಿ.20ರಂದು ಬೆಳಿಗ್ಗೆ ಬಂದು ಗ್ಯಾಸ್ ಸಿಲಿಂಡರ್ ಹೊರಗಿಡಿ ಅಂದರು. ಜೆಸಿಬಿ ಮೂಲಕ ನೆಲಸಮ ಮಾಡಿದರು. ನಾವು ಬಟ್ಟೆ ಬದಲಾಯಿಸುವಂತಿಲ್ಲ. ಸರಿಯಾದ ಶೌಚಾಲಯವೂ ಇಲ್ಲ. ಆದರೂ ನಾವು ಇಲ್ಲಿಂದ ಹೋದರೆ ಮತ್ತೆ ಬರಲು ಬಿಡುವುದಿಲ್ಲ ಎಂಬುದು ಗೊತ್ತಿದೆ. ನಮಗೆ ಜಾಗ ಕೊಡುವವರೆಗೆ ಹೋಗುವುದಿಲ್ಲ.
ಸರೋಜಾ



ಪಶ್ಚಿಮ ಬಂಗಾಳದಿಂದ ನಾವು ಬೆಂಗಳೂರಿಗೆ ಬಂದು 30 ವರ್ಷ ದಾಟಿದೆ. ನಾವು ಯಾವಾಗಲೂ ಕಾಂಗ್ರೆಸ್‌ಗೆ ಮತ ಹಾಕಿಕೊಂಡೇ ಬಂದವರು. ಮೊದಲು ಬಳ್ಳಾರಿ ರಸ್ತೆಯಲ್ಲಿದ್ದೆವು. ಆನಂತರ ಇಲ್ಲಿಗೆ ಬಂದೆವು. ಬಡವರಿಗೆ ಸರ್ಕಾರ ಹೀಗೆ ಮಾಡಿದರೆ ಹೇಗೆ?
ಮೈನುದ್ದೀನ್



ನಾವು 10 ವರ್ಷದ ಹಿಂದೆಯೇ ಬಂದಿದ್ದೇವೆ. ಅದಕ್ಕಿಂತ ಹಿಂದೆ ಬಂದವರಿಗಷ್ಟೇ ಅಲ್ಲ. ನಮಗೂ ಮನೆ ನೀಡಬೇಕು. ಮನೆಕೆಲಸ ಮಾಡಿ ಬದುಕುವ ನಮಗೆ ಮನೆ ಕೊಂಡುಕೊಳ್ಳುವ ಶಕ್ತಿ ಇಲ್ಲ.
ಕಾಳಿಯಮ್ಮಾಳ್ ಸುಧಾ



ಪತಿ ಗಾರೆ ಕೆಲಸ ಮಾಡುತ್ತಾರೆ. ಅದರಲ್ಲಿಯೇ ಮೂರು ಮಕ್ಕಳನ್ನು ಸಾಕಬೇಕು. ಮನೆ ಒಡೆದು ಹಾಕಿರುವುದರಿಂದ ನಾವು ಬೀದಿಗೆ ಬಿದ್ದಿದ್ದೇವೆ. ನಮಗೆ ಮನೆ ಕಟ್ಟಲು ಅವಕಾಶ ನೀಡಬೇಕು.
ಆರಿಫಾ


ಸುದ್ದಿ 2 ನಿಮಿಷ

ಮಹಿಳೆ ಘನತೆಗೆ ಆರೋಪ ಎಚ್.ಡಿ.ರೇವಣ್ಣ ನಿರಾಳ

ಬೆಂಗಳೂರು: ಮನೆಕೆಲಸದ ಮಹಿಳೆಯ ಘನತೆಗೆ ಚ್ಯುತಿ ಉಂಟು ಮಾಡಿದ ಆರೋಪ ಎದುರಿಸುತ್ತಿದ್ದ ಹೊಳೆನರಸೀಪುರ ಕ್ಷೇತ್ರದ ಜೆಡಿಎಸ್ ಶಾಸಕ ಎಚ್.ಡಿ. ರೇವಣ್ಣ ವಿರುದ್ಧದ ಕ್ರಿಮಿನಲ್ ಪ್ರಕರಣದ ಅಪರಾಧ ಪರಿಗಣಿಸಲು ಜನಪ್ರತಿನಿಧಿಗಳ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ನಿರಾಕರಿಸಿದೆ.

ಈ ಸಂಬಂಧ ಹೊಳೆನರಸೀಪುರ ಟೌನ್ ಪೊಲೀಸ್ ಠಾಣೆಯಲ್ಲಿ, ಭಾರತೀಯ ದಂಡ ಸಂಹಿತೆ-1860ರ ಕಲಂ 354–ಎ (ಲೈಂಗಿಕ ಸಮ್ಮತಿಗಾಗಿ ಒತ್ತಾಯ ಅಥವಾ ಮನವಿ) ಅಡಿಯಲ್ಲಿ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣದಿಂದ ರೇವಣ್ಣ ಅವರನ್ನು ಬಿಡುಗಡೆ ಮಾಡಲಾಗಿದೆ.

ಪ್ರಕರಣದ ವಿಚಾರಣೆ ನಡೆಸುತ್ತಿದ್ದ, ‘ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ನ್ಯಾಯಾಧೀಶ ಕೆ.ಎಂ.ಶಿವಕುಮಾರ್ ಈ ಕುರಿತ ಆದೇಶವನ್ನು ಸೋಮವಾರ ಪ್ರಕಟಿಸಿದ್ದಾರೆ.



‘ಎಚ್.ಡಿ.ರೇವಣ್ಣ ಅವರ ವಿರುದ್ಧ ದೂರು ದಾಖಲಿಸುವಲ್ಲಿ ಸಂತ್ರಸ್ತೆಯು ವಿಳಂಬ ಮಾಡಿದ್ದಾರೆ. ಹಾಗಾಗಿ, ವಿಳಂಬ ತೋರಿರುವುದನ್ನು ಕ್ಷಮಿಸಿ ಶಿಕ್ಷಾರ್ಹ ಅಪರಾಧದ ವಿಚಾರಣೆ ಮುಂದುವರಿಸಲು ಸೂಕ್ತ ಪ್ರಕರಣವಲ್ಲ’ ಎಂಬ ಅಭಿಪ್ರಾಯವನ್ನು ನ್ಯಾಯಾಧೀಶರು ವ್ಯಕ್ತಪಡಿಸಿದ್ದಾರೆ.

‘ಸದಸ್ಯರ ವಜಾ ಅಧಿಕಾರ ವಕ್ಫ್ ಮಂಡಳಿಗೆ ಮಾತ್ರ’

ಬೆಂಗಳೂರು: ‘ವಕ್ಫ್ ವ್ಯವಸ್ಥಾಪನಾ ಸಮಿತಿಯ ಸದಸ್ಯರನ್ನು ವಜಾಗೊಳಿಸುವ ಅಧಿಕಾರ ವಕ್ಫ್ ಮಂಡಳಿಗೆ ಮಾತ್ರ ಇದೆಯೇ ಹೊರತು ವಕ್ಫ್ ವ್ಯವಸ್ಥಾಪನಾ ಸಮಿತಿಗೆ ಅಲ್ಲ’ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ದಕ್ಷಿಣ ಕನ್ನಡ ಜಿಲ್ಲೆ ಸುರತ್ಕಲ್‌ನ ಅಬ್ದುಲ್ ಸತ್ತಾರ್ ಮತ್ತು ಮೊಹಮದ್ ಮುಸ್ತಾಫ ಸಲ್ಲಿಸಿದ್ದ ರಿಟ್ ಅರ್ಜಿ ಪುರಸ್ಕರಿಸಿರುವ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತು ಆದೇಶಿಸಿದೆ.

2024ರ ಅಕ್ಟೋಬರ್ 11ರಂದು ತುರ್ತು ಸಭೆ ನಡೆಸಿ ಅರ್ಜಿದಾರರನ್ನು ವಜಾಗೊಳಿಸಿದ್ದ ವ್ಯವಸ್ಥಾಪನಾ ಸಮಿತಿ ಆದೇಶವನ್ನು ರದ್ದುಗೊಳಿಸಿರುವ ನ್ಯಾಯಪೀಠ, ‘ಅರ್ಜಿದಾರರು ವ್ಯವಸ್ಥಾಪನಾ ಸಮಿತಿಯ ಸದಸ್ಯರಾಗಿ ಮುಂದುವರಿಯಬಹುದು’ ಎಂದೂ ಹೇಳಿದೆ.

‘ವಕ್ಫ್ ಕಾಯ್ದೆ-1995ರ ಕಲಂ 32(2)(ಜಿ) ಅನುಸಾರ ವ್ಯವಸ್ಥಾಪನಾ ಸಮಿತಿಗೆ, ಮುತವಲ್ಲಿಗಳನ್ನು ನೇಮಿಸುವ ಅಥವಾ ತೆಗೆಯುವ ಅಧಿಕಾರ ವಕ್ಫ್ ಮಂಡಳಿಗೆ ಮಾತ್ರವೇ ಇದೆ. ಮುತವಲ್ಲಿಗಳನ್ನು ವಜಾಗೊಳಿಸುವಾಗ ವಕ್ಫ್ ಕಾಯ್ದೆಯ ಕಲಂ 64 ಮತ್ತು ಕರ್ನಾಟಕ ವಕ್ಫ್ ನಿಯಮಗಳು-2017ರ ನಿಯಮ 58ರ ಅಡಿ ಇರುವ ಕಾರಣಗಳನ್ನು ಪಾಲಿಸಬೇಕು’ ಎಂದು ನ್ಯಾಯಪೀಠ ಇದೇ ವೇಳೆ ನಿರ್ದೇಶಿಸಿದೆ. ಅರ್ಜಿದಾರರು ದಕ್ಷಿಣ ಕನ್ನಡ ಜಿಲ್ಲೆ ಕೃಷ್ಣಾಪುರದ ಮುಸ್ಲಿಮ್ ಜಮಾತ್‌ನ ಬದಾರಿಯಾ ಜುಮ್ಮಾ ಮಸೀದಿಯ ನಿರ್ಧಾರ ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯ ಪ್ರಗತಿ ಪರಿಶೀಲನೆ

₹8,666 ಕೋಟಿ: ಟೆಂಡರ್‌ಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ವಿಶೇಷ ಅನುದಾನ ಯೋಜನೆಯಡಿ 2025-26ನೇ ಸಾಲಿನಲ್ಲಿ 205 ವಿಧಾನಸಭಾ ಕ್ಷೇತ್ರಗಳಿಗೆ ₹8,666.50 ಕೋಟಿ ಅನುದಾನ ಹಂಚಿಕೆ ಮಾಡಿದ್ದು, ಬಳಕೆಗೆ ಮೂರು ತಿಂಗಳಷ್ಟೇ ಉಳಿದಿದ್ದರೂ ಟೆಂಡರ್ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿಲ್ಲ.

ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ಕುರಿತು ಮಾಹಿತಿ ಪಡೆದ ಮುಖ್ಯಮಂತ್ರಿ ಸಿದ್ದರಾಮಯ್ಯ, ಎಲ್ಲಾ ಟೆಂಡರ್ ಪ್ರಕ್ರಿಯೆಗಳನ್ನು ಜ.10ರ ಒಳಗಾಗಿ ಪೂರ್ಣಗೊಳಿಸಬೇಕು ಎಂದು ತಾಕೀತು ಮಾಡಿದರು. ಹಂಚಿಕೆಯಾದ ಅನುದಾನದಲ್ಲಿ ಈಗಾಗಲೇ ₹1 ಸಾವಿರ ಕೋಟಿ ಬಿಡುಗಡೆ ಮಾಡಲಾಗಿದೆ. 19 ಕ್ಷೇತ್ರಗಳಿಗೆ ಅನುದಾನ ಬಿಡುಗಡೆ ಬಾಕಿ ಇದ್ದು, ಪ್ರಸ್ತಾವಗಳ ಸ್ವೀಕಾರವಾದ ತಕ್ಷಣ ಹಣ ಬಿಡುಗಡೆ ಮಾಡಲಾಗುವುದು ಎಂದು ಭರವಸೆ ನೀಡಿದರು.

2024-25ನೇ ಸಾಲಿನಲ್ಲಿ ಮುಖ್ಯಮಂತ್ರಿ ವಿಶೇಷ ಅನುದಾನ ಯೋಜನೆಯಡಿ ಪ್ರತಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ತಲಾ ₹25 ಕೋಟಿಯಂತೆ ಒಟ್ಟು ₹3,510 ಕೋಟಿ ಬಿಡುಗಡೆಗೆ ಅನುಮೋದನೆ ನೀಡಲಾಗಿತ್ತು. ಇದರಲ್ಲಿ ಈಗಾಗಲೇ ₹2,040 ಕೋಟಿ ಮೊತ್ತದಲ್ಲಿ ಶೇ 58ರಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ. ₹920 ಕೋಟಿ ವೆಚ್ಚ ಭರಿಸಲಾಗಿದೆ. ₹1,205 ಕೋಟಿ ಬಿಡುಗಡೆಗೆ ಬೆಳಗಾವಿ ಅಧಿವೇಶನದ ವೇಳೆ ಆದೇಶ ನೀಡಲಾಗಿದೆ. ಅನುಷ್ಠಾನ ಪೂರ್ಣಗೊಂಡಿರುವ ಕಾಮಗಾರಿಗಳ ಮೊತ್ತವನ್ನು ತ್ವರಿತವಾಗಿ ಪಾವತಿಸಲು ಎಲ್ಲ ಜಿಲ್ಲಾಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದರು.

ರೈಲ್ವೆ ಯೋಜನೆ: 2,685 ಎಕರೆ ಸ್ವಾಧೀನ ಬಾಕಿ

ರಾಜ್ಯದಲ್ಲಿ ಅನುಮೋದನೆಗೊಂಡಿರುವ ರೈಲು ಯೋಜನೆಗಳಿಗೆ 16,554 ಎಕರೆ ಜಮೀನು ಅಗತ್ಯ ಇದ್ದು, ಶೇ 84ರಷ್ಟು ಭೂ ಸ್ವಾಧೀನ ಪೂರ್ಣಗೊಂಡಿದೆ. 2,685 ಎಕರೆ ಸ್ವಾಧೀನ ಬಾಕಿ ಇದೆ ಎಂದು ಸಿದ್ದರಾಮಯ್ಯ ಹೇಳಿದರು. ಬಾಕಿ ಇರುವ ಭೂಸ್ವಾಧೀನ ಪ್ರಕ್ರಿಯೆ ಗಳನ್ನು ಆದ್ಯತೆ ಮೇರೆಗೆ ಪೂರ್ಣಗೊಳಿಸಬೇಕು. ಕುಡಚಿ-ಬಾಗಲಕೋಟೆ, ತುಮಕೂರು-ದಾವಣಗೆರೆ, ಬೇಲೂರು-ಹಾಸನ, ಶಿವಮೊಗ್ಗ-ರಾಣೆಬೆನ್ನೂರು, ಧಾರವಾಡ-ಬೆಳಗಾವಿ ರೈಲು ಮಾರ್ಗಗಳ ನಿರ್ಮಾಣ ಕಾಮಗಾರಿಯ ಪ್ರಕ್ರಿಯೆ ತ್ವರಿತಗೊಳಿಸಬೇಕು ಎಂದು ಸೂಚಿಸಿದರು.

ನಿರ್ಮಾಣ ಕಾಮಗಾರಿಗಳಿಗೆ ರಾಜ್ಯ ಸರ್ಕಾರ ₹2,581.67 ಕೋಟಿ, ಭೂಸ್ವಾಧೀನ ಪ್ರಕ್ರಿಯೆಗೆ ₹2,950.22 ಕೋಟಿ ಬಿಡುಗಡೆ ಮಾಡಿದೆ. ಆರು ವಿಮಾನನಿಲ್ದಾಣ ಕಾಮಗಾರಿಗಳು ಅನುಷ್ಠಾನದ ವಿವಿಧ ಹಂತದಲ್ಲಿವೆ. ಹಾಸನ ವಿಮಾನನಿಲ್ದಾಣ ಭೂಸ್ವಾಧೀನ ಪರಿಹಾರವನ್ನು ರೈತರಿಗೆ ವಿತರಿಸಬೇಕು. ತಾಂತ್ರಿಕ ಅಡಚಣೆಗಳನ್ನು ನಿವಾರಿಸಬೇಕು ಎಂದು ನಿರ್ದೇಶನ ನೀಡಿದರು.



ಮೆಕ್ಕೆಜೋಳ: 76,430 ಟನ್ ಬಾಕಿ



ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ 17,350 ಟನ್ ಮೆಕ್ಕೆಜೋಳ ಖರೀದಿ ಮಾಡಿದ್ದು, ಇನ್ನೂ 76,430 ಟನ್ ಖರೀದಿ ಬಾಕಿ ಇದೆ. 93,782 ಟನ್ ಮೆಕ್ಕೆಜೋಳ ಖರೀದಿಗೆ ಕೋರಿಕೆ ಪಡೆಯಲಾಗಿದೆ ಎಂದು ಸಿದ್ದರಾಮಯ್ಯ ಹೇಳಿದರು.

ಎಥೆನಾಲ್ ಖರೀದಿಸಲು ಕೇಂದ್ರ ಸರ್ಕಾರಕ್ಕೆ ಮಾಡಿದ್ದ ಮನವಿಗೆ ಇದುವರೆಗೆ ಪ್ರತಿಕ್ರಿಯೆ ಬಂದಿಲ್ಲ. ಕೇಂದ್ರ ಸರ್ಕಾರ ರಾಜ್ಯದ ಮೆಕ್ಕೆಜೋಳ ಬೆಳೆಗಾರರ ಕುರಿತು ನಿರ್ಲಕ್ಷ್ಯ ಧೋರಣೆಯನ್ನು ಮುಂದುವರಿಸಿದೆ. ಹಾಗಾಗಿ, ಕೋರಿಕೆಯ ಪ್ರಮಾಣದಷ್ಟು ಮೆಕ್ಕೆಜೋಳ ಖರೀದಿಸಲು ಸ್ಥಳೀಯ ಸಂಸ್ಥೆಗಳು ಕ್ರಮ ಕೈಗೊಳ್ಳಬೇಕು ಎಂದು ಅವರು ಸೂಚಿಸಿದರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಕೋಗಿಲು: ಅರ್ಹರಿಗಷ್ಟೇ ‘ಸರ್ಕಾರಿ’ ಮನೆ

ಒಂದನೇ ಪುಟದಿಂದ...

‘ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಹಾಯಧನ ಲಭ್ಯವಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವತಿಯಿಂದ ಪ್ರತಿ ಮನೆಗೆ ₹5 ಲಕ್ಷ ನೀಡುವಂತೆ ಸೂಚಿಸಿದ್ದೇನೆ. ಸಾಮಾನ್ಯ ವರ್ಗದವರಿಗೆ ಸಹಾಯಧನ ಸೇರಿ ₹8.70 ಲಕ್ಷ ಸಿಗುತ್ತದೆ. ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ₹9.50 ಲಕ್ಷ ಸಿಗುತ್ತದೆ. ಸಾಮಾನ್ಯ ವರ್ಗದವರಿಗೆ ₹2.50 ಲಕ್ಷ ಸಾಲದ ರೂಪದಲ್ಲಿ ನೀಡಲಾಗುತ್ತದೆ. ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ₹1.70 ಲಕ್ಷ ಸಾಲ ನೀಡಲಾಗುತ್ತದೆ’ ಎಂದು ಅವರು ಹೇಳಿದರು.

‘ಅರ್ಹರು ಯಾರು ಎಂದು ಎರಡು ದಿನಗಳಲ್ಲಿ ಪರಿಶೀಲಿಸಿ, ಜನವರಿ 1ರಂದು ಅವರಿಗೆಲ್ಲ ಮನೆ ಹಂಚಿಕೆ ಮಾಡುವ ಜವಾಬ್ದಾರಿಯನ್ನು ಜಮೀರ್ ಅಹಮದ್ ಖಾನ್ ಅವರಿಗೆ ವಹಿಸಲಾಗಿದೆ. ಅಕ್ರಮವಾಗಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದರೂ ಮಾನವೀಯತೆ ದೃಷ್ಟಿಯಿಂದ ಅವರಿಗೆ ವಾಸಕ್ಕೆ ಪರ್ಯಾಯ ವ್ಯವಸ್ಥೆ ಮಾಡುತ್ತಿದ್ದೇವೆ. 1 ಲಕ್ಷ ಮನೆಗಳನ್ನು ನಾವು ಕಟ್ಟಿಸಿರುವುದೇ ಬಡವರಿಗೆ ಸೂರು ಒದಗಿಸುವ ಉದ್ದೇಶಕ್ಕಾಗಿ’ ಎಂದು ಸಿದ್ದರಾಮಯ್ಯ ತಿಳಿಸಿದರು.

ನಗರ ಜಿಲ್ಲಾಧಿಕಾರಿ, ಜಿಬಿಎ ಹಾಗೂ ಪಾಲಿಕೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ಅಲ್ಲಿರುವವರ ದಾಖಲೆಗಳನ್ನು ಪರಿಶೀಲಿಸಲಿದ್ದಾರೆ. ಅವರು ನೀಡುವ ಪಟ್ಟಿಯನ್ನು ಆಧರಿಸಿ ಮನೆಗಳ ಹಂಚಿಕೆ ಮಾಡಲಾಗುವುದು ಎಂದರು.

‘ಕೋಗಿಲು ಬಡಾವಣೆಯಲ್ಲಿ ಮುಂಚಿತವಾಗಿ ನೋಟಿಸ್ ನೀಡಲಾಗಿತ್ತು. ಸರ್ಕಾರದ ಜಾಗ ತೆರವು ಮಾಡುವಂತೆ ಅವರ ಗಮನಕ್ಕೂ ತರಲಾಗಿತ್ತು. ಆದರೂ ಅವರು ಜಾಗ ಖಾಲಿ ಮಾಡಿರಲಿಲ್ಲ. ಡಿ 20ರಂದು ಸುಮಾರು 167 ಮನೆಗಳನ್ನು ತೆರವುಗೊಳಿಸಲಾಗಿತ್ತು’ ಎಂದು ಹೇಳಿದರು.

‘ಇನ್ನು ಮುಂದೆ ಯಾವುದೇ ಕಾರಣಕ್ಕೂ ಸರ್ಕಾರಿ ಜಮೀನು ಒತ್ತುವರಿ ಆಗದಂತೆ ಕ್ರಮ ತೆಗೆದುಕೊಳ್ಳಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದೇನೆ. ಅಕ್ರಮವಾಗಿ ಮನೆ ಕಟ್ಟಿದರೆ ಸಂಬಂಧಿಸಿದ ಅಧಿಕಾರಿಗಳನ್ನೇ ಜವಾಬ್ದಾರಿ ಮಾಡಲಾಗುತ್ತದೆ’ ಎಂದೂ ಎಚ್ಚರಿಕೆ ನೀಡಿದರು.

ಸ್ಥಳಕ್ಕೆ ಡಿಕೆಶಿ ಭೇಟಿ: ಮುಖ್ಯಮಂತ್ರಿ ಸಭೆಗೆ ಮುನ್ನ ಕೋಗಿಲು ಬಂಡೆಯ ಪ್ರದೇಶಕ್ಕೆ ಭೇಟಿ ನೀಡಿದ್ದ ಡಿ.ಕೆ. ಶಿವಕುಮಾರ್ ಅವರು, ಅಲ್ಲಿನ ಪರಿಸ್ಥಿತಿಯನ್ನು ಅವಲೋಕಿಸಿದ್ದರು. ಅಲ್ಲಿ ನೆಲಸಿರುವವರಿಂದ ಅಹವಾಲುಗಳನ್ನು ಆಲಿಸಿದ್ದರು.

‘ಭರವಸೆ ಪ್ರಕಾರ ವಸತಿ ಹಂಚಿಕೆ’

‘ಮನೆಗಳನ್ನು ಕಳೆದುಕೊಂಡವರಿಗೆ ಪರ್ಯಾಯ ವ್ಯವಸ್ಥೆ ಮಾಡುವುದಾಗಿ ಕಾಂಗ್ರೆಸ್ ನಾಯಕ ಕೆ.ಸಿ. ವೇಣುಗೋಪಾಲ್ ಅವರಿಗೆ ಭರವಸೆ ನೀಡಿದ್ದೆವು. ಆ ಪ್ರಕಾರ ಬೈಯ್ಯಪ್ಪನಹಳ್ಳಿ ಸರ್ವೆ ನಂಬರ್ 23ರಲ್ಲಿ ರಾಜೀವ್‌ಗಾಂಧಿ ವಸತಿ ನಿಗಮದಿಂದ ಮನೆ ಹಂಚಿಕೆ ಮಾಡುತ್ತೇವೆ’ ಎಂದು ಸಿದ್ದರಾಮಯ್ಯ ತಿಳಿಸಿದರು.

‘ಇದರಲ್ಲಿ ನಮಗೆ ವಿಶೇಷ ಆಸಕ್ತಿ ಇಲ್ಲ. ಕೇರಳದಲ್ಲಿ ಚುನಾವಣೆ ಬರುತ್ತಿರುವ ಕಾರಣಕ್ಕೆ ಕಮ್ಯುನಿಸ್ಟ್ ಪಕ್ಷದವರು ಆಸಕ್ತಿ ವಹಿಸಿದ್ದಾರೆ. ಮನುಷ್ಯತ್ವದ ಆಧಾರದ ಮೇಲೆ ನಾವು ಪರ್ಯಾಯ ವ್ಯವಸ್ಥೆ ಮಾಡುತ್ತಿದ್ದೇವೆ’ ಎಂದು ತಿಳಿಸಿದರು.

‘ಗಾಂಜಾದ ಬೀಡಾದ ಗಂಧದ ನಾಡು’

ಬೆಂಗಳೂರು: ‘ಮಾದಕ ವಸ್ತುಗಳ ಮಾರಾಟದ ಅಡ್ಡೆಗಳಿಗೆ ರಾಜ್ಯ ಸರ್ಕಾರದ ಕುಮ್ಮಕ್ಕಿದೆ. ಇದರ ಪರಿಣಾಮ ಗಂಧದ ನಾಡಾಗಿದ್ದ ಕರ್ನಾಟಕ ಈಗ ಗಾಂಜಾದ ಬೀಡಾಗಿದೆ’ ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಟೀಕಿಸಿದರು.

‘ಗೊತ್ತಿಲ್ಲ ಸಚಿವರೇ ರಾಜೀನಾಮೆ ಕೊಟ್ಟು ನಡೆಯಿರಿ’ ಪೋಸ್ಟರ್ ಅನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು, ಮಾದಕ ದ್ರವ್ಯದ ದೆಸೆಯಿಂದ ವಿದ್ಯಾರ್ಥಿಗಳು ಕಾಲೇಜಿಗೆ ಕಾಲಿಡಲಾಗದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು.

‘ಗೃಹ ಸಚಿವರೇ ಸಬೂಬುಗಳನ್ನು ಹೇಳಿಕೊಂಡೇ ಎಷ್ಟು ದಿನ ಈ ರಾಜ್ಯವನ್ನು ಹಾಳು ಮಾಡುತ್ತೀರಿ? ನೀವು ಅಧಿಕಾರ ಬಿಟ್ಟು ಕೊಡಿ. ಇಲ್ಲವೇ ಬೇರೆ ಯಾರಿಗಾದರೂ ತಾಕತ್ತಿದ್ದವರಿಗೆ ಆಡಳಿತ ನಡೆಸಲು ಬಿಡಿ. ಇದು ನಿಮ್ಮ ಅಸಹಾಯಕತೆಯೇ ಅಥವಾ ಬೇರೆಯವರು ನಿಮಗೆ ಕೆಟ್ಟ ಹೆಸರು ತರಲು ಷಡ್ಯಂತ್ರ ಮಾಡಿದ್ದಾರೆಯೇ ಎಂಬುದಕ್ಕೆ ನೀವೇ ಉತ್ತರ ನೀಡಬೇಕು’ ಎಂದು ಆಗ್ರಹಿಸಿದರು.

‘ಮೈಸೂರು ಮತ್ತು ಬೆಂಗಳೂರಿನ ಮೂರು ಕಡೆಗಳಲ್ಲಿ ಮಾದಕ ವಸ್ತು ಕಾರ್ಖಾನೆಗಳ ಮೇಲೆ ಮಹಾರಾಷ್ಟ್ರ ಪೊಲೀಸರು ದಾಳಿ ಮಾಡಬೇಕಾಯಿತು. ಅಲ್ಲಿನ ಪೊಲೀಸರು ಪತ್ತೆ ಹಚ್ಚಿದ ಬಳಿಕ ನಾವೇ ಹಿಡಿದಿದ್ದೇವೆ ಎಂದು ತಿಳಿಸಿ ಘನಕಾರ್ಯ ಮಾಡಿದಂತೆ ವರ್ತಿಸುತ್ತಿದ್ದಾರೆ’ ಎಂದು ಛಲವಾದಿ ಟೀಕಿಸಿದರು.

‘ಡ್ರಗ್ಸ್ ಮಾಫಿಯಾ ರಾಜ್ಯವನ್ನು ಸುತ್ತುವರಿದಿದೆ’

ಪ್ರಜಾವಾಣಿ ವಾರ್ತೆ

ಉಡುಪಿ: ‘ಡ್ರಗ್ಸ್ ಮಾಫಿಯಾ ರಾಜ್ಯವನ್ನು ಸುತ್ತುವರಿದಿದ್ದು, ಸರ್ಕಾರ ತಡೆಯುವ ಕೆಲಸ ಮಾಡಿಲ್ಲ. ಈ ಬಾರಿ ಹೊಸ ವರ್ಷಾಚರಣೆ ಅಲ್ಲ ಡ್ರಗ್ಸ್ ಸೆಲೆಬ್ರೇಶನ್ ಆಗಿದೆ’ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಸೋಮವಾರ ಇಲ್ಲಿ ಟೀಕಿಸಿದರು.

ಪಡುಬಿದ್ರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮಹಾರಾಷ್ಟ್ರದ ಪೊಲೀಸರು ಬೆಂಗಳೂರಿಗೆ ಬಂದು ಡ್ರಗ್ಸ್ ವಶಪಡಿಸಿಕೊಂಡಿದ್ದಾರೆ. ನಮ್ಮ ಪೊಲೀಸರಿಗೆ ಏಕೆ ವಿಚಾರ ಗೊತ್ತಾಗಲಿಲ್ಲ? ಇದಕ್ಕಿಂತ ಅವಮಾನ ಬೇರೆ ಏನಿದೆ? ಗುಪ್ತಚರ ಇಲಾಖೆ ಸತ್ತು ಹೋಗಿದೆಯಾ?’ ಎಂದರು.

> ಹರಾಜು ಮೂಲಕ ಪೊಲೀಸ್ ಠಾಣೆಗಳಿಗೆ ವರ್ಗಾವಣೆ ಮಾಡಲಾಗುತ್ತಿದೆ. ಹೀಗಾಗಿ ಮದ್ಯ ಅಕ್ರಮ ಮಾರಾಟ, ಡ್ರಗ್ಸ್ ಮಾಫಿಯಾ ಹೆಚ್ಚಾಗಿದೆ
> **ಅರವಿಂದ ಬೆಲ್ಲದ,** ವಿಧಾನಸಭೆ ವಿರೋಧಪಕ್ಷದ ಉಪ ನಾಯಕ

‘ಮಂಗಳೂರು, ಬೆಂಗಳೂರು ಜೈಲುಗಳಲ್ಲಿ ಡ್ರಗ್ ಪೆಡ್ಲರ್‌ಗಳು ತುಂಬಿದ್ದಾರೆ. ಜೈಲುಗಳು ವಸೂಲಿ ಕೇಂದ್ರಗಳಾಗಿ ಮಾರ್ಪಟ್ಟಿವೆ. ಗೃಹ ಸಚಿವರು ಕಾಣೆಯಾಗಿದ್ದಾರೆ. ಏನೇ ಕೇಳಿದರೂ ನೋಡೋಣ, ವರದಿ ಬಂದಿಲ್ಲ ಎನ್ನುತ್ತಾರೆ’ ಎಂದರು.

‘ಡ್ರಗ್ಸ್ ವಿಚಾರದಲ್ಲಿ ಇನ್ನು ಆಂಧ್ರಪ್ರದೇಶ, ತೆಲಂಗಾಣ ಸೇರಿದಂತೆ ಬೇರೆ ಬೇರೆ ರಾಜ್ಯದವರು ಬಂದು ಕಾರ್ಯಾಚರಣೆ ಮಾಡುವುದು ಬಾಕಿ ಇದೆ’ ಎಂದು ಹೇಳಿದ್ದಾರೆ.

‘ಬಿಜೆಪಿ ಯಾಕೆ ಬಂದ್ ಮಾಡಲಿಲ್ಲ’

ಹರಪನಹಳ್ಳಿ (ವಿಜಯನಗರ): ‘ಡ್ರಗ್ಸ್ ನಿಯಂತ್ರಣ ವಿಷಯದಲ್ಲಿ ನಮ್ಮ ಪೊಲೀಸರು ಉತ್ತಮ ಕೆಲಸ ಮಾಡುತ್ತಿದ್ದಾರೆ. ಅವರ ನೈತಿಕತೆ ಕುಗ್ಗಿಸಲು ಬಿಜೆಪಿ ನೀಚ ರಾಜಕಾರಣ ಮಾಡುತ್ತಿದೆ’ ಎಂದು ಸಚಿವ ಬೈರತಿ ಸುರೇಶ್ ಇಲ್ಲಿ ಟೀಕಿಸಿದರು. ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಡ್ರಗ್ಸ್ ದಂಧೆಯಲ್ಲಿ ಯಾವ ಸಚಿವರು, ಶಾಸಕರ ಆಪ್ತರೂ ಇಲ್ಲ. ಸಚಿವರ ಜೊತೆ ಫೋಟೊ ತೆಗೆಸಿಕೊಂಡ ತಕ್ಷಣ ಆಪ್ತರಾಗುತ್ತಾರಾ?’ ಎಂದರು.

ಕೇರಳ ಚುನಾವಣೆ: ರಾಜಕೀಯ ಜಟಾಪಟಿ



ಕೋಗಿಲು ಬಡಾವಣೆಯಲ್ಲಿನ ಮನೆಗಳ ತೆರವಿನ ವಿಷಯವು ಕಾಂಗ್ರೆಸ್ ಹಾಗೂ ಕೇರಳದಲ್ಲಿ ಅಧಿಕಾರದಲ್ಲಿರುವ ಎಲ್‌ಡಿಎಫ್ ಸರ್ಕಾರದ ರಾಜಕೀಯ ಜಟಾಪಟಿಯಾಗಿ ಪರಿವರ್ತನೆಯಾಗಿದೆ.

ಮುಂದಿನ ವರ್ಷದ ಮೇ ಅಂತ್ಯದೊಳಗೆ ಕೇರಳದಲ್ಲಿ ವಿಧಾನಸಭೆಗೆ ಚುನಾವಣೆ ನಡೆಯಬೇಕಿದೆ. ಕೋಗಿಲು ಬಂಡೆಯ ಪ್ರದೇಶದಲ್ಲಿ ಕಟ್ಟಿರುವ ಮನೆಗಳು ಅಕ್ರಮ ಎಂಬ ಕಾರಣ ಮುಂದೊಡ್ಡಿ, ನೆಲಸಮ ಮಾಡಲಾಗಿತ್ತು. ಇಲ್ಲಿ ವಾಸವಿದ್ದ ಮುಸ್ಲಿಮರನ್ನು ಗುರಿ ಮಾಡಿ ಕಾರ್ಯಾಚರಣೆ ನಡೆಸಲಾಗಿದೆ ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಟೀಕಿಸಿದ್ದರು. ಅದರ ಬೆನ್ನಲ್ಲೇ, ಎಲ್‌ಡಿಎಫ್‌ನ ಸಂಸದ ಹಾಗೂ ಶಾಸಕರನ್ನು ಕೋಗಿಲಿಗೆ ಕಳುಹಿಸಿ, ಸಂತ್ರಸ್ತರ ಬೆಂಬಲಕ್ಕೆ ನಿಲ್ಲುವಂತೆ ಮಾಡಿದ್ದರು. ಉತ್ತರ ಪ್ರದೇಶದ ಮಾದರಿಯ ‘ಬುಲ್ಡೋಜರ್ ನೀತಿ’ಯನ್ನು ಕಾಂಗ್ರೆಸ್ ಸರ್ಕಾರ ಅನುಸರಿಸುತ್ತಿದೆ ಎಂದು ಕೇರಳದ ಜನಪ್ರತಿನಿಧಿಗಳು ಹರಿಹಾಯ್ದಿದ್ದರು.

ಕೇರಳ ಚುನಾವಣೆಯಲ್ಲಿ ಗೆಲ್ಲಲೇಬೇಕೆಂಬ ಪಣ ತೊಟ್ಟಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು, ಈ ಬಗ್ಗೆ ಗಮನ ಹರಿಸಿ ಸೂಕ್ತ ಪರಿಹಾರ ಕಲ್ಪಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಸೂಚಿಸಿದ್ದರು. ಕೇರಳದಲ್ಲಿನ ಮುಸ್ಲಿಂ ಮತಬ್ಯಾಂಕ್‌ನ ಮೇಲಿನ ಕಣ್ಣು ಪಿಣರಾಯಿ ಹಾಗೂ ವೇಣುಗೋಪಾಲ್ ಅವರ ಮಧ್ಯದ ಜಗಳವಾಗಿ ಪರಿವರ್ತಿತವಾಗಿದೆ ಎಂಬ ಟೀಕೆಯೂ ವ್ಯಕ್ತವಾಗಿದೆ.

ವೇಣುಗೋಪಾಲ್ ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂದು ಟೀಕಿಸಿದ್ದ ಕರ್ನಾಟಕದ ಬಿಜೆಪಿ ನಾಯಕರು, ಇಲ್ಲಿ ನಡೆಯುತ್ತಿರುವುದು ಕೇರಳ ಸರ್ಕಾರವೇ ಎಂದು ಆಕ್ರೋಶ ವ್ಯಕಪಡಿಸಿದ್ದರು. ಕೇರಳ ಚುನಾವಣೆಯ ಕಾರಣಕ್ಕಾಗಿ, ಕೋಗಿಲು ಒತ್ತುವರಿ ತೆರವು ವಿವಾದ ರಾಜಕೀಯ ವಿವಾದವಾಗಿ ಪರಿಣಮಿಸಿದೆ.

‘ಗುಜರಿ ಸರ್ಕಾರ ನಡೆಸಲು ಬಂದಿದ್ದೀರಾ?’

ಕೋಗಿಲು ಬಡಾವಣೆಯಲ್ಲಿ ಅಕ್ರಮವಾಗಿ ಗುಡಿಸಲು ಕಟ್ಟಿಕೊಂಡವರು ಬಾಂಗ್ಲಾದವರು ಮತ್ತು ರೋಹಿಂಗ್ಯಾ ಸಮುದಾಯದವರು ಎಂಬ ಮಾಹಿತಿ ಇದ್ದು, ಈ ಬಗ್ಗೆ ಎನ್‌ಐಎ ತನಿಖೆ ನಡೆಸುವ ಅಗತ್ಯವಿದೆ ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಅಲ್ಲಿ ಯಾರಿದ್ದಾರೆ? ಅವರೆಲ್ಲ ಯಾವ ದೇಶದಿಂದ ಬಂದಿದ್ದಾರೆ ಎಂಬ ಮಾಹಿತಿಯೂ ಸರ್ಕಾರಕ್ಕೆ ಇಲ್ಲ ಎಂದರೆ, ನೀವು ಗುಜರಿ ಸರ್ಕಾರ ನಡೆಸಲು ಬಂದಿದ್ದೀರಾ’ ಎಂದು ಅವರು ಪ್ರಶ್ನಿಸಿದರು.

‘ಒಂದು ಕಡೆಯಿಂದ ನೀವೇ ಮನೆಗಳ ನೆಲಸಮಕ್ಕೆ ಆದೇಶ ಕೊಡುತ್ತೀರಿ. ಮತ್ತೊಂದು ಕಡೆ ಅವರಿಗೆ ಬೇರೆ ಕಡೆ ಮನೆ ಕೊಡುತ್ತೇವೆ ಎಂದು ಹೇಳುತ್ತೀರಿ. ಕನ್ನಡಿಗರಿಗೇ ಮನೆಗಳು ಇಲ್ಲ. ಆದರೆ, ಕೇರಳದ ಒತ್ತಡಕ್ಕೆ ಮಣಿದು ಮಂಡಿಯೂರಲು ನಿಮಗೆ ನಾಚಿಕೆ ಆಗಬೇಕು’ ಎಂದರು.

‘ಕೇರಳದವರು ಬಂದು ಅಲ್ಲಿ ಗುಡಿಸಲು ಕಟ್ಟಿಕೊಂಡಿಲ್ಲ. ಕೇರಳದ ಜನ ಹಾಗೆ ಬಂದು ಕೂರುವವರೂ ಅಲ್ಲ. ಅವರು ವಿದ್ಯಾವಂತರು ಮತ್ತು ಸ್ವಾಭಿಮಾನಿಗಳು. ಆದರೆ ಅಲ್ಲಿನ ರಾಜಕಾರಣಿಗಳು ಇದನ್ನು ಚುನಾವಣಾ ವಿಷಯವಾಗಿ ಬಳಸಿಕೊಂಡಿದ್ದಾರೆ. ಬೇಕಿದ್ದರೆ ವೇಣುಗೋಪಾಲ್ ಮುಂದೆ ನಿಮ್ಮ ಗುಲಾಮಗಿರಿ ತೋರಿಸಿ. ಆದರೆ, ನಮ್ಮ ರಾಜ್ಯದ ಜನರನ್ನು ಗುಲಾಮಗಿರಿಗೆ ತಳ್ಳಿ ತಲೆ ತಗ್ಗಿಸುವಂತೆ ಮಾಡಬೇಡಿ’ ಎಂದು ಹೇಳಿದರು.

ಕಲಬುರಗಿಯಲ್ಲಿ ಪ್ರತಿಭಟನೆ: ಸಮುದಾಯದ ಸಾವಿರಾರು ಮಂದಿ ಭಾಗಿ

ಎಸ್ಟಿಗೆ ಸೇರ್ಪಡೆ: ಕೋಲಿ, ಕಬ್ಬಲಿಗರ ಹೋರಾಟ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಅಂಬಿಗ, ಬೆಸ್ತ, ಬಾರಿಕ್ ಸಮುದಾಯಗಳನ್ನೂ ಎಸ್‌ಟಿಗೆ ಸೇರಿಸಲಿ
- ಕುಲಶಾಸ್ತ್ರೀಯ ಅಧ್ಯಯನ ನಡೆಸಲು ಒತ್ತಾಯ

ಕಲಬುರಗಿ: ಪರಿಶಿಷ್ಟ ಪಂಗಡಕ್ಕೆ ಸೇರಿಸುವಂತೆ ಆಗ್ರಹಿಸಿ ಕೋಲಿ, ಕಬ್ಬಲಿಗ ಸಮುದಾಯದ ಸಾವಿರಾರು ಮಂದಿ ನಗರದಲ್ಲಿ ಸೋಮವಾರ ಬೀದಿಗಳಿದು ರಾತ್ರಿ 9.15ರ ತನಕ ಬಿರುಸಿನ ಪ್ರತಿಭಟನೆ ನಡೆಸಿದರು.

ಬೆಳಿಗ್ಗೆಯಿಂದಲೇ ಜಗತ್ ವೃತ್ತದಲ್ಲಿ ಪ್ರತಿಭಟನಕಾರರು ತಂಡೋಪತಂಡವಾಗಿ ತಮಟೆ ಬಾರಿಸುತ್ತ, ‘ಅಂಬಿಗರ ಚೌಡಯ್ಯ’ರ ಬಾವುಟ ಬೀಸುತ್ತ ಹೋರಾಟದ ನದಿಯನ್ನು ಸೇರುತ್ತ ಹೋದರು. ಜಿಲ್ಲೆಯ ತಾಲ್ಲೂಕುಗಳಿಂದ ಮಾತ್ರವಲ್ಲದೇ ನೆರೆಯ ಬೀದರ್, ಯಾದಗಿರಿ ಜಿಲ್ಲೆಗಳಿಂದಲೂ ಜನರು ಕ್ರೂಸರ್ ವಾಹನಗಳಲ್ಲಿ ಬಂದಿಳಿದರು.

‘ಜೈ ಕೋಲಿ, ಜೈ ಅಂಬಿಗ’ ಎಂದು ಬರೆದ ಟೊಪ್ಪಿಗೆ ಧರಿಸಿದ್ದ ಸಾವಿರಾರು ಮಂದಿ, ನಿಜಶರಣ ಅಂಬಿಗರ ಚೌಡಯ್ಯರ ಬಾವುಟಗಳನ್ನು ಬೀಸುತ್ತ ಮೆರವಣಿಗೆಯಲ್ಲಿ ಸಾಗಿದರು. ಮಧ್ಯಾಹ್ನ 2.50ರ ಹೊತ್ತಿಗೆ ಪ್ರತಿಭಟನಾ ಮೆರವಣಿಗೆ ಜಿಲ್ಲಾಧಿಕಾರಿ ಕಚೇರಿ ಎದುರು ತಲುಪಿತು.

ಈ ವೇಳೆ ಮಾತನಾಡಿದ ಸಮುದಾಯ ಮುಖಂಡರು, ‘ಕೋಲಿ, ಕಬ್ಬಲಿಗ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡುವಂತೆ ಒತ್ತಾಯಿಸಿ 1996ರಿಂದ ಹಲವು ಬಾರಿ ಹೋರಾಟ ನಡೆದಿದೆ. ಈತನಕ ನ್ಯಾಯ ಸಿಕ್ಕಿಲ್ಲ’ ಎಂದು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

‘ಕೋಲಿ, ಕಬ್ಬಲಿಗ, ಅಂಬಿಗ, ಬೆಸ್ತ, ಬಾರಿಕ್ ಸಮುದಾಯಗಳನ್ನು ಎಸ್ಟಿಗೆ ಸೇರಿಸಲು ಪ್ರಸ್ತಾವ ಸಲ್ಲಿಸಬೇಕು. ಅದಕ್ಕೂ ಸೂಕ್ತ ದಾಖಲೆಗಳೊಂದಿಗೆ ಪ್ರಸ್ತಾವ ಸಿದ್ಧಪಡಿಸಲು ಕುಲಶಾಸ್ತ್ರೀಯ ಅಧ್ಯಯನ ನಡೆಸಬೇಕು’ ಎಂದು ಸರ್ಕಾರಕ್ಕೆ ಒತ್ತಾಯಿಸಿದರು. ಬಿಸಿಲಿಗೂ, ಸಂಜೆಯ ಚಳಿಗೂ ಜಗ್ಗದೇ ರಾತ್ರಿ ತನಕ ನೆಲಕ್ಕೆ ಕಚ್ಚಿ ಕುಳಿತರು.

‘ಇದು ಯಾರ ವಿರುದ್ಧದ ಹೋರಾಟವಲ್ಲ. ನಾವು ಯಾರ ಅಪ್ಪನ ಆಸ್ತಿಯನ್ನೂ ಕೇಳುತ್ತಿಲ್ಲ. ನಾವು ಬರೀ ನಮ್ಮ ಹಕ್ಕು ಕೇಳುತ್ತಿದ್ದೇವೆ’ ಎಂದು ಸಮುದಾಯದ ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು.

ಅಂತಿಮವಾಗಿ ರಾತ್ರಿ 9.15ರ ಹೊತ್ತಿಗೆ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಪ್ರತಿಭಟನೆಯ ಮುಂಚೂಣಿಯಲ್ಲಿದ್ದ ಹಾವೇರಿಯ ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿಯೊಂದಿಗೆ ಮಾತುಕತೆ ನಡೆಸಿದರು.

‘ಎಸ್ಟಿ ಹೋರಾಟದಲ್ಲಿ ಸಮಾಜದ ಪರವಾಗಿ ಇರೋದಾಗಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ. ಇಷ್ಟು ವರ್ಷ ಕಾದಿದ್ದು, ಇನ್ನೊಂದಿಷ್ಟು ಸಮಯ ಕಾಯೋಣ’ ಎಂದು ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿ ಪ್ರಕಟಿಸಿದರು. ಇದರೊಂದಿಗೆ ಸುಮಾರು 10 ಗಂಟೆಗಳ ಕಾಲ ನಡೆದ ಪ್ರತಿಭಟನೆ ಸಂಪನ್ನಗೊಂಡಿತು.



ಅವಿನಾಶ್, ಚೈತ್ರಾ, ಎಂ.ಡಿ.ಪಲ್ಲವಿ

> ಸುಮಾರು ಒಂದೂವರೆ ವರ್ಷಗಳ ಹಿಂದೆ ಈ ಕಥೆ ಹೇಳಿದ್ದರು. ನನಗೆ ಕಥೆ ಇಷ್ಟವಾಯಿತು. ಚಿತ್ರದಲ್ಲಿ ಈವರೆಗೂ ಮಾಡಿರದ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದೇನೆ.
> **ಚೈತ್ರಾ ಜೆ.ಆಚಾರ್,** ನಟಿ

ಚೈತ್ರಾ ಜೆ.ಆಚಾರ್ ನಟನೆಯ ಲೈಲಾಸ್ ಸ್ವೀಟ್ ಡ್ರೀಮ್

‘ತಲೆದಂಡ’, ‘ಟೋಬಿ’, ‘ಸಪ್ತಸಾಗರದಾಚೆ ಎಲ್ಲೋ’, ‘ಬ್ಲಿಂಕ್’, ‘3ಬಿಎಚ್‌ಕೆ’ ಹೀಗೆ ಸಾಲು ಸಾಲು ಸಿನಿಮಾಗಳಲ್ಲಿ ಭಿನ್ನವಾದ ಪಾತ್ರಗಳ ಮೂಲಕ ಪ್ರೇಕ್ಷಕರೆದುರಿಗೆ ಬಂದಿದ್ದ ನಟಿ ಚೈತ್ರಾ ಜೆ.ಆಚಾರ್, ‘ಎಲ್‌ಎಸ್‌ಡಿ’ ಅಂದರೆ ‘ಲೈಲಾಸ್ ಸ್ವೀಟ್ ಡ್ರೀಮ್’ ಎಂಬ ಸಿನಿಮಾದಲ್ಲಿ ಕಾಣಿಸಿಕೊಳ್ಳಲಿದ್ದಾರೆ.


ಸುರಾಮ್ ಮೂವೀಸ್ ಲಾಂಛನದಲ್ಲಿ ಜಯರಾಮ್ ದೇವಸಮುದ್ರ ನಿರ್ಮಿಸುತ್ತಿರುವ ಈ ಸಿನಿಮಾವನ್ನು ಶಕ್ತಿಪ್ರಸಾದ್ ನಿರ್ದೇಶಿಸುತ್ತಿದ್ದಾರೆ. ಇತ್ತೀಚೆಗೆ ಚಿತ್ರದ ಟೈಟಲ್ ಟೀಸರ್ ಬಿಡುಗಡೆಯಾಯಿತು. ‘ಎಲ್‌ಎಸ್‌ಡಿ’ ಸುರಾಮ್ ಮೂವೀಸ್ ನಿರ್ಮಾಣದ ನಾಲ್ಕನೇ ಚಿತ್ರ.

‘ನಮ್ಮ ಸಂಸ್ಥೆಯ ನಿರ್ಮಾಣದ ಮೊದಲ ಸಿನಿಮಾ ಇತ್ತೀಚೆಗೆ ತೆರೆಕಂಡ ‘ನಿದ್ರಾದೇವಿ ನೆಕ್ಸ್ಟ್ ಡೋರ್’. ಶ್ರೀಮುರಳಿ ಅಭಿನಯದ ‘ಉಗ್ರಾಯುಧಮ್’ ಹಾಗೂ ‘ನೀ ನಂಗೆ ಅಲ್ವಾ’ ಸಿನಿಮಾಗಳ ಶೂಟಿಂಗ್ ಚಾಲ್ತಿಯಲ್ಲಿದೆ. ಶಕ್ತಿಪ್ರಸಾದ್ ಹೇಳಿದ ಈ ಸಿನಿಮಾದ ಕಥೆ ಇಷ್ಟವಾಯಿತು. ಚೈತ್ರಾ ಜೆ.ಆಚಾರ್, ಎಂ.ಡಿ.ಪಲ್ಲವಿ, ಅವಿನಾಶ್ ಮುಂತಾದವರು ಚಿತ್ರದ ಪ್ರಮುಖಪಾತ್ರದಲ್ಲಿದ್ದಾರೆ’ ಎಂದರು ಜಯರಾಮ್ ದೇವಸಮುದ್ರ.

ಅನೇಕ ಕಿರುಚಿತ್ರಗಳನ್ನು ಮಾಡಿರುವ ಶಕ್ತಿಪ್ರಸಾದ್ ಅವರಿಗೆ ಇದು ಬೆಳ್ಳಿತೆರೆಯಲ್ಲಿ ಚೊಚ್ಚಲ ಸಿನಿಮಾ. ‘ಇದೊಂದು ವಿಭಿನ್ನ ಕಥಾಹಂದರ ಹೊಂದಿರುವ ಚಿತ್ರ. ತಾಯಿ-ಮಗಳ ಬಾಂಧವ್ಯದ ಕಥೆ ಸಿನಿಮಾದಲ್ಲಿದೆ. ಬಿಸ್‌ನೆಸ್‌ಮೆನ್ ಪಾತ್ರದಲ್ಲಿ ಅವಿನಾಶ್ ಅವರು ನಟಿಸುತ್ತಿದ್ದು, ಚಿತ್ರಕ್ಕೆ ಮಿಥುನ್ ಮುಕುಂದನ್ ಸಂಗೀತ ನಿರ್ದೇಶನ, ರಿತೇಶ್ ಛಾಯಾಚಿತ್ರಗ್ರಹಣ ಹಾಗೂ ಬಲರಾಮ್ ಸಂಕಲನವಿರಲಿದೆ. ಈಗಾಗಲೇ ಒಂದು ಹಂತದ ಚಿತ್ರೀಕರಣ ಮುಕ್ತಾಯವಾಗಿದ್ದು, ಜನವರಿ 15ರಿಂದ ಎರಡನೇ ಹಂತದ ಚಿತ್ರೀಕರಣ ಆರಂಭವಾಗಲಿದೆ’ ಎನ್ನುತ್ತಾರೆ ಶಕ್ತಿಪ್ರಸಾದ್.

‘ಕೆಲವು ವರ್ಷಗಳ ನಂತರ ಮತ್ತೆ ಸಿನಿಮಾದಲ್ಲಿ ನಟಿಸುತ್ತಿದ್ದೇನೆ. ಚೈತ್ರಾ ಜೆ.ಆಚಾರ್ ಅವರು ನಿರ್ವಹಿಸುತ್ತಿರುವ ‘ಲೈಲಾ’ಳ ಅಮ್ಮ ‘ಸುಧಾ’ಳಾಗಿ ಈ ಸಿನಿಮಾದಲ್ಲಿ ಕಾಣಿಸಿಕೊಳ್ಳಲಿದ್ದೇನೆ’ ಎಂದರು ಎಂ.ಡಿ.ಪಲ್ಲವಿ.


ಡ್ರೀಮ್ ಥಿಯೇಟರ್‌ನಲ್ಲಿ ಹೀಗಿದ್ದಾರೆ ಪ್ರಿಯಾಂಕಾ



ನಿರ್ದೇಶಕ ಹೇಮಂತ್ ಎಂ.ರಾವ್ ನಿರ್ದೇಶನದ ‘666 ಆಪರೇಷನ್ ಡ್ರೀಮ್ ಥಿಯೇಟರ್’ ಚಿತ್ರದಲ್ಲಿ ನಟಿ ಪ್ರಿಯಾಂಕಾ ಮೋಹನ್ ಹೇಗಿರಲಿದ್ದಾರೆ ಎನ್ನುವ ಪ್ರಶ್ನೆಗೆ ಚಿತ್ರತಂಡ ಉತ್ತರಿಸಿದೆ. ಪ್ರಿಯಾಂಕಾ ಪಾತ್ರದ ಪೋಸ್ಟರ್ ಇತ್ತೀಚೆಗೆ ಬಿಡುಗಡೆಯಾಗಿದ್ದು, ರೆಟ್ರೊ ಲುಕ್‌ನಲ್ಲಿ ಅವರು ಮಿಂಚಿದ್ದಾರೆ.

ಈಗಾಗಲೇ ಚಿತ್ರದ ಮೂರು ಹಂತದ ಚಿತ್ರೀಕರಣ ಪೂರ್ಣಗೊಂಡಿದೆ. ಬೆಂಗಳೂರಿನ ಕಂಠೀರವ ಸ್ಟುಡಿಯೊದಲ್ಲಿ ಹಾಕಲಾಗಿರುವ ಸೆಟ್‌ನಲ್ಲಿ ಚಿತ್ರೀಕರಣ ನಡೆಯುತ್ತಿದ್ದು, ನಾಲ್ಕನೇ ಹಂತದ ಚಿತ್ರೀಕರಣ ಜನವರಿಯಲ್ಲಿ ಆರಂಭವಾಗಲಿದೆ. ಫೆಬ್ರುವರಿ–ಮಾರ್ಚ್‌ನಲ್ಲಿ ಶೂಟಿಂಗ್ ಪೂರ್ಣಗೊಳಿಸಲು ಹೇಮಂತ್ ಯೋಜನೆ ಹಾಕಿಕೊಂಡಿದ್ದಾರೆ. ಪ್ರಿಯಾಂಕಾ ಅವರ ಲುಕ್‌ನ ಎರಡು ಪೋಸ್ಟರ್‌ಗಳನ್ನು ಚಿತ್ರತಂಡ ಬಿಡುಗಡೆ ಮಾಡಿದ್ದು, ಒಂದರಲ್ಲಿ ಪ್ರಿಯಾಂಕಾ ಅವರ ಕಿವಿಯಲ್ಲಿರುವ ಇಯರ್‌ಬಡ್ ಸಿನಿಮಾದೊಳಗೆ ಟೈಂಟ್ರಾವೆಲ್ ಕಥೆಯ ಸುಳಿವು ನೀಡಿದೆ. ಈ ಮೂಲಕ ಅವರ ಪಾತ್ರದ ಬಗ್ಗೆ ಕುತೂಹಲ ಹುಟ್ಟಿಸಿದೆ ಚಿತ್ರತಂಡ.

ಶಿವರಾಜ್‌ಕುಮಾರ್, ಧನಂಜಯ ಮುಖ್ಯಭೂಮಿಕೆಯಲ್ಲಿರುವ ಈ ಸಿನಿಮಾ 70ರ ದಶಕದ ಶೈಲಿಯಲ್ಲಿರಲಿದೆ. ಪವನ್ ಕಲ್ಯಾಣ್, ನಾನಿ, ಧನುಷ್ ಹಾಗೂ ಶಿವಕಾರ್ತಿಕೇಯನ್ ಜೊತೆ ಅಭಿನಯಿಸಿರುವ ಪ್ರಿಯಾಂಕಾ, ತೆಲುಗಿನ ‘ಗ್ಯಾಂಗ್‌ಲೀಡರ್’, ‘ಸರಿಪೋದ ಶನಿವಾರಂ’, ತಮಿಳಿನ ‘ಡಾಕ್ಟರ್’, ‘ಕ್ಯಾಪ್ಟನ್ ಮಿಲ್ಲರ್’ ಮುಂತಾದ ಸಿನಿಮಾಗಳಲ್ಲಿ ನಟಿಸಿದ್ದಾರೆ. ಸಿನಿಮಾವನ್ನು ಡಾ. ವೈಶಾಖ್ ಜೆ ಗೌಡ ಅವರ ವೈಶಾಖ್ ಜೆ ಫಿಲ್ಮ್ಸ್ ಬ್ಯಾನರ್ ಅಡಿಯಲ್ಲಿ ನಿರ್ಮಾಣ ಮಾಡಲಾಗುತ್ತಿದೆ. ಕನ್ನಡ ಮತ್ತು ತೆಲುಗಿನಲ್ಲಿ ಈ ಸಿನಿಮಾ ತೆರೆಕಾಣಲಿದೆ.



ಪ್ರಿಯಾಂಕಾ ಮೋಹನ್



ಅಯಾನ

ಫೆ.20ಕ್ಕೆ ‘ಆಲ್ಫಾ’ ಸಿನಿಮಾ ತೆರೆಗೆ

‘ಗೀತಾ’, ‘ಗುರುದೇವ ಹೊಯ್ಸಳ’ ಚಿತ್ರಗಳನ್ನು ನಿರ್ದೇಶಿಸಿರುವ ವಿಜಯ್ ನಿರ್ದೇಶನದ ಹೊಸ ಸಿನಿಮಾ ‘ಆಲ್ಫಾ’ ಫೆ.20ರಂದು ಬಿಡುಗಡೆಯಾಗಲಿದೆ.

‘ಮೆನ್ ಲವ್ ವೆಂಜೆನ್ಸ್’ ಎಂಬ ಅಡಿಬರಹವಿರುವ ಈ ಸಿನಿಮಾವನ್ನು ಎಲ್.ಎ.ಪ್ರೊಡಕ್ಷನ್ಸ್‌ನಡಿ ಆನಂದ್ ಕುಮಾರ್ ನಿರ್ಮಿಸಿದ್ದಾರೆ. ನಾಯಕನಾಗಿ ಹೇಮಂತ್ ಕುಮಾರ್ ನಟಿಸಿದ್ದು, ಇವರಿಗೆ ಜೋಡಿಯಾಗಿ ಅಯಾನಾ ಹಾಗೂ ಗೋಪಿಕಾ ಸುರೇಶ್ ನಟಿಸಿದ್ದಾರೆ. ಈ ಚಿತ್ರದ ಮೊದಲ ಹಾಡು ಇತ್ತೀಚೆಗೆ ಮಾಸ್ತಿಯಲ್ಲಿ ಬಿಡುಗಡೆಯಾಯಿತು. ನಾಗಾರ್ಜುನ ಶರ್ಮ ಅವರು ಬರೆದಿರುವ, ಅನೂಪ್ ಸೀಳಿನ್ ಸಂಗೀತ ಸಂಯೋಜಿಸಿರುವ ಹಾಗೂ ಅನುರಾಗ್ ಕುಲಕರ್ಣಿ ಹಾಡಿರುವ ‘ರಾವಾ ರಾವಾ’ ಹಾಡು ಇದಾಗಿದೆ.

ಸಿನಿಮಾದಲ್ಲಿ ‘ಬಿಗ್‌ಬಾಸ್’ ಖ್ಯಾತಿಯ ಕಾರ್ತಿಕ್ ಮಹೇಶ್ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಅವಿನಾಶ್, ಅಚ್ಯುತ್ ಕುಮಾರ್, ರಮೇಶ್ ಇಂದಿರಾ, ಬಾಲು ನಾಗೇಂದ್ರ, ಮಾನಸಿ ಸುಧೀರ್, ಗಿರಿರಾಜ್, ರಾಘು ಶಿವಮೊಗ್ಗ ಮುಂತಾದವರು ತಾರಾಬಳಗದಲ್ಲಿದ್ದಾರೆ. ಕಾರ್ತಿಕ್ ಎಸ್. ಛಾಯಾಚಿತ್ರಗ್ರಹಣ, ದೀಪು ಎಸ್.ಕುಮಾರ್ ಸಂಕಲನ ಚಿತ್ರಕ್ಕಿದೆ. ಮಾಸ್ತಿ ಸಂಭಾಷಣೆ, ವಿಜಯ್, ವಿನೋದ್, ಅರ್ಜುನ್ ರಾಜ್ ಹಾಗೂ ಯೋಗಾನಂದ ಸಾಹಸ ನಿರ್ದೇಶನ ಮಾಡಿದ್ದಾರೆ.

ಚೆನ್ನೈ: ವಲಸೆ ಕಾರ್ಮಿಕನ ಮೇಲೆ ಭೀಕರ ಹಲ್ಲೆ

ತಿರುತ್ತಣಿ ರೈಲು ನಿಲ್ದಾಣದಲ್ಲಿ ಘಟನೆ • ಕಾನೂನು ಸಂಘರ್ಷಕ್ಕೆ ಒಳಗಾದ ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ಚೆನ್ನೈ: ಒಡಿಶಾದ ವಲಸೆ ಕಾರ್ಮಿಕ, 20 ವರ್ಷದ ಸೂರಜ್ ಮೇಲೆ, ಕಾನೂನು ಸಂಘರ್ಷಕ್ಕೆ ಒಳಗಾಗಿರುವ ನಾಲ್ವರು ಬಾಲಕರು ತಿರುವಳ್ಳೂರು ಜಿಲ್ಲೆಯ ತಿರುತ್ತಣಿಯಲ್ಲಿ ಕುಡುಗೋಲಿನಿಂದ ಭೀಕರವಾಗಿ ಹಲ್ಲೆ ಮಾಡಿದ್ದಾರೆ.

‘ಕಾನೂನು ಸಂಘರ್ಷಕ್ಕೆ ಒಳಗಾಗಿರುವ ಈ ನಾಲ್ವರು ನಶೆಯಲ್ಲಿದ್ದರು ಎನ್ನಲಾಗಿದೆ. ಸೂರಜ್ ಮೇಲೆ ಮೂವರು ನಿರಂತರವಾಗಿ ಹಲ್ಲೆ ನಡೆಸುತ್ತಿದ್ದರೆ ಮತ್ತೊಬ್ಬ ಅದನ್ನು ಚಿತ್ರೀಕರಿಸಿದ್ದಾನೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಕಾನೂನು ಸಂಘರ್ಷಕ್ಕೆ ಒಳಗಾದ ನಾಲ್ವರು ಬಾಲಕರನ್ನು ಬಂಧಿಸಲಾಗಿದ್ದು, ಅವರನ್ನು ಚೆಂಗಲ್‌ಪಟ್ಟುವಿನಲ್ಲಿರುವ ಬಾಲಮಂದಿರಕ್ಕೆ ಕಳುಹಿಸಲಾಗಿದೆ ಎಂದು ಜಿಲ್ಲಾ ಪೊಲೀಸರು ತಿಳಿಸಿದ್ದಾರೆ.

ಸೂರಜ್ ಮೇಲೆ ಹಲ್ಲೆ ನಡೆಸುತ್ತಿದ್ದ ದೃಶ್ಯಗಳಿರುವ ವಿಡಿಯೊ ವಿವಿಧ ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಹಂಚಿಕೆಯಾಗಿದೆ.

‘ಸೂರಜ್, ಚೆನ್ನೈ–ತಿರುತ್ತಣಿ ಎಮು ರೈಲಿನ ಜನರಲ್ ಬೋಗಿಯಲ್ಲಿ ಶನಿವಾರ ಸಂಜೆ ಪ್ರಯಾಣಿಸುತ್ತಿದ್ದ. ನಶೆಯಲ್ಲಿದ್ದರು ಎನ್ನಲಾದ ಈ ನಾಲ್ವರು ಬಾಲಕರು, ಅರಕೋಣಂ ಸಮೀಪದ ತಿರುವಳಂಗಾಡು ರೈಲು ನಿಲ್ದಾಣದಲ್ಲಿ ರೈಲು ಏರಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಈ ನಾಲ್ವರು ಇನ್‌ಸ್ಟಾಗ್ರಾಮ್ ರೀಲ್‌ವೊಂದನ್ನು ಚಿತ್ರೀಕರಿಸಲು ಬಯಸಿದ್ದರು. ಇದಕ್ಕಾಗಿ ತಂದಿದ್ದ ಕುಡುಗೋಲುಗಳನ್ನು ತಮ್ಮ ಚೀಲಗಳಲ್ಲಿ ಮುಚ್ಚಿಟ್ಟಿದ್ದರು. ಇವರ ಪೈಕಿ ಒಬ್ಬಾತ ಸೂರಜ್ ಜೊತೆ ಮಾತು ಆರಂಭಿಸಿದೊಡನೆ, ಆತನ ಕುತ್ತಿಗೆ ಮೇಲೆ ಕುಡುಗೋಲು ಇಡಬಹುದೇ ಎಂದು ಕೇಳಿದ್ದಾನೆ. ಇದಕ್ಕೆ ಸೂರಜ್ ಆಕ್ಷೇಪಿಸಿದಾಗ, ಅವರ ನಡುವೆ ಮಾತಿನ ಚಕಮಕಿ ಆರಂಭವಾಗಿದೆ. ತಿರುತ್ತಣಿ ರೈಲು ನಿಲ್ದಾಣ ಬರುವವರೆಗೂ ಮಾತಿನ ಚಕಮಕಿ ನಡೆದು, ವಿಕೋಪಕ್ಕೆ ಹೋಗಿದೆ’ ಎಂದು ತಿಳಿಸಿದ್ದಾರೆ.

‘ತಿರುತ್ತಣಿ ರೈಲು ನಿಲ್ದಾಣ ಬಂದ ಬಳಿಕ, ಯಾರೂ ವಾಸ ಮಾಡದೇ ಇರುವ ರೈಲ್ವೆ ಕ್ವಾರ್ಟರ್ಸ್‌ನತ್ತ ಬಲವಂತವಾಗಿ ಸೂರಜ್‌ನನ್ನು ಕರೆದುಕೊಂಡು ಹೋಗಿ, ಆತನ ಮೇಲೆ ಹಲ್ಲೆ ಮಾಡಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಹಲ್ಲೆಯಿಂದಾಗಿ ಸೂರಜ್‌ಗೆ ಪ್ರಜ್ಞೆ ತಪ್ಪಿತ್ತು. ಎಚ್ಚರಗೊಂಡ ಬಳಿಕ ನಿರ್ಜನ ಪ್ರದೇಶದಿಂದ ಹೊರಗೆ ಬಂದು, ಘಟನೆ ವಿವರಿಸಿದ್ದಾನೆ. ಆತನಿಗೆ ತಿರುತ್ತಣಿಯ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದ ಬಳಿಕ, ತಿರುವಳ್ಳೂರಿನ ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆ ನೀಡಲಾಗುತ್ತಿದೆ. ಆತ ಚೇತರಿಸಿಕೊಳ್ಳುತ್ತಿದ್ದಾನೆ’ ಎಂದು ತಿಳಿಸಿದ್ದಾರೆ.

ಟೀಕೆ: ಈ ಘಟನೆ ರಾಜ್ಯದಲ್ಲಿ ಕಾನೂನು–ಸುವ್ಯವಸ್ಥೆ ಸಂಪೂರ್ಣವಾಗಿ ಕುಸಿದಿರುವುದನ್ನು ತೋರಿಸುತ್ತದೆ ಎಂದು ವಿರೋಧ ಪಕ್ಷದ ನಾಯಕ ಇ.ಕೆ.ಪಳನಿಸ್ವಾಮಿ ಆರೋಪಿಸಿದ್ದಾರೆ.

‘ಈಶಾನ್ಯ ಜನರ ಮೇಲಿನ ದ್ವೇಷ ಕೊನೆಗೊಳಿಸಿ’

ಡೆಹ್ರಾಡೂನ್, ಉತ್ತರಾಖಂಡ (ಪಿಟಿಐ): ನಗರದಲ್ಲಿ ಜನಾಂಗೀಯ ದಾಳಿಯಿಂದ ಹತ್ಯೆಗೊಳಗಾದ ತ್ರಿಪುರಾದ ವಿದ್ಯಾರ್ಥಿ ಅಂಜೆಲ್ ಛಕ್ಮಾ (24) ತಂದೆಯ ಜೊತೆಗೆ ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ಸೋಮವಾರ ಮಾತುಕತೆ ನಡೆಸಿ, ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸುವ ಭರವಸೆ ನೀಡಿದರು.

ಅಂಜೆಲ್ ತಂದೆ ತರುಣ್ ಪ್ರಸಾದ್ ಛಕ್ಮಾ ಜೊತೆಗೆ ಮುಖ್ಯಮಂತ್ರಿ ಅವರು ದೂರವಾಣಿ ಸಂಭಾಷಣೆ ನಡೆಸಿದರು.

‘ಘಟನೆಗೆ ಬೇಸರ ವ್ಯಕ್ತಪಡಿಸಿದ್ದು, ಸಂತ್ರಸ್ತ ಕುಟುಂಬದ ಜೊತೆಗೆ ರಾಜ್ಯ ಸರ್ಕಾರವು ನಿಲ್ಲಲಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಐದು ಮಂದಿಯನ್ನು ಬಂಧಿಸಿದ್ದು, ಮತ್ತೊಬ್ಬ ಆರೋಪಿ ನೇಪಾಳಕ್ಕೆ ಪರಾರಿಯಾಗಿದ್ದಾನೆ. ಆತನ ಬಂಧನಕ್ಕೂ ಕ್ರಮ ಕೈಗೊಳ್ಳಲಾಗಿದೆ’ ಎಂದರು.

ತರುಣ್ ಪ್ರಸಾದ್ ಅವರು ಬಿಎಸ್‌ಎಫ್ ಯೋಧರಾಗಿದ್ದು, ಮಣಿಪುರದಲ್ಲಿ ಕೆಲಸ ಮಾಡುತ್ತಿದ್ದಾರೆ.

ಸಮಗ್ರ ಪ್ರಯತ್ನ ಅಗತ್ಯ: ‘ಈಶಾನ್ಯ ರಾಜ್ಯದ ಜನರ ಮೇಲೆ ನಡೆಯುತ್ತಿರುವ ದ್ವೇಷ ಅಪರಾಧಗಳನ್ನು ಕೊನೆಗೊಳಿಸುವ ನಿಟ್ಟಿನಲ್ಲಿ ಸಮಗ್ರ ಪ್ರಯತ್ನ ಅಗತ್ಯವಿದೆ’ ಎಂದು ರಾಜಕೀಯ ಪಕ್ಷಗಳ ಮುಖಂಡರು ಆಗ್ರಹಿಸಿದ್ದಾರೆ.

‘ಈ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸಿ, ನ್ಯಾಯ ಸಿಗುವುದನ್ನು ಖಾತರಿಪಡಿಸಬೇಕು’ ಎಂದು ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಒತ್ತಾಯಿಸಿದ್ದಾರೆ.

‘ಇದು ರಾಷ್ಟ್ರೀಯ ಅವಮಾನವಾಗಿದ್ದು, ರಾಜಕೀಯ ಹಾಗೂ ಧಾರ್ಮಿಕ ಮುಖಂಡರು ಈಶಾನ್ಯ ಜನರ ಮೇಲೆ ನಡೆಯುತ್ತಿರುವ ದೌರ್ಜನ್ಯದ ಕುರಿತು ಮಾತನಾಡಬೇಕು. ಮೌನವು ಕೂಡ ತೊಡಕು’ ಎಂದು ತಿರುವನಂತಪುರ ಸಂಸದ ಶಶಿ ತರೂರ್ ಹೇಳಿದ್ದಾರೆ.

ತಲೆಮರೆಸಿಕೊಂಡಿರುವ ಮುಖ್ಯ ಆರೋಪಿ ಕುರಿತು ಮಾಹಿತಿ ನೀಡಿದವರಿಗೆ ₹10 ಲಕ್ಷ ಬಹುಮಾನ ನೀಡಲಾಗುವುದು ಎಂದು ತಿಪ್ರಾ ಮೊಥಾ ಮುಖ್ಯಸ್ಥ ಪ್ರದ್ಯೋತ್ ಕಿಶೋರ್ ಮಾಣಿಕ್ಯ ದೆಬ್ರಮಾ ಘೋಷಿಸಿದ್ದು, ಸಂತ್ರಸ್ತ ವಿದ್ಯಾರ್ಥಿ ಕುಟುಂಬ ಸದಸ್ಯರಿಗೆ ₹3 ಲಕ್ಷ ಪರಿಹಾರ ಪ್ರಕಟಿಸಿದ್ದಾರೆ.



ಹತ್ಯೆಗೀಡಾದ ಅಂಜೆಲ್ ಛಕ್ಮಾಗೆ ನ್ಯಾಯ ಒದಗಿಸಬೇಕು ಹಾಗೂ ಈಶಾನ್ಯ ರಾಜ್ಯಗಳ ಜನರ ವಿರುದ್ಧದ ತಾರತಮ್ಯ ಖಂಡಿಸಿ ತ್ರಿಪುರಾ ರಾಜಧಾನಿ ಅಗರ್ತಲಾದಲ್ಲಿ ಜನರು ಮೇಣದ ಬತ್ತಿ ಹಿಡಿದು ಸೋಮವಾರ ಪ್ರತಿಭಟಿಸಿದರು —ಪಿಟಿಐ ಚಿತ್ರ

‘ನಾವು ಸಹ ಭಾರತೀಯರು’

ಡೆಹ್ರಾಡೂನ್‌ನಲ್ಲಿ ನಡೆದ ಕ್ರೂರ ಜನಾಂಗೀಯ ದಾಳಿಯಿಂದ ಹೃದಯ ಛಿದ್ರಗೊಂಡಿದ್ದು, ಒಪ್ಪಲು ಸಾಧ್ಯವಿಲ್ಲ. ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಂಡು, ನ್ಯಾಯ ಒದಗಿಸಬೇಕು’ ಎಂದು ಅಸ್ಸಾಂ ಸಿ.ಎಂ ಹಿಮಂತಾ ಬಿಸ್ವಾ ಶರ್ಮಾ ಒತ್ತಾಯಿಸಿದ್ದಾರೆ.

‘ಈಶಾನ್ಯ ರಾಜ್ಯಗಳ ಜನರು ಕೂಡ ಭಾರತೀಯರಾಗಿದ್ದು, ಅವರು ಚೀನಾ ಪ್ರಜೆಗಳಲ್ಲ’ ಎಂದು ಅಸ್ಸಾಂ ಪ್ರದೇಶ ಕಾಂಗ್ರೆಸ್ ಘಟಕದ ಅಧ್ಯಕ್ಷ ಗೌರವ್ ಗೊಗೊಯ್ ತಿಳಿಸಿದ್ದಾರೆ.

ರೈಲಿಗೆ ಬೆಂಕಿ: ವೃದ್ಧ ಸಾವು

ಪ್ರಜಾವಾಣಿ ವಾರ್ತೆ/ ಪಿಟಿಐ

ಹೈದರಾಬಾದ್/ ವಿಶಾಖಪಟ್ಟಣ: ಟಾಟಾನಗರ– ಎರ್ನಾಕುಲಂ ಎಕ್ಸ್‌ಪ್ರೆಸ್ ರೈಲಿನ ಎರಡು ಬೋಗಿಗಳು ಆಂಧ್ರ ಪ್ರದೇಶದ ಅನಕಪಲ್ಲಿ ಜಿಲ್ಲೆಯ ಯಲಮಂಚಿಲಿಯಲ್ಲಿ ಅಗ್ನಿಗೆ ಆಹುತಿಯಾಗಿದ್ದು, ವೃದ್ಧರೊಬ್ಬರು ಮೃತಪಟ್ಟಿದ್ದಾರೆ.

ಈ ಎರಡು ಬೋಗಿಗಳಲ್ಲಿದ್ದ 143 ಪ್ರಯಾಣಿಕರು ಅಪಾಯದಿಂದ ಪಾರಾಗಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.

ಭಾನುವಾರ ತಡರಾತ್ರಿ 12.45ರ ವೇಳೆಗೆ ಈ ಅವಘಡ ಸಂಭವಿಸಿದ್ದು, ಬಿ1 ಬೋಗಿಯಲ್ಲಿ ಪ್ರಯಾಣಿಸುತ್ತಿದ್ದ ಚಂದ್ರಶೇಖರ ಸುಂದರ್ (70) ಮೃತಪಟ್ಟಿದ್ದಾರೆ.

ಮೊದಲಿಗೆ ಬಿ1 ಬೋಗಿಯಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಇದನ್ನು ಗಮನಿಸಿದ ಲೋಕೊ ಪೈಲಟ್ ರೈಲು ನಿಲ್ಲಿಸಿದ್ದಾರೆ. ಅಷ್ಟರಲ್ಲೇ ಎಂ2 ಬೋಗಿಗೂ ಬೆಂಕಿಯ ಜ್ವಾಲೆ ವ್ಯಾಪಿಸಿದೆ. ರೈಲು ನಿಲ್ಲಿಸಿದ ಬಳಿಕ ಸಿಬ್ಬಂದಿಯು ಈ ಎರಡೂ ಬೋಗಿಗಳನ್ನು ಪ್ರತ್ಯೇಕಿಸಿ ಭಾರಿ ಅನಾಹುತ ತಪ್ಪಿಸಿದ್ದಾರೆ.

ಯಲಮಂಚಿಲಿ ನಿಲ್ದಾಣದಲ್ಲಿ ರೈಲು ನಿಲ್ಲುತ್ತಿದ್ದಂತೆ, ಬೆಂಕಿ ಹೊತ್ತಿಕೊಂಡಿದ್ದ ಎರಡೂ ಬೋಗಿಗಳಲ್ಲಿದ್ದ ಪ್ರಯಾಣಿಕರು ಪ್ರಾಣ ಭೀತಿಯಿಂದ ಹೊರ ಓಡಿಬಂದಿದ್ದಾರೆ. ವಯೋವೃದ್ಧರಾಗಿದ್ದರಿಂದ ಚಂದ್ರಶೇಖರ ಅವರಿಗೆ ಬೋಗಿಯಿಂದ ಬೇಗ ಕೆಳಗಿಳಿಯಲಾಗದೆ ಬೆಂಕಿಯ ಕೆನ್ನಾಲಿಗೆಗೆ ಸಿಲುಕಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಗ್ನಿಶಾಮಕದಳದ ಸಿಬ್ಬಂದಿಯು ಎರಡು ತಾಸಿಗೂ ಹೆಚ್ಚಿನ ಅವಧಿ ಹರಸಾಹಸ ನಡೆಸಿ ಬೋಗಿಗಳಿಗೆ ಹೊತ್ತಿಕೊಂಡಿದ್ದ ಬೆಂಕಿಯನ್ನು ನಂದಿಸಿತು.

ಬೋಗಿಯೊಳಗೆ ಹಾಸುವ ಬಟ್ಟೆಗಳನ್ನು ಸಂಗ್ರಹಿಸಿಟ್ಟಿದ್ದ ಪ್ರದೇಶದಲ್ಲಿ ಬೆಂಕಿ ಕಾಣಿಸಿಕೊಂಡಿದೆ ಎಂಬುದು ಪ್ರಾಥಮಿಕ ತನಿಖೆಯಲ್ಲಿ ಗೊತ್ತಾಗಿದೆ.

ಮೃತರ ಕುಟುಂಬ ವರ್ಗಕ್ಕೆ ಪರಿಹಾರ ನೀಡಲಾಗುವುದು. ಹಾನಿಗೀಡಾದ 2 ಬೋಗಿಗಳನ್ನು ಬೇರ್ಪಡಿಸಿದ ನಂತರ ರೈಲು ತನ್ನ ಸಂಚಾರ ಮುಂದುವರಿಸಿದೆ. ಅಗ್ನಿ ಅವಘಡದ ಕುರಿತು ತನಿಖೆ ನಡೆದಿದೆ ಎಂದು ದಕ್ಷಿಣ ಮಧ್ಯ ರೈಲ್ವೆಯ ವಿಜಯವಾಡ ವಿಭಾಗ ತಿಳಿಸಿದೆ.

ಎನ್‌ಸಿಪಿ ಬಣಗಳ ಮಧ್ಯೆ ಮೈತ್ರಿ

ಪುಣೆ (ಪಿಟಿಐ): ಪುಣೆ ನಗರ ಪಾಲಿಕೆ ಚುನಾವಣೆಗಾಗಿ ಶರದ್ ಪವಾರ್ ನೇತೃತ್ವದ ಎನ್‌ಸಿಪಿ ಮತ್ತು ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿ ಸೋಮವಾರ ಮೈತ್ರಿ ಮಾಡಿಕೊಂಡಿವೆ.

ನಾಮಪತ್ರ ಸಲ್ಲಿಕೆ ಅವಧಿ ಮುಕ್ತಾಯಗೊಳ್ಳಲು ಒಂದೇ ಒಂದು ದಿನ ಬಾಕಿ ಇರುವಾಗ ಪ್ರತಿಸ್ಪರ್ಧಿಗಳಾಗಿದ್ದ ಎರಡು ಬಣಗಳು ಒಗ್ಗಟ್ಟು ಪ್ರದರ್ಶಿಸಿವೆ. ಉಭಯ ಪಕ್ಷಗಳ ನಾಯಕರು ಸಭೆ ನಡೆಸಿದ ಬಳಿಕ ಈ ಕುರಿತು ಘೋಷಣೆ ಮಾಡಿದರು.

‘ಎನ್‌ಸಿಪಿ (ಎಸ್‌ಪಿ) ಬಣದ ಪುಣೆ ಘಟಕದ ಅಧ್ಯಕ್ಷ ಪ್ರಶಾಂತ್ ಜಗತಾಪ್ ಅವರು ಪಕ್ಷದಿಂದ ನಿರ್ಗಮನವಾದ ಬಳಿಕ ಪಕ್ಷದ ಕಾರ್ಯಕರ್ತರು ಕಾರ್ಯಕಾರಿ ಅಧ್ಯಕ್ಷೆ ಸುಪ್ರಿಯಾ ಸುಳೆ ಅವರನ್ನು ಭೇಟಿ ಮಾಡಿ, ಎನ್‌ಸಿಪಿ (ಎಪಿ) ಜೊತೆ ಕೈಜೋಡಿಸುವ ಅಗತ್ಯವನ್ನು ಮನವರಿಕೆ ಮಾಡಿದ್ದರು. ಸ್ಥಳೀಯ ಕಾರ್ಯಕರ್ತರ ಕೋರಿಕೆಯನ್ನು ಪರಿಗಣಿಸಿ ಈ ಮೈತ್ರಿ ನಿರ್ಧಾರ ಕೈಗೊಳ್ಳಲಾಗಿದೆ’ ಎಂದು ಎನ್‌ಸಿಪಿ (ಎಸ್‌ಪಿ) ಶಾಸಕ ರೋಹಿತ್ ಪವಾರ್ ತಿಳಿಸಿದರು.

ಉಭಯ ಪಕ್ಷಗಳು ಪುಣೆ ಮತ್ತು ಪಿಂಪ್ರಿ–ಚಿಂಚವಾಡ ನಗರ ಪಾಲಿಕೆ ಚುನಾವಣೆಯಲ್ಲಿ ಒಟ್ಟಿಗೆ ಸ್ಪರ್ಧಿಸಲಿವೆ ಎಂದು ಹೇಳಿದರು. ‘ಮೈತ್ರಿ ಮಾತುಕತೆಯಲ್ಲಿ ಶರದ್ ಪವಾರ್ ಅವರು ಭಾಗಿಯಾಗಿಲ್ಲ. ಸೀಟು ಹಂಚಿಕೆ ಕುರಿತು ಇನ್ನಷ್ಟೇ ನಿರ್ಧಾರ ಕೈಗೊಳ್ಳಬೇಕಿದೆ’ ಎಂದರು.

ಪಿಂಪ್ರಿ – ಚಿಂಚವಾಡ ನಗರ ಪಾಲಿಕೆಗಳು ಪವಾರ್ ಕುಟುಂಬಕ್ಕೆ ರಾಜಕೀಯವಾಗಿ ನಿರ್ಣಾಯಕವಾಗಿವೆ. ಅಲ್ಲದೆ ಇವುಗಳ ವ್ಯಾಪ್ತಿಯಲ್ಲಿ ಹಲವು ಐಟಿ ಮತ್ತು ಕೈಗಾರಿಕಾ ಘಟಕಗಳಿವೆ. ಈ ಪ್ರದೇಶವು ದಶಕಗಳಿಂದ ಪವಾರ್ ಕುಟುಂಬದ ಭದ್ರಕೋಟೆಯಾಗಿ ಉಳಿದಿದೆ.

ಅತ್ಯಾಚಾರಿ ಸೆಂಗರ್ ಶಿಕ್ಷೆಗೆ ತಡೆ ಇಲ್ಲ

ಒಂದನೇ ಪುಟದಿಂದ...

‘ಈ ಪ್ರಕರಣದಲ್ಲಿ ಶಾಸಕನನ್ನು ಸಾರ್ವಜನಿಕ ಸೇವಕ ಎಂದು ಪರಿಗಣಿಸುವಂತಿಲ್ಲ. ಶಾಸನದಲ್ಲಿ ಅವಕಾಶ ಇರದ ಹೊರತು, ಶಾಸಕ ಎಂಬ ಪದವನ್ನು ಸಾರ್ವಜನಿಕ ಸೇವಕ ಎಂಬುದಾಗಿ ಅರ್ಥೈಸುವಂತಿಲ್ಲ’ ಎಂದು ಸೆಂಗರ್ ಪರ ಹಾಜರಿದ್ದ ಹಿರಿಯ ವಕೀಲರಾದ ಸಿದ್ಧಾರ್ಥ ದವೆ ಹಾಗೂ ಎನ್. ಹರಿಹರನ್ ವಾದಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಪೀಠವು, ‘ಈ ವ್ಯಾಖ್ಯಾನವನ್ನು ಒಪ್ಪಿಕೊಳ್ಳೋಣ. ಆಗ, ಇಂತಹ ಅಪರಾಧಗಳು ಘಟಿಸಿದಾಗ ಒಬ್ಬ ಕಾನ್‌ಸ್ಟೆಬಲ್ ಅಥವಾ ಪಟವಾರಿಯು ಸಾರ್ವಜನಿಕ ಸೇವಕ ಎನಿಸಿಕೊಳ್ಳುತ್ತಾನೆ. ಒಬ್ಬ ಶಾಸಕ/ಸಂಸದನನ್ನು ಸಾರ್ವಜನಿಕ ಸೇವಕ ಎಂದು ಪರಿಗಣಿಸದ ಕಾರಣ ಅವರಿಗೆ ವಿನಾಯಿತಿ ಸಿಗುತ್ತದಲ್ಲವೇ’ ಎಂದು ಪ್ರಶ್ನಿಸಿತು.

‘ಪೋಕ್ಸೊ ಕಾಯ್ದೆಯಲ್ಲಿ ಸಾರ್ವಜನಿಕ ಸೇವಕ ಎಂಬ ಬಗ್ಗೆ ವ್ಯಾಖ್ಯಾನವೇ ಇಲ್ಲ’ ಎಂದು ಮೆಹ್ತಾ ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಪೀಠ, ‘ಇದು ವಿಶಿಷ್ಟ ಪ್ರಕರಣ. ಸೆಂಗರ್ ಪರ ವಕೀಲರ ವಾದದಲ್ಲಿಯೂ ಹುರುಳಿದೆ. ಸಮಗ್ರ ಪರಿಶೀಲನೆ ಅಗತ್ಯ ಇದೆ’ ಎಂದಿತ್ತು.

ಪ್ರಕರಣ: ಸೆಂಗರ್ 2017ರಲ್ಲಿ ಬಾಲಕಿಯೊಬ್ಬಳನ್ನು ಅಪಹರಿಸಿ, ಅತ್ಯಾಚಾರ ಎಸಗಿದ್ದ. ಈ ಪ್ರಕರಣದಲ್ಲಿ ಸೆಂಗರ್ 7 ವರ್ಷ 5 ತಿಂಗಳು ಜೈಲುವಾಸವನ್ನು ಈಗಾಗಲೇ ಅನುಭವಿಸಿದ್ದಾನೆ ಎಂಬ ಕಾರಣ ನೀಡಿ, ನ್ಯಾಯಮೂರ್ತಿಗಳಾದ ಸುಬ್ರಮಣಿಯಂ ಪ್ರಸಾದ್ ಹಾಗೂ ಹರೀಶ್ ವೈದ್ಯನಾಥನ್ ಶಂಕರ್ ಅವರು ಇದ್ದ ದೆಹಲಿ ಹೈಕೋರ್ಟ್‌ನ ವಿಭಾಗೀಯ ಪೀಠವು, ಸೆಂಗರ್‌ಗೆ ವಿಧಿಸಿದ್ದ ಜೈಲು ಶಿಕ್ಷೆಯನ್ನು ಅಮಾನತುಗೊಳಿಸಿ ಆದೇಶಿಸಿತ್ತು.

ಸೆಂಗರ್ ಪುತ್ರಿಯರಿಂದ ಭಾವನಾತ್ಮಕ ಪೋಸ್ಟ್

ಉನ್ನಾವೊ/ನವದೆಹಲಿ (ಪಿಟಿಐ): ಕುಲದೀಪ್ ಸಿಂಗ್ ಸೆಂಗರ್ ಅವರಿಗೆ ವಿಧಿಸಿದ್ದ ಶಿಕ್ಷೆ ಅಮಾನತುಗೊಳಿಸಿ ದೆಹಲಿ ಹೈಕೋರ್ಟ್ ಹೊರಡಿಸಿರುವ ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆ ನೀಡಿದ ಬೆನ್ನಲ್ಲೇ, ಸೆಂಗರ್ ಪುತ್ರಿಯರು ಸಾಮಾಜಿಕ ಮಾಧ್ಯಮ ‘ಎಕ್ಸ್’ನಲ್ಲಿ ಭಾವನಾತ್ಮಕ ಪೋಸ್ಟ್ ಮಾಡಿದ್ದಾರೆ.

‘ನಮ್ಮ ಕುಟುಂಬ ನ್ಯಾಯಕ್ಕಾಗಿ ಕಳೆದ ಎಂಟು ವರ್ಷಗಳಿಂದ ಮೌನವಾಗಿ ಕಾಯುತ್ತಿದೆ. ನ್ಯಾಯಾಲಯಗಳು ಹಾಗೂ ಕಾನೂನು ಪ್ರಕ್ರಿಯೆಯಲ್ಲಿ ಅಚಲ ನಂಬಿಕೆ ಹೊಂದಿದೆ’ ಎಂದು ಕಿರಿಯ ಪುತ್ರಿ ಇಶಿತಾ ಸೆಂಗರ್ ಪೋಸ್ಟ್ ಮಾಡಿದ್ದಾರೆ.

‘ಬಿಜೆಪಿ ಶಾಸಕನ ಮಗಳು ಎಂದಷ್ಟೆ ನನ್ನನ್ನು ಗುರುತಿಸಲಾಗುತ್ತಿದೆ. ಸಾಮಾಜಿಕ ಮಾಧ್ಯಮಗಳ ಮೂಲಕ ನಾನು ನಿರಂತರವಾಗಿ ದ್ವೇಷ, ನಿಂದನೆ, ಬೆದರಿಕೆಗಳನ್ನು ಎದುರಿಸುತ್ತಿದ್ದೇನೆ’ ಎಂದು ಅಲವತ್ತು ಕೊಂಡಿದ್ದಾರೆ. ‘ನನ್ನ ಕುಟುಂಬ ಯಾವುದೇ ವಿನಾಯಿತಿ ಅಥವಾ ಅನುಕಂಪ ಕೇಳುತ್ತಿಲ್ಲ. ಯಾವುದೇ ಒತ್ತಡ, ಭಯದಿಂದ ಮುಕ್ತವಾಗಿ ನ್ಯಾಯಾಂಗ ಕಾರ್ಯ ನಿರ್ವಹಿಸಬೇಕು. ಸಾಕ್ಷ್ಯಗಳನ್ನು ನಿಷ್ಪಕ್ಷಪಾತವಾಗಿ ಪರಿಶೀಲಿಸಬೇಕು. ನಾವೂ ಮನುಷ್ಯರೇ ಎಂಬುದನ್ನು ಪರಿಗಣಿಸಿ, ನ್ಯಾಯ ನೀಡಿ ಎಂದು ಬೇಡುತ್ತಿದ್ದೇನೆ’ ಎಂದೂ ಇಶಿತಾ ಹೇಳಿದ್ದಾರೆ.

‘ನಾವು ಹೋರಾಡುತ್ತೇವೆ. ಸೋಲು ಒಪ್ಪಿಕೊಳ್ಳುವ ಮಾತೇ ಇಲ್ಲ’ ಎಂದು ಹಿರಿಯ ಪುತ್ರಿ ಐಶ್ವರ್ಯಾ ಸೆಂಗರ್, ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಕಾಂಗ್ರೆಸ್‌ನಿಂದ ವಿಡಿಯೊ ಹಂಚಿಕೆ: ಸೆಂಗರ್ ಪರ ಪ್ರದರ್ಶನ ನಡೆಸಲಾಗಿದೆ ಎನ್ನಲಾದ ವಿಡಿಯೊವೊಂದನ್ನು ಕಾಂಗ್ರೆಸ್‌ನ ಉತ್ತರ ಪ್ರದೇಶ ಘಟಕ ‘ಎಕ್ಸ್’ನಲ್ಲಿ ಹಂಚಿಕೊಂಡಿದ್ದು, ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದೆ.

> ಇದು ಒಬ್ಬ ಸಂತ್ರಸ್ತೆಯ ಹೋರಾಟವಷ್ಟೇ ಅಲ್ಲ. ಎಲ್ಲ ಬಾಲಕಿಯರು ನಡೆಸುತ್ತಿರುವ ಹೋರಾಟವಾಗಿದೆ. ಇದು ವಿಶಿಷ್ಟ ಪ್ರಕರಣ ಎಂದು ಸ್ವತಃ ಸುಪ್ರೀಂ ಹೇಳಿದೆ
> **ಯೋಗಿತಾ ಭಯಾನಾ,** ಅತ್ಯಾಚಾರ ವಿರೋಧಿ ಹೋರಾಟಗಾರ್ತಿ

> ಅವನು (ಸೆಂಗರ್) ರಾಕ್ಷಸ. ಆತ ಮೊದಲು ನನ್ನ ಸಹೋದರಿ ಮೇಲೆ ಅತ್ಯಾಚಾರ ಎಸಗಿದ, ನಂತರ ಇಡೀ ಕುಟುಂಬವನ್ನೇ ನಾಶ ಮಾಡಿದ. ಆತನಿಗೆ ಯಾವತ್ತೂ ಜಾಮೀನು ಕೊಡಬಾರದು
> **ಸಂತ್ರಸ್ತೆಯ ಸಹೋದರಿ**

> ಸುಪ್ರೀಂ ಕೋರ್ಟ್ ಆದೇಶದಿಂದ ಅತ್ಯಾಚಾರ ಸಂತ್ರಸ್ತೆ ಹಾಗೂ ಆಕೆಯ ಬೆಂಬಲಿಗರಿಗೆ ಜಯ ಸಿಕ್ಕಂತಾಗಿದೆ. ಇದು ಅಂತ್ಯವಲ್ಲ. ನಮ್ಮ ಹೋರಾಟ ಮುಂದುವರಿಯುವುದು
> **ಅಲ್ಕಾ ಲಾಂಬಾ,** ಕಾಂಗ್ರೆಸ್‌ನ ಮಹಿಳಾ ಘಟಕದ ರಾಷ್ಟ್ರೀಯ ಅಧ್ಯಕ್ಷೆ

ದ್ವೇಷಪೂರಿತ ಭಯಾನಕ ಕೃತ್ಯ: ರಾಹುಲ್ ಗಾಂಧಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಡೆಹ್ರಾಡೂನ್‌ನಲ್ಲಿ ತ್ರಿಪುರಾದ ವಿದ್ಯಾರ್ಥಿಯೊಬ್ಬರನ್ನು ಹತ್ಯೆ ಮಾಡಿರುವುದು ‘ದ್ವೇಷಪೂರಿತವಾದ ಭಯಾನಕ ಕೃತ್ಯ’ ಎಂದು ಲೋಕಸಭೆಯ ವಿರೋಧಪಕ್ಷದ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ

‘ಕೆಲ ಭಾರತೀಯರನ್ನು ಗುರಿಯಾಗಿಸಿಕೊಂಡಾಗ ದೂರ ಓಡುವಂಥ ಸತ್ತ ಸಮಾಜ ನಾವಾಗಬಾರದು. ನಮ್ಮ ದೇಶ ಏನಾಗಬೇಕೆಂದು ನಾವು ಬಯಸಿದ್ದೇವೋ ಅದಕ್ಕಾಗಿ ಹೋರಾಡಬೇಕು ಎಂದು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ದ್ವೇಷವು ರಾತ್ರೋರಾತ್ರಿ ಉದ್ಭವಿಸುವುದಿಲ್ಲ. ಯುವಕರ ತಲೆಯಲ್ಲಿ ವಿಷ ಬೀಜ ಮತ್ತು ಬೇಜವಾಬ್ದಾರಿಯುತ ವಿಚಾರಗಳನ್ನು ವರ್ಷಾನುಗಟ್ಟಲೆ ತುಂಬುವ ಮೂಲಕ ದ್ವೇಷವನ್ನು ಹರಡಲಾಗುತ್ತಿದೆ’ ಎಂದು ರಾಹುಲ್ ಆರೋಪಿಸಿದರು.

ದ್ವೇಷ ಕೃತ್ಯದ ಬಗ್ಗೆ ಗೃಹ ಸಚಿವ ಅಮಿತ್ ಶಾ ಮಾತನಾಡಬೇಕು ಎಂದು ಕಾಂಗ್ರೆಸ್ ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್ ಆಗ್ರಹಿಸಿದ್ದಾರೆ.

ಅಜಂತಾ ಗುಹೆ ಚಿತ್ರದಿಂದ ಸ್ಫೂರ್ತಿ ಪಡೆದು ಎಂಜಿನ್‌ರಹಿತ ನೌಕೆ ನಿರ್ಮಾಣ

ಐಎನ್‌ಎಸ್ ಕೌಂಡಿನ್ಯ ಚೊಚ್ಚಲ ಯಾನಕ್ಕೆ ಚಾಲನೆ

ನವದೆಹಲಿ (ಪಿಟಿಐ): ಸಾಂಪ್ರದಾಯಿಕವಾಗಿ ನಿರ್ಮಿಸಲಾದ ‘ಐಎನ್‌ಎಸ್‌ವಿ ಕೌಂಡಿನ್ಯ’ವು ತನ್ನ ಚೊಚ್ಚಲ ಸಮುದ್ರಯಾನವನ್ನು ಗುಜರಾತ್‌ನ ಪೋರಬಂದರ್‌ನಿಂದ ಸೋಮವಾರ ಆರಂಭಿಸಿತು. ಅಜಂತಾ ಗುಹೆಗಳಲ್ಲಿದ್ದ ಪೇಂಟಿಂಗ್‌ನಿಂದ ಸ್ಫೂರ್ತಿ ಪಡೆದು, ಐದನೇ ಶತಮಾನದಲ್ಲಿ ಬಳಸುತ್ತಿದ್ದ ಹಡಗನ್ನು ಪುನರ್ ನಿರ್ಮಿಸಲಾಗಿದೆ.

ಭಾರತದ ಮೊದಲ ನಾವಿಕರಾದ ‘ಕೌಂಡಿನ್ಯ’ ಅವರ ಹೆಸರನ್ನೇ ಈ ನೌಕೆಗೆ ಇಡಲಾಗಿದೆ. ಪುರಾತನ ಕಾಲದಲ್ಲಿ ಭಾರತದಿಂದ ಆಗ್ನೇಯ ಏಷ್ಯಾ ರಾಷ್ಟ್ರಗಳಿಗೆ ಇದೇ ಮಾದರಿಯ ಹಡಗಿನ ಮೂಲಕ ಪ್ರಯಾಣಿಸಿದ್ದ ನೆನಪಿಗಾಗಿ ಇದನ್ನು ನಿರ್ಮಿಸಲಾಗಿದ್ದು, ಸಮುದ್ರಯಾನದ ಇತಿಹಾಸದಲ್ಲಿ ಭಾರತದ ಮೈಲಿಗಲ್ಲನ್ನು ಮತ್ತೆ ನೆನಪಿಸಿದೆ.

‘ಇದರ ವಿನ್ಯಾಸ ಹಾಗೂ ನಿರ್ಮಾಣದ ವೇಳೆ ವಿಶಿಷ್ಟವಾದ ತಾಂತ್ರಿಕ ಸವಾಲುಗಳು ಎದುರಾದವು’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಐಎನ್‌ಎಸ್‌ವಿ ಕೌಂಡಿನ್ಯವು ತನ್ನ ಚೊಚ್ಚಲ ಸಮುದ್ರಯಾನದ ಭಾಗವಾಗಿ ಸೋಮವಾರ ಗುಜರಾತ್‌ನಿಂದ ಮಸ್ಕತ್‌ನತ್ತ ತೆರಳಿತು —ಪಿಟಿಐ ಚಿತ್ರ

ಕಾರವಾರದ ನೌಕಾನೆಲೆಯಲ್ಲಿ ಕೇಂದ್ರ ಸಾಂಸ್ಕೃತಿಕ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಅವರ ಸಮ್ಮುಖದಲ್ಲಿ ನಡೆದ ಕಾರ್ಯಕ್ರಮದಲ್ಲಿ ಈ ವರ್ಷ ಮೇ 21ರಂದು ಅಧಿಕೃತವಾಗಿ ಭಾರತೀಯ ಸೇನೆಗೆ ಸೇರ್ಪಡೆಗೊಳಿಸಲಾಗಿತ್ತು.

ಸೋಮವಾರ ನಡೆದ ಚೊಚ್ಚಲ ಯಾನಕ್ಕೆ ನೌಕಾಪಡೆ ಪಶ್ಚಿಮ ಕಮಾಂಡ್ ಮುಖ್ಯಸ್ಥ ವೈಸ್ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್, ಭಾರತದಲ್ಲಿ ಒಮಾನ್ ರಾಯಭಾರಿ ಇಸ್ಸಾ–ಸಲೇ–ಅಲ್ ಶಿಬಾನಿ ಅವರು ಚಾಲನೆ ನೀಡಿದರು.

18 ಮಂದಿ ನಾವಿಕರೊಂದಿಗೆ ಈ ಹಡಗು 1,400 ಕಿ.ಮೀ ಅಂತರವನ್ನು 15 ದಿನದಲ್ಲಿ ಕ್ರಮಿಸಿ ಒಮಾನ್‌ನ ಮಸ್ಕತ್‌ಗೆ ತಲುಪಲಿದೆ.

‘ಈ ಯಾನವು ಭಾರತದ ಪಶ್ಚಿಮ ಕರಾವಳಿಯಿಂದ ಒಮಾನ್‌ಗೆ ಪ್ರಾಚೀನ ಸಮುದ್ರಮಾರ್ಗವನ್ನು ಮತ್ತೆ ನೆನಪಿಸುತ್ತದೆ. ಹಿಂದೂ ಮಹಾಸಾಗರದಲ್ಲಿ ವ್ಯಾಪಾರ, ಸಾಂಸ್ಕೃತಿಕ ವಿನಿಮಯ, ನಿರಂತರ ನಾಗರಿಕ ಸಂವಹನವನ್ನು ಮತ್ತೆ ಪುನರ್ ಸ್ಥಾಪಿಸಲಿದೆ’ ಎಂದು ನೌಕಾಪಡೆಯ ವಕ್ತಾರರು ತಿಳಿಸಿದ್ದಾರೆ.

ಪುರಾತನ ತಂತ್ರಜ್ಞಾನ ಬಳಸಿಕೊಂಡು, ಈ ಹಡಗಿನ ನಿರ್ಮಾಣ ಮಾಡುವ ಸಂಬಂಧ ಕೇಂದ್ರ ಸಾಂಸ್ಕೃತಿಕ ಸಚಿವ, ಭಾರತೀಯ ನೌಕಾಪಡೆ ಹಾಗೂ ಹೋದಿ ಇನೋವೇಶನ್ಸ್ ಪ್ರೈವೆಟ್ ಲಿಮಿಟೆಡ್ ಜಂಟಿಯಾಗಿ ಒಪ್ಪಂದಕ್ಕೆ ಸಹಿ ಹಾಕಿತ್ತು. ಕೇಂದ್ರ ಸಾಂಸ್ಕೃತಿಕ ಸಚಿವಾಲಯವು ಈ ಯೋಜನೆಗೆ ಅನುದಾನ ಒದಗಿಸಿತ್ತು.

‘ಐಎನ್‌ಎಸ್‌ವಿ ಕೌಂಡಿನ್ಯದ ರಚನೆಯು ಹೋಲಿಗೆ ಆಧಾರಿತವಾಗಿದ್ದು ಅಜಂತಾ ಗುಹೆಗಳಲ್ಲಿನ ಪೇಟಿಂಗ್‌ನಿಂದ ಸ್ಫೂರ್ತಿ ಪಡೆದುಕೊಂಡು ರಚಿಸಲಾಗಿದೆ’ ಎಂದು ನೌಕಾಪಡೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವಿಶೇಷತೆ ಏನು...?

ಕೇರಳ ಕಾಡಿನ ಮರದ ಹಲಗೆಗಳು, ತೆಂಗಿನ ನಾರಿನ ಹಗ್ಗಗಳನ್ನು ಬಳಸಿ ತಯಾರಾದ ನೌಕೆ ನೋಡಲು ಅತ್ಯಾಕರ್ಷಕವಿದೆ. ಅದಕ್ಕಿಂತಲೂ ಕದಂಬರ ರಾಜಲಾಂಛನ ‘ಗಂಡಭೇರುಂಡ ಪಕ್ಷಿ’ಯ ಚಿತ್ರವನ್ನೊಳಗೊಂಡ ನೌಕೆಯ ಹಾಯಿ, ನೌಕೆಯ ತುತ್ತತುದಿಯಲ್ಲಿರುವ ಸಿಂಹ ಲಾಂಛನ ಮತ್ತಷ್ಟು ಗಮನ ಸೆಳೆಯುತ್ತವೆ. ಹಡಗಿನ ನಿರ್ಮಾಣಕ್ಕೆ ಯಾವುದೇ ಲೋಹಗಳನ್ನು ಬಳಸಿಲ್ಲ.

6 ಸಾವಿರ ವರ್ಷಗಳ ಹಿಂದೆ ನೌಕೆಯೊಂದನ್ನು ಹೇಗೆ ಸಿದ್ಧಪಡಿಸುತ್ತಿದ್ದರೋ ಅದೇ ಮಾದರಿಯಲ್ಲೇ ನೌಕೆ ಸಿದ್ಧಗೊಂಡಿದೆ. ಆಧುನಿಕ ತಂತ್ರಜ್ಞಾನ ನೌಕೆಗೆ ಸ್ಪರ್ಶಿಸಿಲ್ಲ. 19.6 ಮೀಟರ್ ಉದ್ದ 6.5 ಮೀಟರ್ ಅಗಲವನ್ನು ಹೊಂದಿದೆ.

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ನಮ್ಮ ಸಾಧನೆ ಒಂದು ಬಿತ್ತನೆಯ ಬೀಜವಾದರೆ, ಅದರ ಪ್ರತಿಫಲವಾಗಿರುವ ಸಿದ್ಧಿಯು ಒಂದು ಮರವಾಗಿರುತ್ತದೆ.
–ಮಹಾತ್ಮ ಗಾಂಧೀಜಿ

ಸಂಪಾದಕೀಯ

ಯಶಸ್ಸಿನ ಹಾದಿಯಲ್ಲಿ ಇಸ್ರೊ ವಿಶ್ವಾಸಾರ್ಹ ಬಾಹ್ಯಾಕಾಶ ಶಕ್ತಿ

ಅತ್ಯಂತ ಭಾರವಾದ ಉಪಗ್ರಹವನ್ನು ನಿಗದಿತ ಕಕ್ಷೆಗೆ ಸೇರಿಸುವ ಮೂಲಕ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಇನ್ನೊಂದು ದಾಖಲೆ ನಿರ್ಮಿಸಿದೆ. ಭಾರತದಿಂದ ಉಡಾವಣೆ ಆಗಿರುವ ಉಪಗ್ರಹಗಳ ಪೈಕಿ ಅತ್ಯಂತ ಭಾರದ ಈ ಉಪಗ್ರಹವನ್ನು ಎಲ್‌ವಿಎಂ3 ರಾಕೆಟ್ ಮೂಲಕ ಕಕ್ಷೆಗೆ ಸೇರಿಸಲಾಗಿದೆ. ಉಪಗ್ರಹವು ನಿರೀಕ್ಷೆಗೆ ಅನುಗುಣವಾಗಿ ಕೆಲಸ ಮಾಡುತ್ತಿದೆ. ಇದು ಸರಿಸುಮಾರು 6,100 ಕೆ.ಜಿ. ತೂಕದ, ಅಮೆರಿಕದ ಕಂಪನಿಯೊಂದರ ಉಪಗ್ರಹ. ಈ ಉಪಗ್ರಹದ ಯಶಸ್ವಿ ಉಡಾವಣೆಯೊಂದಿಗೆ, ಅತ್ಯಂತ ಸಂಕೀರ್ಣವಾದ ವೈಜ್ಞಾನಿಕ, ಎಂಜಿನಿಯರಿಂಗ್ ಕಾರ್ಯಗಳನ್ನು ತಾನು ಬಹಳ ಕಡಿಮೆ ಖರ್ಚಿನಲ್ಲಿ ನಿರ್ವಹಿಸಬಲ್ಲೆ ಎಂಬುದನ್ನು ಇಸ್ರೊ ಇತರ ದೇಶಗಳಿಗೆ ಸಾರಿ ಹೇಳಿದಂತಾಗಿದೆ. ಹೊಸದಾದ ಈ ರಾಕೆಟ್ ಬಳಸಿ ಇಸ್ರೊ ವಾಣಿಜ್ಯ ಉದ್ದೇಶದ ಉಪಗ್ರಹವೊಂದನ್ನು ನಭಕ್ಕೆ ಹಾರಿಸಿರುವುದು ಇದು ಮೂರನೆಯ ಬಾರಿ. ಬಾಹ್ಯಾಕಾಶ ವಿಜ್ಞಾನ ಕ್ಷೇತ್ರದಲ್ಲಿ ಭಾರತವು ಈಗ ಪ್ರಬಲ ಶಕ್ತಿಯಾಗಿದೆ, ಬಾಹ್ಯಾಕಾಶದ ಬಗ್ಗೆ ಅತ್ಯಂತ ವಿಸ್ತೃತವಾದ ಸಂಶೋಧನೆಗಳನ್ನು ಕೈಗೊಳ್ಳಲು ಹಾಗೂ ಮನುಷ್ಯ ಸಹಿತ ಬಾಹ್ಯಾಕಾಶ ಪಯಣಗಳಿಗೆ ಅಗತ್ಯವಿರುವ ಅತ್ಯಂತ ಭಾರದ ಉಪಗ್ರಹಗಳನ್ನು ಕೂಡ ನಿಖರವಾಗಿ ಕಕ್ಷೆಗೆ ಸೇರಿಸುವ ಪರಿಣತಿಯನ್ನು ಅದು ಸಾಧಿಸಿದೆ ಎಂಬುದನ್ನು ಈ ಉಡ್ಡಯನವು ಸಾಬೀತು ಮಾಡಿದಂತಿದೆ. ಇಸ್ರೊ ಇದುವರೆಗೆ 34 ದೇಶಗಳಿಗೆ ಸೇರಿದ ಒಟ್ಟು 434 ಉಪಗ್ರಹಗಳನ್ನು ಕಕ್ಷೆಗೆ ಸೇರಿಸಿದೆ. ಈ ಉಡ್ಡಯನಗಳ ಮೂಲಕ ಇಸ್ರೊ ತನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುತ್ತ ಬಂದಿದೆ, ಈ ಮೂಲಕ ಸಂಸ್ಥೆಯು ಬಹಳ ವಿಶ್ವಾಸಾರ್ಹವಾದ ಬಾಹ್ಯಾಕಾಶ ಶಕ್ತಿಯಾಗಿ ಬೆಳೆದುನಿಂತಿದೆ.



ಅತ್ಯಂತ ಭಾರದ ಉಪಗ್ರಹ ಉಡಾವಣೆಯ ಮೂಲಕ ಇಸ್ರೊ ತನ್ನ ಸಾಧನೆಯ ಹಾದಿಯಲ್ಲಿ ಹೊಸ ಮೈಲಿಗಲ್ಲು ನೆಟ್ಟಿದೆ. ಇದು ಅದರ ಮುಂದಿನ ಹೆಜ್ಜೆಗಳನ್ನು ವಿಶ್ವ ಕುತೂಹಲದಿಂದ ನೋಡಲು ಕಾರಣವಾಗಿದೆ.

ಇಸ್ರೊ ಈ ವರ್ಷದಲ್ಲಿ ಹಲವು ಮಹತ್ವದ ಸಾಧನೆ, ಸುಧಾರಣೆಗಳನ್ನು ಕಂಡಿದೆ. ಎರಡು ಉಪಗ್ರಹಗಳನ್ನು ಕಕ್ಷೆಯಲ್ಲಿಯೇ ಜೋಡಿಸುವ ಹಾಗೂ ಜೋಡಣೆ ಆಗಿರುವ ಉಪಗ್ರಹಗಳನ್ನು ಕಕ್ಷೆಯಲ್ಲಿಯೇ ಬೇರ್ಪಡಿಸುವ 'ಸ್ಪೇಡೆಕ್ಸ್' ಯೋಜನೆಯನ್ನು ಯಶಸ್ವಿಯಾಗಿ ಕೈಗೊಂಡಿತು. ಈ ಸಾಮರ್ಥ್ಯವನ್ನು ಸಿದ್ಧಿಸಿಕೊಂಡಿದ್ದು ಇಸ್ರೊಗೆ ಮುಂದಿನ ದಿನಗಳಲ್ಲಿ ಚಂದ್ರನ ಮೇಲೆ ಇಳಿಯುವುದು ಹಾಗೂ ತನ್ನದೇ ಆದ ಬಾಹ್ಯಾಕಾಶ ನಿಲ್ದಾಣವನ್ನು ಕಟ್ಟಿಕೊಳ್ಳುವುದು ಸೇರಿದಂತೆ ಇತರ ಹಲವು ಯೋಜನೆಗಳ ಅನುಷ್ಠಾನದಲ್ಲಿ ನೆರವಿಗೆ ಬರಲಿದೆ. ಜುಲೈನಲ್ಲಿ ಅಮೆರಿಕದ ಜೊತೆಗೂಡಿ ಕೈಗೊಂಡ ನಿಸಾರ್ ಯೋಜನೆಯಲ್ಲಿಯೂ ಇಸ್ರೊ ಯಶಸ್ಸು ಸಾಧಿಸಿತು. ಇದು ಬಾಹ್ಯಾಕಾಶದಿಂದ ಭೂಮಿಯ ಚಿತ್ರಗಳನ್ನು ಅತ್ಯಂತ ಸ್ಪಷ್ಟವಾಗಿ ಸೆರೆಹಿಡಿಯಿತು. ಈ ಚಿತ್ರಗಳು ಇದುವರೆಗೆ ಬಾಹ್ಯಾಕಾಶದಿಂದ ಸೆರೆಹಿಡಿದಿರುವ ಚಿತ್ರಗಳ ಪೈಕಿ ಅತ್ಯಂತ ವಿವರವಾದವು ಎನ್ನಲಾಗಿದೆ. ನವೆಂಬರ್‌ನಲ್ಲಿ ಎಲ್‌ವಿಎಂ3-ಎಂ5 ಯೋಜನೆಯ ಮೂಲಕ 4,400 ಕೆ.ಜಿ. ತೂಕದ ಇನ್ನೊಂದು ಉಪಗ್ರಹವನ್ನು ಕಕ್ಷೆಗೆ ಸೇರಿಸಲಾಯಿತು. ಇದು ಭಾರತದಲ್ಲಿ ಉಡಾವಣೆ ಆದ ಅದುವರೆಗಿನ ಅತ್ಯಂತ ಭಾರದ ಉಪಗ್ರಹವಾಗಿತ್ತು. ಬಹಳ ಭಾರದ ಮೂರು ಉಪಗ್ರಹಗಳನ್ನು ಕಕ್ಷೆಗೆ ಯಶಸ್ವಿಯಾಗಿ ಸೇರಿಸುವ ಮೂಲಕ ಇಸ್ರೊ ಸಂಸ್ಥೆಯು ತನ್ನ ತಾಂತ್ರಿಕ ಪರಿಣತಿ, ಸಾಮರ್ಥ್ಯವನ್ನು ಮುಂದೆ ಇನ್ನಷ್ಟು ಹೆಚ್ಚಿಸಿಕೊಳ್ಳುವ ಉದ್ದೇಶದಿಂದ ಹೆಜ್ಜೆ ಇರಿಸಿದೆ.

ಎಲ್‌ವಿಎಂ3 ಯೋಜನೆ ಯಶಸ್ವಿಯಾದ ನಂತರ ಇಸ್ರೊ ಅಧ್ಯಕ್ಷ ವಿ. ನಾರಾಯಣನ್ ಅವರು, ಸಂಸ್ಥೆಯು ಮುಂದಿನ ಕೆಲವು ತಿಂಗಳ ಕಾರ್ಯಯೋಜನೆಗಳನ್ನು ಹಂಚಿಕೊಂಡಿದ್ದಾರೆ. ಮುಂದಿನ ವರ್ಷದಲ್ಲಿ ಸಂಸ್ಥೆಯು ಮಾನವ ರಹಿತ ಗಗನಯಾನ ಯೋಜನೆಗೆ ಚಾಲನೆ ನೀಡಲಿದೆ. ಇದು ದೇಶದ ಬಾಹ್ಯಾಕಾಶ ಸಂಶೋಧನಾ ಕ್ಷೇತ್ರದಲ್ಲಿ ಹೊಸದೊಂದು ಅಧ್ಯಾಯಕ್ಕೆ ಮುನ್ನುಡಿ ಬರೆಯಲಿದೆ. ಸಂಸ್ಥೆಯು ಮಾರ್ಚ್‌ನ ಒಳಗೆ ಏಳು ಉಡ್ಡಯನಗಳನ್ನು ಕೈಗೊಳ್ಳುವ ಉದ್ದೇಶ ಹೊಂದಿದೆ. ದೇಶದಲ್ಲಿ ಅಭಿವೃದ್ಧಿಪಡಿಸಿದ ಅತ್ಯಾಧುನಿಕ 30 ಮಿಲಿಯನ್ ತಂತ್ರಜ್ಞಾನವನ್ನು ಪ್ರದರ್ಶಿಸುವ ಹಾಗೂ ತನ್ನ ತಾಂತ್ರಿಕ ಸಾಮರ್ಥ್ಯವನ್ನು ಪ್ರದರ್ಶಿಸುವ ಆಲೋಚನೆಯೂ ಇಸ್ರೊಗೆ ಇದೆ. ಈಗ ಬಾಹ್ಯಾಕಾಶ ಸಂಶೋಧನಾ ಕ್ಷೇತ್ರದಲ್ಲಿ ಖಾಸಗಿ ಕಂಪನಿಗಳಿಗೂ ಅವಕಾಶಗಳನ್ನು ನೀಡಲಾಗುತ್ತಿದೆ. ಹೀಗಾಗಿ ಹಲವು ನವೋದ್ಯಮಗಳು ಕೂಡ ಜನ್ಮತಳೆದಿವೆ. ದೇಶದ ಮೊದಲ ಖಾಸಗಿ ರಾಕೆಟ್ ಉಡ್ಡಯನ ಯೋಜನೆಯಲ್ಲಿ ಕೊಡುಗೆ ಹೊಂದಿರುವ ಸ್ಕೈರೂಟ್ ಏರೋಸ್ಪೇಸ್ ಕಂಪನಿಯು ತನ್ನ ವಿಕ್ರಮ್–1 ರಾಕೆಟ್‌ನ ಮೊದಲ ಉಡ್ಡಯನವನ್ನು ಮುಂಬರುವ ತಿಂಗಳುಗಳಲ್ಲಿ ನಡೆಸುವ ಉದ್ದೇಶ ಹೊಂದಿದೆ. ಮಾನವ ಸಹಿತ ಬಾಹ್ಯಾಕಾಶ ಯಾನ ಕೈಗೊಳ್ಳಬೇಕು ಎಂಬ ಭಾರತ ಹೊಂದಿರುವ ಮಹತ್ವಾಕಾಂಕ್ಷೆಯನ್ನು ಸಾಕಾರ ಮಾಡಿಕೊಳ್ಳುವಲ್ಲಿ ಎಲ್‌ವಿಎಂ3 ಯೋಜನೆಯು ಬಹಳ ಮುಖ್ಯವಾದ ಹೆಜ್ಜೆಯಾಗಲಿದೆ ಎಂದು ನಾರಾಯಣನ್ ಹೇಳಿದ್ದಾರೆ. ಜಾಗತಿಕ ಬಾಹ್ಯಾಕಾಶ ಮಾರುಕಟ್ಟೆಯಲ್ಲಿ 2033ರ ವೇಳೆಗೆ ಶೇ 10ರಷ್ಟು ಪಾಲು ಹೊಂದುವ ಗುರಿಯನ್ನು ತಲುಪುವ ಹಾದಿಯಲ್ಲಿ ಇಸ್ರೊ ಇದೆ ಎಂಬುದು ಕೂಡ ಈ ಯಶಸ್ಸುಗಳು ಹೇಳುತ್ತಿವೆ.

ಲೋಕಪ್ರಿಯರಾಗುವ ಮಾರ್ಗ



ನಮ್ಮ ಓದು ಅಥವಾ ಶಿಕ್ಷಣ ನಮ್ಮನ್ನು ಮನುಷ್ಯರಾಗಿಸಬೇಕು, ಮೃಗೀಕೃತರಾಗಿಸ ಬಾರದು. ಹಾಗಾಗಿ, ನಾವು ಮತ್ತು ನಮ್ಮ ಮಕ್ಕಳು ಏನು ಓದಬೇಕೆಂದು ಸರಿಯಾಗಿ ನಿಶ್ಚಯಿಸಬೇಕು. ಸ್ವಲ್ಪ ಯಾಮಾರಿದರೂ ಲೋಕಕಂಟಕರಾಗಿ ಬಿಡುವ ಅವಕಾಶಗಳೇ ಇಂದು ಹೆಚ್ಚಿವೆ. ಹಾಗಾಗಿ, ನಾವು ಆತ್ಮಶ್ರೀಗಾಗಿ ನಿರಂಕುಶಮತಿಗಳಾಗುವುದು ಮತ್ತು ಎಲ್ಲಾ ಮತ, ಪಥಗಳನ್ನೂ ತೊರೆದು ವಿಶ್ವಮಾನವರಾಗುವುದೇ ಲೋಕಪ್ರಿಯರಾಗುವ ಮಾರ್ಗ.

ರಾಜೇಂದ್ರ ಪ್ರಸಾದ್, ಕವಿ, 'ಫೇಸ್‌ಬುಕ್'ನಿಂದ

ಕಿಡಿನುಡಿ



ರಾಜ್ಯದಲ್ಲಿ ಹೆಚ್ಚುತ್ತಿರುವ ಡ್ರಗ್ಸ್ ಹಾವಳಿ ತಡೆಗಟ್ಟಲು ಗೃಹ ಇಲಾಖೆಯು ವಿಫಲವಾಗಿದೆ. 'ಉಡ್ತಾ ಬೆಂಗಳೂರು' ಮಾಡದೆ ಈ ಭ್ರಷ್ಟ ಕಾಂಗ್ರೆಸ್ ಸರ್ಕಾರಕ್ಕೆ ಸಮಾಧಾನವಾಗುವಂತೆ ಕಾಣುತ್ತಿಲ್ಲ.

ಸಿ.ಟಿ. ರವಿ, ವಿಧಾನ ಪರಿಷತ್ ಸದಸ್ಯ

25 ವರ್ಷಗಳ ಹಿಂದೆ

ಶನಿವಾರ, 30-12-2000

• ತೆರೆಸಾ: ನೂತನ ಮುಖ್ಯ ಕಾರ್ಯದರ್ಶಿ

ಬೆಂಗಳೂರು, ಡಿ. 29– ರಾಜ್ಯ ಸರ್ಕಾರದ ಪ್ರಥಮ ಮಹಿಳಾ ಮುಖ್ಯ ಕಾರ್ಯದರ್ಶಿಯಾಗಿ 1965ರ ಐಎಎಸ್ ತಂಡದ ತೆರೆಸಾ ಭಟ್ಟಾಚಾರ್ಯ ಅವರನ್ನು ಮಂತ್ರಿಮಂಡಲವು ಇಂದು ನೇಮಕ ಮಾಡಿತು.

ಡಿ. 31ರಂದು ನಿವೃತ್ತರಾಗುವ ಬಿ.ಕೆ. ಭಟ್ಟಾಚಾರ್ಯರ ಸ್ಥಾನಕ್ಕೆ ಅವರನ್ನು ನೇಮಿಸಲಾಗಿದೆ.

ತೆರೆಸಾ, ಭಟ್ಟಾಚಾರ್ಯ ಅವರ ಪತ್ನಿ. ಅವರ ಸೇವಾವಧಿಯು 2002ರ ಮಾರ್ಚ್ 31ರವರೆಗೆ ಇದೆ. ತೆರೆಸಾ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತೆಯಾಗಿದ್ದರು.

75 ವರ್ಷಗಳ ಹಿಂದೆ

ಶನಿವಾರ, 30-12-1950

• ಸಕ್ಕರೆ ಸಾಗಾಟಕ್ಕೆ ಸರ್ಕಾರದ ನಿಷೇಧ

ನವದೆಹಲಿ, ಡಿ. 29– ಮಿಲಿಟರಿ ಸಾಲದ ಪತ್ರ ಅಥವಾ ಕೇಂದ್ರ ಸರ್ಕಾರ ಇಲ್ಲವೆ ಅವರಿಂದ ಅಧಿಕೃತರಾದ-ವರು ನೀಡಿದ ವಿಶೇಷ ಅನುಮತಿ ಪತ್ರವಿಲ್ಲದೆ ಅಂತರ ಸಾಂಸ್ಥಾನಿಕವಾಗಿ ಸಕ್ಕರೆ ಸಾಗಾಟ ಕೂಡದೆಂದು ಭಾರತ ಸರ್ಕಾರವು ವಿಶೇಷ ಗೆಜೆಟ್ ಪ್ರಕಟಣೆ-ಯಲ್ಲಿ ತಿಳಿಸಿದೆ.

ಒಂದು ಸೇರಿಗೆ ಮೀರದಷ್ಟು ಸಕ್ಕರೆಯನ್ನು ನೈಜ ಪ್ರಯಾಣಿಕರ ಲಗೇಜಿನ ಭಾಗವಾಗಿ ತೆಗೆದುಕೊಂಡು ಹೋಗು ವುದಕ್ಕೆ ಈ ಆಜ್ಞೆ ಅನ್ವಯಿಸುವುದಿಲ್ಲ.

• ಕನ್ನಡ ರಾಜಕವಿಗೆ ಮುಂಬೈ ಸತ್ಕಾರ

ಮುಂಬಯಿ, ಡಿ. 29– ಮದರಾಸಿನ ಕನ್ನಡ ರಾಜಕವಿ ಹಾಗೂ 34ನೇ ಕನ್ನಡ ಸಾಹಿತ್ಯ ಪರಿಷತ್ ಸಮ್ಮೇಳ-ನಾಧ್ಯಕ್ಷರೂ ಆದ ಎಂ. ಗೋವಿಂದ ಪೈ ಹಾಗೂ ಸುಪ್ರಸಿದ್ಧ ಕನ್ನಡ ಸಾಹಿತಿ ಮಾಸ್ತಿ ವೆಂಕಟೇಶ ಅಯ್ಯಂಗಾರರಿಗೆ ಇಂದು ಸಂಜೆ ಮೈಸೂರು ಅಸೋಸಿ-ಯೇಷನ್‌ನಲ್ಲಿ ಸತ್ಕಾರ ನೀಡಲಾಯಿತು.

ಅಸೋಸಿಯೇಷನ್ ಅಧ್ಯಕ್ಷ ಜೆ.ಎನ್. ಅಯ್ಯರ್‌ರವರು ಅತಿಥಿಗಳನ್ನು ಸ್ವಾಗತಿಸಿ ಮಾತನಾಡುತ್ತ, ಕನ್ನಡ ಸಾಹಿತ್ಯಕ್ಕೆ ಅತಿಥಿಗಳಿಬ್ಬರ ಕಾಣಿಕೆ ಅಗಾಧವಾಗಿದೆ ಎಂದರು.

ಮೂಕವಾಣಿ ಆಗುವವರು ಯಾರು?

ಪಡಸಾಲೆ



ರಘುನಾಥ ಚ.ಹ.

'ನೊಂದವರ ನೋವ ನೋಯದವರೆತ್ತ ಬಲ್ಲರು?' ಎನ್ನುವ ಅಕ್ಕನ ಮಾತನ್ನು ನಿಜಗೊಳಿಸುವಂತೆ ಕನ್ನಡ ಚಿತ್ರೋದ್ಯಮದ ನಟರು ಮಾತನಾಡುತ್ತಿದ್ದಾರೆ. ಸಾಮಾಜಿಕ ವಾಸ್ತವಗಳಿಂದ ದೂರವಾದ ಅವರ ಮಾತುಗಳು ಬೌದ್ಧಿಕ ನಟನೆಯಂತಿದೆಯೇ ಹೊರತು, ಮೂಕಜನರ ಹೃದಯವೀಣೆಯ ಮಿಡಿತದಂತಿಲ್ಲ.

ನುಡಿದರೆ ಲಿಂಗ ಮೆಚ್ಚಿ ಅಹುದಹುದೆನ್ನಬೇಕು ಎನ್ನುವುದು ಬಸವಣ್ಣನ ಮಾತು. ಹಾಗೆ, ಜೊತೆಗಿರುವವರು ಅಹುದಹುದೆನ್ನುವಂತೆ ಮಾತನಾಡುವ ಕನ್ನಡ ಚಿತ್ರರಂಗದ ಮಾತುಗಾರರಲ್ಲಿ ರಾಜ್ ಬಿ. ಶೆಟ್ಟಿ ಒಬ್ಬರು. '45' ಸಿನಿಮಾದ ಪ್ರಚಾರದ ಸಂದರ್ಭದಲ್ಲಿ ಅವರ ಮಾತುಗಳನ್ನೊಳಗೊಂಡ ದೃಶ್ಯತುಣುಕೊಂದು ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚಿನ ಜನರ ಗಮನಸೆಳೆದಿದೆ. ಅವರ ಮಾತಿನ ಸಾರ ಇಷ್ಟು: ಅವಕಾಶಕ್ಕೆ ಪ್ರತಿಭೆಯೇ ಏಕೈಕ ಮಾನದಂಡ!

'ಬಡವರ ಮಕ್ಕಳು ಬೆಳೀಬೇಕು' ಎನ್ನುವುದು ಇತ್ತೀಚಿನ ವರ್ಷಗಳಲ್ಲಿ ಕನ್ನಡ ಚಿತ್ರರಂಗದಲ್ಲಿ ಚಾಲ್ತಿಯಲ್ಲಿರುವ ಮಾತುಗಳಲ್ಲೊಂದು. ನಟ ಧನಂಜಯ್ ಅವರ ಮೂಲಕ ಜನಪ್ರಿಯಗೊಂಡ ಈ ಮಾತಿನ ಬಗ್ಗೆ ರಾಜ್ ಶೆಟ್ಟಿ ಅವರಿಗೆ ಆಕ್ಷೇಪವಿದೆ. ಬಡವರ ಮಕ್ಕಳು ಬೆಳೀಬೇಕು ಎನ್ನುವುದು ಮುಖ್ಯವಲ್ಲ, ಪ್ರತಿಭೆಯುಳ್ಳವರು ಬೆಳೆಯಬೇಕು ಎನ್ನುವುದು ಅವರ ನಂಬಿಕೆ, ಪ್ರಮೇಯ. 'ಅರ್ಹತೆ' ನಮಗೆ ಮುಖ್ಯವಾಗಬೇಕು. ಪ್ರತಿಭೆಯ ಮುಂದೆ ಬೇರೆ ಯಾವುದೂ ಮುಖ್ಯವಲ್ಲ. ಉದಾಹರಣೆಗೆ, ಬಡವನ ಮಗನಿಗೆ ಪ್ರತಿಭೆ ಇರುವುದಿಲ್ಲ, ಶ್ರೀಮಂತನ ಮಗ ಅಪಾರ ಪ್ರತಿಭಾವಂತ ಎಂದುಕೊಳ್ಳಿ. ಇವರಲ್ಲಿ ನಾವು ಯಾರಿಗೆ ಅವಕಾಶ ಕೊಡಬೇಕು? ಉಚಿತವಾಗಿ ಯಾರೂ ಹತ್ತು ರೂಪಾಯಿಯನ್ನೂ ಕೊಡುವುದಿಲ್ಲ. ಹೀಗಿರುವಾಗ, ನಮಗೆ ಯಾರಾದರೂ ಯಾಕೆ ಅವಕಾಶ ಕೊಡಬೇಕು? ಎನ್ನುವುದು ಅವರ ಪ್ರಶ್ನೆ.

'ಪ್ರತಿಭೆ'ಯ ಬಗ್ಗೆ ತಮ್ಮ ಹೊಳಹುಗಳನ್ನು ಹಂಚಿಕೊಳ್ಳುವಾಗ ರಾಜ್ ಶೆಟ್ಟಿ ಅವರ ಮಾತಿನಲ್ಲಿನ ಆತ್ಮವಿಶ್ವಾಸವನ್ನೂ ಕಣ್ಣುಗಳಲ್ಲಿನ ಹೊಳಪನ್ನೂ ಗಮನಿಸಬೇಕು. ತೆರೆಯ ಮೇಲಷ್ಟೇ ಅಲ್ಲ, ತೆರೆಯಾಚೆಗೂ ಅವರದ್ದು ಸಹಜಾಭಿನಯ. 'ಅರ್ಹತೆ'ಯ ಬಗೆಗಿನ ಅವರ ಮಾತುಗಳನ್ನು ಅವರ ಜೊತೆಗಿದ್ದವರು ಅಹುದಹುದೆನ್ನುವಂತೆ ತಲೆದೂಗಿ ಅನುಮೋದಿಸಿರುವುದೇ ಶೆಟ್ಟರ ಅಭಿನಯದ ಅರ್ಹತೆಗೆ ದೊರೆತಿರುವ ಪ್ರಶಸ್ತಿ.

ಅಭಿನಯದಿಂದ ವಾಸ್ತವಕ್ಕೆ ಬರೋಣ. ಬಡವರ ಮಕ್ಕಳು ಬೆಳೀಬೇಕು ಎನ್ನುವ ಮಾತು ಕೆಲವರಿಗೆ ಪ್ರತಿಭೆ ಹಾಗೂ ಅರ್ಹತೆಯ ವಿಷಯವನ್ನು ನೆನಪಿಗೆ ತರುತ್ತದೆಂದರೆ, ಅವರು 'ಸಾಮಾಜಿಕ ನ್ಯಾಯ'ದ ಪರಿಕಲ್ಪನೆಗೆ ವಿರುದ್ಧವಾಗಿದ್ದಾರೆ ಎಂದೇ ಅರ್ಥ. ಬಡತನ ಆರ್ಥಿಕತೆಗೆ ಸಂಬಂಧಿಸಿದ್ದಷ್ಟೇ ಅಲ್ಲ, ಜಾತಿಗೆ ಸಂಬಂಧಿಸಿದ್ದೂ, ಸಾಮಾಜಿಕ ಪರಿಸರಕ್ಕೆ ಸಂಬಂಧಿಸಿದ್ದೂ ಹೌದು. ಈ ವಾಸ್ತವವನ್ನು ಗಮನಿಸುವುದು ಸಾಧ್ಯವಾಗದೆ ಹೋದಾಗ, ಸಮಾಜದ ಬಹುದೊಡ್ಡ ವರ್ಗ ನಮ್ಮ ಕಣ್ಣುಗಳಿಂದ ದೂರವಾಗಿಬಿಡುತ್ತದೆ.

ರಾಜ್ ಶೆಟ್ಟಿ ಅವರು ತಮ್ಮ ಮಾತುಗಳಿಗೆ ಉದಾಹರಣೆಯಾಗಿ ರಾಜ್‌ಕುಮಾರ್ ಅವರ ಆಸರೆ ಪಡೆದಿದ್ದಾರೆ. 'ನಟನಾಗಬೇಕು' ಎಂದು ಹಂಬಲಿಸಿದ ಶಿವರಾಜ್‌ಕುಮಾರ್ ಅವರಿಗೆ, 'ನಾನು ನಿನಗೆ ನಟನೆ ಕಲಿಸುತ್ತೇನೆ ಎಂದು ರಾಜ್‌ಕುಮಾರ್ ಹೇಳಲಿಲ್ಲ. 'ಗುರುಮುಖೇನ ನಟನೆ ಕಲಿ, ಅರ್ಹತೆ ಸಂಪಾದಿಸು ಎಂದು ಹೇಳಿದರು' ಎಂದು ರಾಜ್ ಶೆಟ್ಟಿ ಹೇಳಿದ್ದಾರೆ. ಶಿವರಾಜ್‌ಕುಮಾರ್ ಅವರು ನಾಯಕನಟನಾದುದು ತಮ್ಮ ಅರ್ಹತೆಯಿಂದಲೇ ಹೊರತು, ಜನಪ್ರಿಯ ನಟನ ಮಗ ಎನ್ನುವ ಕಾರಣಕ್ಕಲ್ಲ ಎನ್ನುವುದು ಶೆಟ್ಟರ ಮಾತಿನ ಇಂಗಿತ. ಅವರ ಮಾತು ನಿಜವೇ. ಆದರೆ, ಶೆಟ್ಟರು ಕೊಟ್ಟ ಉದಾಹರಣೆಯಲ್ಲಿ ಸಮಸ್ಯೆಯಿದೆ. ಅವರು ಉದಾಹರಣೆಯಾಗಿ ಗಮನಿಸಬೇಕಾದುದು ಶಿವರಾಜ್ ಅವರನ್ನಲ್ಲ; ರಾಜ್‌ಕುಮಾರ್ ಅವರನ್ನು. ರಾಜ್‌ಕುಮಾರ್ ಕನ್ನಡದ ಅಪೂರ್ವ ಪ್ರತಿಭೆ ಎನ್ನುವುದು ನಿಸ್ಸಂಶಯ. ಆದರೆ, ಆ ಪ್ರತಿಭೆ ಕಗ್ಗಲ್ಲಾಗಿದ್ದ ಹಾಗೂ ಬಡವರ ಮಗನಾಗಿದ್ದ ಸಂದರ್ಭದಲ್ಲಿ, ಅವರನ್ನು ಬೆಳೆಸಿದ ಸಹೃದಯರ ಔದಾರ್ಯವನ್ನು ನಾವು ಮರೆಯಬಾರದು. ರಂಗಭೂಮಿ ಹಾಗೂ ಚಿತ್ರರಂಗವನ್ನು ಪ್ರವೇಶಿಸುವ ಸಂದರ್ಭದಲ್ಲಿ ಅವರ ಪ್ರತಿಭೆಗೆ ಯಾವ ಪ್ರಮಾಣ ಪತ್ರಗಳ ಬೆಂಬಲವೂ ಇರಲಿಲ್ಲ. ಅವರ ಜೊತೆಗಿದ್ದುದು ಎರಡೇ ಸಂಗತಿ: ಒಂದು, ಮಗ ದೊಡ್ಡ ನಟನಾಗಬೇಕು ಎನ್ನುವ ಅಪ್ಪನ ಹಂಬಲ. ಎರಡನೆಯದು, ದುಡಿಮೆಯ ಬಗೆಗಿನ ಶ್ರದ್ಧೆ.

ಮುತ್ತುರಾಜ್ ಎನ್ನುವ ಬಡ ಕುಟುಂಬದ ತರುಣ ರಾಜ್‌ಕುಮಾರ್ ಆದುದರ ಹಿಂದೆ ಅನೇಕರ ಶ್ರಮವಿದೆ. ರಾಜ್‌ಕುಮಾರ್ ವೃತ್ತಿಜೀವನದ ಆರಂಭದಲ್ಲಿ ದೊರೆತ ಪಾತ್ರಗಳು ಅವರ ಅರ್ಹತೆಗೆ ಸಂದ ಅವಕಾಶಗಳಷ್ಟೇ ಆಗಿರದೆ, ಅವರ ಹಿನ್ನೆಲೆಯ ಕಾರಣದಿಂದ ದೊರೆತ ಅವಕಾಶಗಳೂ ಆಗಿದ್ದವು. ರಾಜ್‌ಕುಮಾರ್ ಚಿತ್ರರಂಗದಲ್ಲಿ ಅವಕಾಶಗಳನ್ನು ಪಡೆಯಲು ಏದುಸಿರುಪಡುತ್ತಿದ್ದ ಸಮಯದಲ್ಲಿ, ಅವರ ಓರಗೆಯ ನಟರು ತಮ್ಮ ಸಾಮಾಜಿಕ ಹಿನ್ನೆಲೆಯಲ್ಲಿ ಪಡೆಯುತ್ತಿದ್ದ ವಿಶೇಷ ಅವಕಾಶಗಳನ್ನು ಗಮನಿಸಬೇಕು. ಈ ಸೂಕ್ಷ್ಮ ಅರ್ಥವಾದರೆ, ಅವಕಾಶಗಳ ಹಿಂದಿನ ರಾಜಕಾರಣವೂ ಅರ್ಥವಾಗುತ್ತದೆ. ಬಡತನ ಹಾಗೂ ಜಾತಿಯ ಕಾರಣಕ್ಕಾಗಿ ರಾಜ್‌ಕುಮಾರ್ ಎದುರಿಸಿದ ಅವಮಾನಗಳ ಸಂಕಥನದ ಅಂದಾಜು ಮಾಡಿಕೊಳ್ಳುವುದು ಸಾಧ್ಯವಾದರೆ, 'ಬಡವರ ಮಕ್ಕಳು ಬೆಳೀಬೇಕು' ಎನ್ನುವ ಮಾತಿನ ಸತ್ಯ ಅರ್ಥವಾಗುತ್ತದೆ.

ಬಡವರ ಮಕ್ಕಳು ಬೆಳೀಬೇಕು ಎನ್ನುವುದು ಕೆಲವರಿಗೆ ಪ್ರತಿಭೆಯನ್ನು ಹತ್ತಿಕ್ಕುವ ಹುನ್ನಾರದಂತೆ ಕಾಣಿಸುತ್ತದೆ. ಇಂಥವರು ಗಮನಿಸಬೇಕಾದ ಸೂಕ್ಷ್ಮವೊಂದಿದೆ. ಜಾತಿ ಶ್ರೀಮಂತಿಕೆ ಉಳ್ಳ ಪ್ರತಿಭಾವಂತರಿಗೆ ಅವಕಾಶ ದೊರೆಯುವಷ್ಟು ಸುಲಭವಾಗಿ, ಜಾತಿ ಬಡತನದ ಪ್ರತಿಭಾವಂತರಿಗೆ ದೊರೆಯುವುದಿಲ್ಲ. ಜಾತಿ ಬಡತನ ಎನ್ನುವುದು ಬಹುತೇಕ ಸಂದರ್ಭಗಳಲ್ಲಿ ಆರ್ಥಿಕತೆಗೆ ಸಂಬಂಧಿಸಿದ್ದೂ ಆಗಿರುತ್ತದೆ. ಆ ಕಾರಣದಿಂದಲೇ, ಬಡವರ ಮಕ್ಕಳು ಬೆಳೀಬೇಕು ಎನ್ನುವ ಆಶಯ, ಸಾಮಾಜಿಕ ನ್ಯಾಯದ ಪರಿಕಲ್ಪನೆಯ ದೃಷ್ಟಿಯಿಂದ ಬಹುಮುಖ್ಯವಾದ ಹೇಳಿಕೆಯಾಗಿದೆ. ಇದು, ಚಿತ್ರರಂಗ ಮಾತ್ರವಲ್ಲದೆ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಎಲ್ಲರ ಎದೆಗೆ ಬೀಳಬೇಕಾದ ಮಾತು. ಈ ವಾಸ್ತವವನ್ನು ಮರೆತು, ಅರ್ಹತೆ ಇದ್ದವರಿಗಷ್ಟೇ ಅವಕಾಶ ದೊರೆಯಬೇಕು ಎನ್ನುವುದು ಬೌದ್ಧಿಕ ಅಹಂಕಾರದಂತೆ ಕಾಣಿಸುತ್ತದೆ; ಆ ಮಾತು ಧ್ವನಿಸುವ 'ಅರ್ಹತೆ' ಜಾತಿಯೇ ಆಗಿರುತ್ತದೆ ಹಾಗೂ ಹೀಗೆ ಮಾತನಾಡುವವರ ಸಾಮಾಜಿಕ ಹೊಣೆಗಾರಿಕೆಯನ್ನು ಅನುಮಾನದಿಂದ ನೋಡಬೇಕಾಗುತ್ತದೆ.

ರಾಜ್ ಶೆಟ್ಟಿ ಅವರ ಮಾತುಗಳ ಜೊತೆಗೆ, 'ಮಾರ್ಕ್' ಸಿನಿಮಾದ ಪ್ರಚಾರದ ಸಂದರ್ಭದಲ್ಲಿ ಸಾಮಾಜಿಕ ಹೊಣೆಗಾರಿಕೆಯ ಬಗ್ಗೆ ನಟ ಸುದೀಪ್ ಆಡಿರುವ ಮಾತುಗಳನ್ನೂ ಗಮನಿಸಬೇಕು. 'ಸಾಮಾಜಿಕ ಹೊಣೆಗಾರಿಕೆ ಸಿನಿಮಾದವರಿಗೆ ಮಾತ್ರ ಸೀಮಿತವಾದ ಜವಾಬ್ದಾರಿಯಲ್ಲ. ಅದು ಎಲ್ಲರ ಹೊಣೆಯೂ ಹೌದು' ಎನ್ನುವುದು ಸುದೀಪ್ ಅವರ ಮಾತು. ಪ್ರತಿಯೊಂದಕ್ಕೂ ಸಿನಿಮಾದವರ ಹೊಣೆಗಾರಿಕೆಯನ್ನು ಪ್ರಶ್ನಿಸುವ ಬಗ್ಗೆ ಅವರಿಗೆ ತಕರಾರು.

ಸಮಾಜದ ಕಾಳಜಿ ಎಲ್ಲರಿಗೂ ಸೇರಿದ್ದು ಎನ್ನುವ ಸುದೀಪ್ ಅವರ ಮಾತು ಒಪ್ಪತಕ್ಕದ್ದೇ. ಆದರೆ, ಆ ಕಾಳಜಿಯನ್ನು ಕೆಲವರು ಪ್ರಜ್ಞಾಪೂರ್ವಕವಾಗಿ ನಿಭಾಯಿಸುವುದು, ಪ್ರದರ್ಶಿಸುವುದು ಅಗತ್ಯ. ಸೃಜನಶೀಲ ವ್ಯಕ್ತಿಯೊಬ್ಬ, ಅದರಲ್ಲೂ ಕಲಾವಿದ, ಮಿಗಿಲಾಗಿ ಜನಸಮೂಹವನ್ನು ಪ್ರಭಾವಿಸಬಲ್ಲ ಶಕ್ತಿ ಹೊಂದಿದ್ದರಂತೂ ನಿಶ್ಚಿತವಾಗಿ ಸಾಮಾಜಿಕ ಸ್ವಾಸ್ಥ್ಯಚಿಂತನೆ ಆ ಕಲಾವಿದನ ವೈಯಕ್ತಿಕ ಜವಾಬ್ದಾರಿಯೇ ಹೌದು. ಜನಸಮೂಹದ ಪ್ರೀತಿಗೆ ಭಾಜನರಾದವರು ಆ ಪ್ರೀತಿಗೆ ಉತ್ತರದಾಯಿಯೂ ಆಗುತ್ತಾರೆ ಎನ್ನುವುದನ್ನು ಅರಿಯದೆ, ಸಾಮೂಹಿಕ ಹೊಣೆಗಾರಿಕೆಯ ಮಾತನಾಡುವುದು ಜವಾಬ್ದಾರಿಯಿಂದ ನುಣುಚಿಕೊಳ್ಳುವ ಜಾಣತನದ ಮಾತಾಗುತ್ತದೆ.

ಸುದೀಪ್, ರಾಜ್ ಶೆಟ್ಟಿ ಅವರಂಥ ಕಲಾವಿದರ ಮಾತುಗಳಲ್ಲಿ ಬುದ್ಧಿವಂತಿಕೆ ಎದ್ದುಕಾಣಿಸುತ್ತದೆ. ಬುದ್ಧಿವಂತಿಕೆಯ ಜೊತೆಗೆ ಹೃದಯವಂತಿಕೆಯೂ ಇದ್ದಾಗ, 'ಬಡವರ ಮಕ್ಕಳು ಬೆಳೀಬೇಕು' ಎನ್ನುವ ಮಾತು ಅಥವಾ ಕಲಾವಿದನಿಗೆ ಇರಬೇಕಾದ ಸಾಮಾಜಿಕ ಹೊಣೆಗಾರಿಕೆಯ ಪ್ರಶ್ನೆ ಕಿರಿಕಿರಿ ಹುಟ್ಟಿಸುವುದಿಲ್ಲ. ಕನ್ನಡ ಸಿನಿಮಾದ ಬೌದ್ಧಿಕ ಪ್ರತಿನಿಧಿಗಳಂತೆ ಮಾತನಾಡುವವರು ಈ ನೆಲದ ವಾಸ್ತವಗಳನ್ನು ತಮ್ಮದಾಗಿಸಿಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಅವರು ಅಂಬೇಡ್ಕರರನ್ನೋ ಗಾಂಧಿಯನ್ನೋ ಮಾದರಿಯಾಗಿ ಅನುಸರಿಸದಿದ್ದರೂ ಚಿಂತೆಯಿಲ್ಲ; ತಮ್ಮದೇ ಕ್ಷೇತ್ರದ ರಾಜಕುಮಾರರ ಬದುಕಿನ ಕೆಲವು ತತ್ತ್ವಗಳನ್ನು ಎದೆಗೆ ಬೀಳಿಸಿಕೊಂಡರೂ ಸಾಕು.

ಸಾರ್ವಜನಿಕ ಕ್ಷೇತ್ರಗಳಲ್ಲಿ ಗುರ್ತಿಸಿಕೊಂಡವರ ಜೀವನತತ್ತ್ವ ಯಾವುದಾಗಿರಬೇಕು ಎನ್ನುವುದಕ್ಕೆ ಉತ್ತರದ ರೂಪದಲ್ಲಿ ಕುವೆಂಪು ಅವರ 'ಕವಿಯ ಹೃದಯವೊಂದು ವೀಣೆ' ಕವಿತೆಯನ್ನು ಗಮನಿಸಬಹುದು. 'ಕವಿಯ ಹೃದಯವೊಂದು ವೀಣೆ; ಲೋಕವದನು ಮಿಡಿವುದು' ಎಂದು ಆರಂಭವಾಗುವ ಈ ಪುಟ್ಟ ಕವಿತೆ, 'ವ್ಯಕ್ತಿತನವೆ ಕವಿಗೆ ಇಲ್ಲ; ಅವನು ಇಲ್ಲ, ಅಥವ ಎಲ್ಲ' ಎನ್ನುತ್ತದೆ. 'ಎಂತೊ ನಾಡಿನೊಡಲ ನಾಡಿ, ಎಂತುಟಾಸೆಯಿಹುದೊ ನೋಡಿ, ಎಂತೊ ಜನದ ಮೂಕವಾಣಿ, ಅಂತೆ ತಂತಿ ನುಡಿವುದು!' ಎಂದು ಕವಿತೆ ಕೊನೆಗೊಳ್ಳುತ್ತದೆ. ಈ ಪುಟ್ಟ ಕವಿತೆ, ಕವಿಗಷ್ಟೇ ಅಲ್ಲ, ಸಾರ್ವಜನಿಕ ಬದುಕಿನಲ್ಲಿ ತನ್ನ ಬದುಕಿನ ಸಾರ್ಥಕತೆಯನ್ನು ಕಾಣಲು ಹಂಬಲಿಸುವವರು ಹೇಗಿರಬೇಕು ಎನ್ನುವುದನ್ನು ಮನವರಿಕೆ ಮಾಡುವಂತಿದೆ.

ಕವಿಯ ಹೃದಯ ಲೋಕ ಮಿಡಿಯುವ ವೀಣೆ ಎನ್ನುವ ಮಾತು, ಕವಿ ಸಮಾಜಕ್ಕೆ ಸೇರಿದ ವ್ಯಕ್ತಿ ಎನ್ನುವುದನ್ನು ಸೂಚಿಸುವುದರ ಜೊತೆಗೆ, ಲೋಕದ ತವಕತಲ್ಲಣಗಳು ಕವಿಯ ಮೂಲಕ ಅಭಿವ್ಯಕ್ತಿಗೊಳ್ಳುವುದನ್ನೂ ಸೂಚಿಸುತ್ತದೆ. 'ನಾಡಿನೊಡಲ ನಾಡಿ', 'ಎಂತೊ ಜನದ ಮೂಕವಾಣಿ' ಎನ್ನುವುದನ್ನು ಕವಿ–ಕಲಾವಿದ ಅರ್ಥ ಮಾಡಿಕೊಳ್ಳುವುದರಲ್ಲಿ ಅವರು ನಿರ್ವಹಿಸಬೇಕಾದ ಸಾಮಾಜಿಕ ಜವಾಬ್ದಾರಿಯ ಅರಿವೂ ಇದೆ. ಜನರ ಮೂಕವಾಣಿಗೆ ತಂತಿಯಾಗಿ ನುಡಿಯುವುದರ ಬದಲು, ಸಾಮಾಜಿಕ ಸಮಸ್ಯೆಗಳ ಬಗ್ಗೆ ಮೂಕರಾಗುವುದು ಬಹಳಷ್ಟು ಕವಿ–ಕಲಾವಿದರ ಸಮಸ್ಯೆ; ಅದು ಕರ್ನಾಟಕದ ಸಮಕಾಲೀನ ಕಲೆ–ಸಾಹಿತ್ಯದ ಬಿಕ್ಕಟ್ಟೂ ಹೌದು.



ವಾಚಕರ ವಾಣಿ

ಜಾತೀಯತೆ ಸಮಾಜಕ್ಕೆ ದೊಡ್ಡ ಪಿಡುಗು

ಇಡೀ ವಿಶ್ವವೇ ಬದಲಾವಣೆಯ ಪಥದಲ್ಲಿ ಸಾಗಿದೆ. ಆದರೆ, ದೇಶದ ಹಳ್ಳಿಗಳಲ್ಲಿ ಇಂದಿಗೂ ಜಾತಿ ಎನ್ನುವ ರೋಗಕ್ಕೆ ಚಿಕಿತ್ಸೆ ನೀಡುವ ಬದಲು ಪೋಷಿಸುತ್ತಿರುವುದು ದುರದೃಷ್ಟಕರ. ಕೆಲವರಲ್ಲಿ ಮನುಷ್ಯರ ಜೀವಕ್ಕಿಂತ ಜಾತಿ ಪ್ರೇಮ ಹೆಚ್ಚಿದಂತೆ ಕಾಣುತ್ತದೆ. ಅನ್ಯಜಾತಿಯ ಯುವಕನನ್ನು ಪ್ರೀತಿಸಿ ಮದುವೆಯಾದಳೆಂದು ತನ್ನ ಮಗಳನ್ನೇ ಕೊಲ್ಲುವ ಹಂತಕ್ಕೆ ತಂದೆ ಇಳಿಯುವುದು ಸಮಾಜವೇ ತಲೆತಗ್ಗಿಸುವ ಸಂಗತಿ. ದೇಶದಾದ್ಯಂತ ನಡೆಯುತ್ತಿರುವ ಮರ್ಯಾದೆಗೇಡು ಹತ್ಯೆಗಳಿಗೆ ಜಾತಿಪದ್ಧತಿ ಮೂಲ ಕಾರಣ. ಜಾತಿಯ ಮರ್ಯಾದೆ ಉಳಿಸಿಕೊಳ್ಳಲು ಹಲ್ಲೆ, ಕೊಲೆ ನಡೆಯುತ್ತಿರುವುದು ಜನತಂತ್ರದ ಆಶಯಗಳಿಗೆ ವಿರುದ್ಧವಾದುದು. ಇಂತಹ ಹತ್ಯೆಗಳ ವಿರುದ್ಧ ಗಟ್ಟಿಯಾಗಿ ಧ್ವನಿ ಎತ್ತಬೇಕಾದ ನಾಗರಿಕ ಸಮಾಜ ಮೌನಕ್ಕೆ ಜಾರಿರುವುದು ಆತಂಕಕಾರಿ. ಈ ಬೆಳವಣಿಗೆಯು ಭವಿಷ್ಯದ ಭಾರತದ ಬಗ್ಗೆ ದುಗುಡವನ್ನು ಹೆಚ್ಚಿಸುತ್ತದೆ.

ರಾಜಕುಮಾರ ಎಂ. ದಣ್ಣೂರ, ಅಫಜಲಪುರ

ಹಸನಾಗದ ಜನಸಾಮಾನ್ಯರ ಬದುಕು

ದೇಶಕ್ಕೆ ಸ್ವಾತಂತ್ರ್ಯ ಲಭಿಸಿ ಏಳೂವರೆ ದಶಕವಾದರೂ ಉದ್ಯೋಗ, ಆಹಾರ, ಶಿಕ್ಷಣ, ಆರೋಗ್ಯ ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ; ಅದಾನಿ–ಅಂಬಾನಿಯಂತಹ ಉದ್ಯಮಿಗಳ ಸಂಪತ್ತಷ್ಟೆ ಏರಿಕೆಯಾಗುತ್ತಿದೆ. ಬಡವರು ಮತ್ತು ಮಧ್ಯಮವರ್ಗದ ಜನರ ಬದುಕು ಮಾತ್ರ ನಿಂತ ನೀರಾಗಿದೆ. ರಾಜಕಾರಣವೆಂದರೆ, ಸರ್ಕಾರ ಅಥವಾ ಮುಖ್ಯಮಂತ್ರಿ ಬದಲಾವಣೆಗೆ ಸೀಮಿತವಾಗಿದೆ. ಜನರ ಕಷ್ಟಕ್ಕೆ ಪರಿಹಾರ ಒದಗಿಸುವ ನೀತಿಗಳು ಅನುಷ್ಠಾನವಾಗುತ್ತಿಲ್ಲ. ರೈತ ವಿರೋಧಿಯಾದ ಭೂಸ್ವಾಧೀನ ನೀತಿಗಳು ರೂಪುಗೊಂಡಿವೆ. ಕಾರ್ಮಿಕ ಕಾಯ್ದೆಗಳು ಕಾರ್ಮಿಕರನ್ನು ಮತ್ತಷ್ಟು ಸಂಕಷ್ಟಕ್ಕೆ ತಳ್ಳಿವೆ. ಕನಿಷ್ಠ ಕೂಲಿಗಾಗಿ ಜನರು ಹೋರಾಟ ನಡೆಸುವಂತಾಗಿದೆ. ಬಡಜನರ ಬದುಕನ್ನು ಹಸನುಗೊಳಿಸುವ ಕೆಲಸಕ್ಕೆ ಇನ್ನಾದರೂ ಆಳುವ ವರ್ಗ ಮುಂದಾಗಲಿ.

ಎನ್. ಮಹಾರಾಜ, ಹೊಸಪೇಟೆ

ದಿನಪತ್ರಿಕೆ ಓದು ಕಡ್ಡಾಯವಾಗಲಿ

ಶಾಲೆಗಳಲ್ಲಿ ದಿನಪತ್ರಿಕೆ ಓದುವುದನ್ನು ಕಡ್ಡಾಯಗೊಳಿಸಿರುವ ಉತ್ತರ ಪ್ರದೇಶ ಸರ್ಕಾರದ ಆದೇಶ ಸ್ತುತ್ಯಾರ್ಹ. ಕರ್ನಾಟಕದಲ್ಲಿಯೂ ಕೆಲವು ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಪ್ರಾರ್ಥನಾ ಸಮಯದಲ್ಲಿ ಮಕ್ಕಳಿಂದ ದಿನಪತ್ರಿಕೆ ಓದಿಸಲಾಗುತ್ತಿದೆ. ಕೆಲವು ಶಾಲೆಗಳಲ್ಲಿ ಈ ಪದ್ಧತಿ ಇಲ್ಲ. ಇದನ್ನು ಸರ್ಕಾರ ಕಡ್ಡಾಯಗೊಳಿಸಬೇಕಿದೆ. ಮಕ್ಕಳು ದಿನಪತ್ರಿಕೆ ಓದುವುದರಿಂದ ಅವರಲ್ಲಿ ಓದುವ ಕೌಶಲ ಬೆಳೆಯುತ್ತದೆ. ಪದ ಸಂಪತ್ತು ಹೆಚ್ಚುತ್ತದೆ. ಶಿಕ್ಷಕರು ಕೂಡ ಪತ್ರಿಕೆ ಓದಬೇಕು. ಮನೆಯಲ್ಲಿ ದಿನಪತ್ರಿಕೆ ತರಿಸುವ ಬಗ್ಗೆ ಪೋಷಕರು ಹಾಗೂ ಮಕ್ಕಳಲ್ಲಿ ಜಾಗೃತಿ ಮೂಡಿಸಬೇಕಿದೆ. ಪತ್ರಿಕೆ ಓದುವುದರಿಂದ ಭವಿಷ್ಯದಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ಸಹಕಾರಿಯಾಗಲಿದೆ.

ದೇವನೂರು ಅಚ್ಯುತರಾವ್, ಸಾಗರ

ಅಧಿಕಾರ ವಿಕೇಂದ್ರೀಕರಣಕ್ಕೆ ಪೆಟ್ಟು

ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆಗೆ ಎರಡು–ಮೂರು ತಿಂಗಳಲ್ಲಿ ಸಿದ್ಧತೆ ನಡೆಸುವಂತೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸರ್ಕಾರ ಸಜ್ಜಾಗುತ್ತಿರುವುದು ಸಂತೋಷದ ವಿಷಯ. ಆದರೆ, ಇದು ಕೇವಲ ಭರವಸೆಯಾಗಬಾರದು. ಮತ್ತೊಂದೆಡೆ ಈ ತಿಂಗಳ ಅಂತ್ಯದಲ್ಲಿ ಗ್ರಾಮ ಪಂಚಾಯಿತಿಗಳ ಅಧಿಕಾರಾವಧಿಯೂ ಪೂರ್ಣಗೊಳ್ಳಲಿದೆ. ಹಾಗಾಗಿ, ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಂಬಂಧಿಸಿದಂತೆ ಸರ್ಕಾರ ಸಾಂವಿಧಾನಿಕವಾಗಿ ಸೂಕ್ತ ನಿರ್ಧಾರ ಕೈಗೊಳ್ಳುವುದು ಅಗತ್ಯ. ಚುನಾವಣೆಗೆ ನಿರ್ದಿಷ್ಟ ವೇಳಾಪಟ್ಟಿ ಸಿದ್ಧಪಡಿಸಬೇಕು. ವಿಳಂಬಗೊಂಡರೆ ಅಧಿಕಾರ ವಿಕೇಂದ್ರೀಕರಣದ ಆಶಯಕ್ಕೆ ಪೆಟ್ಟು ಬೀಳಲಿದೆ.

ಶಾನು ಯಲಿಗಾರ, ಯರಗುಪ್ಪಿ

ಹೊಸ ವರ್ಷಾಚರಣೆ: ಸಂಯಮ ಇರಲಿ

ಯುವಜನತೆಗೆ ಹೊಸ ವರ್ಷಾಚರಣೆ ಎಂದರೆ ಮೋಜಿನಾಟ ಎಂಬಂತಾಗಿದೆ. ಕೆಲವರು ಪಟಾಕಿ ಸಿಡಿಸುತ್ತಾ, ಸಂಗೀತ ಗೋಷ್ಠಿಗಳಿಗೆ ಭೇಟಿ ನೀಡುತ್ತಾ ದಿನ ಕಳೆದರೆ; ಇನ್ನೂ ಹಲವರದು ಕುಡಿತ, ಕುಣಿತ... ಇಷ್ಟಕ್ಕೇ ಹೊಸ ವರ್ಷಾಚರಣೆ ಸೀಮಿತವಾಗಿರುತ್ತದೆ. ಸಂಭ್ರಮಾಚರಣೆಯನ್ನು ಒಂದೆರಡು ದಿನಕ್ಕೆ ಸೀಮಿತಗೊಳಿಸಬಾರದು. ಹೊಸ ವರ್ಷ ಎಂದರೆ ಕೇವಲ ದಿನಾಂಕದ ಬದಲಾವಣೆ ಅಲ್ಲ, ಅದು ಜೀವನವನ್ನು ಹೊಸ ದೃಷ್ಟಿಕೋನದಿಂದ ನೋಡಲು ಸಿಗುವ ಮತ್ತೊಂದು ಅವಕಾಶ. ವರ್ಷಪೂರ್ತಿ ಆರೋಗ್ಯಕರ ಜೀವನ, ಹಣ ಉಳಿತಾಯ, ಪ್ರಯಾಣದಂತಹ ಹೊಸ ಗುರಿ ರೂಪಿಸಿಕೊಳ್ಳುವುದು ಹೆಚ್ಚು ಸೂಕ್ತ ಅನಿಸುತ್ತದೆ. ಯುವಜನತೆಯು ಶುಭಾಶಯಗಳ ವಿನಿಮಯ, ಮೋಜು-ಮಸ್ತಿಗೆ ಸೀಮಿತವಾಗದೆ ದೊಡ್ಡ ಸಂಕಲ್ಪಗಳ ಸಾಕಾರಕ್ಕೆ ಮುಂದಾಗಬೇಕಿದೆ.


ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ಗಣಿತ ಕಲಿಯುವ ಆಸಕ್ತಿ ರೂಢಿಸಿಕೊಳ್ಳಿ

ಶ್ರೀನಿವಾಸ ರಾಮಾನುಜನ್ ಅವರು ಭಾರತ ಕಂಡ ಶ್ರೇಷ್ಠ ಗಣಿತಜ್ಞ. ಇತ್ತೀಚೆಗೆ ಅವರ ಜನ್ಮದಿನವನ್ನು 'ರಾಷ್ಟ್ರೀಯ ಗಣಿತ ದಿನ'ವಾಗಿ ಆಚರಿಸಲಾಯಿತು. ಗಣಿತ ಎಂದರೆ ಕಬ್ಬಿಣದ ಕಡಲೆ; ಬೇಗ ತಲೆಗೆ ಹತ್ತುವುದಿಲ್ಲ ಮುಂತಾದ ನಂಬಿಕೆ ನಮ್ಮಲ್ಲಿ ಬೇರೂರಿದೆ. ಪೋಷಕರು ತಮ್ಮ ಮಕ್ಕಳಲ್ಲಿಯೂ ಇಂತಹ ಭಯ ತುಂಬುತ್ತಾರೆ. ನಮಗಂತೂ ಲೆಕ್ಕ ಹೇಳಿಕೊಡಲು ಬರುವುದಿಲ್ಲ ಎಂದು ಉದ್ಗರಿಸುತ್ತಾರೆ. ಆದರೆ, ಗಣಿತದಷ್ಟು ಆಸಕ್ತಿದಾಯಕ ವಿಷಯ ಬೇರೊಂದಿಲ್ಲ. ಗಣಿತ ಶಿಕ್ಷಕರು ಮಕ್ಕಳಲ್ಲಿ ಈ ವಿಷಯ ಕುರಿತು ಒಲವು ಮೂಡಿಸಬೇಕು. ಭಯ ಹೋಗಲಾಡಿಸಿ ಅರಿವು ಮೂಡಿಸುವುದರಿಂದ ಗಣಿತದ ಬಗ್ಗೆ ಮಕ್ಕಳ ಮನಸ್ಸಿನಲ್ಲಿ ಪ್ರೀತಿ ಬೆಳೆಯುತ್ತದೆ. ಪ್ರೀತಿಯಿಂದ ಕಲಿತ ಯಾವುದೇ ವಿಷಯವೂ ಮಕ್ಕಳಿಗೆ ಹೊರೆಯಾಗಲಾರದು.

ಆಶಾ ಅಪ್ರಮೇಯ, ದಾವಣಗೆರೆ

ಚುರುಮುರಿ



ತುಂಬಾ ಲೈಟಾಗಿಬುಟ್ರಿ

• ಲಿಂಗರಾಜು ಡಿ.ಎಸ್.

ಸ್ವಾರ್ಥರೂಪ ಸಮಾನರಾದ ಎಲ್ಲಾ ನಾಯಕರಿಗೆ ಅಡ್ಡಬಿದ್ದೆ. ಅದಾಗಿ ಉಭಯ ಕುಶಲೋಪರಿ ಸಾಂಪ್ರತ. ತಾವು ಮೂರೊರ್ಸದ ಹಿಂದೆ ಪಟ್ಟಕ್ಕೆ ಕೂಕಳುವಾಗ ನಮ್ಮ ಕಷ್ಟ ಬಗೆಹರಿದೋ ಅಂತ ಖುಸಿಯಾಗಿದ್ದೋ. ಆದರೆ, ಕೆಲಸಗಳು ಒಂದೂ ಆಯ್ತಿಲ್ಲವಲ್ಲ ಬುದ್ಯೋ. ಸರ್ಕಾರ ಎಲ್ಲದೆ ಅಂತ್ಲೇ ಗೊತ್ತಾತಿಲ್ಲ. ಅಧಿಕಾರಿಗಳು ಹೆಚ್ಚಿಕ್ಯಬುಟ್ಟವ್ರೆ, ಹಿಂಗಾದ್ರೆ ನಾವೂ ಆಪೀಸುಗಳಿಗೆ ಹೋಗುವಾಗ ಚಪ್ಪಲಿ ಕೈಲಿ ಹಿಡಕ ಹೋಗಬೇಕಾತದೆ.

ನಿಮ್ಮ ಸಾಸಕರು ಬರಗೆಟ್ಟೋರಂಗೆ ನಿಗಮ, ಮಂಡಲಿ ಕಾಸು ಗೋರಿಗೋರಿ ಸಂದೂಕ ತುಂಬಿಕ್ಯತ್ತಾವ್ರೆ. ಅದೇಟು ಹಸಿದಿದ್ರೋ ಕಾಣೆ. ಮನೆಗೆ ಮಾತ್ರಾ ಫ್ರೀ ಕರಂಟು ಕೊಟ್ಟು ರೈತರ ಪಂಪ್‌ಸೆಟ್ಟಿಗೆ ಕರಂಟು ಬಿಲ್ಲು ಗ್ಯಾರಂಟಿ ಕಟ್ಟಿಸಿಗ್ಯತ್ತೀರಿ. ಅನ್ನಭಾಗ್ಯದಿಂದ ಅಪಾಪೋಲಿಗಳು ಕಾಸು ಮಾಡಿಕ್ಯತ್ತಾವ್ರೆ. ನಮ್ಮ ಯೇಗ್ತೇಗೆ ಕೈಗೊಂದು ಕ್ವಾಟ್ರು, ಬಾಯಿಗೊಂದು ಬೋಟಿ ಭಾಗ್ಯದ ಗ್ಯಾರಂಟಿ ಕೊಡಬೌದಾಗಿತ್ತಲ್ಲವಾ?

ನೀವು ಫ್ರೀ ಬಸ್ಸು ಬುಟ್ಟು ಹೆಂಗಸರ ಕೈಗೆ ಏಡೇಡು ಸಾವಿರ ಕಾಸು ಕೊಟ್ರಲ್ಲಾ ಅದ ತಗಂದು ಎಲ್ಲಾರೂ ದೇವರ ದರ್ಶನಕ್ಕೋಯ್ತರೆ. ಮೊನ್ನೆ ನನ್ನೆಂಡ್ರುಗೆ 'ನಿನಗೆ ಬಂದ ಪುಣ್ಯದೇಲಿ ನನಗೆಷ್ಟು ಪಾಲದೆ?' ಅಂತ ಕೇಳಿದೆ.

ಅದುಕ್ಕೆ ಅವಳು 'ಹೆಂಡ್ರು ಗಳಿಸಿದ ಪುಣ್ಯದಲ್ಲಿ ಗಂಡಗೆ ಪಾಲಿಲ್ಲ, ಗಂಡ ಅವನ ಪುಣ್ಯದೇಲಿ ಹೆಂಡ್ರಿಗೆ ಅರ್ಧ ಪಾಲು ಕೊಡಬಕು ತಿಳುಕೋ' ಅಂದ್ಬುಟ್ಲು ಕನಣ್ಣೆ.

ಪಕ್ಷದ ಆವುಟ ಕಟ್ತಿದ್ದೋರು, ಕಸ ಹೊಡೆದೋರು, ಪಾತ್ರೆ ತೊಳೆದೋರು, ಪಂಚೆ ವದರಿಕ್ಯಂದು ಬಂದೋರು ಫೈನಲ್ ಮ್ಯಾಚಲ್ಲಿ ಟಾಸ್ ಯಾರಿಗೆ ಬೀಳ್ತದೆ ಅಂತ ಕಾಯಬಕು. ನಿಮ್ಮ ಲೈ-ಕಮಾಂಡುಗಳು 'ಯಾರ ಮ್ಯಾಲೆ ಯಾರು ಬಿದ್ದರೆ ನನಗೇನು. ನಮ್ಮಲ್ಲಿ ಸಮಸ್ಯೇನೇ ಇಲ್ಲ' ಅಂತ ಭಾಳ ಲೈಟಾಗಿಬುಟ್ಟವೆ. ನಮಗೂ ರೋಸೋಗ್ಯದೆ. ನೀವು ಏನಾದರೂ ಆಗಿ ಆದರೆ ಸೀಟು ಜಗಳ ನಿಲ್ಲಿಸಿ ಒಳ್ಳೆ ರಾಜಕಾರಣಿಗಳಾಗಿ. ತಿಳಿದವರಿಗೆ ಹೆಚ್ಚಿಗೆ ಹೇಳಲು ಶಕ್ತನಲ್ಲ.

ಸಂಗತ

ಹೆಣ್ಣಿನ ಆಯ್ಕೆ ನಿಯಂತ್ರಿಸುವ 'ಯಜಮಾನಿಕೆ'

ಹೆಣ್ಣಿನ ಆಯ್ಕೆಯನ್ನು ವಿರೋಧಿಸುವ ಮನೋಭಾವ 'ಮರ್ಯಾದೆಗೇಡು ಹತ್ಯೆ' ರೂಪ ಪಡೆಯುತ್ತದೆ. ಮಗಳನ್ನು ಕೊಂದು ಉಳಿಸಿಕೊಳ್ಳುವ ಜಾತಿ ಇದೆಯೆ?

• ಸಿ.ಜಿ. ಮಂಜುಳಾ

ದಲಿತ ಯುವಕನನ್ನು ಮದುವೆಯಾಗಿ ಗರ್ಭಿಣಿಯಾಗಿದ್ದ ಹುಬ್ಬಳ್ಳಿ ತಾಲ್ಲೂಕಿನ ಇನಾಂ ವೀರಾಪುರ ಗ್ರಾಮದ ಯುವತಿ ಮಾನ್ಯಳನ್ನು ಸ್ವಂತ ತಂದೆಯೇ ಕೊಚ್ಚಿ ಕೊಲೆ ಮಾಡಿರುವ ಕ್ರೌರ್ಯ ಎದೆ ನಡುಗಿಸುವಂತಹದ್ದು. ಜಾತಿವೈಷಮ್ಯದ ಕರಾಳತೆ ಮಾತ್ರವಲ್ಲ, ಹೆಣ್ಣನ್ನು ನಿಯಂತ್ರಣದಲ್ಲಿರಿಸಿಕೊಳ್ಳಲು ಬಯಸುವ ಪಿತೃಸಂಸ್ಕೃತಿಯ ಅಟ್ಟಹಾಸದ ನಡೆ ಇದು. ಪಿತೃಪ್ರಾಧಾನ್ಯದ ಮೌಲ್ಯಗಳನ್ನು ಧಿಕ್ಕರಿಸಿ ಸ್ವಂತ ಆಯ್ಕೆ ಪ್ರತಿಪಾದಿಸುವ ಹೆಣ್ಣನ್ನು ಘೋರವಾಗಿ ಶಿಕ್ಷಿಸುವ ಪೈಶಾಚಿಕ ಕೃತ್ಯ ಇದಾಗಿದೆ. ಕುಟುಂಬದ 'ಮರ್ಯಾದೆ' (?) ಕಾಪಾಡಿದಂತಹ ಶೌರ್ಯ ಪ್ರದರ್ಶನದಲ್ಲಿ ಪಶ್ಚಾತ್ತಾಪವನ್ನೂ ಈ ಹೀನ ಕೃತ್ಯ ಎಸಗಿದವರು ಪ್ರದರ್ಶಿಸಿಲ್ಲ ಎಂದು ಹೇಳಲಾದ ವರದಿಗಳು, ಗಂಡಾಳ್ವಿಕೆಯ ಶೌರ್ಯವೆಂಬ ಅಟ್ಟಹಾಸದ ದ್ಯೋತಕ.

ಆದರೆ ಕುಟುಂಬದ ಮಾನ, ಮರ್ಯಾದೆ ಉಳಿಸುವುದಕ್ಕಾಗಿ ನಡೆಸಿದ ಶೌರ್ಯದ ಕೃತ್ಯ ಎಂಬಂತೆ ಬಿಂಬಿಸುವ ಇಂತಹ ನಡೆಯಲ್ಲಿ ಲಿಂಗಾಧಾರಿತ ತಾರತಮ್ಯದ ಮನೋಭಾವಗಳು ಹಾಗೂ ಲಿಂಗಾಧಾರಿತ ಹಿಂಸಾಚಾರದ ಕೃತ್ಯಗಳು ಮಸುಕಾಗುತ್ತವೆ ಎಂಬುದನ್ನು ನೆನಪಿಡಬೇಕು. ಮಾನ್ಯಳ ಪಾಲಕರಿಗೆ ಪೊಲೀಸರು ಈ ಹಿಂದೆಯೇ ನೀಡಿದ್ದಂತಹ ಎಚ್ಚರಿಕೆಗಳ ಅವಗಣನೆ ಹಾಗೂ ಕೊಲೆಯಾದ ಗರ್ಭಿಣಿ ಹೆಣ್ಣುಮಗಳ ಅಂತ್ಯಸಂಸ್ಕಾರದ ಸಂದರ್ಭದಲ್ಲಿ ಊರವರ ತಟಸ್ಥ ಮನೋಭಾವಗಳನ್ನು ಈ ಚೌಕಟ್ಟಿನಲ್ಲಿ ನೋಡಬೇಕು.



ಮನುಷ್ಯ ಬದುಕಿನ ಅತ್ಯುನ್ನತ ಜೀವನಮೌಲ್ಯವಾದ 'ಮರ್ಯಾದೆ', 'ಗೌರವ' ಎಂಬಂಥ ದೊಡ್ಡ ಪದಪುಂಜಗಳ ಅಲಂಕಾರದಲ್ಲಿ, ಹೆಣ್ಣಿನ ಸ್ವತಂತ್ರ ನಿರ್ಧಾರಗಳ ವಿರುದ್ಧ ನಡೆಸುವಂತಹ ಅತ್ಯಂತ ಹೀನಾಯವಾದ ಹಿಂಸೆಯೂ ಇಲ್ಲಿ ತೀವ್ರತೆ ಕಳೆದುಕೊಂಡು ಮಂಕಾಗಿಬಿಡುತ್ತದೆ ಎಂಬುದು ಆತಂಕದ ಸಂಗತಿ. ಮನೆಯ ಮರ್ಯಾದೆ ಉಳಿಸಲು ನಡೆಸಿದ ಹತ್ಯೆ ಇದು ಎಂಬ ಭಾವನೆ ಜನಸಾಮಾನ್ಯರ ಮನಗಳಲ್ಲಿ ಎಂದೆಂದಿಗೂ ಬರಬಾರದು. 'ಕುಟುಂಬ ಮರ್ಯಾದೆ' ಎಂಬಂಥ ಭ್ರಮಾತ್ಮಕತೆಯಲ್ಲಿ ನಡೆಸಲಾದ 'ನಾಚಿಕೆಗೇಡಿನ ಕೃತ್ಯ' ಇದು. ಜೀವ ತೆಗೆಯುವ ಈ ದುಷ್ಕೃತ್ಯ ಮಾನವಧರ್ಮಕ್ಕೆ ಅಪಚಾರ. ಇಂತಹ ದುಷ್ಕೃತ್ಯ ಎಸಗುವ ಕೊಲೆಗಡುಕತನ ಸಮಾಜದ ಸ್ವಾಸ್ಥ್ಯ ಕದಡುವ ಹೀನ ಅಪರಾಧ ಎಂಬ ಭಾವನೆಯನ್ನು ಸಮಾಜದಲ್ಲಿ ಬಲಗೊಳಿಸುವುದು ಇಂದಿನ ತುರ್ತು. ಹನ್ನೆರಡನೇ ಶತಮಾನದಲ್ಲಿ ಬಸವಾದಿ ಶರಣರು ಕಟ್ಟಿದ್ದ, ಕಟ್ಟಬಯಸಿದ್ದ ಸಮಾಜದ ಕುರಿತಾದ ಅರಿವು, ಇಂದಿನ ನಮ್ಮ ಆಧುನಿಕ, ಸಮಕಾಲೀನ ಸಮಾಜದಲ್ಲಿ ಸಂವೇದನೆಯಾಗಿ ಮೂಡಿಸುವುದು ಹೇಗೆ ಎಂಬ ಪ್ರಶ್ನೆಯನ್ನೂ ಸಮಾಜ ಕೇಳಿಕೊಳ್ಳುವಂತಹ ಸ್ಥಿತಿ ಇಂದಿನದಾಗಿದೆ ಎಂಬುದು ನಮ್ಮ ನೆನಪಿನಲ್ಲಿರಬೇಕು.

ಈ 'ಮರ್ಯಾದೆಗೇಡು ಹತ್ಯೆ'ಯನ್ನು ಈಗಲೂ ಇಂಗ್ಲಿಷ್‌ನಲ್ಲಿ 'ಆನರ್ ಕಿಲ್ಲಿಂಗ್' ಹಾಗೂ ಕನ್ನಡದಲ್ಲಿ 'ಮರ್ಯಾದೆ ಹತ್ಯೆ' ಎಂದು ಹೇಳುವುದು ಮುಂದುವರಿದಿದೆ. 'ಮರ್ಯಾದೆ ಹತ್ಯೆ' ಎಂದು ಹೇಳಿದ ತಕ್ಷಣ ಅದನ್ನು ಕೊಲೆಗಾರರ ಕಣ್ಣುಗಳ ಮೂಲಕ ಹೆಣ್ಣಿನ ಹತ್ಯೆಯನ್ನು ಪರಿಭಾವಿಸಿದಂತಾಗುತ್ತದೆ. ಮರ್ಯಾದೆ ಎನ್ನುವ ಪದ ಸೇರಿಸುವ ಮೂಲಕ ವಂಶ ಅಥವಾ ಕುಲದ ಮರ್ಯಾದೆ ಅಥವಾ ಗೌರವಕ್ಕಾಗಿ ನಡೆಸಲಾದ ಹತ್ಯೆ ಎಂದೆಲ್ಲಾ ಸಮರ್ಥಿಸಿಕೊಳ್ಳುವವರ ಭಾಷೆಯನ್ನೇ ಬಳಸಿದಂತಾಗುತ್ತದೆ ಎಂಬುದನ್ನು ನಾವು ನೆನಪಿಡಬೇಕು. ಆದರೆ, ಇಂತಹ ಹತ್ಯೆಯಲ್ಲಿ ಯಾವ ಮರ್ಯಾದೆ ಅಥವಾ ಗೌರವ ಇಲ್ಲ. ಕಿಂಚಿತ್ತೂ ಕರುಣೆ ಇಲ್ಲದೆ ಕರುಳಕುಡಿಗಳನ್ನೇ ಕೊಂದಂತಹ, ಮರ್ಯಾದೆಗೇಡಿ ದುಷ್ಕೃತ್ಯ ಎಸಗಿದ ದುರುಳರ ನಡೆ ಇದು ಎಂಬಂತಹ ರೀತಿ ಇಂತಹ ಹತ್ಯೆಗಳು ಬಿಂಬಿತವಾಗುವ ರೀತಿಯಲ್ಲಿ ಸಮಾಜದ ಸಂವೇದನೆ ಹಾಗೂ ರೀತಿನೀತಿಗಳು ಬದಲಾಗಬೇಕಾದುದು ಇಲ್ಲಿ ಮುಖ್ಯ ಎನಿಸುತ್ತದೆ.

ಜಾತಿ ಹಮ್ಮುಗಳ ಜೊತೆಗೆ ಸಂತತಿಯ ಪಾವಿತ್ರ್ಯವನ್ನು ಹೆಣ್ಣಿನ ಮೂಲಕ ಕಾಪಾಡಲು ಹೆಣ್ಣಿನ ಸ್ವತಂತ್ರ ಆಯ್ಕೆಗಳನ್ನು ನಿಯಂತ್ರಿಸುವಂತಹ ಊಳಿಗಮಾನ್ಯ ಗಂಡಾಳ್ವಿಕೆಯ ಮನಃಸ್ಥಿತಿಯನ್ನು ಸಮಾಜದಲ್ಲಿ ಬೇರೂರಿಸಲಾಗಿದೆ ಎಂಬಂಥ ಸಮಾಜಶಾಸ್ತ್ರೀಯ ಪ್ರಜ್ಞೆ ನಮ್ಮ ಸಮಾಜದಲ್ಲಿ ಮೂಡುವವರೆಗೂ ಈ ತಂತ್ರಜ್ಞಾನಾಧಾರಿತ ಅತ್ಯಾಧುನಿಕ ಸಮಾಜದಲ್ಲೂ ಹೆಣ್ಣನ್ನು 'ಆಳುವ' ಹಾಗೂ 'ನಿಯಂತ್ರಿಸುವ' ಯಜಮಾನಿಕೆಯ ಸಂಸ್ಕೃತಿ ಮುಂದುವರಿಯುತ್ತಲೇ ಇರುತ್ತದೆ.

ಮರ್ಯಾದೆಗೇಡು ಹತ್ಯೆ ನಿಯಂತ್ರಿಸಲು ಪ್ರತ್ಯೇಕ ಕಾನೂನು ರಚನೆ ಅಗತ್ಯವಿದೆ ಎಂಬಂಥ ಪ್ರತಿಪಾದನೆ ಕಳೆದ ದಶಕದಿಂದಲೂ ಕೇಳಿಬರುತ್ತಲೇ ಇದೆ. 'ಕೊಲೆ' ಎಂದಷ್ಟೇ ಪರಿಗಣಿಸುವುದರಿಂದ ನಿರ್ದಿಷ್ಟ ನೆಲೆಗಳಲ್ಲಿ ಇಂತಹ ಹತ್ಯೆಗಳನ್ನು ನಿರ್ವಹಿಸುವುದು ಸಾಧ್ಯವಾಗುವುದಿಲ್ಲ. ಹೀಗಾಗಿಯೇ ಮರ್ಯಾದೆಗೇಡು ಹತ್ಯೆ ನಿರೋಧಕ ಕಾನೂನಿನ ಅಗತ್ಯವನ್ನು ಭಾರತದ ಕಾನೂನು ಆಯೋಗದ 242ನೇ ವರದಿಯು (2012) ಪ್ರತಿಪಾದಿಸಿತ್ತು ಎಂಬುದನ್ನು ನಾವಿಲ್ಲಿ ಸ್ಮರಿಸಬಹುದು. ಇಂತಹ ಹತ್ಯೆಗಳು 'ಮೂಲಭೂತ ಹಕ್ಕುಗಳ ಉಲ್ಲಂಘನೆ' ಎಂದು ಹೇಳುತ್ತಾ, ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲು ರಾಜ್ಯ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ಅನೇಕ ಪ್ರಕರಣಗಳಲ್ಲಿ ನಿರ್ದೇಶನ ನೀಡಿತ್ತು. ಆದರೂ, ಇಂತಹ ನಾಚಿಕೆಗೇಡಿನ ಮರ್ಯಾದೆಗೇಡು ಹತ್ಯೆಗಳಿಗೆ ಕೊನೆ ಹಾಡಲಾಗಿಲ್ಲ. ಒಂದು ಕಾಲದಲ್ಲಿ ಪ್ರಗತಿಪರ ರಾಜ್ಯವೆಂದು ಹೆಸರಾಗಿದ್ದ ಕರ್ನಾಟಕದಲ್ಲೂ, ಇತ್ತೀಚಿನ ವರ್ಷಗಳಲ್ಲಿ ಇಂತಹ ಕೃತ್ಯಗಳು ಹೆಚ್ಚುತ್ತಿರುವಂತಹ ಪ್ರಸಕ್ತ ಸಂದರ್ಭದಲ್ಲಿ ನಿರ್ದಿಷ್ಟವಾದ ಬಿಗಿ ಕಾನೂನಿನ ರಚನೆಯೂ ಸದ್ಯದ ಅಗತ್ಯ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಅಧಿಕಾರಕ್ಕೆ ಕಚ್ಚಾಟ ಜನರಿಗೆ ಸಂಕಟ

● ಚಂದ್ರಹಾಸ ಹಿರೇಮಳಲಿ, ಜಯಸಿಂಹ ಆರ್.

ನಾಯಕತ್ವ ಬದಲಾವಣೆ, ಕೆಪಿಸಿಸಿ ಅಧ್ಯಕ್ಷಗಾದಿಯ ವಿಚಾರವು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವಿನ 'ಬಣ' ಜಗಳವನ್ನು ಸೃಷ್ಟಿಸಿದ ಗದ್ದಲ, ಗೊಂದಲವೇ ಇಡೀ ವರ್ಷ ರಾಜ್ಯ ರಾಜಕಾರಣವನ್ನು ಆವರಿಸಿಕೊಂಡಿತ್ತು.

ಸರ್ಕಾರ ಎರಡೂವರೆ ವರ್ಷದ ಪಂಚಾಂಗದ ಮೂಲಕ ತುಂಬಿಬಂದ 'ನವೆಂಬರ್ ಕ್ರಾಂತಿ' ಅನುರಣಿಸುವ ಬದಲು, ನಾಯಕರ ಹಕ್ಕು ಸ್ಥಾಪನೆಯ ಗದ್ದಲವನ್ನೇ ಎಬ್ಬಿಸಿತು. ನಾಯಕತ್ವಕ್ಕಾಗಿ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ನಡುವಿನ ಹಣಾಹಣಿಯು ಅಧಿಕಾರ ಕೇಂದ್ರದಲ್ಲಿ ರಿಂಗಣಿಸಿತು. ಇದರಿಂದಾಗಿ ಅಭಿವೃದ್ಧಿಯತ್ತ ಲಕ್ಷ್ಯ ಕೊಡಲು ಸಾಧ್ಯವಾಗಲಿಲ್ಲ. ನಾಯಕರ ಜಗಳದಿಂದಾಗಿ ಉಂಟಾದ ಅಸ್ಥಿರ ರಾಜಕೀಯ ಪರಿಸ್ಥಿತಿಯ ಲಾಭ ಪಡೆದ ಅಧಿಕಾರಿ ವರ್ಗ ನಿಲಿಪ್ತ ತಾಳಿತು.

ಬೆಳಗಾವಿ ಅಧಿವೇಶನದ ಅವಧಿಯೂ ಸೇರಿದಂತೆ ವರ್ಷದ ಉದ್ದಕ್ಕೂ ಮುಖ್ಯಮಂತ್ರಿ ಬದಲಾವಣೆ ವಿಚಾರ, ಸಂಪುಟ ಪುನರ್‌ರಚನೆ ವಿಚಾರಗಳ ಚರ್ಚೆಗಳು ತಡೆ ಇಲ್ಲದೇ ನಡೆದವು. ಯಾರ ಜತೆಗೆ ನಿಂತರೆ ಲಾಭ ಎಂಬ ಲೆಕ್ಕಾಚಾರದಲ್ಲಿದ್ದ ಶಾಸಕರು ಹಾಗೂ ಕಾಂಗ್ರೆಸ್ ನಾಯಕರು ಬಣ ರಾಜಕಾರಣವನ್ನು ಪೋಷಿಸಿ, ತಮ್ಮ ಪರ ಲಾಬಿ ನಡೆಸುವಲ್ಲಿ ನಿರತರಾಗಿದ್ದರು.

ವರ್ಷದ ಆರಂಭದಲ್ಲೇ ದಲಿತ ಸಚಿವರು, ಶಾಸಕರ ಔತಣ ಕೂಟ ಸದ್ದು ಮಾಡಿತ್ತು. ಸಚಿವರಾದ ಸತೀಶ ಜಾರಕಿಹೊಳಿ, ಜಿ.ಪರಮೇಶ್ವರ, ಎಚ್.ಸಿ.ಮಹದೇವಪ್ಪ, ಕೆ.ಎನ್.ರಾಜಣ್ಣ, ಕೆ.ಹೆಚ್.ಮುನಿಯಪ್ಪ ಮತ್ತಿತರರ ಔತಣ ಕೂಟಗಳು ಸಂಚಲನ ಮೂಡಿಸಿದವು. ಕೆಪಿಸಿಸಿ ಅಧ್ಯಕ್ಷ ಸ್ಥಾನದ ಆಕಾಂಕ್ಷೆಗಳು ಗರಿಗೆದರಿದ್ದವು. ಕೆಲ ಔತಣಕೂಟಗಳನ್ನು ತಡೆಯುವಲ್ಲಿ, ದಲಿತರು, ಹಿಂದುಳಿದ ವರ್ಗಗಳ ಹೆಸರಿನಲ್ಲಿ ನಡೆಸಲು ಹೊರಟಿದ್ದ ಸಮಾವೇಶಗಳನ್ನು ಕಾಂಗ್ರೆಸ್ ಪಕ್ಷದ ವೇದಿಕೆಯಲ್ಲೇ ನಡೆಸುವಂತೆ ಮಾಡುವಲ್ಲಿ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿ.ಕೆ.ಶಿವಕುಮಾರ್ ಯಶ ಕಂಡಿದ್ದರು.

ಶಿವಕುಮಾರ್ ಪರ ಒಕ್ಕಲಿಗ ಸ್ವಾಮೀಜಿ ಹಾಗೂ ಸಮುದಾಯ, ಸಿದ್ದರಾಮಯ್ಯ ಪರ ಕುರುಬ ಸಮುದಾಯದ ಸ್ವಾಮೀಜಿ ಹಾಗೂ ಅಹಿಂದ ಸಮುದಾಯದ ಮುಖಂಡರು ಧ್ವನಿ ಎತ್ತಿದ್ದರು. ರಾಜ್ಯದ ಆಡಳಿತಾರೂಢ ಕಾಂಗ್ರೆಸ್‌ನ ದಿನಕ್ಕೊಂದು ಬೆಳವಣಿಗೆ, ತಂತ್ರ-ಪ್ರತಿತಂತ್ರದ ರಾಜಕಾರಣ ಕಾವೇರಿಸಿದ್ದರೂ ಪಕ್ಷದ ಹೈಕಮಾಂಡ್ ವರ್ಷಪೂರ್ತಿ ಮೌನವಹಿಸಿ, ರಾಜ್ಯ ನಾಯಕರ ಮುಂದೆ ತಾನು ದುರ್ಬಲ ಎಂಬುದನ್ನು ತೋರಿಸಿಕೊಂಡಿತು.

ಆಗಾಗ್ಗೆ ಬೆಂಗಳೂರಿಗೆ ಬರುತ್ತಲೇ ಇರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಸಿ.ಎಂ, ಡಿಸಿಎಂ ಸಚಿವರು, ಶಾಸಕರು ಭೇಟಿ ಮಾಡಿದರು. ಅಧಿಕಾರ ಹಂಚಿಕೆ, ಸಂಪುಟ ಪುನರ್‌ರಚನೆ ವಿಚಾರದಲ್ಲಿ ಉಂಟಾಗಿರುವ ಗೊಂದಲ ನಿವಾರಣೆ ಮಾಡುವಂತೆ ಸಚಿವರು, ಶಾಸಕರು ಆಗ್ರಹಿಸಿದರು. ದೆಹಲಿ ಯಾತ್ರೆಗಳೂ ನಿರಂತರ ನಡೆದವು. ಆದರೆ, ಶಿವಕುಮಾರ್ ಅವರಿಗೆ ಅವರು ಅಂದುಕೊಂಡಂತೆ ಎರಡೂವರೆ ವರ್ಷಗಳ ನಂತರ ಮುಖ್ಯಮಂತ್ರಿಯಾಗುವ ಯೋಗ ಒಲಿಯಲಿಲ್ಲ. ಗೊಂದಲಗಳು ಮುಂದುವರಿಯುವ ಲಕ್ಷಣ ಕಾಣಿಸಿದೆ.



'ಪ್ರಜಾವಾಣಿ'ಯ ಪಿ. ರಂಜು ಅವರು ಸೆರೆ ಹಿಡಿದಿರುವ ಈ ಚಿತ್ರವು ಕಾಂಗ್ರೆಸ್ ನೇತೃತ್ವದ ಸರ್ಕಾರದಲ್ಲಿರುವ ನಾಯಕತ್ವ ಬದಲಾವಣೆಯ ಗೊಂದಲವನ್ನು ಸಂಕೇತಿಸುತ್ತದೆ

ಕೆ.ಎನ್.ರಾಜಣ್ಣ ವಜಾ: ವಿವಾದಾಸ್ಪದ ಮಾತುಗಳಿಂದ ಸದ್ದು ಮಾಡುತ್ತಿರುವ ಕೆ.ಎನ್. ರಾಜಣ್ಣ, ತಮ್ಮ ಪಕ್ಷದ ನಡೆಯ ವಿರುದ್ಧವೇ ಟೀಕೆ ಮಾಡಲು ಹೋಗಿ ಸಹಕಾರ ಸಚಿವ ಸ್ಥಾನದಿಂದ ವಜಾಗೊಂಡರು. 'ಮೋದಿಯವರು ಚುನಾವಣಾ ಆಯೋಗದ ಸಹಕಾರದಲ್ಲಿ ಮತ ಕಳವು ಮಾಡಿ ಪ್ರಧಾನಿ ಹುದ್ದೆಗೇರಿದ್ದಾರೆ' ಎಂದು ಆರೋಪಿಸಿದ್ದ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ದೇಶವ್ಯಾಪಿ ಆಂದೋಲನಕ್ಕೆ ಚಾಲನೆ ನೀಡಿದ್ದರು. ಎಐಸಿಸಿ ಬೆಂಗಳೂರಿನ ಪ್ರತಿಭಟನಾ ಸಭೆಯಲ್ಲಿ ಇದನ್ನು ಪ್ರಸ್ತಾಪಿಸಿದ್ದ ರಾಹುಲ್ ಹಾಗೂ ಪಕ್ಷದ ಅಧ್ಯಕ್ಷ ಖರ್ಗೆ ಅವರು ಮೋದಿ ರಾಜೀನಾಮೆಗೆ ಆಗ್ರಹಿಸಿದ್ದರು. ಮಾರನೇ ದಿನವೇ ಪ್ರತಿಕ್ರಿಯಿಸಿದ್ದ ರಾಜಣ್ಣ, 'ಲೋಕಸಭೆ ಚುನಾವಣೆ ನಡೆದದ್ದು, ಮತಪಟ್ಟಿ ಸಿದ್ಧಪಡಿಸಿದ್ದು, ನಮ್ಮ ಸರ್ಕಾರದ ಅವಧಿಯಲ್ಲೇ. ಎಲ್ಲರೂ ಆಗ ಕಣ್ಣು ಮುಚ್ಚಿಕೊಂಡು ಕುಳಿತಿದ್ದರು' ಎಂದಿದ್ದರು. ಮತ ಕಳವಿನ ವಿರುದ್ಧ ತೊಡೆ ತಟ್ಟಿದ್ದ ರಾಹುಲ್ ಗಾಂಧಿ ಅವರನ್ನು ಟೀಕಿಸಲು ಇದು ಬಿಜೆಪಿಗೆ ನೆರವಾಗಿತ್ತು. ಇದು ಕಾಂಗ್ರೆಸ್ ಹೈಕಮಾಂಡ್‌ಗೆ ಮುಜುಗರ ತಂದಿತ್ತು. ಮುಂಗಾರು ಅಧಿವೇಶನದ ಮೊದಲ ದಿನವೇ ರಾಜಣ್ಣ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸಲಾಗಿತ್ತು.

ಬಿಜೆಪಿ ಮೂವರು ಶಾಸಕರ ಉಚ್ಚಾಟನೆ: ಬಿಜೆಪಿಯಲ್ಲೂ ಬಣ ರಾಜಕೀಯ ವರ್ಷಾರಂಭದಿಂದಲೂ ಸದ್ದು ಮಾಡಿತು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರನ್ನು ನಿರಂತರ ಟೀಕೆ ಮಾಡುತ್ತಿದ್ದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡಲಾಯಿತು. ಹಾಗೆಯೇ, ಶಾಸಕರಾದ ಶಿವರಾಂ ಹೆಬ್ಬಾರ್ ಮತ್ತು ಎಸ್.ಟಿ. ಸೋಮಶೇಖರ್ ಅವರನ್ನೂ ಪಕ್ಷ ವಿರೋಧ ಚಟುವಟಿಕೆಗಳ ಆರೋಪದ ಮೇಲೆ ಉಚ್ಚಾಟಿಸಲಾಯಿತು. ರಾಜ್ಯ ಘಟಕದ ಅಧ್ಯಕ್ಷರ ಬದಲಾವಣೆ ವಿಚಾರ ವರ್ಷವಿಡೀ ಚರ್ಚೆಯಲ್ಲಿದ್ದರೂ ಹೊಸ ಅಧ್ಯಕ್ಷ ನೇಮಕ ಅಥವಾ ವಿಜಯೇಂದ್ರ ಮುಂದುವರಿಕೆ ಬಗ್ಗೆ ಬಿಜೆಪಿ ವರಿಷ್ಠರು ಸ್ಪಷ್ಟ ನಿರ್ಧಾರವನ್ನೇ ಪ್ರಕಟಿಸಲಿಲ್ಲ.

ಎಚ್.ಡಿ.ಕೆ ಮರು ಆಯ್ಕೆ: ಪಕ್ಷದ ಪ್ರಮುಖ ನಾಯಕರ ಸಮಿತಿ ಅಧ್ಯಕ್ಷ ಸ್ಥಾನದಿಂದ ಶಾಸಕ ಜಿ.ಟಿ.ದೇವೇಗೌಡ ಅವರನ್ನು ಕೈಬಿಟ್ಟು, ಕೃಷ್ಣಾರೆಡ್ಡಿ ಅವರನ್ನು ನೇಮಕ ಮಾಡಲಾಯಿತು. ವರ್ಷಾಂತ್ಯಕ್ಕೆ ನಡೆದ ಜೆಡಿಎಸ್ ರಾಷ್ಟ್ರೀಯ ಮಂಡಳಿ ಸಭೆಯಲ್ಲಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರನ್ನೇ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಮರು ಆಯ್ಕೆ ಮಾಡಲಾಯಿತು. ಎಂದಿನಂತೆ ಎಚ್.ಡಿ.ದೇವೇಗೌಡರು ಪಕ್ಷದ ಕಾಯಂ ರಾಷ್ಟ್ರೀಯ ಅಧ್ಯಕ್ಷರಾಗಿ ಮುಂದುವರಿದರು.

ಹಿರಿಯ ನಾಯಕರ ನಿಧನ: ಕಾಂಗ್ರೆಸ್‌ನ ಹಿರಿಯ ಶಾಸಕ, ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷರಾಗಿದ್ದ ಶಾಮನೂರು ಶಿವಶಂಕರಪ್ಪ ವರ್ಷಾಂತ್ಯದಲ್ಲಿ ನಿಧನರಾದರು. ಕಾಂಗ್ರೆಸ್‌ನ ಮತ್ತೊಬ್ಬ ಹಿರಿಯರಾದ ಎಚ್.ವೈ.ಮೇಟಿ ಕೂಡ ಇದೇ ವರ್ಷ ನಿಧನರಾದರು.

ಭೂ ಗ್ಯಾರಂಟಿ


ಭೂಮಿ, ಅದರ ಹಕ್ಕು ಮತ್ತು ಮಾಲೀಕತ್ವ ಸಂಬಂಧಿತ ಗೊಂದಲ ನಿವಾರಿಸಿ, ನೈಜ ಮಾಲೀಕರಿಗೆ ಮಾಲೀಕತ್ವ ಒದಗಿಸಿಕೊಡುವ ಉದ್ದೇಶದಿಂದ ರಾಜ್ಯ ಸರ್ಕಾರವು 'ಭೂ ಗ್ಯಾರಂಟಿ' ಆರಂಭಿಸಿದೆ. ಭೂ ಗ್ಯಾರಂಟಿ ಯೋಜನೆ ಅಡಿ ನನ್ನ ಭೂಮಿ, ನನ್ನ ಹಕ್ಕು, ಭೂ ಸುರಕ್ಷಾ, ಇ-ಪೌತಿ, ಪೋಡಿ ಮುಕ್ತ ಗ್ರಾಮ, ಪಹಣಿ–ಆಧಾರ್ ಜೋಡಣೆ, ಸ್ವಯಂಚಾಲಿತ ಮ್ಯುಟೇಷನ್ ಸೇರಿ ಹತ್ತಾರು ಉಪ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಜನರು ಕಚೇರಿಗಳಿಗೆ ಅಲೆಯದೇ, ಸ್ಮಾರ್ಟ್‌ಫೋನ್, ಕಂಪ್ಯೂಟರ್‌ಗಳ ಮೂಲಕ ತಮ್ಮ ಭೂದಾಖಲೆಗಳನ್ನು ಪಡೆಯಬಹುದಾಗಿದೆ. ಭೂವಂಚನೆಗಳಿಗೂ ಈ ಯೋಜನೆ ಕಡಿವಾಣ ಹಾಕಲಿದೆ ಎಂಬುದು ಸರ್ಕಾರದ ಪ್ರತಿಪಾದನೆ.

ಮಹದೇವಪುರ, ಆಳಂದ ಮತಕಳವು

ಬೆಂಗಳೂರಿನ ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ 14,000ಕ್ಕೂ ಹೆಚ್ಚು ಅಕ್ರಮ ಮತದಾರರನ್ನು ನೋಂದಾಯಿಸಿ ಚುನಾವಣಾ ಅಕ್ರಮ ಎಸಗಲಾಗಿದೆ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಸುದ್ದಿಗೋಷ್ಠಿಯಲ್ಲಿ ದಾಖಲೆಗಳನ್ನು ಬಿಡುಗಡೆ ಮಾಡಿದ್ದರು. ಆ ದಾಖಲೆಗಳನ್ನು ಪರಿಶೀಲಿಸಿದಾಗ, ಆ ವಿಳಾಸಗಳಲ್ಲಿ ಮತದಾರರು ಇಲ್ಲದೇ ಇರುವುದನ್ನು ಮತಗಟ್ಟೆ ಅಧಿಕಾರಿಗಳು ಖಚಿತಪಡಿಸಿದರು. ಇಬ್ಬರಷ್ಟೇ ವಾಸಿಸಬಹುದಾದೊಂದು ಸಣ್ಣ ಮನೆಯಲ್ಲಿ 83 ಮತದಾರರ ಚೀಟಿಗಳು ಸಕ್ರಿಯವಾಗಿದ್ದವು.

ಇದರ ಬೆನ್ನಲ್ಲೇ, ಆಳಂದ ವಿಧಾನಸಭಾ ಕ್ಷೇತ್ರದಲ್ಲಿ 5,994 ಮತದಾರರ ಚೀಟಿಗಳನ್ನು ಅಕ್ರಮವಾಗಿ ರದ್ದುಪಡಿಸಲು ಯತ್ನಿಸಲಾಗಿತ್ತು ಎಂಬ ವಿಚಾರವನ್ನು ರಾಹುಲ್ ಗಾಂಧಿ ಬಹಿರಂಗಪಡಿಸಿದರು. ಈ ಬಗ್ಗೆ ತನಿಖೆಗಾಗಿ ರಾಜ್ಯ ಸರ್ಕಾರವು ಎಸ್‌ಐಟಿ ರಚಿಸಿತು. ಪ್ರತಿಯೊಂದು ಚೀಟಿಯನ್ನು ರದ್ದುಪಡಿಸಲು ₹80 ಪಾವತಿಸಿ, ಅಕ್ರಮವಾಗಿ ಅರ್ಜಿ ಸಲ್ಲಿಸಲಾಗಿತ್ತು ಮತ್ತು ಇದಕ್ಕಾಗಿ ಆಳಂದದಲ್ಲಿ ಕಾಲ್‌ಸೆಂಟರ್ ಒಂದನ್ನು ಬಳಸಿಕೊಳ್ಳಲಾಗಿತ್ತು ಎಂಬುದು ಪತ್ತೆಯಾಯಿತು. ಜತೆಗೆ ಅರ್ಜಿಗಳನ್ನು ಸಲ್ಲಿಸಲು ಕೂಲಿ ಕಾರ್ಮಿಕರ ಸಿಮ್ ಕಾರ್ಡ್‌ಗಳನ್ನು ದುರುಪಯೋಗ ಮಾಡಿಕೊಳ್ಳಲಾಗಿತ್ತು ಮತ್ತು ಪಶ್ಚಿಮ ಬಂಗಾಳದ ವ್ಯಕ್ತಿಯೊಬ್ಬ ಒಟಿಪಿಗಳನ್ನು ಒದಗಿಸಿದ್ದ ಎಂಬುದು ಗೊತ್ತಾಯಿತು. ಆತನನ್ನು ಬಂಧಿಸಲಾಯಿತು. ಈ ಬಗ್ಗೆ ತನಿಖೆ ಪ್ರಗತಿಯಲ್ಲಿದೆ.

ಎಸ್‌ಐಟಿ ತನಿಖೆ ವೇಳೆ, ಆಳಂದ ಕ್ಷೇತ್ರದ ಬಿಜೆಪಿಯ ಪರಾಜಿತ ಅಭ್ಯರ್ಥಿ ಸುಭಾಷ ಗುತ್ತೇದಾರ ಅವರ ಮನೆಯಲ್ಲಿ ಸಾವಿರಾರು ಮತದಾರರ ಚೀಟಿಗಳು ಮತ್ತು ಮತದಾರರ ಪಟ್ಟಿಗೆ ಬೆಂಕಿ ಹಚ್ಚಲಾಗಿತ್ತು. ಅದು ಪತ್ತೆಯಾಗುತ್ತಿದ್ದಂತೆ, ಅರೆಬರೆ ಸುಟ್ಟ ಮತದಾರರ ಚೀಟಿ ಮತ್ತು ಪಟ್ಟಿಗಳನ್ನು ನದಿಗೆ ಎಸೆಯಲಾಗಿತ್ತು. ಈ ಬಗ್ಗೆ ವಿಧಿವಿಜ್ಞಾನ ಪರೀಕ್ಷೆಯ ವರದಿ ಬರಬೇಕಿದ್ದು, ತನಿಖೆ ನಡೆಯುತ್ತಿದೆ.



ಒಳಮೀಸಲಾತಿ ಮತ್ತು ಸಾಮಾಜಿಕ ಸಮೀಕ್ಷೆ

ಪರಿಶಿಷ್ಟ ಜಾತಿಗಳಿಗೆ ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗ ನೇಮಕಾತಿಯಲ್ಲಿ ಒಳಮೀಸಲಾತಿ ನೀಡುವ ಸಂಬಂಧ ರಚಿಸಲಾಗಿದ್ದ ನ್ಯಾ. ಎಚ್.ಎನ್.ನಾಗಮೋಹನ ದಾಸ್ ನೇತೃತ್ವದ ಆಯೋಗ, ಸಮೀಕ್ಷೆ ನಡೆಸಿ ಒಳಮೀಸಲಾತಿ ಹಂಚಿಕೆಯ ಶಿಫಾರಸನ್ನು ಮಾಡಿತು. ಆಯೋಗವು ಮಾಡಿದ್ದ ಶಿಫಾರಸಿಗಿಂತ ಭಿನ್ನವಾಗಿ ರಾಜ್ಯ ಸರ್ಕಾರವು ಒಳಮೀಸಲಾತಿಯನ್ನು ಹಂಚಿಕೆ ಮಾಡಿತು.

101 ಉಪಜಾತಿಗಳನ್ನು ಮೂರು ಪ್ರವರ್ಗಗಳನ್ನಾಗಿ ವಿಂಗಡಿಸಿ 'ಪ್ರವರ್ಗ ಎ'ನಲ್ಲಿ 16 ಜಾತಿಗಳನ್ನು ಸೇರಿಸಿ ಶೇ 6, 'ಪ್ರವರ್ಗ ಬಿ'ನಲ್ಲಿ 19 ಜಾತಿಗಳನ್ನು ಸೇರಿಸಿ ಶೇ 6 ಹಾಗೂ 'ಪ್ರವರ್ಗ ಸಿ'ನಲ್ಲಿ 63 ಜಾತಿಗಳನ್ನು ಸೇರಿಸಿ ಶೇ 5 ಮೀಸಲಾತಿ ಹಂಚಿಕೆ ಮಾಡಲಾಗಿದೆ. ಅಸ್ಪೃಶ್ಯ ಅಲೆಮಾರಿ ಸಮುದಾಯಗಳು ತಮಗೆ ಪ್ರತ್ಯೇಕ ಶೇ 1ರಷ್ಟು ಒಳ ಮೀಸಲಾತಿ ನೀಡಬೇಕು ಎಂದು ಒತ್ತಾಯಿಸುತ್ತಿವೆ. ಒಳಮೀಸಲಾತಿಗೆ ಕಾನೂನಿನ ಭದ್ರತೆ ಒದಗಿಸಲು ಸರ್ಕಾರವು 'ಕರ್ನಾಟಕ ಅನುಸೂಚಿತ ಜಾತಿಗಳ (ಉಪ-ವರ್ಗೀಕರಣ) ಮಸೂದೆ–2025'ಕ್ಕೆ ವಿಧಾನ ಮಂಡಲದ ಅಂಗೀಕಾರ ಪಡೆದಿದೆ.

ರಾಜ್ಯದ ಜನರ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿಯ ಸಂಬಂಧ ದತ್ತಾಂಶ ಕಲೆಹಾಕಲು ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗವು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಚಾಲನೆ ನೀಡಿತು. ಸಮೀಕ್ಷೆಗೆ ಸಿದ್ಧತೆಯಲ್ಲಿನ ಲೋಪಗಳು ಒಂದೆಡೆ ತೊಡಕಾದರೆ, ಹೈಕೋರ್ಟ್‌ನಲ್ಲಿ ಸಲ್ಲಿಕೆಯಾದ ಅರ್ಜಿಗಳೂ ತಡೆಯಾದವು. ಸಮೀಕ್ಷೆಗೆ ಮಾಹಿತಿ ನೀಡುವುದು ಕಡ್ಡಾಯವಲ್ಲ ಎಂದು ಹೈಕೋರ್ಟ್ ನೀಡಿದ ಮಧ್ಯಂತರ ಆದೇಶದ ನಂತರ ಸಮೀಕ್ಷೆ ಆರಂಭವಾಯಿತು.

ಮಸೂದೆಗಳದ್ದೇ ಸದ್ದು

- ಬೃಹತ್ ರಾಜಕೀಯ ರ್‍ಯಾಲಿ, ದೊಡ್ಡ ಸಮಾವೇಶ, ಸಾಮೂಹಿಕ ಸಮಾರಂಭಗಳಿಗೆ ಸೇರುವ ಜನಸಾಗರವನ್ನು ಪರಿಣಾಮಕಾರಿಯಾಗಿ ನಿರ್ವಹಿಸಿ, ನಿಯಂತ್ರಿಸುವ ಉದ್ದೇಶದಿಂದ 'ಕರ್ನಾಟಕ ಜನಸಂದಣಿ ನಿಯಂತ್ರಣ (ಸಾಮೂಹಿಕ ಸಭೆ, ಕಾರ್ಯಕ್ರಮಗಳು ಮತ್ತು ಸ್ಥಳಗಳಲ್ಲಿ ಜನಸಂದಣಿ ನಿರ್ವಹಣೆ) ಕಾಯ್ದೆ'ಯನ್ನು ಜಾರಿಗೆ ತಂದಿದೆ
- ಬಿಬಿಎಂಪಿಯನ್ನು ಐದು ಪ್ರತ್ಯೇಕ ಪಾಲಿಕೆಗಳಾಗಿ ವಿಭಜಿಸಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ರಚನೆಗೆ ಅವಕಾಶ ಮಾಡಿಕೊಡುವ ಕಾಯ್ದೆಯನ್ನು ರಾಜ್ಯ ಸರ್ಕಾರ ಜಾರಿಗೆ ತಂದಿದೆ
- ಸಾಮಾಜಿಕ ಬಹಿಷ್ಕಾರಕ್ಕೆ ಕಡಿವಾಣ ಹಾಕುವುದಕ್ಕಾಗಿ 'ಕರ್ನಾಟಕ ಸಾಮಾಜಿಕ ಬಹಿಷ್ಕಾರ (ಪ್ರತಿಬಂಧಕ, ನಿಷೇಧ ಮತ್ತು ಪರಿಹಾರ) ಮಸೂದೆ–2025'ಕ್ಕೆ ವಿಧಾನ ಮಂಡಲದಲ್ಲಿ ಅನುಮೋದನೆ ದೊರೆತಿದೆ
- ದ್ವೇಷ ಭಾಷಣ ಮತ್ತು ದ್ವೇಷಾಪರಾಧವನ್ನು ತಡೆಯುವ ಉದ್ದೇಶದಿಂದ ರೂಪಿಸಿದ 'ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷಾಪರಾಧ (ಪ್ರತಿಬಂಧಕ) ಮಸೂದೆ–2025'ಕ್ಕೆ ವಿಧಾನ ಮಂಡಲದ ಉಭಯ ಸದನಗಳಲ್ಲಿ ಪ್ರತಿಪಕ್ಷಗಳ ತೀವ್ರ ವಿರೋಧದ ಮಧ್ಯೆಯೇ ಸರ್ಕಾರವು ಅಂಗೀಕಾರ ಪಡೆದುಕೊಂಡಿದೆ

ಟ್ರಂಪ್ 'ಮಗಾ' ನೀತಿ ಜೆನ್ ಝೀ ಕ್ರಾಂತಿ

2025ರಲ್ಲಿ ಜಾಗತಿಕ ರಾಜಕಾರಣವು ಹಲವು ಬೆಳವಣಿಗೆಗಳಿಗೆ ಸಾಕ್ಷಿಯಾಯಿತು. ಅಭಿವೃದ್ಧಿ ಹೊಂದಿದ ಕೆಲವು ರಾಷ್ಟ್ರಗಳಲ್ಲಿ ಹೊಸ ನಾಯಕರು ಅಧಿಕಾರ ಹಿಡಿದರು. ಇನ್ನೂ ಕೆಲವು ರಾಷ್ಟ್ರಗಳಲ್ಲಿ ರಾಜಕೀಯ ಅಸ್ಥಿರತೆ ಕಂಡು ಬಂತು. ಜೆನ್ ಝೀ ನೇಪಾಳದಲ್ಲಿ ಸರ್ಕಾರದ ಪತನಕ್ಕೆ ಕಾರಣವಾದರೆ, ಮತ್ತೂ ಕೆಲವೆಡೆ ಅಧಿಕಾರಸ್ಥರಿಗೆ ಬಿಸಿ ಮುಟ್ಟಿಸಿತು

● ಸೂರ್ಯನಾರಾಯಣ ವಿ.

ಅಮೆರಿಕ ನಾಯಕತ್ವ ಬದಲು: ಅಮೆರಿಕದ ಅಧ್ಯಕ್ಷರಾಗಿ ರಿಪಬ್ಲಿಕನ್ ಪಕ್ಷದ ಡೊನಾಲ್ಡ್ ಟ್ರಂಪ್ ಅವರು ಎರಡನೇ ಬಾರಿಗೆ ಅಧಿಕಾರ ಸ್ವೀಕರಿಸಿದರು. ಅಮೆರಿಕ ಮೊದಲು ನೀತಿಯನ್ನು ಪ್ರತಿಪಾದಿಸುತ್ತಾ 'ಮಗಾ' (MAGA-Make America Great Again) ಎಂಬ ಘೋಷಣೆ ಮಾಡುತ್ತಾ ಅಧಿಕಾರ ಹಿಡಿದ ಅವರು ಹೊರದೇಶಗಳಿಂದ ಆಮದು ಮಾಡುವ ವಸ್ತುಗಳಿಗೆ ಪ್ರತಿ ಸುಂಕ ಹೇರುವ, ವಲಸಿಗರು ಅದರಲ್ಲೂ ಅಕ್ರಮ ವಲಸಿಗರ ವಿರುದ್ಧ ಕಠಿಣ ಕ್ರಮ, ಎಚ್1ಬಿ ವೀಸಾ ನಿರ್ಬಂಧ, ವಿದೇಶಿ ಉದ್ಯೋಗಿಗಳಿಗೆ ಕಡಿವಾಣ, ಹೊರದೇಶಗಳಲ್ಲಿ ಬಂಡವಾಳ ಹೂಡಲು ನಿರ್ಧರಿಸಿರುವ ಕಂಪನಿಗಳನ್ನು ಕಠಿಣ ಪದಗಳಿಂದ ಟೀಕಿಸಿ ಜಗತ್ತಿನಾದ್ಯಂತ ದೊಡ್ಡ ಸುದ್ದಿಯಾದರು. ಅವರ ಸುಂಕ ಹೇರಿಕೆಯು ಕೆನಡಾ, ಮೆಕ್ಸಿಕೊ, ಭಾರತ, ಬ್ರೆಜಿಲ್ ಸೇರಿದಂತೆ ಹಲವು ದೇಶಗಳೊಂದಿಗೆ ರಾಜತಾಂತ್ರಿಕ ಬಿಕ್ಕಟ್ಟಿಗೂ ಕಾರಣವಾಯಿತು. ಚೀನಾದೊಂದಿಗೆ ಸುಂಕ ಸಮರಕ್ಕೆ ಕಾರಣವಾಯಿತು.



ಕೆನಡಾಕ್ಕೆ ಹೊಸ ಪ್ರಧಾನಿ: ಲಿಬರಲ್ ಪಕ್ಷದ ನಾಯಕ ಮಾರ್ಕ್ ಕ್ಯಾರ್ನಿ ಅವರು ಕೆನಡಾದ 24ನೇ ಪ್ರಧಾನಿಯಾಗಿ ಮಾರ್ಚ್‌ನಲ್ಲಿ ಅಧಿಕಾರ ವಹಿಸಿಕೊಂಡರು. 10 ವರ್ಷ ಪ್ರಧಾನಿಯಾಗಿದ್ದ ಜಸ್ಟಿನ್ ಟ್ರೂಡೊ ಅವರು ರಾಜಕೀಯ ಬಿಕ್ಕಟ್ಟಿನ ಕಾರಣಕ್ಕೆ ರಾಜಿನಾಮೆ ನೀಡಿದ ನಂತರ ಕ್ಯಾರ್ನಿ ಪ್ರಧಾನಿ ಹುದ್ದೆಗೆ ಏರಿದರು. ನಂತರ ನಡೆದ ಸಂಸತ್ ಚುನಾವಣೆಯಲ್ಲಿ ಮತ್ತೆ ಪಕ್ಷವನ್ನು ಅಧಿಕಾರಕ್ಕೆ ತಂದರು. ಟ್ರೂಡೊ ಅವಧಿಯಲ್ಲಿ ಭಾರತದೊಂದಿಗೆ ಹಳಸಿದ್ದ ರಾಜತಾಂತ್ರಿಕ ಸಂಬಂಧವನ್ನು ಮತ್ತೆ ಹಳಿಗೆ ಮರಳಿಸಲು ಮಾರ್ಕ್ ಯತ್ನಿಸುತ್ತಿದ್ದಾರೆ.

ಜಪಾನ್‌ಗೆ ಮಹಿಳಾ ಪ್ರಧಾನಿ: ಜಗತ್ತಿನ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಒಂದಾದ ಜಪಾನ್‌ನಲ್ಲಿ ಈ ವರ್ಷ ರಾಜಕೀಯ ಅಸ್ಥಿರತೆ ಕಂಡು ಬಂತು. ಆಡಳಿತಾರೂಢ ಲಿಬರಲ್ ಡೆಮಾಕ್ರಟಿಕ್ ಪಕ್ಷದ ನಾಯಕಿಯಾಗಿ ಆಯ್ಕೆಯಾದ ಸನೇ ತಕೈಚಿ ಅವರು ಅಕ್ಟೋಬರ್ ತಿಂಗಳಲ್ಲಿ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದರು. ತಕೈಚಿ ಅವರು ಜಪಾನಿನ ಮೊದಲ ಮಹಿಳಾ ಪ್ರಧಾನಿ. ಅದಕ್ಕೂ ಮೊದಲು ಒಂದು ವರ್ಷ ಪ್ರಧಾನಿಯಾಗಿದ್ದ ಶಿಗೇರು ಇಶಿಬಾ ನೇತೃತ್ವದಲ್ಲಿ ನಡೆದ ಹಲವು ಚುನಾವಣೆಗಳಲ್ಲಿ ಪಕ್ಷಕ್ಕೆ ಸೋಲಾಗಿದ್ದರಿಂದ ಅವರು ರಾಜೀನಾಮೆ ನೀಡಿದ್ದರು

ಥಾಯ್ಲೆಂಡ್ ಪ್ರಧಾನಿ ವಜಾ: ಥಾಯ್ಲೆಂಡ್ ಮತ್ತು ಕಾಂಬೋಡಿಯಾ ನಡುವೆ ಸೇನಾ ಸಂಘರ್ಷ ನಡೆಯುತ್ತಿದ್ದ ಸಂದರ್ಭದಲ್ಲೇ ಥಾಯ್ಲೆಂಡ್ ಪ್ರಧಾನಿಯಾಗಿದ್ದ ಪ್ಯಾಂಟೋಂಗ್ಟರ್ನ್ ಶಿನವಾತ್ರ ಅವರು ಕಾಂಬೋಡಿಯಾದ ಮಾಜಿ ನಾಯಕ ಹುನ್ ಸೆನ್ ಅವರ ಜೊತೆ ದೂರವಾಣಿಯಲ್ಲಿ ಮಾತನಾಡಿದ್ದ ವಿವರ ಸೋರಿಕೆಯಾದ ಕಾರಣ ಪ್ರಕರಣದಲ್ಲಿ ಶಿನವಾತ್ರ ಅವರನ್ನು ಹುದ್ದೆಯಿಂದ ವಜಾಗೊಳಿಸುವಂತೆ ಅಲ್ಲಿನ ಸಾಂವಿಧಾನಿಕ ನ್ಯಾಯಾಲಯವು ತೀರ್ಪು ನೀಡಿತು.

ಫ್ರಾನ್ಸ್‌ನಲ್ಲಿ ರಾಜಕೀಯ ಅಸ್ಥಿರತೆ: ಅಭಿವೃದ್ಧಿ ಹೊಂದಿರುವ ದೇಶಗಳಲ್ಲಿ ಒಂದಾದ ಫ್ರಾನ್ಸ್ ಈ ವರ್ಷ ರಾಜಕೀಯ ಅಸ್ಥಿರತೆಗೆ ಸಾಕ್ಷಿಯಾಯಿತು. ಹದಗೆಟ್ಟ ಆರ್ಥಿಕತೆ, ನಿರುದ್ಯೋಗ, ಸಾಲವು ದೇಶವನ್ನು ಬಾಧಿಸುತ್ತಿದ್ದು, ಆಡಳಿತ ನಡೆಸುವವರಿಗೆ ಅದನ್ನು ನಿಯಂತ್ರಿಸಲು ಸಾಧ್ಯವಾಗದೆ ಕೈಚೆಲ್ಲಿದರು. ಎರಡನೇ ಬಾರಿಗೆ ಅಧ್ಯಕ್ಷರಾಗಿರುವ ಇಮ್ಯಾನ್ಯುವೆಲ್ ಮ್ಯಾಕ್ರನ್ ಅವರಿಗೆ ದೇಶದಲ್ಲಿ ರಾಜಕೀಯ ಸ್ಥಿರತೆ ತರುವುದೇ ದೊಡ್ಡ ಸವಾಲಾಗಿದೆ. ಈ ವರ್ಷ ಫ್ರಾನ್ಸ್ ಮೂವರು ಪ್ರಧಾನಿಗಳನ್ನು ಕಂಡಿದೆ.

ನೇಪಾಳದಲ್ಲಿ 'ಯುವ ಕ್ರಾಂತಿ': ಸೆಪ್ಟೆಂಬರ್‌ನಲ್ಲಿ ನೇಪಾಳದಲ್ಲಿ ನಡೆದಿದ್ದ ಯುವ ಕ್ರಾಂತಿ ಈ ವರ್ಷ ಜಾಗತಿಕವಾಗಿ ಗಮನ ಸೆಳೆದ ಪ್ರಮುಖ ರಾಜಕೀಯ ಬೆಳವಣಿಗೆಗಳಲ್ಲೊಂದು. ಹಿಂದೆ ಶ್ರೀಲಂಕಾ, ಬಾಂಗ್ಲಾದೇಶದಲ್ಲಿ ನಡೆದಿದ್ದ ಮಾದರಿಯಲ್ಲೇ ಇಲ್ಲೂ ಯುವ ಜನರು ದಂಗೆ ಎದ್ದು ಪ್ರಧಾನಿ ಕೆ.ಪಿ.ಶರ್ಮಾ ಓಲಿ ಅವರ ಸರ್ಕಾರ ಪತನವಾಗುವಂತೆ ಮಾಡಿದರು.

ದೇಶದಲ್ಲಿ ಸಾಮಾಜಿಕ ಜಾಲತಾಣಗಳ ಮೇಲೆ ನಿರ್ಬಂಧ ವಿಧಿಸಿದ ಕಾರಣಕ್ಕೆ 'ಜೆನ್ ಝೀ' ಯುವ ಸಮುದಾಯ (1997ರಿಂದ 2012ರ ನಡುವೆ ಹುಟ್ಟಿದ ತಲೆಮಾರು) ನಡೆಸಿದ ಹೋರಾಟ ಇದು ಹೋರಾಟ ಹೇಳಲಾಗಿತ್ತಾದರೂ, ಈ ಆಕ್ರೋಶದ ಹಿಂದೆ ಸರ್ಕಾರದ ದುರಾಡಳಿತ, ಭ್ರಷ್ಟಾಚಾರ, ಆರ್ಥಿಕ ಕುಸಿತ, ಸ್ವಜನಪಕ್ಷಪಾತದಂತಹ ಗಂಭೀರ ಸಮಸ್ಯೆಗಳಿದ್ದವು. ಓಲಿ ಪದಚ್ಯುತಿಯ ನಂತರ ರಾಜಕಾರಣಿ, ನಿವೃತ್ತ ನ್ಯಾಯಮೂರ್ತಿ ಸುಶೀಲಾ ಕರ್ಕಿ ನೇತೃತ್ವದ ಮಧ್ಯಂತರ ಸರ್ಕಾರ ಅಲ್ಲಿ ಅಸ್ತಿತ್ವಕ್ಕೆ ಬಂದಿದೆ.



ಬೀದಿಗೆ ಬಂದ 'ಜೆನ್ ಝೀ': ನೇಪಾಳದಲ್ಲಷ್ಟೇ ಅಲ್ಲ ಹಲವು ರಾಷ್ಟ್ರಗಳಲ್ಲಿ ಈ ವರ್ಷ 'ಜೆನ್ ಝೀ' ಎಂದು ಕರೆಯುವ ಯುವ ಸಮುದಾಯ ಸಾಮಾಜಿಕ ಜಾಲತಾಣಗಳ ಮೂಲಕ ಒಗ್ಗೂಡಿ ನಿರುದ್ಯೋಗ ಸಮಸ್ಯೆ, ಕುಸಿದ ಅರ್ಥ ವ್ಯವಸ್ಥೆ, ಆಡಳಿತ ನಡೆಸುವವರ ಭಷ್ಟಾಚಾರ, ಸ್ವಜನಪಕ್ಷಪಾತ ಇನ್ನಿತರ ಗಂಭೀರ ಸಮಸ್ಯೆಗಳ ವಿರುದ್ಧ ಬೀದಿಗಿಳಿದು ಸರ್ಕಾರಗಳಿಗೆ ಬಿಸಿ ಮುಟ್ಟಿಸಿತು. ಪೆರು, ಪಿಲಿಪ್ಪೀನ್ಸ್, ಇಂಡೊನೇಷ್ಯಾ, ಮೊರಾಕ್ಕೊ, ಮಡಗಾಸ್ಕರ್‌ಗಳಲ್ಲಿ ಯುವ ಜನರ ಪ್ರತಿಭಟನೆಗಳು ನಡೆದವು.

ನಕ್ಸಲ್ ಚಳವಳಿಗೆ ಕೊನೆ ಏಟು

ಪ್ರಜಾವಾಣಿ ವಾರ್ತೆ



ಭಾರತದಲ್ಲಿ ನಕ್ಸಲ್ ಚಳವಳಿ ಕೊನೆಯ ಘಟ್ಟ ಮುಟ್ಟಿದಂತೆ ಕಾಣುತ್ತಿದೆ. ಪ್ರಮುಖ ನಾಯಕರು ಹತರಾಗಿದ್ದಾರೆ. ಕೆಲವರು ಶರಣಾಗತರಾಗಿದ್ದಾರೆ. ಬೆರಳೆಣಿಕೆಯ ನಾಯಕರು, ಕೆಲವೇ ಕೇಡರ್‌ಗಳು ಮಾತ್ರ ಉಳಿದಿದ್ದಾರೆ ಎನ್ನಲಾಗುತ್ತಿದೆ.

ಪಶ್ಚಿಮ ಬಂಗಾಳದ ನಕ್ಸಲ್ಬಾರಿ ಎಂಬಲ್ಲಿ (1967) ಮಾವೋ ಚಿಂತನೆಗಳಿಂದ ಪ್ರೇರಿತರಾಗಿದ್ದ ಕಮ್ಯುನಿಸ್ಟ್ ಮುಖಂಡರಿಂದ ಆರಂಭವಾಗಿದ್ದ ನಕ್ಸಲ್ ಚಳವಳಿ ಆಂಧ್ರ ಪ್ರದೇಶ, ತೆಲಂಗಾಣ, ಛತ್ತೀಸಗಢ, ಒಡಿಶಾ, ಜಾರ್ಖಂಡ್, ಮಹಾರಾಷ್ಟ್ರ ಸೇರಿದಂತೆ ಅನೇಕ ರಾಜ್ಯಗಳಿಗೆ ಹರಡಿತ್ತು. 2004ರಲ್ಲಿ ಪೀಪಲ್ಸ್ ವಾರ್ ಗ್ರೂಪ್, ಮಾವೋಯಿಸ್ಟ್ ಕಮ್ಯುನಿಸ್ಟ್ ಸೆಂಟ್ ಆಫ್ ಇಂಡಿಯಾ ವಿಲೀನಗೊಂಡು ಸಿಪಿಐ (ಮಾವೋಯಿಸ್ಟ್) ರೂಪುಗೊಂಡ ನಂತರ ಅವರ ಬಲವರ್ಧನೆಯಾಗಿತ್ತು.

ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ನಕ್ಸಲ್ ದಮನಕ್ಕೆ ವಿಶೇಷ ಕಾರ್ಯಾಚರಣೆಗಳನ್ನು ಆರಂಭಿಸಿತು. 2014ರಲ್ಲಿ 126 ಜಿಲ್ಲೆಗಳಿಗೆ ವ್ಯಾಪಿಸಿದ್ದ ನಕ್ಸಲರು, 2025ಕ್ಕೆ 11 ಜಿಲ್ಲೆಗಳಿಗೆ ಸೀಮಿತರಾಗಿದ್ದಾರೆ; 2013ರಲ್ಲಿ 330 ನಕ್ಸಲ್ ಪ್ರಕರಣಗಳು ವರದಿಯಾಗಿದ್ದರೆ, 2025ರಲ್ಲಿ 52 ಪ್ರಕರಣಗಳು ಮಾತ್ರವೇ ವರದಿಯಾಗಿವೆ ಎಂದು ಕೇಂದ್ರ ಸರ್ಕಾರದ ಅಂಕಿಅಂಶಗಳು ಹೇಳುತ್ತವೆ.

2025ರಲ್ಲಿ ಒಟ್ಟು 317 ನಕ್ಸಲರನ್ನು ಹತ್ಯೆ ಮಾಡಲಾಗಿದೆ, 862 ಮಂದಿಯನ್ನು ಬಂಧಿಸಲಾಗಿದೆ ಮತ್ತು 1,973 ಮಂದಿ ಶರಣಾಗತರಾಗಿದ್ದಾರೆ. ನಂಬಾಲ ಕೇಶವ ರಾವ್ ಅಲಿಯಾಸ್ ಬಸವರಾಜು, ಮಾಡವಿ ಹಿಡ್ಮಾ ಸೇರಿದಂತೆ ಕೇಂದ್ರ ಸಮಿತಿಯ ಕನಿಷ್ಠ 9 ಮಂದಿ ಸದಸ್ಯರು ಈ ವರ್ಷ ಪೊಲೀಸರಿಂದ ಹತರಾಗಿದ್ದಾರೆ. ರೂಪೇಶ್, ಮಲ್ಲೋಜುಲ ವೇಣುಗೋಪಾಲ, ಪೋತುಲ ಪದ್ಮಾವತಿ, ಪುಲ್ಲೂರಿ ಪ್ರಸಾದ್ ರಾವ್ ಮುಂತಾದ ಪ್ರಮುಖರು ಶರಣಾಗಿದ್ದಾರೆ. ಕೇಂದ್ರ ಸಮಿತಿಯಲ್ಲಿ ಒಟ್ಟು 34 ಮಂದಿ ಸದಸ್ಯರು ಇರಬೇಕು. ಆದರೆ, ಪ್ರಸ್ತುತ 9 ಮಂದಿ ಮಾತ್ರ ಉಳಿದಿದ್ದಾರೆ ಎನ್ನಲಾಗುತ್ತಿದೆ.

ನಕ್ಸಲ್ ಸಂಬಂಧಿತ ಹಿಂಸಾಚಾರದಲ್ಲಿ 2000ದಿಂದ 2025ರವರೆಗೆ 4,944 ನಕ್ಸಲರು, 4,131 ನಾಗರಿಕರು, 2,718 ಪೊಲೀಸರು ಸಾವಿಗೀಡಾಗಿದ್ದಾರೆ ಎಂದು ವರದಿಯೊಂದು ಹೇಳಿದೆ. 2026ರ ಮಾರ್ಚ್ ಅಂತ್ಯದ ವೇಳೆಗೆ ದೇಶದಲ್ಲಿ ನಕ್ಸಲರನ್ನು ಸಂಪೂರ್ಣವಾಗಿ ನಿರ್ನಾಮ ಮಾಡುತ್ತೇವೆ ಎಂದು ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ಪ್ರಯತ್ನಶೀಲತೆಯ ಫಲ

ನುಡಿ ಬೆಳಗು



ದೀಪಾ ಹಿರೇಗುತ್ತಿ

2020ರ ಟೋಕಿಯೋ ಒಲಿಂಪಿಕ್ಸ್. 50 ಮೀಟರ್ ಫ್ರೀಸ್ಟೈಲ್ ಈಜಿನ ಸ್ಪರ್ಧೆಯಲ್ಲಿ ಆ ಈಜುಗಾರ ಪದಕ ಗೆಲ್ಲಲಿಲ್ಲ. ಜೀವಮಾನದಲ್ಲಿ ಇನ್ನು ಈಜುವುದಿಲ್ಲ ಎಂದು ಸೋಲಿನ ಹತಾಶೆಯಿಂದ ತೀರ್ಮಾನಿಸಿದನಾತ. ಕಾರಣ ಆತ ಹದಿನೆಂಟರ ಹರೆಯದಲ್ಲಿಯೇ 2012ರ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿದ್ದ. ಹದಿನೇಳನೇ ವಯಸ್ಸಿನಲ್ಲಿ ವಿಶ್ವ ಜ್ಯೂನಿಯರ್ ಚಾಂಪಿಯನ್ ಶಿಪ್‌ನಲ್ಲಿ ಬಂಗಾರ ಗೆದ್ದಿದ್ದ. ಕಾಮನ್‌ವೆಲ್ತ್ ಆಟಗಳೂ ಸೇರಿದಂತೆ ಬೇರೆ ಕ್ರೀಡಾಕೂಟಗಳಲ್ಲಿ ಪದಕಗಳನ್ನು ಕೊಳ್ಳೆ ಹೊಡೆಯುತ್ತಿದ್ದ ಆತನಿಗೆ ಒಲಿಂಪಿಕ್ಸ್ ಪದಕ ಯಾಕೋ ದಕ್ಕುತ್ತಿರಲಿಲ್ಲ. 2012, 2016 ಕೊನೆಗೆ 2020 ಈ ಮೂರೂ ಒಲಿಂಪಿಕ್ಸ್‌ಗಳಲ್ಲಿ ಭಾಗವಹಿಸಿದರೂ ಅದೆಷ್ಟು ಶ್ರಮ ಪಟ್ಟರೂ ಒಲಿಯದ ಒಂದೇ ಒಂದು ಪದಕ ಅವನನ್ನು ನಿರಾಸೆಗೊಳಿಸಿತ್ತು. ಎಂಟು ವರ್ಷ ಪ್ರಯತ್ನಿಸಿ ಸುಸ್ತಾಗಿದ್ದನಾತ. ಆಧುನಿಕ ಭಾಷೆಯಲ್ಲಿ ಅದನ್ನು ಬರ್ನ್ ಔಟ್ ಆಗುವುದೆನ್ನುತ್ತಾರೆ. ತಮ್ಮಿಂದ ಆಗುವುದಕ್ಕಿಂತ ಹೆಚ್ಚು ಅತಿಯಾದ ಕೆಲಸ ಮಾಡಿದರೆ ಉಂಟಾಗುವ ಕುಸಿದು ಬೀಳುವಂತಹ ಸ್ಥಿತಿಯದು.

ಆದರೆ ಯಾವಾಗಲೂ ಈಜುತ್ತಿದ್ದವರಿಗೆ ದೈಹಿಕವಾಗಿ ಚಟುವಟಿಕೆಯಿಂದಿರಲೇಬೇಕಿತ್ತು. ಹಾಗಾಗಿ ಕೊನೆಯ ಪ್ರಯತ್ನವೆಂದು 2024ರ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಲು ತೀರ್ಮಾನಿಸಿದ. ಹೀಗಾಗಿ ಬಂಡೆಗಳನ್ನು ಏರುವುದು, ಸೈಕ್ಲಿಂಗ್, ಓಟ, ಹೀಗೆ ತನ್ನ ಮಾಮೂಲಿ ತರಬೇತಿಯ ವಿಧಾನವನ್ನೇ ಬದಲಾಯಿಸಿಕೊಂಡ. ಅಂದರೆ 50 ಮೀಟರ್ ಫ್ರೀಸ್ಟೈಲ್ ಮುಗಿಸುವ ಸಮಯಕ್ಕೇ ಮುಗಿಸುವ ಇತರ ಕ್ರೀಡೆಗಳಲ್ಲಿ ತರಬೇತಿ ಪಡೆದ. ಉಳಿದವರು ತಮಾಷೆ ಮಾಡಿದರು. ಇದ್ಯಾವ ಸೀಮೆ ತರಬೇತಿ ಮಾರಾಯ ಎಂದು ನಕ್ಕರು. ಸಾಮಾನ್ಯವಾಗಿ ನಾವೆಲ್ಲ ಸಾಂಪ್ರದಾಯಿಕವಾಗಿ ಯೋಚನೆ ಮಾಡುತ್ತಿರುತ್ತೇವೆ. ಅಂದರೆ ಈಜಿನಲ್ಲಿ ಗೆಲ್ಲುವುದೆಂದರೆ ಎಲ್ಲರಿಗಿಂತ ವೇಗವಾಗಿ ಈಜಬೇಕು, ಓಡುವುದೆಂದರೆ ಕೂಡ ಅಷ್ಟೇ. ಇನ್ನು ಓದುವುದೆಂದರೆ ಎಲ್ಲರಿಗಿಂತ ಜಾಸ್ತಿ ಓದಬೇಕು. ಆದರೆ ಆ ಯುವಕ ಬೇರೆ ಥರ ಯೋಚಿಸಿದ.

ಕಣ್ಣಿಗೆ ಪಟ್ಟಿ ಕಟ್ಟಿದ ಕುದುರೆಯಂತೆ ವೇಗವಾಗಿ ಈಜುವುದನ್ನು ಮಾತ್ರ ಮಾಡುತ್ತಿದ್ದವನು ದೇಹ ಮನಸ್ಸು ಎಲ್ಲವನ್ನೂ ವಿಭಿನ್ನ ವ್ಯಾಯಾಮಗಳ ಮೂಲಕ ಹುರಿಗೊಳಿಸಿದ. ವಿಶೇಷವೆಂದರೆ ಅವನ ಈಜಿನ ಸಮಯವೂ ಸುಧಾರಿಸುತ್ತ ಬಂತು. ಮೂರೂ ಒಲಿಂಪಿಕ್ಸ್‌ಗಳಲ್ಲಿ ಬರಿಗೈಲಿ ವಾಪಾಸಾಗುತ್ತಿದ್ದ ಯುವಕ 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಈಜುಕೊಳಕ್ಕಿಳಿದು ಮೇಲೇಳುವಾಗ ಚಿನ್ನದ ಪದಕ ವಿಜೇತನಾಗಿದ್ದ. ಈ ಸ್ಪರ್ಧೆಯಲ್ಲಿ ಒಲಿಂಪಿಕ್ಸ್ ಪದಕ ಗೆದ್ದ ಮೊದಲ ಆಸ್ಟ್ರೇಲಿಯಾ ಕ್ರೀಡಾಪಟು ಎಂಬ ದಾಖಲೆ ಮಾಡಿದ ಆ ಈಜುಗಾರ ಕ್ಯಾಮರೂನ್ ಮೆಕ್‌ಎವಾಯ್. ವೇಗದ ಪ್ರೊಫೆಸರ್ ಎಂದು ಕರೆಯಿಸಿಕೊಳ್ಳುವ ಇವರು ಭೌತವಿಜ್ಞಾನದಲ್ಲಿ ಅತೀವ ಆಸಕ್ತಿ ಇರುವ ಪದವೀಧರರೂ ಹೌದು.

ಇವರ ಉದಾಹರಣೆಯಿಂದ ಸ್ಪಷ್ಟವಾಗುವ ಸಂಗತಿಯೆಂದರೆ ಸಾಧಿಸಬೇಕೆಂಬ ಛಲವಿದ್ದವರು ಒಂದು ದಾರಿ ಗುರಿ ತಲುಪಿಸದೇ ಇದ್ದಾಗ ಮತ್ತೊಂದು ದಾರಿ ಹುಡುಕುತ್ತಾರೆ. ಪರಿಚಿತ ದಾರಿಗಳಿಂದ ಅಪರಿಚಿತ ದಾರಿಗಳಿಗೆ ಹೊರಳಿಕೊಳ್ಳುವ ಸಾಹಸ ಮಾಡುತ್ತಾರೆ. ಅದಕ್ಕಾಗಿ ವರ್ಷವರ್ಷ ಶ್ರಮಿಸುತ್ತಾರೆ. ಏಕಾಗ್ರತೆಯಿಂದ ಗುರಿಯತ್ತ ಸಾಗುತ್ತಿರುತ್ತಾರೆ. ಇವರು ಮಾತ್ರವಲ್ಲ ರಾತ್ರಿ ಬೆಳಗಾಗುವುದರೊಳಗೆ ಯಶಸ್ವಿಯಾಗಿ ಜಗತ್ಪ್ರಸಿದ್ಧರಾದ ಅದೆಷ್ಟೋ ಮಂದಿ ಸಾಧಕರ ಹಿಂದೆ ಯಾರಿಗೂ ಕಾಣದ ತರಬೇತಿ ಮತ್ತು ಪರಿಶ್ರಮದ ಸಾವಿರಾರು ಹಗಲು ರಾತ್ರಿಗಳಿರುತ್ತವೆ. ಸೋಲೊಪ್ಪದ ಮನಸ್ಸಿರುತ್ತದೆ, ಬಿದ್ದರೂ ಎದ್ದು ಮುನ್ನಡೆವ ಛಲವಿರುತ್ತದೆ.

ಹೊಸ ವರ್ಷದಲ್ಲಿ ಈ ರೀತಿಯ ಸಾಧಕರನ್ನು ಸ್ಫೂರ್ತಿಯಾಗಿಸಿಕೊಳ್ಳಬಹುದು. ಅವರ ಪ್ರಯತ್ನಶೀಲ ಸ್ವಭಾವವನ್ನೂ ನಮ್ಮದಾಗಿಸಿಕೊಳ್ಳಬಹುದು. ❖

ಗುಂಡಣ್ಣ



ಪದಬಂಧ 6269


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಇದಿನ್ನೂ ಎಳೆಮಗು (4)
5.ಎಡಭಾಗವನ್ನು ಹೀಗೂ ಹೇಳುತ್ತಾರೆ (2)
6.ಮನದೊಳಗಿರುವ ಕಾಮ! (3)
7.ಕೊನೆಗೆ ಮುಖ ತೋರಿಸಿದ ಒಡೆಯ! (3)
9.ಒನಕೆ ಓಬವ್ವಳ ನಾಡು (4)
11.ರಕ್ತವಿಲ್ಲಿ ವಿರಳವಾಗಿ ಕಾಣುತ್ತಿದೆ (3)
13.ಗಾಣದಿಂದ ಎಣ್ಣೆ ತೆಗೆಯುವವನು (3)
15.ಈ ಊರಿನಲ್ಲಿ ಕಾಂಗ್ರೆಸ್ ಅಧಿವೇಶನ ನಡೆದು ನೂರು ವರ್ಷ ನಡೆದಿದೆ (4)
16.ಲವನು ಹಿಡಿದಿರುವ ಉಪ್ಪು (3)
18.ದರಿ ಹತ್ತಿರ ಕಾಣಿಸಿದ ವಾದ್ಯ (3)
20.ಚಿಕ್ಕಿ ತೋರಿಸಿದ ನಕ್ಷತ್ರ (2)
21.ತಾವರೆಯ ಕೊಳ (4)

ಮೇಲಿಂದ ಕೆಳಕ್ಕೆ

2.ಮುನಿಯ ಕೋಪ ಉಲ್ಟಾ ಕಾಣುತ್ತಿದೆ (3)
3.ಸುಗಮವಾಗಿ ಕಿತ್ತಿರುವ ಹೂವು (2)
4.ದಟ್ಟವಾದ ಕಾಡಿನಲ್ಲಿ ರಚಿಸಿದ ಕೋಟೆ (4)
5.ವಾದವನ್ನು ಮಂಡಿಸುವ ಕ್ರಮ (5)
7.ಕರ ಕೊನೆಗಿಟ್ಟರೆ ಗುಂಪು ಕಾಣಿಸುತ್ತಿದೆಯಲ್ಲಾ! (3)
8.ಉಚಿತವಲ್ಲ! ಇದು ನಿಶ್ಚಿತವಾದುದು! (3)
10.ಕೆಟ್ಟವನು ಇಲ್ಲಿದ್ದಾನೆ (3)
12.ಬತ್ತವನ್ನು ಬೇಯಿಸಿ ಮಾಡಿದ ಅಕ್ಕಿ (5)
13.ಈತ ಪಕ್ಕಾ ಹಳ್ಳಿಯವನು (3)
14.ಬಯ್ಗಳು ಎಂದು ಹೀಗೂ ಹೇಳುತ್ತಾರೆ (3)
15.ಗವಾಕ್ಷ ಇಲ್ಲಿ ಕಾಣುತ್ತಿದೆ (4)
17.ಬಳ್ಳಿಗೊಂದು ಪರ್ಯಾಯ ಪದ (3)
19.ಪುಢಾರಿ ಹತ್ತಿರವಿರುವ ಶತ್ರು (2)



6268ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆನಂದ 5.ನಗುಮೊಗ
6.ರಥೋತ್ಸವ 8.ಹಿಜರಿ
11.ರಿಕಾಪು 13.ದಿನಮಣಿ
17.ಗಡಿಪಾರು 18.ಕ್ರಿಯುಕು

ಮೇಲಿಂದ ಕೆಳಕ್ಕೆ:
1.ಆಚಾರ್ಯ 2.ದನಗಾಹಿ
3.ನಗರ 4.ಭೀಭತ್ಸ
7.ವರ್ಣನೆ 9.ರಿಪೇರಿ
10.ವರದಿ 12.ಪುನರುಕ್ತಿ
14.ನವಾಬ 15.ಣಿಗಸ
16.ಪರಾಕು

ಸುಡೊಕು 6653

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		1		8	3		7	5
			2		7		1	
7		3		9		8		2
	5				1			
6		7		5		2		8
	3		9					1
	2				8		6	
				3				
1		8	5			3		4

6652 ಸುಡೊಕು

9	4	3	8	5	1	7	2	6
8	1	7	6	3	2	4	5	9
6	2	5	4	7	9	1	8	3
1	6	2	9	4	5	3	7	8
5	7	4	1	8	3	9	6	2
3	9	8	2	6	7	5	4	1
7	8	9	3	2	4	6	1	5
2	5	1	7	9	6	8	3	4
4	3	6	5	1	8	2	9	7

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

30 ಡಿಸೆಂಬರ್ 2025 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ದಶಮಿ ಗಂ 7-52 ನಂತರ ಏಕಾದಶಿ ಗಂ 29-01 **ನಕ್ಷತ್ರ:** ಭರಣಿ ಗಂ 27-59 **ಯೋಗ:** ಸಿದ್ಧ ಗಂ. 25-02 **ಕರಣ:** ಗರ ಗಂ. 7-52 ಧನು ಮಾಸದ 15 ನೇ ದಿನ. **ಮಳೆ ನಕ್ಷತ್ರ :** ಪೂರ್ವಾಷಾಢ 1 ನೇ ಪಾದ. **ರಾಹುಕಾಲ :** ಮಧ್ಯಾಹ್ನ 03-00 - 04-30, **ಸೂರ್ಯೋದಯ :** 06-56 ಸೂರ್ಯಾಸ್ತ : 06-10, ಮುಸ್ಲಿಂ ದಿನಾಂಕ : 09 ರಜಬ್, ದಿನ ವಿಶೇಷ : ವೈಕುಂಠ ಏಕಾದಶಿ, **ಅದೃಷ್ಟ ಸಂಖ್ಯೆ :** 8, 12

ಮೇಷ: ಕಲೆಯ ಪ್ರದರ್ಶನದಿಂದ ಪ್ರಶಂಸೆ ಮತ್ತು ಗೌರವಾದರಗಳಿಂದ ಮನೋಲ್ಲಾಸ ಉಂಟಾಗುವುದು. ಸಂಘ ಸಂಸ್ಥೆಗಳ ಹಣಕಾಸಿನ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ಯಶಸ್ವಿಯಾಗುವಿರಿ.

ವೃಷಭ: ಪ್ರೀತಿ ಪಾತ್ರರೊಂದಿಗೆ ಉತ್ತಮ ಹೊಂದಾಣಿಕೆಯಿಂದ ಇರುವಂತಾಗಲಿದೆ. ದೇವರ ಸೇವೆಯಿಂದ ಕೌಟುಂಬಿಕ ಸಮಸ್ಯೆಗಳು ದೂರವಾಗಲಿವೆ. ಉದ್ಯಮಿಗಳಿಗೆ ಸರ್ಕಾರದಿಂದ ಅನುಕೂಲ ಉಂಟಾಗಲಿದೆ.

ಮಿಥುನ: ನಿವೃತ್ತಿ ಜೀವನದ ನಂತರದ ಕೆಲಸಗಳ ಬಗ್ಗೆ ಯೋಜನೆ ರೂಪಿಸಿಕೊಳ್ಳಿ. ನವದಂಪತಿಗೆ ಸಂತಾನದ ಶುಭ ಸುದ್ದಿ ಕೇಳಿ ಬರುವುದು. ಮಗಳಿಗೆ ಆತ್ಮೀಯರೊಬ್ಬರ ಸಹಾಯದಿಂದ ಉದ್ಯೋಗ ದೊರೆಯಲಿದೆ.

ಕರ್ಕಾಟಕ: ಮುಂಚೆಯೇ ನಿರ್ಧರಿಸಿದ್ದ ಪ್ರಯಾಣವನ್ನು ಅನಿವಾರ್ಯ ಕಾರಣಗಳಿಂದಾಗಿ ಮುಂದೂಡುವ ಅಥವಾ ಕೈಬಿಡುವ ಯೋಚನೆ ಮಾಡುವಿರಿ. ವದಂತಿಗಳಿಗೆ ಕಿವಿಗೊಡದೆ ಕೆಲಸ ಮುಂದುವರಿಸಿ.

ಸಿಂಹ: ಸೃಷ್ಟಿಯಾದ ಕೌಟುಂಬಿಕ ಕಲಹವನ್ನು ಬುದ್ಧಿವಂತಿಕೆ ಉಪಯೋಗಿಸಿ ತಿಳಿಗೊಳಿಸಿ. ರಾಜಕೀಯ ವಿಭಾಗದಲ್ಲಿ ಶ್ರಮಸಹಿತ ಜಯಸಾಧನೆ ಮನಸ್ಸಿಗೆ ತೃಪ್ತಿತರುವುದು.

ಕನ್ಯಾ: ಜವಾಬ್ದಾರಿಯುಕ್ತ ನಡೆ, ದಿಟ್ಟತನದ ಜತೆಗೆ ಸ್ವಲ್ಪ ತಂತ್ರಗಾರಿಕೆ ತೋರಿದರೆ ಅಧಿಕಾರಿಗಳ ಗಮನ ಸೆಳೆಯುವುದು ಕಷ್ಟ ಆಗುವುದಿಲ್ಲ. ಮಾರುಕಟ್ಟೆಯ ಬದಲಾವಣೆ ಅನುಕೂಲಕ್ಕೆ ತಕ್ಕಂತೆ ಇರುವುದು.

ತುಲಾ: ಕೃತಕ ಅಂಗಾಂಗಗಳ ಕಸಿ ಮಾಡಿಸಿಕೊಂಡಿರುವವರಿಗೆ ಅದರಿಂದಾಗಿ ಆರೋಗ್ಯ ತಪ್ಪುವ ಸಾಧ್ಯತೆ ಇದೆ. ಕೌಟುಂಬಿಕ ವಿವಾದಗಳು ರಾಜೀ ಮನೋಭಾವಗಳಿಂದ ಸಮಾಪ್ತಿ. ಹಣದ ದುಂದುವೆಚ್ಚವನ್ನು ನಿಲ್ಲಿಸಿ.

ವೃಶ್ಚಿಕ: ಮೇಧಾವಿ ಜನರೊಂದಿಗಿನ ಸಂಪರ್ಕ ಬೆಳೆಯುವುದರಿಂದ ಕೆಲಸ ಕಾರ್ಯಗಳನ್ನು ಸಾಧಿಸಿಕೊಳ್ಳುವಿರಿ. ದೂರದ ಪ್ರಯಾಣಗಳು ಅನುಕೂಲಕರವಾಗಿರುವುದು. ಸಿವಿಲ್ ಎಂಜಿನಿಯರ್‌ಗಳಿಗೆ ಉತ್ತಮ ಅವಕಾಶಗಳು ಸಿಗಲಿವೆ.


ಧನು: ಅಸಾಧ್ಯ ಕಾರ್ಯಗಳನ್ನೂ ಸಾಧಿಸಿ ತೋರಿಸುವಷ್ಟು ಮನೋಬಲ, ಛಲ ವೃದ್ಧಿಸಿಕೊಳ್ಳಿ. ಬಂಧುಗಳಲ್ಲಿನ ಮಾತಿನ ಚಕಮಕಿ ಮನಸ್ಸಿಗೆ ಗೊಂದಲ ತಂದೀತು. ಪೂರ್ವ ನಿಯಾಮಕವಾಗಿ ಕೆಲಸ ಮಾಡುವುದು ಮುಖ್ಯ.

ಮಕರ: ದೂರದ ಪ್ರಯಾಣದಲ್ಲಿ ಇದ್ದರೂ ಮಗಳ ಜವಾಬ್ದಾರಿಯುತ ನಡೆಯಿಂದಾಗಿ ಮನೆ ಮತ್ತು ಕುಟುಂಬದ ಚಿಂತೆ ಅಷ್ಟಾಗಿ ಕಾಡುವುದಿಲ್ಲ. ಧಾನ್ಯಗಳ ರಫ್ತು ಮಾರಾಟಗಾರರು ಅನುಕೂಲವನ್ನು ಪಡೆಯುವಿರಿ.

ಕುಂಭ: ನಿರುದ್ಯೋಗಿಗಳ ಅಲೆದಾಟ ತಪ್ಪಿ ಹೊಸ ಕೆಲಸ ಪ್ರಾರಂಭ ಮಾಡುವ ಅವಕಾಶ ಸಿಗಲಿದೆ. ವಿಶೇಷ ತೀರ್ಮಾನಗಳನ್ನು ಮಡದಿಯಲ್ಲಿ ಕೇಳಿ ತೀರ್ಮಾನಿಸಿ. ಕೆಲಸ ಸಾಧಿಸಲು ಹೊಸ ಮಾರ್ಗ ಆರಿಸಿಕೊಳ್ಳಬೇಕಾಗುವುದು.

ಮೀನ: ಜೆರಾಕ್ಸ್ ಅಥವಾ ಪ್ರಿಂಟಿಂಗ್ ಪ್ರೆಸ್‌ನವರಿಗೆ ಅತ್ಯಧಿಕ ಮಟ್ಟದ ಗ್ರಾಹಕರು ಬರುತ್ತಾರೆ. ಯಶಸ್ಸು ಹಿರಿಯರ ಮನಸ್ಸಿಗೆ ನೆಮ್ಮದಿ ಹಾಗೂ ಸಂತೋಷವನ್ನು ತರುತ್ತದೆ. ವಿಶೇಷ ಪೂಜೆ ನಡೆಸಲು ತಯಾರಿ ಮಾಡುವಿರಿ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	26,042
ಇಂದಿನ ಅಂತ್ಯ:	25,942
ದಿನದ ಕನಿಷ್ಠ:	25,920
▼	100

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು		
	100 ಕ್ಕೆ	₹705
	12 ಕ್ಕೆ	₹96
ಮೈಸೂರು:	100 ಕ್ಕೆ	₹706

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹180
ಆರ್‌ಎಸ್‌ಎಸ್-5	₹175
ಗುಡ್ ಲಾಟ್	₹163

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹435-755
ದ್ವಿತಳಿ (ಬಿ.ವಿ)	₹300-889

ಮುದ್ರೆಮನೆ ಕಾಫಿ	
ಎಪಿ	₹26650
ಎಸಿ	₹14560
ಆರ್‌ಪಿ	₹16250
ಆರ್‌ಸಿ	₹9500

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1575 (1570)
ಸೋಯಾ (ರಿಫೈನ್ಡ್)	₹1280 (1285)
ಸೂರ್ಯಕಾಂತಿ (ರಿಫೈನ್ಡ್)	₹1485 (1490)
ಪಾಮೋಲಿನ್	₹1250 (1245)

ಚಿಟಿಕೆ ಸುದ್ದಿ

ಕೆ.ಜಿ ಬೆಳ್ಳಿ ದರ ₹2.40 ಲಕ್ಷ



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರದ ವಹಿವಾಟಿನಲ್ಲಿ ಬೆಳ್ಳಿ ಧಾರಣೆ ಏರಿಕೆ ಕಂಡಿದ್ದರೆ, ಚಿನ್ನದ ದರ ಇಳಿಕೆಯಾಗಿದೆ.

ಕೆ.ಜಿ ಬೆಳ್ಳಿ ದರ ₹3,650 ಹೆಚ್ಚಳವಾಗಿ, ₹2.40 ಲಕ್ಷದಂತೆ ಮಾರಾಟವಾಗಿದೆ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹500 ಇಳಿಕೆಯಾಗಿ, ₹1,41,800 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ವ್ಯಾಪಾರಿಗಳಿಂದ ನಿರಂತರ ಖರೀದಿಯು ಬೆಳ್ಳಿ ಬೆಲೆ ಹೆಚ್ಚಳಕ್ಕೆ ಕಾರಣ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆಯಾಗಿದ್ದರಿಂದ ಲಾಭದ ಗಳಿಕೆಗಾಗಿ ಹೂಡಿಕೆದಾರರು ಚಿನ್ನದ ಮಾರಾಟಕ್ಕೆ ಮುಂದಾದರು. ಇದು ಹಳದಿ ಲೋಹದ ದರ ಇಳಿಕೆಗೆ ಕಾರಣ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಎಟಿಎಂ ಸಂಖ್ಯೆ ಇಳಿಕೆ

ಮುಂಬೈ (ಪಿಟಿಐ): ಡಿಜಿಟಲ್ ಪಾವತಿ ಹೆಚ್ಚಳದಿಂದಾಗಿ 2024-25ರ ಆರ್ಥಿಕ ವರ್ಷದಲ್ಲಿ ಎಟಿಎಂಗಳ ಸಂಖ್ಯೆ ಇಳಿಕೆ ಆಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ವರದಿ ತಿಳಿಸಿದೆ.

ಆದರೆ, ಇದೇ ಅವಧಿಯಲ್ಲಿ ಬ್ಯಾಂಕ್‌ನ ಶಾಖೆಗಳು ಶೇ 2ರಷ್ಟು ಹೆಚ್ಚಳಗೊಂಡಿವೆ ಎಂದು ತಿಳಿಸಿದೆ. 2023-24ರ ಮಾರ್ಚ್ ಅಂತ್ಯದ ವೇಳೆಗೆ ದೇಶದಲ್ಲಿ 2,53,417 ಎಟಿಎಂಗಳಿದ್ದವು. ಕಳೆದ ಆರ್ಥಿಕ ವರ್ಷದ ಅಂತ್ಯಕ್ಕೆ ಎಟಿಎಂಗಳ ಸಂಖ್ಯೆ 2,51,057ಕ್ಕೆ ಇಳಿದಿದೆ.

ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಎಟಿಎಂ ಸಂಖ್ಯೆ 1,34,694ರಿಂದ 1,33,544ಕ್ಕೆ ಇಳಿದಿದೆ. ಖಾಸಗಿ ಬ್ಯಾಂಕ್‌ಗಳ ಎಟಿಎಂ 79,884ರಿಂದ 77,117 ಆಗಿದೆ.

ಅರ್ಥಶಾಸ್ತ್ರಜ್ಞರ ಜತೆ ಪ್ರಧಾನಿ ಮೋದಿ ಇಂದು ಚರ್ಚೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಪ್ರಮುಖ ಅರ್ಥಶಾಸ್ತ್ರಜ್ಞರು ಮತ್ತು ವಿವಿಧ ವಲಯಗಳ ತಜ್ಞರ ಜೊತೆ ಮಂಗಳವಾರ ಬಜೆಟ್ ಪೂರ್ವ ಸಮಾಲೋಚನಾ ಸಭೆ ನಡೆಸಲಿದ್ದಾರೆ ಎಂದು ಸರ್ಕಾರದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಸಭೆಯಲ್ಲಿ ಮೋದಿ ಅವರು ತಜ್ಞರು ನೀಡುವ ಅಭಿಪ್ರಾಯಗಳನ್ನು ಆಲಿಸಲಿದ್ದಾರೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಫೆಬ್ರುವರಿ 1ರಂದು 2026-27ನೇ ಸಾಲಿನ ಬಜೆಟ್ ಮಂಡಿಸಲಿದ್ದಾರೆ.

ಕೈಗಾರಿಕಾ ಉತ್ಪಾದನೆ ದಾಖಲೆ ಮಟ್ಟಕ್ಕೆ

ಎರಡು ವರ್ಷಗಳ ಗರಿಷ್ಠ ಪ್ರಮಾಣ • ತಯಾರಿಕೆ, ಗಣಿಗಾರಿಕೆ ವಲಯ ಪ್ರಗತಿ ಹೆಚ್ಚಳಕ್ಕೆ ಕಾರಣ



ನವದೆಹಲಿ (ಪಿಟಿಐ): ದೇಶದ ಕೈಗಾರಿಕಾ ವಲಯದ ಬೆಳವಣಿಗೆ ಪ್ರಮಾಣವು ನವೆಂಬರ್ ತಿಂಗಳಲ್ಲಿ ಶೇಕಡ 6.7ರಷ್ಟಾಗಿದೆ. ಇದು ಎರಡು ವರ್ಷಗಳ ಗರಿಷ್ಠ ಮಟ್ಟ. ತಯಾರಿಕೆ, ಗಣಿಗಾರಿಕೆ ವಲಯಗಳಲ್ಲಿ ಹೆಚ್ಚಿನ ಚಟುವಟಿಕೆಗಳು ಕಂಡುಬಂದಿದ್ದು ಈ ಪ್ರಮಾಣದ ಬೆಳವಣಿಗೆಗೆ ನೆರವಾಗಿದೆ.

ಕೈಗಾರಿಕಾ ಉತ್ಪಾದನೆ ಸೂಚ್ಯಂಕದ (ಐಐಪಿ) ಆಧಾರದಲ್ಲಿ ಹೇಳುವ ಕೈಗಾರಿಕಾ ಉತ್ಪಾದನೆ ಪ್ರಮಾಣವು ಹಿಂದಿನ ವರ್ಷದ ನವೆಂಬರ್‌ನಲ್ಲಿ ಶೇ 5ರಷ್ಟು ಬೆಳವಣಿಗೆ ಸಾಧಿಸಿತ್ತು. 2023ರ ನವೆಂಬರ್‌ನಲ್ಲಿ ಕೈಗಾರಿಕಾ ಬೆಳವಣಿಗೆ ಪ್ರಮಾಣವು ಶೇ 11.9ರಷ್ಟಾಗಿತ್ತು. ಅದಾದ ನಂತರದ ಅತಿಹೆಚ್ಚಿನ ಬೆಳವಣಿಗೆ ಪ್ರಮಾಣವು ಈ ಬಾರಿಯ ನವೆಂಬರ್‌ನಲ್ಲಿ ದಾಖಲಾಗಿದೆ.

ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಯ್ಯರ್ ಅವರು, 'ಡಿಸೆಂಬರ್‌ನಲ್ಲಿ ವಿದ್ಯುತ್ ಬೇಡಿಕೆ ಹೆಚ್ಚಳ ಕಂಡಿದೆ. ಇದರಿಂದಾಗಿ ಈ ತಿಂಗಳಲ್ಲಿ ವಿದ್ಯುತ್ ಉತ್ಪಾದನೆಯೂ ಹೆಚ್ಚಳ ಕಾಣಲಿದೆ. ಇದು ಡಿಸೆಂಬರ್‌ನಲ್ಲಿಯೂ ಕೈಗಾರಿಕಾ ಬೆಳವಣಿಗೆಗೆ ಪೂರಕ' ಎಂದು ಹೇಳಿದ್ದಾರೆ.

ಅಕ್ಟೋಬರ್‌ನ ಕೈಗಾರಿಕಾ ಬೆಳವಣಿಗೆ ಪ್ರಮಾಣವನ್ನು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಪರಿಷ್ಕರಿಸಿದ್ದು, ಅದು ಶೇ 0.5 ಎಂದು ಹೇಳಿದೆ. ಕಳೆದ ತಿಂಗಳು ಈ ದತ್ತಾಂಶ ಬಿಡುಗಡೆ ಮಾಡುವಾಗ ಎನ್‌ಎಸ್‌ಒ, ಬೆಳವಣಿಗೆ ಪ್ರಮಾಣ ಶೇ 0.4ರಷ್ಟಿದೆ ಎಂದು ತಿಳಿಸಿತ್ತು.

'ತಯಾರಿಕಾ ವಲಯದಲ್ಲಿ ಕಂಡುಬಂದ ಶೇ 8ರಷ್ಟು ಬೆಳವಣಿಗೆಯ ಪರಿಣಾಮವಾಗಿ ಕೈಗಾರಿಕಾ ಚಟುವಟಿಕೆಗಳ ಬೆಳವಣಿಗೆ ನವೆಂಬರ್‌ನಲ್ಲಿ ಶೇ 6.7 ರಷ್ಟಾಗಿದೆ' ಎಂದು ಎನ್‌ಎಸ್‌ಒ ಪ್ರಕಟಣೆ ಹೇಳಿದೆ.

ಜಿಎಸ್‌ಟಿ ಇಳಿಕೆ ವರದಾನ

ಈ ವರ್ಷ ಹಬ್ಬಗಳ ಋತು ಆರಂಭಕ್ಕೂ ಮೊದಲು ಜಿಎಸ್‌ಟಿ ವ್ಯವಸ್ಥೆಯ ಅಡಿಯಲ್ಲಿ ದರಗಳನ್ನು ಇಳಿಕೆ ಮಾಡಲಾಯಿತು. ಮಾರುಕಟ್ಟೆಯಲ್ಲಿ ಬೇಡಿಕೆ ಜಾಸ್ತಿ ಮಾಡುವ ಉದ್ದೇಶದ ಈ ಇಳಿಕೆಗಳು ಸೆಪ್ಟೆಂಬರ್ 22ರಿಂದ ಜಾರಿಗೆ ಬಂದಿವೆ.

ಜಿಎಸ್‌ಟಿ ದರ ಇಳಿಕೆಯ ಪ್ರಯೋಜನವನ್ನು ಪಡೆಯಲು ವಿವಿಧ ಕಂಪನಿಗಳು ಮುಂದಾದವು. ಹೀಗಾಗಿ, ತಯಾರಿಕಾ ವಲಯಕ್ಕೆ ಹೆಚ್ಚಿನ ಕಾರ್ಯಾದೇಶಗಳು ಲಭ್ಯವಾದವು.

ಸುದ್ದಿ 2 ನಿಮಿಷ

ಸೆನ್ಸೆಕ್ಸ್ 345 ಅಂಶ ಇಳಿಕೆ

ಮುಂಬೈ (ಪಿಟಿಐ): ಯುಟಿಲಿಟಿ, ಮಾಹಿತಿ ತಂತ್ರಜ್ಞಾನ, ತೈಲ ಮತ್ತು ಅನಿಲ ಕಂಪನಿ ಷೇರುಗಳ ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಸೋಮವಾರ ನಡೆದ ವಹಿವಾಟಿನಲ್ಲಿ ದೇಶದ ಷೇರುಪೇಟೆ ಸೂಚ್ಯಂಕಗಳು ಇಳಿಕೆ ಕಂಡಿವೆ.

ವಿದೇಶಿ ಬಂಡವಾಳದ ಹೊರಹರಿವು ಮತ್ತು ವರ್ಷದ ವಹಿವಾಟು ಅಂತ್ಯಗೊಳ್ಳುತ್ತಿರುವುದು ಸಹ ಇಳಿಕೆಗೆ ಕಾರಣವಾಯಿತು ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 345 ಅಂಶ ಇಳಿಕೆಯಾಗಿ, 84,695ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 100 ಅಂಶ ಕಡಿಮೆಯಾಗಿ, 25,942ಕ್ಕೆ ಕೊನೆಗೊಂಡಿದೆ.



ಅದಾನಿ ಪೋರ್ಟ್ಸ್ ಷೇರಿನ ಮೌಲ್ಯ ಶೇ 2.22ರಷ್ಟು ಇಳಿಕೆ ಆಗಿದೆ. ಎಚ್‌ಸಿಎಲ್ ಟೆಕ್, ಪವರ್‌ಗ್ರಿಡ್, ಟ್ರೆಂಟ್, ಭಾರತ್ ಎಲೆಕ್ಟ್ರಾನಿಕ್ಸ್ ಮತ್ತು ಭಾರ್ತಿ ಏರ್‌ಟೆಲ್‌ನ ಷೇರಿನ ಮೌಲ್ಯ ಇಳಿದಿದೆ.

ಟಾಟಾ ಸ್ಟೀಲ್, ಏಷ್ಯನ್ ಪೇಂಟ್ಸ್, ಹಿಂದೂಸ್ತಾನ್ ಯೂನಿಲಿವರ್ ಮತ್ತು ಎಟರ್ನಲ್ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 1.70ರಷ್ಟು ಹೆಚ್ಚಳವಾಗಿದೆ. ಪ್ರತೀ ಬ್ಯಾರಲ್ ದರವು 61.67 ಡಾಲರ್ ಆಗಿದೆ.

₹2.69 ಲಕ್ಷ ಕೋಟಿ ಪರಿಹಾರ ಕೇಳಿದ ಕೇಂದ್ರ ಸರ್ಕಾರ

ನವದೆಹಲಿ (ಪಿಟಿಐ): ಕೆಜಿ-ಡಿ6 ಪ್ರದೇಶದಲ್ಲಿ ಅಗತ್ಯಕ್ಕಿಂತ ಹೆಚ್ಚು ವಿಸ್ತೀರ್ಣದಲ್ಲಿ ಕಚ್ಚಾ ತೈಲ ತೆಗೆಯುವ ಮೂಲಸೌಕರ್ಯ ನಿರ್ಮಿಸಿದ ಕಾರಣಕ್ಕೆ ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಬಿ.ಪಿ ಕಂಪನಿಗಳು ಒಟ್ಟಾಗಿ ₹2.69 ಲಕ್ಷ ಕೋಟಿ (30 ಬಿಲಿಯನ್ ಡಾಲರ್) ಪರಿಹಾರ ನೀಡಬೇಕು ಎಂದು ಕೇಂದ್ರ ಸರ್ಕಾರ ಕೇಳಿದೆ ಎಂದು ಮೂಲಗಳು ತಿಳಿಸಿವೆ.

14 ವರ್ಷಗಳಷ್ಟು ಹಳೆಯದಾದ ಈ ವಿವಾದದ ವಿಚಾರಣೆಯನ್ನು ಮೂವರು ಸದಸ್ಯರ ಮಧ್ಯಸ್ಥಿಕೆ ನ್ಯಾಯಮಂಡಳಿಯು ನವೆಂಬರ್ 7ರಂದು ಮುಕ್ತಾಯಗೊಳಿಸಿದೆ. ಸರ್ಕಾರವು ಮಧ್ಯಸ್ಥಿಕೆ ನ್ಯಾಯಮಂಡಳಿಯ ಎದುರು ಈ ಮನವಿ ಮಂಡಿಸಿದೆ ಎಂದು ಗೊತ್ತಾಗಿದೆ. ನ್ಯಾಯಮಂಡಳಿಯು ಈ ಪ್ರಕರಣ ಕುರಿತ ಆದೇಶವನ್ನು 2026ರಲ್ಲಿ ಪ್ರಕಟಿಸುವ ನಿರೀಕ್ಷೆಯಿದೆ.

ರಿಲಯನ್ಸ್ ಮತ್ತು ಬಿಪಿ ಕಂಪನಿಗಳು ಈ ವಿಚಾರವಾಗಿ ತಕ್ಷಣಕ್ಕೆ ಪ್ರತಿಕ್ರಿಯೆ ನೀಡಿಲ್ಲ.

ಅಡಿಕೆ ಧಾರಣೆ

ಕುಮಟಾ		ಸಾಗರ (ಮುಂದು.)		ಶಿವಮೊಗ್ಗ		ಯಲ್ಲಾಪುರ	
ಚಾಲಿ	43599-47609	ರಾಶಿ	45009-61888	ಬೆಟ್ಟೆ	57109-66300	ಕೆಂಪುಗೋಟು	19800-43518
ಚಿಪ್ಪು	26089-34599	ಸಿಪ್ಪೆಗೋಟು	8309-24000	ಗೊರಬಲು	20009-40289	ರಾಶಿ	49299-56861
ಕೋಕ	12509-29999			ರಾಶಿ	46999-57899	ಆಪಿ	63790-73821
ಫ್ಯಾಕ್ಟರಿ	7089-24829			ಸರಕು	60000-83349	ಬಿಳಿಗೋಟು	20699-32899
ಹೊಸಚಾಲಿ	36099-41097			**ಶಿರಸಿ**		ಕೋಕ	11899-29499
ಸಾಗರ				ಬೆಟ್ಟೆ	38899-50015	ಹಳೆಚಾಲಿ	38269-47201
ಬಿಳಿಗೋಟು	9909-33801			ಬಿಳಿಗೋಟು	21699-38469	ಹೊಸಚಾಲಿ	31899-38222
ಚಾಲಿ	28099-43100			ಚಾಲಿ	44150-49799	ಕೆಂಪುಗೋಟು	19699-37699
ಕೋಕ	8099-35399					ರಾಶಿ	51896-32470
ಕೆಂಪುಗೋಟು	25099-41899					ತಟ್ಟಿಬೆಟ್ಟೆ	38520-50921

₹3.11 ಕೋಟಿ ದೋಚಿಕೊಂಡು ಹಿರಿಯ ವ್ಯವಸ್ಥಾಪಕ ಎನ್‌.ರಘು ಪರಾರಿ

ಚಿನ್ನದ ಸಾಲ ವಂಚನೆ: ಮ್ಯಾನೇಜರ್ ನಾಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಲ ಪಡೆದು ಬ್ಯಾಂಕ್‌ಗೆ ಮರು ಪಾವತಿಸದೇ ಗ್ರಾಹಕರು ತಲೆಮರೆಸಿಕೊಂಡಿರುವ ಪ್ರಕರಣಗಳು ಅಲ್ಲಲ್ಲಿ ವರದಿ ಆಗುತ್ತವೆ. ಆದರೆ, ಇಲ್ಲೊಂದು ಪ್ರಕರಣದಲ್ಲಿ ಬ್ಯಾಂಕ್‌ನ ಹಿರಿಯ ವ್ಯವಸ್ಥಾಪಕರೊಬ್ಬರು ಬ್ಯಾಂಕ್‌ಗೆ ವಂಚಿಸಿ ನಾಪತ್ತೆ ಆಗಿದ್ದಾರೆ.


ಎನ್‌.ರಘು

ಕೆನರಾ ಬ್ಯಾಂಕ್‌ನ ಮಲ್ಲೇಶ್ವರ ಶಾಖೆಗೆ ಸೇರಿದ ₹3.11 ಕೋಟಿಯನ್ನು ಹಿರಿಯ ವ್ಯವಸ್ಥಾಪಕ ಎನ್.ರಘು ಅವರು ದೋಚಿಕೊಂಡು ಪರಾರಿ ಆಗಿದ್ದಾರೆ. ಅವರ ವಿರುದ್ಧ ಮಲ್ಲೇಶ್ವರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಕೆನರಾ ಬ್ಯಾಂಕ್ ಪ್ರಾದೇಶಿಕ ಕಚೇರಿಯ ಸಹಾಯಕ ಪ್ರಧಾನ ವ್ಯವಸ್ಥಾಪಕ ಕಬೀಂದ್ರ ಕುಮಾರ್ ಸಾಹು ಅವರು ನೀಡಿದ ದೂರಿನ ಮೇಲೆ ಪ್ರಕರಣ ದಾಖಲು ಮಾಡಲಾಗಿದೆ. ಗ್ರಾಹಕರ ಹೆಸರಿನಲ್ಲಿ ಚಿನ್ನದ ಸಾಲ ತೆಗೆದುಕೊಂಡು ನಾಪತ್ತೆ ಆಗಿರುವ ಆರೋಪಿಯ ಪತ್ತೆಗೆ ಪೊಲೀಸರು ವಿಶೇಷ ತಂಡ ರಚಿಸಿ ಹುಡುಕಾಟ ನಡೆಸುತ್ತಿದ್ದಾರೆ.

'ರಘು ಅವರು ಮಲ್ಲೇಶ್ವರದ 15ನೇ ಅಡ್ಡ ರಸ್ತೆಯಲ್ಲಿರುವ ಕೆನರಾ ಬ್ಯಾಂಕ್ ಶಾಖೆಯಲ್ಲಿ 2024ರ ಜುಲೈ 8ರಿಂದ ಹಿರಿಯ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದರು. 41ಕ್ಕೂ ಹೆಚ್ಚು ಗ್ರಾಹಕರ ಹೆಸರಿನಲ್ಲಿ ಚಿನ್ನದ ಮೇಲೆ ಸಾಲ ಪಡೆದು, ಆ ಹಣವನ್ನು ತನ್ನ ಖಾತೆಗೆ ವರ್ಗಾವಣೆ ಮಾಡಿಕೊಂಡು ಬ್ಯಾಂಕ್- ಗ್ರಾಹಕರಿಗೆ ವಂಚಿಸಿದ್ದಾರೆ' ಎಂದು ಪೊಲೀಸರು ಹೇಳಿದರು.

'ಮನೆಯಲ್ಲಿ ಕಷ್ಟವಿದೆ. ನಿಮ್ಮ (ಗ್ರಾಹಕರು) ಹೆಸರಲ್ಲಿ ಸಾಲ ತೆಗೆದುಕೊಳ್ಳುತ್ತೇನೆ. ನನ್ನ ಬಳಿ ಚಿನ್ನವಿದ್ದು ಅದನ್ನು ಅಡಮಾನ ಇರಿಸಿ ಬ್ಯಾಂಕ್ ನಲ್ಲಿಟ್ಟು ಸಾಲ ತೆಗೆದುಕೊಳ್ಳುತ್ತೇನೆ ಎಂಬುದಾಗಿಯೂ ಗ್ರಾಹಕರಿಗೆ ರಘು ನಂಬಿಸುತ್ತಿದ್ದರು. ಕೆಲವು ಗ್ರಾಹಕರಿಂದ ಸಹಿ ಪಡೆದು ಸಾಲ ಪಡೆದುಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಮ್ಯಾನೇಜರ್ ಮಾತು ನಂಬಿದ್ದ ಗ್ರಾಹಕರು, ಬ್ಯಾಂಕ್ ಖಾತೆಯ ವಿವರ, ಆಧಾರ್ ಕಾರ್ಡ್, ಒಟಿಪಿಯನ್ನು ನೀಡಿದ್ದರು. ಜತೆಗೆ ರಘು ಅವರು ಚೆಕ್ ಸಹ ಪಡೆದುಕೊಂಡು, ಗ್ರಾಹಕರ ಹೆಸರಿನಲ್ಲಿ ಸಾಲ ಮಂಜೂರಾತಿ ಮಾಡಿಕೊಳ್ಳುತ್ತಿದ್ದರು' ಎಂದು ಪೊಲೀಸರು ಹೇಳಿದರು.

ಪರಿಶೋಧನೆ ವೇಳೆ ವಂಚನೆ ಬಯಲು: 'ಶಾಖೆಯ ಇತರೆ ಕೆಲಸಗಳ ಜತೆಗೆ ಚಿನ್ನದ ಮೇಲಿನ ಸಾಲ ಮಂಜೂರಾತಿ ಕೆಲಸದ ಜವಾಬ್ದಾರಿಯನ್ನೂ ರಘು ಅವರಿಗೆ ವಹಿಸಲಾಗಿತ್ತು. ಬ್ಯಾಂಕಿನ ಮಾರ್ಗಸೂಚಿ ಪ್ರಕಾರ ಚಿನ್ನದ ಸಾಲಗಳ ತ್ರೈಮಾಸಿಕ ಮರುಮೌಲ್ಯಮಾಪನ ಹಾಗೂ ಲೆಕ್ಕ ಪರಿಶೋಧನೆ ನಡೆಸಲಾಗಿತ್ತು. ಆಗ, 41 ಸಾಲಗಳು ಕಾಲ್ಪನಿಕ ಸ್ವರೂಪದವು ಎಂಬುದು ಪತ್ತೆಯಾಗಿತ್ತು. ಅಲ್ಲದೇ, ಚಿನ್ನದ ಆಭರಣಗಳು ಇರಲಿಲ್ಲ ಎಂಬುದು ಲೆಕ್ಕ ಪರಿಶೋಧನೆ ಅಧಿಕಾರಿಗಳ ಗಮನಕ್ಕೆ ಬಂದಿತ್ತು. ನಂತರ, ಬ್ಯಾಂಕ್ ಸಿಬಿಎಸ್ ವ್ಯವಸ್ಥೆ ಹಾಗೂ ಭೌತಿಕವಾಗಿ ಲಭ್ಯವಿರುವ ಅರ್ಜಿಗಳಲ್ಲಿನ ಸಾಲದ ಖಾತೆಗಳ ವಿವರವನ್ನು ಪರಿಶೀಲಿಸಿದಾಗ ರಘು ಅವರು ಚಿನ್ನದ ಆಭರಣಗಳನ್ನು ಪಡೆಯದೇ ಅಕ್ಟೋಬರ್ 4ರಿಂದ ಡಿಸೆಂಬರ್ 9ರವರೆಗೆ ಚಿನ್ನದ ಸಾಲ ಮಂಜೂರು ಮಾಡಿಕೊಂಡು ಅಕ್ರಮ ಎಸಗಿರುವುದು ಪತ್ತೆ ಆಗಿತ್ತು. ಬ್ಯಾಂಕ್‌ನ ಹಿರಿಯ ಅಧಿಕಾರಿಗಳು, ರಘು ಅವರನ್ನು ವಿಚಾರಣೆಗೆ ಒಳಪಡಿಸಿದಾಗ ಅಕ್ರಮ ಎಸಗಿರುವುದನ್ನು ಒಪ್ಪಿಕೊಂಡಿದ್ದರು. ಅದಾದ ಮೇಲೆ ಯಾವುದೇ ಮಾಹಿತಿ ನೀಡದೇ ಗೈರಾಗಿದ್ದಾರೆ' ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

'ಲಕ್ಕಿ ಭಾಸ್ಕರ್' ಮಾದರಿಯಲ್ಲಿ ವಂಚನೆ

'ಲಕ್ಕಿ ಭಾಸ್ಕರ್' ಸಿನಿಮಾ ಮಾದರಿಯಲ್ಲಿ ಗ್ರಾಹಕರಿಗೆ ಬ್ಯಾಂಕ್ ಮ್ಯಾನೇಜರ್ ವಂಚಿಸಿದ್ದಾರೆ.

'ರಘು ಅವರ ಮೊಬೈಲ್ ಲೊಕೇಷನ್ ಪತ್ತೆ ಹಚ್ಚಲಾಗುತ್ತಿದೆ. ಗ್ರಾಹಕರ ಹೇಳಿಕೆ ದಾಖಲು ಮಾಡಿಕೊಳ್ಳಲಾಗುತ್ತಿದೆ. ವೃದ್ಧರು, ಪಿಂಚಣಿದಾರರು, ದೇವಾಲಯದ ಅರ್ಚಕರು ಹಾಗೂ ವ್ಯಾಪಾರಿಗಳನ್ನೇ ಗುರಿಯಾಗಿಸಿ ರಘು ಅವರು ವಂಚಿಸಿರುವುದು ಇದುವರೆವಿಗೂ ನಡೆದ ತನಿಖೆಯಿಂದ ಗೊತ್ತಾಗಿದೆ' ಎಂದು ಮೂಲಗಳು ಹೇಳಿವೆ.

ಅರಾವಳಿ: ಹೊಸ ವ್ಯಾಖ್ಯೆಗೆ ತಡೆ

ಒಂದನೇ ಪುಟದಿಂದ...

ಅರಾವಳಿ ಪರ್ವತಶ್ರೇಣಿ ಕುರಿತಾದ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಸಮಿತಿ ನೀಡಿದ್ದ ಎಲ್ಲೆಡೆಯೂ ಏಕರೂಪದಲ್ಲಿ ಅನ್ವಯ ಆಗುತ್ತಿದ್ದ ವ್ಯಾಖ್ಯಾನವನ್ನು ಸುಪ್ರೀಂ ಕೋರ್ಟ್ ನವೆಂಬರ್ 20ರಂದು ಅನುಮೋದಿಸಿತ್ತು. ಆದರೆ, ತಜ್ಞರ ವರದಿ ಬರುವವರೆಗೂ ಹರಿಯಾಣ, ರಾಜಸ್ಥಾನ ಮತ್ತು ಗುಜರಾತ್ ರಾಜ್ಯಗಳಲ್ಲಿ ಹೊಸದಾಗಿ ಗಣಿಗಾರಿಕೆ ಕೈಗೊಳ್ಳಲು ಅನುಮತಿ ನೀಡುವುದಕ್ಕೆ ನಿರ್ಬಂಧ ಹೇರಿತ್ತು.

ರಾಜಸ್ಥಾನ, ಗುಜರಾತ್, ಹರಿಯಾಣದ ಅರಾವಳಿ ಜಿಲ್ಲೆಗಳಲ್ಲಿನ ನೂರು ಮೀಟರ್ ಮತ್ತು ಅದಕ್ಕಿಂತ ಎತ್ತರದ ಭೂಪ್ರದೇಶಗಳನ್ನು ಅರಾವಳಿ ಬೆಟ್ಟಗಳು ಮತ್ತು 500 ಮೀಟರ್ ಅಂತರದಲ್ಲಿರುವ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಬೆಟ್ಟಗಳನ್ನು ಅರಾವಳಿ ಶ್ರೇಣಿಗಳೆಂದು ಪರಿಗಣಿಸಬೇಕು ಎಂದು ಸಮಿತಿ ಶಿಫಾರಸು ಮಾಡಿತ್ತು.

ಪರಿಸರ ಸಚಿವಾಲಯದ ವ್ಯಾಖ್ಯಾನವನ್ನು ಸುಪ್ರೀಂ ಕೋರ್ಟ್ ಒಪ್ಪಿಕೊಂಡಿರುವುದು ರಾಜಸ್ಥಾನ ಮತ್ತು ಹರಿಯಾಣದಲ್ಲಿ ವ್ಯಾಪಕ ಪ್ರತಿಭಟನೆಗೆ ಕಾರಣವಾಗಿದೆ. ಅರಾವಳಿ ವ್ಯಾಪ್ತಿಯ ನೂರು ಮೀಟರ್‌ಗಿಂತ ಕಡಿಮೆ ಎತ್ತರದ ಪ್ರದೇಶಗಳಲ್ಲಿ ಅಕ್ರಮ ಗಣಿಗಾರಿಕೆ ಮತ್ತು ಮಾನವ ಹಸ್ತಕ್ಷೇಪ ನಡೆದು ಪರಿಸರಕ್ಕೆ ಹಾನಿಯಾಗುತ್ತದೆ ಎಂಬ ಆಕ್ಷೇಪ ವ್ಯಕ್ತವಾಗಿದೆ.

ನಿರ್ಧಾರ ಸ್ವಾಗತಿಸುವೆ: ಭೂಪೇಂದರ್

ಸುಪ್ರೀಂ ಕೋರ್ಟ್ ನಿರ್ಧಾರವನ್ನು ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್ ಸ್ವಾಗತಿಸಿದ್ದು, 'ಅರಾವಳಿ ಪರ್ವತಶ್ರೇಣಿಯ ರಕ್ಷಣೆಗೆ ಸರ್ಕಾರ ಬದ್ಧವಾಗಿದೆ' ಎಂದು ಹೇಳಿದ್ದಾರೆ.

'ಸುಪ್ರೀಂ ಕೋರ್ಟ್ ತನ್ನ ನಿರ್ದೇಶನಗಳನ್ನು ಅಮಾನತಿನಲ್ಲಿರಿಸಿರುವುದು ಮತ್ತು ಈ ಕುರಿತು ಅಧ್ಯಯನ ಕೈಗೊಳ್ಳಲು ಹೊಸ ಸಮಿತಿಯ ರಚನೆಗೆ ನಿರ್ದೇಶಿಸಿರುವುದನ್ನು ನಾನು ಸ್ವಾಗತಿಸುತ್ತೇನೆ. ಅರಾವಳಿ ಪರ್ವತಶ್ರೇಣಿಯ ಸಂರಕ್ಷಣೆ ಮತ್ತು ಮರುಸ್ಥಾಪನೆಯ ನಿಟ್ಟಿನಲ್ಲಿ ಅಗತ್ಯವಿರುವ ಎಲ್ಲ ನೆರವು ನೀಡಲು ಪರಿಸರ ಸಚಿವಾಲಯ ಬದ್ಧವಾಗಿದೆ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಈ ಪ್ರದೇಶದಲ್ಲಿ ಹೊಸ ಗಣಿಗಾರಿಕೆಗೆ ಅವಕಾಶ ನೀಡುವುದು ಅಥವಾ ಹಳೆಯ ಗಣಿಗಾರಿಕೆ ಗುತ್ತಿಗೆಗಳ ನವೀಕರಣಕ್ಕೆ ಸಂಬಂಧಿಸಿದಂತೆ ಹೇರಿರುವ ಸಂಪೂರ್ಣ ನಿಷೇಧ ಮುಂದುವರಿಯಲಿದೆ' ಎಂದಿದ್ದಾರೆ.

ಪರಿಸರ ಸಚಿವರ ರಾಜೀನಾಮೆಗೆ ಆಗ್ರಹ

ಒಂದನೇ ಪುಟದಿಂದ...

'ಮರು ವ್ಯಾಖ್ಯಾನದ ಪರವಾಗಿ ಪರಿಸರ ಸಚಿವರು ನೀಡುತ್ತಿದ್ದ ಎಲ್ಲ ಸಮರ್ಥನೆಗಳನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿದೆ. ಆದ್ದರಿಂದ ಸಚಿವರು ತಕ್ಷಣವೇ ರಾಜೀನಾಮೆ ನೀಡಬೇಕು' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಈಗ ತಾತ್ಕಾಲಿಕ ಪರಿಹಾರ ಸಿಕ್ಕಿದೆಯಷ್ಟೆ. ಆದರೆ ಗಣಿಗಾರಿಕೆ, ರಿಯಲ್ ಎಸ್ಟೇಟ್ ಮತ್ತು ಇತರ ವಾಣಿಜ್ಯ ಚಟುವಟಿಕೆಗಳಿಗೆ ಅರಾವಳಿ ಪರ್ವತಶ್ರೇಣಿಯನ್ನು ಬಿಟ್ಟುಕೊಡುವ ನರೇಂದ್ರ ಮೋದಿ ಸರ್ಕಾರದ ಕುತಂತ್ರದ ವಿರುದ್ಧ ತೀವ್ರ ಹೋರಾಟ ಮುಂದುವರಿಯಲಿದೆ. ಸುಪ್ರೀಂ ಕೋರ್ಟ್ ನಿರ್ಧಾರವು ಈ ನಿಟ್ಟಿನಲ್ಲಿ ಭರವಸೆಯ ಬೆಳಕಾಗಿದೆ' ಎಂದಿದ್ದಾರೆ.

₹79 ಸಾವಿರ ಕೋಟಿ ಮೌಲ್ಯದ ಶಸ್ತ್ರಾಸ್ತ್ರ ಖರೀದಿಗೆ ಒಪ್ಪಿಗೆ

ನವದೆಹಲಿ (ಪಿಟಿಐ): ಭಾರತದ ಮೂರು ಪಡೆಗಳ ಯುದ್ಧಸಾಮರ್ಥ್ಯ ಹೆಚ್ಚಿಸಲು ₹79 ಸಾವಿರ ಕೋಟಿ ಮೌಲ್ಯದ ಮಿಲಿಟರಿ ಹಾರ್ಡ್‌ವೇರ್ ಉಪಕರಣಗಳನ್ನು ಖರೀದಿಸಲು ರಕ್ಷಣಾ ಸಚಿವ ರಾಜನಾಥ್ ಸಿಂಗ್ ನೇತೃತ್ವದ ರಕ್ಷಣಾ ಖರೀದಿ ಮಂಡಳಿ (ಡಿಎಸಿ) ಸೋಮವಾರ ಅನುಮೋದನೆ ನೀಡಿದೆ. ದೀರ್ಘ ಶ್ರೇಣಿಯ ರಾಕೆಟ್‌ಗಳು, ಕ್ಷಿಪಣಿಗಳು, ರೇಡಾರ್ ವ್ಯವಸ್ಥೆಗಳು, ಶಸ್ತ್ರಾಸ್ತ್ರ ಸೇರಿದಂತೆ ವಿವಿಧ ಯುದ್ಧೋಪಕರಣಗಳನ್ನು ಖರೀದಿಸಲು ಉದ್ದೇಶಿಸಲಾಗಿದೆ.

ಭಾರತೀಯ ಸೇನೆಗಾಗಿ ಹಗುರವಾದ ರೇಡಾರ್‌ಗಳು, ಪಿನಾಕಾ ರಾಕೆಟ್ ವ್ಯವಸ್ಥೆಯ ವ್ಯಾಪ್ತಿ ಮತ್ತು ನಿಖರತೆ ಹೆಚ್ಚಳಕ್ಕಾಗಿ ದೀರ್ಘ ವ್ಯಾಪ್ತಿಯ ಗುರಿ ನಿರ್ದೇಶಿತ ರಾಕೆಟ್‌ಗಳನ್ನು (ಎಂಕೆ-2) ಖರೀದಿಸಲಾಗುತ್ತದೆ.

ನೌಕಾಪಡೆಗಾಗಿ ತಂತ್ರಾಂಶದ ಮೂಲಕ ನಿಯಂತ್ರಿಸುವ ಆಧುನಿಕ ರೇಡಿಯೊ ಸಾಧನಗಳು ಮತ್ತು ಅತಿ ಎತ್ತರದಲ್ಲಿ ದೀರ್ಘಕಾಲ ಹಾರಬಲ್ಲ ರಿಮೋಟ್ ಚಾಲಿತ ಡ್ರೋನ್‌ಗಳನ್ನು ಪಡೆಯಲು ನಿರ್ಧರಿಸಲಾಗಿದೆ. ಹಿಂದೂ ಮಹಾಸಾಗರದ ಮೇಲೆ ನಿರಂತರವಾಗಿ ಕಣ್ಗಾವಲು ಇಡಲು ಮತ್ತು ಶತ್ರುಸೈನ್ಯದ ಕುರಿತ ಮಾಹಿತಿ ಸಂಗ್ರಹಿಸಲು ಈ ಡ್ರೋನ್‌ಗಳು ಸಹಕಾರಿಯಾಗಿವೆ.

ವಾಯುಪಡೆಗಾಗಿ ಟೇಕಾಫ್ ಮತ್ತು ಲ್ಯಾಂಡಿಂಗ್‌ನ ಸ್ವಯಂಚಾಲಿತ ದಾಖಲಾತಿ ವ್ಯವಸ್ಥೆ, ಅಸ್ತ್ರ ಎಂಕೆ-2 ಕ್ಷಿಪಣಿಗಳು ಮತ್ತು ಇತರ ಸಾಧನಗಳನ್ನು ಖರೀದಿಸಲು ಒಪ್ಪಿಗೆ ನೀಡಲಾಗಿದೆ. ನೈಜ ಯುದ್ಧದ ಅನುಭವ ನೀಡುವ ತರಬೇತಿ ಸಾಧನ (ಫುಲ್ ಮಿಷನ್ ಸಿಮ್ಯುಲೇಟರ್), ಸ್ಪೈಸ್-1000 ದೀರ್ಘ ಶ್ರೇಣಿಯ ಮಾರ್ಗದರ್ಶಿತ ಕಿಟ್‌ಗಳ (ಇದು ಸಾಮಾನ್ಯ ಬಾಂಬ್‌ಗಳನ್ನು ಸ್ಮಾರ್ಟ್ ಬಾಂಬ್‌ಗಳನ್ನಾಗಿ ಪರಿವರ್ತಿಸುವ ತಂತ್ರಜ್ಞಾನವಾಗಿದೆ. ಈ ಕಿಟ್ ಅನ್ನು ಬಾಂಬ್‌ಗೆ ಅಳವಡಿಸಿದಾಗ ಅದು ಜಿಪಿಎಸ್ ಅಥವಾ ಲೇಸರ್ ಸಹಾಯದಿಂದ ಶತ್ರುಗಳ ಅಡಗುದಾಣವನ್ನು ನಿಖರವಾಗಿ ಹುಡುಕಿಕೊಂಡು ಹೋಗಿ ದಾಳಿ ಮಾಡುತ್ತದೆ) ಖರೀದಿಗೂ ಅನುಮೋದನೆ ನೀಡಲಾಗಿದೆ ಎಂದು ರಕ್ಷಣಾ ಸಚಿವಾಲಯ ಹೇಳಿದೆ.

ಕ್ಷಮೆಯಾಚಿಸಿದ ಲಲಿತ್ ಮೋದಿ

ಲಂಡನ್ (ಪಿಟಿಐ): ಭಾರತದ ಉದ್ಯಮಿ, ಇಂಡಿಯನ್ ಪ್ರೀಮಿಯರ್ ಲೀಗ್‌ನ (ಐಪಿಎಲ್) ಸ್ಥಾಪಕ ಲಲಿತ್ ಮೋದಿ ಅವರು ಸಾಮಾಜಿಕ ಮಾಧ್ಯಮದಲ್ಲಿ ಮಾಡಿದ ಪೋಸ್ಟ್‌ಗೆ ಸಂಬಂಧಿಸಿದಂತೆ ಕ್ಷಮೆ ಯಾಚಿಸಿದ್ದಾರೆ.


ಲಲಿತ್ ಮೋದಿ

ಉದ್ಯಮಿ ವಿಜಯ್ ಮಲ್ಯ ಅವರ 70ನೇ ಹುಟ್ಟುಹಬ್ಬದ ಆಚರಣೆ ಸಂದರ್ಭದಲ್ಲಿ ಅವರೊಂದಿಗಿದ್ದ ವಿಡಿಯೊವನ್ನು ಲಲಿತ್ ಪೋಸ್ಟ್ ಮಾಡಿದ್ದರು. 'ನಾವಿಬ್ಬರು ದೇಶಭ್ರಷ್ಟರು, ಭಾರತದ ಎರಡು ಬಲುದೊಡ್ಡ ದೇಶಭ್ರಷ್ಟರು' ಎಂದು ಲಲಿತ್ ಅವರು ವಿಡಿಯೊದಲ್ಲಿ ವ್ಯಂಗ್ಯವಾಗಿ ಹೇಳಿದ್ದರು. ಆ ಬಳಿಕ ವಿಡಿಯೊ ಅಳಿಸಿ ಹಾಕಿದ್ದರು.

'ನಾನು ಯಾರದ್ದಾದರೂ, ಅದರಲ್ಲೂ ವಿಶೇಷವಾಗಿ ಭಾರತ ಸರ್ಕಾರದ ಭಾವನೆಗಳನ್ನು ನೋಯಿಸಿದ್ದರೆ ಕ್ಷಮೆ ಯಾಚಿಸುತ್ತೇನೆ. ಭಾರತ ಸರ್ಕಾರದ ಬಗ್ಗೆ ಅಪಾರ ಗೌರವ ಇದೆ. ನನ್ನ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಲಾಗಿದೆ' ಎಂದು ಲಲಿತ್ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಐಪಿಎಲ್ ಟಿ20 ಟೂರ್ನಿಯಲ್ಲಿ ಅವ್ಯವಹಾರ ನಡೆಸಿದ ಆರೋಪ ಹೊತ್ತಿರುವ ಲಲಿತ್ ಮೋದಿ ಅವರು 2010ರಲ್ಲೇ ದೇಶ ತೊರೆದಿದ್ದಾರೆ. ಭಾರತದ ಬ್ಯಾಂಕುಗಳಿಗೆ ಕೋಟ್ಯಂತರ ರೂಪಾಯಿ ವಂಚಿಸಿದ ಆರೋಪ ಎದುರಿಸುತ್ತಿರುವ ಮಲ್ಯ ಅವರು 2016ರಿಂದಲೂ ಬ್ರಿಟನ್‌ನಲ್ಲಿ ನೆಲಸಿದ್ದಾರೆ.

ಮಹಿಳಾ ಸಮಾವೇಶ

ಪಿಟಿಐ ಚಿತ್ರ



ತಮಿಳುನಾಡಿನ ತಿರುಪ್ಪೂರ್‌ನಲ್ಲಿ ಸೋಮವಾರ ನಡೆದ 'ವೆಲ್ಲುಂ ತಮಿಳ್‌ಪೆಂಗಲ್' ಮಹಿಳಾ ಸಮಾವೇಶದಲ್ಲಿ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಪಾಲ್ಗೊಂಡಿದ್ದರು

ಬಾಂಗ್ಲಾ: ನಾಮಪತ್ರ ಸಲ್ಲಿಸಿದ ತಾರಿಕ್

ಢಾಕಾ (ಪಿಟಿಐ): ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಕ್ಷದ (ಬಿಎನ್‌ಪಿ) ಹಂಗಾಮಿ ಅಧ್ಯಕ್ಷ ತಾರಿಕ್ ರೆಹಮಾನ್ ಅವರು ಸೋಮವಾರ ನಾಮಪತ್ರ ಸಲ್ಲಿಸಿದರು.


ತಾರಿಕ್ ರೆಹಮಾನ್

ಸೆಗುನ್‌ಬಾಗೀಚಾದಲ್ಲಿರುವ ಢಾಕಾ ವಿಭಾಗೀಯ ಆಯುಕ್ತರ ಕಚೇರಿಯಲ್ಲಿ ಮಧ್ಯಾಹ್ನ 12 ಗಂಟೆ ಸುಮಾರಿಗೆ ನಾಮಪತ್ರ ಸಲ್ಲಿಸಲಾಯಿತು ಎಂದು ಡೈಲಿ ಸ್ಟಾರ್ ವರದಿ ಮಾಡಿದೆ.

ಫೆ. 12ರಂದು ನಡೆಯಲಿರುವ ಚುನಾವಣೆಗೆ ರೆಹಮಾನ್ ಅವರು ಢಾಕಾ-17 ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದಾರೆ. 13ನೇ ರಾಷ್ಟ್ರೀಯ ಸಂಸತ್ ಚುನಾವಣೆಗೆ ನಾಮಪತ್ರ ಸಲ್ಲಿಕೆಗೆ ಸೋಮವಾರ ಅಂತಿಮ ದಿನವಾಗಿತ್ತು.

ಬಿಎನ್‌ಪಿ ಅಧ್ಯಕ್ಷರ ಸಲಹೆಗಾರ ಅಬ್ದುಸ್ ಸಲಾಮ್ ಅವರು ಬಾಂಗ್ಲಾದೇಶ ವೈದ್ಯರ ಸಂಘದ (ಡಿಎಬಿ) ಮುಖ್ಯ ಸಲಹೆಗಾರ ಪ್ರೊ. ಡಾ. ಫರ್ಹಾದ್ ಹಲೀಮ್ ಡೊನಾರ್ ಅವರೊಂದಿಗೆ ರೆಹಮಾನ್ ಪರವಾಗಿ ನಾಮಪತ್ರ ಸಲ್ಲಿಸಿದರು.

ವಾರದ ಹಿಂದಷ್ಟೇ ಲಂಡನ್‌ನಿಂದ ತಾಯ್ನಾಡಿಗೆ ಮರಳಿದ್ದ ರೆಹಮಾನ್ ಅವರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ನೋಂದಾಯಿಸಿಕೊಳ್ಳಲು ಚುನಾವಣಾ ಆಯೋಗವು ಅನುಮೋದನೆ ನೀಡಿದೆ.

ಮುಂಬೈ ಧಾರಣೆ (ಶೇಂಗಾ)

29-12-2025	
ಜಾವಾ 70/80(ಹೊಸ)	10700-10800
ಜಾವಾ 80/90(ಹೊಸ)	10000-10100
ದಪ್ಪ ಮಧ್ಯಪ್ರದೇಶ (ಹೊಸ)	7700-7800
ದಪ್ಪ ಗುಜರಾತ್ (ಹೊಸ)	9000-9100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1585 (1580)
ಒಂದು ವಾರದ ಡೆಲಿವರಿ	1580 (1575)
ಪಾಮ್ ವಾರದ ಡೆಲಿವರಿ	1248 (1243)
ಸೂರ್ಯಕಾಂತಿ ಎಣ್ಣೆ ಕಚ್ಚಾ	1425 (1425)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,35,400 (1,39,400)
ಬೆಳ್ಳಿ ಕೆ.ಜಿಗೆ	2,27,000 (2,48,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಪುಟಿನ್ ನಿವಾಸ ಗುರಿಯಾಗಿಸಿ ದಾಳಿ

ಮಾಸ್ಕೊ (ಎಎಫ್‌ಪಿ): ಉಕ್ರೇನ್ ಸೇನೆಯು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರ ನಿವಾಸವನ್ನು ಗುರಿಯಾಗಿಸಿ ಡ್ರೋನ್ ದಾಳಿ ನಡೆಸಿದೆ ಎಂದು ರಷ್ಯಾ ಸೋಮವಾರ ಆರೋಪಿಸಿದೆ.


ವ್ಲಾದಿಮಿರ್ ಪುಟಿನ್

ಉಕ್ರೇನ್ ಜತೆಗಿನ ಯುದ್ಧವನ್ನು ಕೊನೆಗೊಳಿಸುವ ನಿಟ್ಟಿನಲ್ಲಿ ನಡೆಯುತ್ತಿರುವ ಮಾತುಕತೆಯ ಮೇಲೆ ಇದು ವ್ಯತಿರಿಕ್ತ ಪರಿಣಾಮ ಬೀರಲಿದೆ ಎಂದು ರಷ್ಯಾ ಎಚ್ಚರಿಸಿದೆ.

'ರಷ್ಯಾದ ನೊವ್‌ಗೊರೊಡ್ ಪ್ರಾಂತ್ಯದಲ್ಲಿರುವ ಪುಟಿನ್ ಅವರ ಅಧಿಕೃತ ನಿವಾಸವನ್ನು ಗುರಿಯಾಗಿಸಿ ಉಕ್ರೇನ್ 91 ಡ್ರೋನ್‌ಗಳನ್ನು ಹಾರಿಸಿದೆ. ನಮ್ಮ ವಾಯು ರಕ್ಷಣಾ ವ್ಯವಸ್ಥೆಯು ಎಲ್ಲವನ್ನೂ ಹೊಡೆದುರುಳಿಸಿದೆ' ಎಂದು ರಷ್ಯಾದ ವಿದೇಶಾಂಗ ಸಚಿವ ಸೆರ್ಗೆಯ್ ಲಾವ್ರೊವ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ರಷ್ಯಾ ಸೇನೆಯು ಈ ದಾಳಿಗೆ ಪ್ರತೀಕಾರದ ದಾಳಿ ನಡೆಸಲು ಉಕ್ರೇನ್‌ನ ಕೆಲವು ತಾಣಗಳನ್ನು ಆಯ್ಕೆ ಮಾಡಿದೆ. ಅದೇ ರೀತಿ, ಸಂಧಾನ ಮಾತುಕತೆಗೆ ಸಂಬಂಧಿಸಿದಂತೆ ರಷ್ಯಾ ತನ್ನ ನಿಲುವನ್ನು ಬದಲಿಸುವ ಸಾಧ್ಯತೆಯಿದೆ' ಎಂದು ಘೋಷಿಸಿದರು.

'33 ಬಿಎಲ್‌ಒಗಳ ಸಾವು ಸರಿಯೇ?'

ನವದೆಹಲಿ (ಪಿಟಿಐ): ದೇಶದ ವಿವಿಧೆಡೆ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕಾರ್ಯದಲ್ಲಿ ತೊಡಗಿರುವ ಬೂತ್ ಮಟ್ಟದ ಅಧಿಕಾರಿಗಳ (ಬಿಎಲ್‌ಒ) ಸಾವಿನ ಕುರಿತು ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್ ಅವರು ಕೇಂದ್ರ ಸರ್ಕಾರದ ವಿರುದ್ಧ ಸೋಮವಾರ ವಾಗ್ದಾಳಿ ನಡೆಸಿದ್ದಾರೆ.

'ಪಶ್ಚಿಮ ಬಂಗಾಳದ ಬಂಕುರಾ ಜಿಲ್ಲೆಯಲ್ಲಿ ಬಿಎಲ್‌ಒ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ದೇಶದಾದ್ಯಂತ ಒಟ್ಟು 33 ಮಂದಿ ಮೃತಪಟ್ಟಿದ್ದಾರೆ. ಮತದಾರರ ಪಟ್ಟಿಯಲ್ಲಿ ಒಬ್ಬ ನುಸುಳುಕೋರನ ಹೆಸರು ಇರುವುದು ಸರಿಯಲ್ಲ ಎಂದಾದಲ್ಲಿ, 33 ಬಿಎಲ್‌ಒಗಳು ಮೃತಪಟ್ಟರೆ ಅದು ಸರಿಯೇ' ಎಂದು ಸಿಬಲ್ ಅವರು 'ಎಕ್ಸ್' ಪೋಸ್ಟ್‌ನಲ್ಲಿ ಪ್ರಶ್ನಿಸಿದ್ದಾರೆ.

ವಿಮಾನ ಸಂಚಾರ: ಭಾರಿ ವ್ಯತ್ಯಯ

ನವದೆಹಲಿ/ಮುಂಬೈ (ಪಿಟಿಐ): ದಟ್ಟ ಮಂಜು ಕವಿದ ವಾತಾವರಣವಿದ್ದ ಕಾರಣ ಸೋಮವಾರ ದೆಹಲಿ ವಿಮಾನ ನಿಲ್ದಾಣದಲ್ಲಿ 128 ವಿಮಾನಗಳ ಸಂಚಾರ ರದ್ದುಗೊಳಿಸಲಾಗಿದೆ. 8 ವಿಮಾನಗಳ ಮಾರ್ಗ ಬದಲಾವಣೆ ಮಾಡಲಾಗಿದೆ ಮತ್ತು 200 ಅಧಿಕ ವಿಮಾನಗಳ ಸಂಚಾರ ವಿಳಂಬವಾಗಿದೆ.

ಗೆಲುವಿನಲ್ಲಿ ಮಿಂಚಿದ ಶ್ರೀಜಿತ್–ಶ್ರೇಯಸ್

ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್: ಕರ್ನಾಟಕಕ್ಕೆ ತಮಿಳುನಾಡು ವಿರುದ್ಧ ಜಯ

• ಅಭಿಲಾಷ್ ಶೆಟ್ಟಿಗೆ ನಾಲ್ಕು ವಿಕೆಟ್ • ಮಯಂಕ್ ಪಡೆಗೆ ಸತತ 3ನೇ ಗೆಲುವು

ಪ್ರಜಾವಾಣಿ ವಾರ್ತೆ





ಅರ್ಧಶತಕ ದಾಖಲಿಸಿದ ಶ್ರೇಯಸ್ ಗೋಪಾಲ್ (ಎಡ) 4 ವಿಕೆಟ್ ಪಡೆದ ಅಭಿಲಾಷ್ ಶೆಟ್ಟಿ

ಅಹಮದಾಬಾದ್: ವಿಕೆಟ್ ಕೀಪರ್ ಕೃಷ್ಣನ್ ಶ್ರೀಜಿತ್ ಮತ್ತು ಆಲ್‌ರೌಂಡರ್ ಶ್ರೇಯಸ್ ಗೋಪಾಲ್ ಅವರ ಅರ್ಧ ಶತಕಗಳ ನೆರವಿನಿಂದ ಕರ್ನಾಟಕ ತಂಡ, ವಿಜಯ್ ಹಜಾರೆ ಟ್ರೋಫಿ ಏಕದಿನ ಟೂರ್ನಿಯಲ್ಲಿ ತಮಿಳುನಾಡು ತಂಡದ ಮೇಲೆ ಸೋಮವಾರ 4 ವಿಕೆಟ್‌ಗಳ ಜಯಪಡೆಯಿತು. ಇದು ಎಲೀಟ್ 'ಎ' ಗುಂಪಿನಲ್ಲಿ ಕರ್ನಾಟಕಕ್ಕೆ ಸತತ ಮೂರನೇ ಜಯ.

ಗುಜರಾತ್ ಕಾಲೇಜು ಮೈದಾನದಲ್ಲಿ ನಡೆದ ಸಾಂಪ್ರದಾಯಕ ಎದುರಾಳಿಗಳ ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ತಮಿಳುನಾಡು 49.5 ಓವರುಗಳಲ್ಲಿ 289 ರನ್‌ಗಳಿಗೆ ಆಲೌಟ್ ಆಯಿತು. ವೇಗದ ಬೌಲರ್ ಅಭಿಲಾಷ್ ಶೆಟ್ಟಿ 4 ವಿಕೆಟ್ ಪಡೆದರು. ಈ ಮೊದಲಿನ ಪಂದ್ಯಗಳಲ್ಲಿ ಉತ್ತಮ ಬ್ಯಾಟಿಂಗ್ ಪ್ರದರ್ಶಿಸಿರುವ ಕರ್ನಾಟಕ ಒಂದು ಹಂತದಲ್ಲಿ 136 ರನ್‌ಗಳಾಗುವಷ್ಟರಲ್ಲಿ ನಾಲ್ವರು ಅನುಭವಿ ಬ್ಯಾಟರ್‌ಗಳನ್ನು ಕಳೆದುಕೊಂಡಿತ್ತು.

ನಾಯಕ ಮಯಂಕ್ ಅಗರವಾಲ್ ಅರ್ಧ ಶತಕ (58, 77ಎ, 4x7) ಗಳಿಸಿ 27ನೇ ಓವರಿನಲ್ಲಿ ಮಧ್ಯಮ ವೇಗಿ ಸನ್ನಿ ಸಂಧು ಬೌಲಿಂಗ್‌ನಲ್ಲಿ ವಿಕೆಟ್ ಕೀಪರ್ ಜಗದೀಶನ್ ಅವರಿಗೆ ಕ್ಯಾಚಿತ್ತು ನಿರ್ಗಮಿಸಿದಾಗ ತಮಿಳುನಾಡು ಮೇಲುಗೈ ಸಾಧಿಸುವಂತೆ ಕಂಡಿತ್ತು. ಆದರೆ ಶ್ರೀಜಿತ್ (77, 78ಎ) ಮತ್ತು ಶ್ರೇಯಸ್ ಗೋಪಾಲ್ (55, 47ಎ) ಅವರು ಐದನೇ ವಿಕೆಟ್‌ಗೆ ಅಮೂಲ್ಯ 116 ರನ್ ಸೇರಿಸಿ ಕರ್ನಾಟಕದ ಮೇಲುಗೈಗೆ ಕಾರಣರಾದರು.

ಇಬ್ಬರೂ ಒಂದೊಂದೇ ರನ್ ಗಳಿಸುತ್ತ, ಸಡಿಲ ಎಸೆತಗಳನ್ನು ದಂಡಿಸುತ್ತ ಇನಿಂಗ್ಸ್ ಕಟ್ಟಿದರು.

ಮೊತ್ತ 252 ಆಗಿದ್ದಾಗ ಇಬ್ಬರೂ ನಿರ್ಗಮಿಸಿದರೂ, ಡೇನಿಯಲ್ ಮನೋಹರ್ (ಅಜೇಯ 20) ಮತ್ತು ವಿದ್ಯಾಧರ ಪಾಟೀಲ (ಔಟಾಗದೇ 17) ತಂಡವನ್ನು ಗುರಿ ತಲುಪಿಸಿದರು. ಕರ್ನಾಟಕ 17 ಎಸೆತಗಳು ಇರುವಂತೆ 6 ವಿಕೆಟ್‌ಗೆ 293 ರನ್ ಹೊಡೆಯಿತು.

ಇದಕ್ಕೆ ಮೊದಲು ನಾಯಕ–ವಿಕೆಟ್ ಕೀಪರ್ ನಾರಾಯಣ್ ಜಗದೀಶನ್ (65) ಮತ್ತು ಮೂರನೇ ಕ್ರಮಾಂಕದ ಆಟಗಾರ ಪ್ರದೋಶ್ ರಂಜನ್ ಪಾಲ್ (57) ಅವರು ಅರ್ಧ ಶತಕಗಳನ್ನು ಬಾರಿಸಿ ತಮಿಳುನಾಡು ತಂಡಕ್ಕೆ ಉತ್ತಮ ಆರಂಭ ನೀಡಿದ್ದರು. ಆದರೆ ನಂತರ ನಿಯಮಿತವಾಗಿ ವಿಕೆಟ್‌ಗಳನ್ನು ಕಳೆದುಕೊಂಡಿತು.

ಕರ್ನಾಟಕ ಕಡೆ ಅಭಿಲಾಷ್ ಮತ್ತೊಮ್ಮೆ ಪರಿಣಾಮಕಾರಿ ಎನಿಸಿ ನಾಲ್ಕು ವಿಕೆಟ್ ಪಡೆದರು. ಲೆಗ್ ಸ್ಪಿನ್ನರ್ ಶ್ರೇಯಸ್ ಗೋಪಾಲ್ (47ಕ್ಕೆ1) ಮತ್ತು ಎಡಗೈ ಸ್ಪಿನ್ನರ್ ಶ್ರೀಶ ಆಚಾರ್ (47ಕ್ಕೆ2) ಅವರೂ ಹೆಚ್ಚು ರನ್ ಕೊಡಲಿಲ್ಲ.

ತಂಡಕ್ಕೆ ಹಿಂತಿರುಗಿದ ಪ್ರಮುಖ ವೇಗಿ ಪ್ರಸಿದ್ಧ ಕೃಷ್ಣ ಯಶಸ್ಸು ಗಳಿಸಲಿಲ್ಲ.

ದೆಹಲಿ ತಂಡಕ್ಕೆ ಹ್ಯಾಟ್ರಿಕ್ ಗೆಲುವು

ಬೆಂಗಳೂರು: ರಿಷಭ್ ಪಂತ್ ನಾಯಕತ್ವದ ದೆಹಲಿ ತಂಡವು ಸೋಮವಾರ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ 'ಡಿ' ಗುಂಪಿನ ಪಂದ್ಯದಲ್ಲಿ ಮೂರು ವಿಕೆಟ್‌ಗಳಿಂದ ಸೌರಾಷ್ಟ್ರ ತಂಡವನ್ನು ಮಣಿಸಿತು.

ಮೊದಲೆರಡು ಪಂದ್ಯಗಳಲ್ಲಿ ಮಿಂಚಿದ್ದ ವಿರಾಟ್ ಕೊಹ್ಲಿ ಅವರ ಅನುಪಸ್ಥಿತಿಯಲ್ಲಿ ಕಣಕ್ಕಿಳಿದ ದೆಹಲಿ ತಂಡವು ಸತತ ಮೂರನೇ ಜಯ ದಾಖಲಿಸಿತು.

ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ (2) ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ದೆಹಲಿ ತಂಡವು ವಿಶ್ವರಾಜಸಿಂಹ ಜಡೇಜ (115) ಅವರ ಶತಕದ ಬಲದಿಂದ 7 ವಿಕೆಟ್‌ಗೆ 320 ರನ್‌ಗಳ ಸವಾಲಿನ ಮೊತ್ತ ಕಲೆಹಾಕಿತು. ನವದೀಪ್ ಸೈನಿ ಮೂರು ವಿಕೆಟ್ ಪಡೆದರು. ಗುರಿ ಬೆನ್ನಟ್ಟಿದ ದೆಹಲಿ ತಂಡವು ಏಳು ಎಸೆತಗಳು ಬಾಕಿ ಇರುವಂತೆ 7 ವಿಕೆಟ್‌ಗೆ 321 ರನ್ ಗಳಿಸಿ ಸಂಭ್ರಮಿಸಿತು. ಪ್ರಿಯಾಂಶ್ ಆರ್ಯ (78) ಮತ್ತು ತೇಜಸ್ವಿ (53) ಅವರು ಅರ್ಧಶತಕಗಳ ಕಾಣಿಕೆ ನೀಡಿದರು.

ಆಲೂರು ಕ್ರೀಡಾಂಗಣ 2: ಸೌರಾಷ್ಟ್ರ: 50 ಓವರ್‌ಗಳಲ್ಲಿ 7 ವಿಕೆಟ್‌ಗೆ 320 (ವಿಶ್ವರಾಜಸಿಂಹ ಜಡೇಜ 115, ಗುಜ್ಜರ್ ಸಮ್ಮರ್ 41, ರುಚಿತ್ ಅಹಿರ್ ಔಟಾಗದೇ 65; ನವದೀಪ್ ಸೈನಿ 41ಕ್ಕೆ 3). ದೆಹಲಿ: 48.5 ಓವರ್‌ಗಳಲ್ಲಿ 7 ವಿಕೆಟ್‌ಗೆ 321 (ಪ್ರಿಯಾಂಶ್ ಆರ್ಯ 78, ತೇಜಸ್ವಿ 53, ಹರ್ಷ್ ತ್ಯಾಗಿ 49, ನವದೀಪ್ ಸೈನಿ ಔಟಾಗದೇ 34). ಫಲಿತಾಂಶ: ದೆಹಲಿ ತಂಡಕ್ಕೆ ಮೂರು ವಿಕೆಟ್‌ಗಳ ಜಯ.

ಆಲೂರು ಕ್ರೀಡಾಂಗಣ 3: ರೈಲ್ವೇಸ್: 50 ಓವರ್‌ಗಳಲ್ಲಿ 7 ವಿಕೆಟ್‌ಗೆ 365 (ಪ್ರಥಮ್ ಸಿಂಗ್ 73, ರವಿ ಸಿಂಗ್ 88, ಅಶುತೋಷ್ ಶರ್ಮಾ 50, ಝುಡ್.ಎ. ಝಾನ್ ಔಟಾಗದೇ 48; ಪುಲ್ಕಿತ್ ನಾರಂಗ್ 43ಕ್ಕೆ 3). ಸರ್ವಿಸಸ್: 47.2 ಓವರ್‌ಗಳಲ್ಲಿ 281 (ಸಾಗರ್ ದಹಿಯಾ 95, ರವಿ ಚವಾನ್ 73; ಆರ್.ಕೆ.ಚೌಧರಿ 27ಕ್ಕೆ 3). ಫಲಿತಾಂಶ: ರೈಲ್ವೇಸ್ ತಂಡಕ್ಕೆ 84 ರನ್‌ಗಳ ಗೆಲುವು.

ಆಲೂರು ಕ್ರೀಡಾಂಗಣ: ಆಂಧ್ರ: 49.2 ಓವರ್‌ಗಳಲ್ಲಿ 221 (ಎಸ್.ಎನ್.ಡಿ.ವಿ ಪ್ರಸಾದ್ 66, ಸೌರಭ್ ಕುಮಾರ್ 47; ಬಿಪ್ಲಬ್ ಸಮಂತರಾಯ್ 36ಕ್ಕೆ 3, ಗೋವಿಂದ ಪೋದ್ದಾರ್ 36ಕ್ಕೆ 3). ಒಡಿಶಾ: 43.4 ಓವರ್‌ಗಳಲ್ಲಿ 4 ವಿಕೆಟ್‌ಗೆ 223 (ಓಂ ಟಿ.ಮುಂಢೆ 91, ಗೋವಿಂದ ಪೋದ್ದಾರ್ 89; ಸತ್ಯನಾರಾಯಣ ರಾಜು 49ಕ್ಕೆ 2). ಫಲಿತಾಂಶ: ಒಡಿಶಾ ತಂಡಕ್ಕೆ 6 ವಿಕೆಟ್‌ಗಳ ಗೆಲುವು.

ಸ್ಕೋರ್ ಕಾರ್ಡ್

ತಮಿಳುನಾಡು: 49.5 ಓವರುಗಳಲ್ಲಿ 288

ಆತಿಶ್ ಸಿ ಪಡಿಕ್ಕಲ್ ಬಿ ಅಭಿಲಾಷ್ 14 (20ಎ, 4x2)
ಜಗದೀಶನ್ ಎಲ್‌ಬಿಡಬ್ಲ್ಯು ಬಿ ಶ್ರೀಶ 65 (67ಎ, 4x10, 6x1)
ಪ್ರದೋಶ್ ಸಿ ಶ್ರೀಜಿತ್ ಬಿ ಅಭಿಲಾಷ್ 57 (64ಎ, 4x5)
ಇಂದ್ರಜಿತ್ ಸಿ ಮನೋಹರ್ ಬಿ ಶ್ರೇಯಸ್ 28 (45ಎ, 4x2)
ಸಿದ್ಧಾರ್ಥ್ ರನ್‌ಔಟ್ (ಸಬ್/ ಮನ್ವಂತ್) 1 (6ಎ)
ಮೊಹಮದ್ ಅಲಿ ಸಿ ಸ್ಮರಣ್ ಬಿ ಶ್ರೀಶ 31 (32ಎ, 4x3, 6x2)
ಸಾಯಿಕಿಶೋರ್ ಸಿ ಪಡಿಕ್ಕಲ್ ಬಿ ಅಭಿಲಾಷ್ 38 (32ಎ, 4x3, 6x1)
ಸನ್ನಿ ಸಿ ಮನೋಹರ್ ಬಿ ಪಾಟೀಲ್ 17 (12ಎ, 4x1, 6x1)
ಸೋನು ಸಿ ಆ್ಯಂಡ್ ಬಿ ಪಾಟೀಲ್ 12 (9ಎ, 4x1, 6x1)
ಗುರ್ಜಪನೀತ್ ಸಿ ಮನೋಹರ್ ಬಿ ಅಭಿಲಾಷ್ 9 (12ಎ, 6x1)
ಗೋವಿಂದ್ ಔಟಾಗದೆ 1 (1ಎ)

ಇತರೆ: 15 (ಲೆಗ್‌ಬೈ 1, ನೋಬಾಲ್ 1, ವೈಡ್ 13)

ವಿಕೆಟ್ ಪತನ: 1–66 (ಅತಿಶ್ ಎಸ್.ಆರ್., 9.3), 2–101 (ಎನ್.ಜಗದೀಶನ್, 16.4), 3–163 (ಬಾಬಾ ಇಂದ್ರಜಿತ್, 30.4), 4–171 (ಆಂಡ್ರೆ ಸಿದ್ಧಾರ್ಥ್, 32.2), 5–191 (ಪ್ರದೋಶ್ ರಂಜನ್ ಪಾಲ್, 35.5), 6–220 (ಮೊಹಮ್ಮದ್ ಅಲಿ, 40.4), 7–257 (ಸನ್ನಿ ಸಂಧು, 45.1), 8–275 (ಸೋನು ಯಾದವ್, 47.1), 9–286 (ಸಾಯಿ ಕಿಶೋರ್, 49.1), 10–288 (ಗುರ್ಜಪನೀತ್ ಸಿಂಗ್, 49.5)

ಬೌಲಿಂಗ್: ಪ್ರಸಿದ್ಧ ಕೃಷ್ಣ 10–0–60–0; ಅಭಿಲಾಷ್ ಶೆಟ್ಟಿ 7.5–0–57–4; ವಿದ್ಯಾಧರ ಪಾಟೀಲ 10–0–62–2; ಶ್ರೇಯಸ್ ಗೋಪಾಲ್ 10–0–47–1; ಶ್ರೀಶ ಆಚಾರ್ 10–0–47–2; ದೇವದತ್ತ ಪಡಿಕ್ಕಲ್ 2–0–14–0

ಕರ್ನಾಟಕ: 47.1 ಓವರುಗಳಲ್ಲಿ 6ಕ್ಕೆ 293

ಮಯಂಕ್ ಸಿ ಜಗದೀಶನ್ ಬಿ ಸಂಧು 58 (77ಎ, 4x7)
ಪಡಿಕ್ಕಲ್ ಬಿ ಗುರ್ಜಪನೀತ್ 22 (12ಎ, 4x5)
ಕರುಣ್ ಸ್ಟಂ. ಜಗದೀಶನ್ ಬಿ ಸಾಯಿಕಿಶೋರ್ 17 (28ಎ, 4x3)
ಸ್ಮರಣ್ ಸಿ ಪ್ರದೋಶ್ ಬಿ ಗೋವಿಂದ್ 15 (17ಎ, 4x1)
ಶ್ರೀಜಿತ್ ರನ್‌ಔಟ್ (ಗೋವಿಂದ್) 77 (78ಎ, 4x6, 6x2)
ಶ್ರೇಯಸ್ ಎಲ್‌ಬಿಡಬ್ಲ್ಯು ಬಿ ಸೋನು 55 (47ಎ, 4x6)
ಅಭಿನವ್ ಔಟಾಗದೇ 20 (9ಎ, 4x1, 6x2)
ವಿದ್ಯಾಧರ್ ಔಟಾಗದೇ 17 (15ಎ, 4x1, 6x1)

ಇತರೆ: 12 (ಲೆಗ್‌ಬೈ 4, ವೈಡ್ 8)

ವಿಕೆಟ್ ಪತನ: 1–29 (ದೇವದತ್ತ ಪಡಿಕ್ಕಲ್, 4.1), 2–57 (ಕರುಣ್ ನಾಯರ್, 11.4), 3–94 (ರವಿಚಂದ್ರನ್ ಸ್ಮರಣ್, 18.5), 4–136 (ಮಯಂಕ್ ಅಗರವಾಲ್, 26.3), 5–252 (ಕೃಷ್ಣನ್ ಶ್ರೀಜಿತ್, 42.6), 6–252 (ಶ್ರೇಯಸ್ ಗೋಪಾಲ್, 43.1).

ಬೌಲಿಂಗ್: ಗುರ್ಜಪನೀತ್ ಸಿಂಗ್ 9–2–35–1; ಗೋವಿಂದ ಗಣೇಶ್ 10–0–72–1; ಸಾಯಿ ಕಿಶೋರ್ 10–0–51–1; ಸೋನು ಯಾದವ್ 8.1–0–68–1; ಮೊಹಮದ್ ಅಲಿ 5–0–33–0; ಸನ್ನಿ ಸಂಧು 4–0–25–1; ಪ್ರದೋಶ್ ರಂಜನ್ ಪಾಲ್ 1–0–5–0

ಪಂದ್ಯದ ಆಟಗಾರ: ಕೃಷ್ಣನ್ ಶ್ರೀಜಿತ್

ಫಲಿತಾಂಶ: ಕರ್ನಾಟಕ ತಂಡಕ್ಕೆ 4 ವಿಕೆಟ್ ಜಯ

ಶ್ರೀಲಂಕಾ ವಿರುದ್ಧ ಟಿ20 ಸರಣಿಯ ಅಂತಿಮ ಪಂದ್ಯ ಇಂದು

'ಕ್ಲೀನ್‌ಸ್ವೀಪ್'ಗೆ ಭಾರತ ಕಾತರ

ತಿರುವನಂತಪುರ (ಪಿಟಿಐ): ಭಾರತ ಮಹಿಳಾ ತಂಡವು, ಆಕ್ರಮಣಕಾರಿ ಆಟವನ್ನು ಮುಂದುವರಿಸಿ ಐದನೇ ಹಾಗೂ ಕೊನೆಯ ಪಂದ್ಯವನ್ನೂ ಗೆದ್ದು ಶ್ರೀಲಂಕಾ ವಿರುದ್ಧ ಟಿ20 ಸರಣಿಯನ್ನು 'ಕ್ಲೀನ್‌ಸ್ವೀಪ್' ಮಾಡುವ ಉತ್ಸಾಹದಲ್ಲಿದೆ. ಪ್ರವಾಸಿ ತಂಡಕ್ಕೆ ಸರಣಿಯಲ್ಲಿ ಸಮಾಧಾನಕರ ಜಯ ಪಡೆಯಲು ಮಂಗಳವಾರದ ಪಂದ್ಯ ಕೊನೆಯ ಅವಕಾಶವೂ ಆಗಿದೆ.

ಈ ಸರಣಿಯು ಭಾರತಕ್ಕೆ, ಮುಂದಿನ ಜೂನ್–ಜುಲೈ ತಿಂಗಳಲ್ಲಿ ಇಂಗ್ಲೆಂಡ್‌ನಲ್ಲಿ ನಡೆಯಲಿರುವ ಟಿ20 ಮಹಿಳಾ ವಿಶ್ವ ಕಪ್‌ಗೆ ಸಿದ್ಧತೆಯ ಭಾಗವಾಗಿದೆ. ನಂತರ ಭಾರತವು ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್‌ನಲ್ಲಿ ತಲಾ ಮೂರು ಟಿ20 ಅಂತರರಾಷ್ಟ್ರೀಯ ಪಂದ್ಯ ಆಡಲಿದ್ದು, ಬಳಿಕ ವಿಶ್ವಕಪ್ ಕಣಕ್ಕೆ ಇಳಿಯಲಿದೆ.

2024ರ ಟಿ20 ವಿಶ್ವಕಪ್‌ನಲ್ಲಿ ಭಾರತ ಗುಂಪು ಹಂತದಲ್ಲಿಯೇ ಹೊರಬಿದ್ದಿತ್ತು. ನಂತರ ಭಾರತ ಚುಟುಕು ಮಾದರಿಯಲ್ಲಿ ಆಕ್ರಮಣದ ಆಟಕ್ಕೆ ಹೆಚ್ಚು ಒತ್ತು ನೀಡುತ್ತಿದೆ. ಈ ವರ್ಷ ಎರಡು ಸರಣಿಗಳನ್ನೂ ಜಯಿಸಿದೆ.

'ಇದು ನಮ್ಮ ಪಾಲಿಗೆ ಮಹತ್ವದ ಸರಣಿಯಾಗಿದೆ. ಟಿ20 ಪಂದ್ಯಗಳಲ್ಲಿ ನಾವು ಹೆಚ್ಚು ಆಕ್ರಮಣಕಾರಿಯಾಗಿ ಆಡಿ ನಮ್ಮ ಆಟದ ಮಟ್ಟ ಎತ್ತರಿಸಬೇಕೆಂದು ವಿಶ್ವಕಪ್ ನಂತರ ಚರ್ಚಿಸಿದ್ದೆವು' ಎಂದು ನಾಯಕಿ ಹರ್ಮನ್‌ಪ್ರೀತ್ ಕೌರ್ ಸರಣಿ ಗೆದ್ದ ಬಳಿಕ ಹೇಳಿದ್ದರು.

ಭಾರತ ಅಧಿಕಾರಯುತ ಜಯ ಗಳಿಸುವಲ್ಲಿ ಬೌಲರ್‌ಗಳದ್ದೇ ಪಾತ್ರವೇ ಪ್ರಮುಖವಾಗಿದೆ. ಬ್ಯಾಟರ್‌ಗಳಿಗೆ ಸವಾಲಿನ ಗುರಿ ಎದುರಾಗುತ್ತಿರಲಿಲ್ಲ. ಬ್ಯಾಟರ್‌ಗಳ ಪೈಕಿ ಶಫಾಲಿ ವರ್ಮಾ ಸತತ ಮೂರು ಅರ್ಧ ಶತಕಗಳ ಮೂಲಕ ಪ್ರಭಾವಶಾಲಿ ಎನಿಸಿದ್ದಾರೆ.

ಆದರೆ ಫೀಲ್ಡಿಂಗ್‌ನಲ್ಲಿ ಮಾತ್ರ ತಂಡ ಎಡವುತ್ತಿದೆ. ಮೊದಲ ಪಂದ್ಯದಲ್ಲಿ ನಾಲ್ಕು ಕ್ಯಾಚುಗಳನ್ನು ಕೈಬಿಟ್ಟರೆ, ನಾಲ್ಕನೇ ಪಂದ್ಯದಲ್ಲಿ ಎರಡು ಸುಲಭ ಕ್ಯಾಚುಗಳ ಜೊತೆ ಸ್ಟಂಪಿಂಗ್ ಅವಕಾಶ ಕೈಚೆಲ್ಲಿತ್ತು.

ಸರಣಿಯಲ್ಲಿ ಭಾರತಕ್ಕೆ ಸಾಕಷ್ಟು ಸಕಾರಾತ್ಮಕ ಅಂಶಗಳಿವೆ. ವೇಗಿ ರೇಣುಕಾ ಸಿಂಗ್ ದೀರ್ಘಕಾಲದ ನಂತರ ತಂಡಕ್ಕೆ ಯಶಸ್ವಿ ಪುನರಾಗಮನ ಮಾಡಿದ್ದಾರೆ.



ಹರ್ಮನ್‌ಪ್ರೀತ್ ಕೌರ್ ಹಾಗೂ ಶಫಾಲಿ ವರ್ಮಾ

ಸ್ಪಿನ್ನರ್ ದೀಪ್ತಿ ಶರ್ಮಾ ಎಂದಿನಂತೆ ಸ್ಥಿರ ಪ್ರದರ್ಶನ ನೀಡಿದ್ದಾರೆ. ಸರಣಿಯ ವೇಳೆ ಪದಾರ್ಪಣೆ ಮಾಡಿದ 20 ವರ್ಷ ವಯಸ್ಸಿನ ಎಡಗೈ ಸ್ಪಿನ್ನರ್ ವೈಷ್ಣವಿ ಶರ್ಮಾ ನಿರಾಸೆ ಮೂಡಿಸಿಲ್ಲ. 5.73ರ ಇಕಾನಮಿಯಲ್ಲಿ ನಾಲ್ಕು ವಿಕೆಟ್ ಪಡೆದಿದ್ದಾರೆ.

ಉಪನಾಯಕಿ ಸ್ಮೃತಿ ಮಂದಾನ ನಾಲ್ಕನೇ ಒಂದ್ಯದಲ್ಲಿ 48 ಎಸೆತಗಳಲ್ಲಿ 80 ರನ್ ಬಾಚುವ ಮೂಲಕ ಲಯಕ್ಕೆ ಮರಳಿದ್ದಾರೆ. ರಿಚಾ ಘೋಷ್ ಅವರನ್ನು ಮೂರನೇ ಕ್ರಮಾಂಕದಲ್ಲಿ ಆಡಿಸಿದ್ದೂ ಫಲ ನೀಡಿದೆ. ಅವರು ಕೇವಲ 16 ಎಸೆತಗಳಲ್ಲಿ 40 ರನ್ ಬಾರಿಸಿದರು.

ನಾಲ್ಕನೇ ಪಂದ್ಯದ ವೇಳೆ ಭಾರತ ಮತ್ತು ಶ್ರೀಲಂಕಾ ತಂಡಗಳು ಟಿ20ಯಲ್ಲಿ ತಮ್ಮ ಅತ್ಯಧಿಕ ಮೊತ್ತ ದಾಖಲಿಸಿದವು. ಭಾರತ 2 ವಿಕೆಟ್‌ಗೆ 221 ರನ್ ಬಾರಿಸಿದರೆ, ಶ್ರೀಲಂಕಾ 6 ವಿಕೆಟ್‌ಗೆ 191 ರನ್ ಬಾರಿಸಿತ್ತು.

ಶ್ರೀಲಂಕಾದ ನಾಯಕಿ ಚಾಮರಿ ಅಟಪಟ್ಟು ವಿಫಲರಾಗಿದ್ದು ತಂಡಕ್ಕೆ ಹಿನ್ನಡೆಯಾಗಿದೆ. ಆದರೆ ಈ ಹಿಂದಿನ ಪಂದ್ಯದಲ್ಲಿ ಅವರು 37 ಎಸೆತಗಳಲ್ಲಿ 52 ರನ್ ಬಾರಿಸಿದ್ದಾರೆ. ಅವರಿಗೆ ಇತರ ಆಟಗಾರ್ತಿಯರು ಬೆಂಬಲ ನೀಡಬಹುದೆಂಬ ವಿಶ್ವಾಸದಲ್ಲಿ ಲಂಕಾ ಇದೆ.

ಪಂದ್ಯ ಆರಂಭ: ರಾತ್ರಿ 7

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

'ಬ್ಯಾಟಲ್ ಆಫ್ ಸೆಕ್ಸಸ್' ಟೆನಿಸ್ ಪ್ರದರ್ಶನ ಪಂದ್ಯ

ಸಬಲೆಂಕಾ ವಿರುದ್ಧ ಕಿರ್ಗಿಯೋಸ್‌ಗೆ ಜಯ

ದುಬೈ (ಎಪಿ): ಆಸ್ಟ್ರೇಲಿಯಾದ ನಿಕ್ ಕಿರ್ಗಿಯೋಸ್ ಅವರು 'ಬ್ಯಾಟಲ್ ಆಫ್ ಸೆಕ್ಸಸ್' ಟೆನಿಸ್ ಪ್ರದರ್ಶನ ಪಂದ್ಯದ ತಾಜಾ ಅವತರಣಿಕೆಯಲ್ಲಿ ವಿಶ್ವದ ಅಗ್ರ ಕ್ರಮಾಂಕದ ಆಟಗಾರ್ತಿ ಅರಿನಾ ಸಬಲೆಂಕಾ ಅವರನ್ನು 6–3, 6–3 ರಿಂದ ಸೋಲಿಸಿದರು.

ಕೊಕಾಕೋಲಾ ಅರೇನಾದಲ್ಲಿ ಭಾನುವಾರ ರಾತ್ರಿ ನಡೆದ ಈ ಪಂದ್ಯವು ಲಿಂಗ ಸಮಾನತೆಯ ಆಶಯದ ಬದಲು ಲಘು ಮನರಂಜನೆ ಒದಗಿಸಿತು. 17,000 ಪ್ರೇಕ್ಷಕರ ಸಾಮರ್ಥ್ಯದ ಕ್ರೀಡಾಂಗಣ ಭರ್ತಿಯಾಗಿತ್ತು. ಅತಿ ಹೆಚ್ಚು ಬೆಲೆಯ ಟಿಕೆಟ್‌ಗೆ ಸುಮಾರು ₹72,000 ನಿಗದಿಪಡಿಸಲಾಗಿತ್ತು.

2022ರ ವಿಂಬಲ್ಡನ್ ಟೂರ್ನಿಯ ರನ್ನರ್ ಅಪ್ ಆಗಿರುವ ಕಿರ್ಗಿಯೋಸ್ ಅವರು ಮಣಿಕಟ್ಟು ಮತ್ತು ಮೊಣಗಂಟಿನ ಗಾಯದ ಸಮಸ್ಯೆಗಳಿಂದಾಗಿ ಮೂರು ವರ್ಷಗಳ ಅವಧಿಯಲ್ಲಿ ಆರು ಎಟಿಪಿ ಟೂರ್ ಪಂದ್ಯಗಳನ್ನಷ್ಟೇ ಆಡಿದ್ದರು. ಇಬ್ಬರಿಗೂ ಪಾಯಿಂಟ್ ಗಳಿಕೆಗೆ ಎರಡು ಸರ್ವ್ ಬದಲು ಒಂದು ಸರ್ವ್ ಅವಕಾಶ ಮಾತ್ರ ನೀಡಲಾಯಿತು. ಬೆಲರೂಸ್‌ನ ಆಟಗಾರ್ತಿ ಸಬಲೆಂಕಾ ಅವರ ಬದಿಯ ಅಂಕಣದ ಸುತ್ತಳತೆ ಶೇ10ರಷ್ಟು ಕಡಿಮೆಯಿತ್ತು.

ಮೂರನೇ ಮ್ಯಾಚ್ ಪಾಯಿಂಟ್‌ನಲ್ಲಿ ಗೆಲುವು ಪಡೆದಾಗ 30 ವರ್ಷದ ಕಿರ್ಗಿಯೋಸ್ ಬೆವರಿನಿಂದ ತೊಯ್ದು ತೊಪ್ಪೆಯಾಗಿದ್ದರು.

'ಇದು ಟೆನಿಸ್ ಕ್ರೀಡೆಗೆ ಮಹತ್ವದ ಸೋಪಾನ' ಎಂದು ಕಿರ್ಗಿಯೋಸ್ ಹೇಳಿದರು.

'ನಾನು ಆಟವನ್ನು ಆಸ್ವಾದಿಸಿದೆ. ಜನವರಿಯಲ್ಲಿ ನಡೆಯುವ ಆಸ್ಟ್ರೇಲಿಯನ್ ಓಪನ್‌ಗೆ ಒಳ್ಳೆಯ ಸಿದ್ಧತೆಯಾಯಿತು. ಮುಯ್ಯಿ ತೀರಿಸಲು ಮತ್ತೊಮ್ಮೆ ಕಿರ್ಗಿಯೋಸ್ ಜೊತೆ ಆಡುವೆ' ಎಂದು 27 ವರ್ಷ ವಯಸ್ಸಿನ ಆಟಗಾರ್ತಿ ಹೇಳಿದರು.

1973ರಲ್ಲಿ ಮೊದಲ 'ಬ್ಯಾಟಲ್ ಆಫ್ ಸೆಕ್ಸಸ್' ಹೆಸರಿನಲ್ಲಿ ನಡೆದ ಪಂದ್ಯದಲ್ಲಿ ಅಮೆರಿಕದ ಬಿಲ್ಲಿ ಜೀನ್ ಕಿಂಗ್ ಅವರು ಸ್ವದೇಶದ ಬಾಬಿ ರಿಗ್ಸ್ ಅವರನ್ನು ನೇರ ಸೆಟ್‌ಗಳಲ್ಲಿ ಸೋಲಿಸಿದ್ದರು. ಆ ಪಂದ್ಯ ಹೌಸ್ಟನ್‌ನ ಆಸ್ಟ್ರಡೋಮ್‌ನಲ್ಲಿ ನಡೆದಿತ್ತು. ಮಹಿಳೆಯರಿಗೂ ಸಮಾನ ಬಹುಮಾನ ಹಣ ನೀಡಬೇಕು ಎಂದು ಬಿಲ್ಲಿ ಜೀನ್ ಕಿಂಗ್ ಅಭಿಯಾನ ನಡೆಸುತ್ತಿದ್ದ ವೇಳೆಯೇ ಆ ಪಂದ್ಯ ನಡೆದಿತ್ತು. 52 ವರ್ಷಗಳ ನಂತರ ಮತ್ತೊಮ್ಮೆ ಈ ಸರಣಿಯ ಪಂದ್ಯ ನಡೆದರೂ ಆ ಪಂದ್ಯದಷ್ಟು ಪ್ರಾಮುಖ್ಯ ಪಡೆಯಲಿಲ್ಲ. ಯುವ ಪ್ರೇಕ್ಷಕರನ್ನು ಸೆಳೆದು ಹಣ ಮಾಡಲು ಬಯಸಿದಂತೆ ಕಂಡಿತು.




ಸಬಲೆಂಕಾ ತಮ್ಮ ಮಗಳು ನಿಕೋಲಿ ಅವರೊಂದಿಗೆ 'ಬ್ಯಾಟಲ್ ಆಫ್ ಸೆಕ್ಸಸ್' ಟೆನಿಸ್ ಪ್ರದರ್ಶನ ಪಂದ್ಯದ ನಂತರ ಎದುರಾಳಿ ನಿಕ್ ಕಿರ್ಗಿಯೋಸ್ ಜೊತೆ ಸಂಭ್ರಮಿಸಿದರು

ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸುದ್ದಿ

ಜ.6ರಂದು ದೆಹಲಿ ಪರ ಕೊಹ್ಲಿ ಕಣಕ್ಕೆ

ನವದೆಹಲಿ (ಪಿಟಿಐ): ಬ್ಯಾಟಿಂಗ್ ದಿಗ್ಗಜ ವಿರಾಟ್ ಕೊಹ್ಲಿ ಅವರು ಜನವರಿ 6ರಂದು ರೈಲ್ವೇಸ್ ವಿರುದ್ಧ ಬೆಂಗಳೂರಿನ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ನಡೆಯಲಿರುವ ವಿಜಯ್ ಹಜಾರೆ ಟ್ರೋಫಿ ಏಕದಿನ ಪಂದ್ಯದಲ್ಲಿ ದೆಹಲಿ ತಂಡಕ್ಕೆ ಆಡಲಿದ್ದಾರೆ ಎಂದು ಡಿಡಿಸಿಎ ಅಧ್ಯಕ್ಷ ರೋಹನ್ ಜೇಟ್ಲಿ ಸೋಮವಾರ ತಿಳಿಸಿದ್ದಾರೆ.



ಕೇಂದ್ರೀಯ ಗುತ್ತಿಗೆ ಪಡೆದ ಆಟಗಾರರೆಲ್ಲರೂ ವಿಜಯ್ ಹಜಾರೆ ಟೂರ್ನಿಯಲ್ಲಿ ಕಡೇಪಕ್ಷ ಎರಡು ಪಂದ್ಯಗಳನ್ನಾದರೂ ಆಡಬೇಕು ಎಂದು ಬಿಸಿಸಿಐ ಫರ್ಮಾನು ಹೊರಡಿಸಿತ್ತು. ಕೊಹ್ಲಿ ಈಗಾಗಲೇ ಎರಡು ಪಂದ್ಯಗಳನ್ನು ಆಡಿದ್ದಾರೆ. ನ್ಯೂಜಿಲೆಂಡ್ ವಿರುದ್ಧ ಜನವರಿಯಲ್ಲಿ ನಡೆಯಲಿರುವ ತವರಿನ ಸರಣಿಗೆ ಸಿದ್ಧತೆಗೆ ಅನುಕೂಲವಾಗುವಂತೆ ಅವರು ಮೂರನೇ ಪಂದ್ಯ ಆಡಲು ಬಯಸಿದ್ದಾರೆ.

'ಈಗಿನ ಮಾಹಿತಿಯ ಪ್ರಕಾರ ಅವರು ರೈಲ್ವೇಸ್ ವಿರುದ್ಧ ಪಂದ್ಯ ಆಡಲಿದ್ದಾರೆ' ಎಂದು ರೋಹನ್ ಜೇಟ್ಲಿ ಪಿಟಿಐಗೆ ತಿಳಿಸಿದ್ದಾರೆ. ಕೊಹ್ಲಿ ಉತ್ತಮ ಲಯದಲ್ಲಿದ್ದು ಆಡಿದ ಎರಡು ಪಂದ್ಯಗಳಲ್ಲಿ ಕ್ರಮವಾಗಿ 131 ಮತ್ತು 77 ರನ್ ಗಳಿಸಿದ್ದಾರೆ.

8 ವಿಕೆಟ್ ಪಡೆದು ಸೋನಮ್ ದಾಖಲೆ

ನವದೆಹಲಿ (ಪಿಟಿಐ): ಅಂತರ ರಾಷ್ಟ್ರೀಯ ಟಿ20 ಕ್ರಿಕೆಟ್ ಪಂದ್ಯವೊಂದರಲ್ಲಿ 8 ವಿಕೆಟ್ ಪಡೆದ ಮೊದಲ ಬೌಲರ್ ಎಂಬ ಹಿರಿಮೆಗೆ ಭೂತಾನ್‌ನ ಎಡಗೈ ಸ್ಪಿನ್ನರ್ ಸೋನಮ್ ಯೆಶೆ ಪಾತ್ರರಾಗಿದ್ದಾರೆ. ಭೂತಾನ್‌ನ ಗೆಲೆಫು ಮೈಂಡ್‌ಫುಲ್‌ನೆಸ್ ಸಿಟಿಯಲ್ಲಿ ಡಿ.26ರಂದು ನಡೆದ, ಮ್ಯಾನ್ಮಾರ್ ಎದುರಿನ ಟಿ20 ಸರಣಿಯ ಮೂರನೇ ಪಂದ್ಯದಲ್ಲಿ ಅವರು ಈ ಸಾಧನೆ ಮಾಡಿದ್ದಾರೆ.

ಮೊದಲು ಬ್ಯಾಟ್ ಮಾಡಿದ ಆತಿಥೇಯ ತಂಡವು ನಿಗದಿತ ಓವರ್‌ಗಳಲ್ಲಿ 9 ವಿಕೆಟ್‌ಗೆ 127 ರನ್ ಗಳಿಸಿತ್ತು. ಸಾಧಾರಣ ಗುರಿ ಬೆನ್ನಟ್ಟಿದ ಮ್ಯಾನ್ಮಾರ್ ತಂಡವು 9.2 ಓವರ್‌ಗಳಲ್ಲಿ 45 ರನ್‌ಗಳಿಗೆ ಕುಸಿಯಿತು. 22 ವರ್ಷ ವಯಸ್ಸಿನ ಸೋನಮ್ ಅವರು 4 ಓವರ್ ಬೌಲ್ ಮಾಡಿ ಕೇವಲ 7 ರನ್‌ಗಳಿಗೆ 8 ವಿಕೆಟ್ ಪಡೆದರು. ಅದರೊಂದಿಗೆ, ಭೂತಾನ್ 82 ರನ್‌ಗಳ ಗೆಲುವು ಸಾಧಿಸಿತು. ಮಲೇಷ್ಯಾದ ವೇಗಿ ಸಿರಾಜುಲ್ ಇದ್ರಸ್ ಅವರು 2023ರಲ್ಲಿ ಚೀನಾ ವಿರುದ್ಧದ ಪಂದ್ಯದಲ್ಲಿ 8 ರನ್‌ಗಳಿಗೆ 7 ವಿಕೆಟ್ ಪಡೆದಿದ್ದು ಈವರೆಗಿನ ಶ್ರೇಷ್ಠ ದಾಖಲೆಯಾಗಿತ್ತು. ಬಹ್ರೇನ್‌ನ ಅಲಿ ದಾವೂದ್ ಅವರು ಈ ವರ್ಷದ ಆರಂಭದಲ್ಲಿ ಭೂತಾನ್ ವಿರುದ್ಧದ ಪಂದ್ಯದಲ್ಲಿ 19 ರನ್ ನೀಡಿ 7 ವಿಕೆಟ್ ಪಡೆದಿದ್ದರು.



ಹೈದರಾಬಾದಿನ ಗಚ್ಚಿಬೌಲಿಯಲ್ಲಿ ನಡೆದ 36ನೇ ದಕ್ಷಿಣ ವಲಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಗೆದ್ದ ಕರ್ನಾಟಕ ತಂಡ

36ನೇ ದಕ್ಷಿಣ ವಲಯ ಈಜು ಚಾಂಪಿಯನ್‌ಷಿಪ್‌ಗೆ ತೆರೆ

ಕರ್ನಾಟಕ ತಂಡಕ್ಕೆ ಸಮಗ್ರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರೂ ದಿನ ಪಾರಮ್ಯ ಮೆರೆದ ಕರ್ನಾಟಕದ ಈಜುಪಟುಗಳು ಹೈದರಾಬಾದಿನ ಗಚ್ಚಿಬೌಲಿಯಲ್ಲಿ ಸೋಮವಾರ ಮುಕ್ತಾಯಗೊಂಡ 36ನೇ ದಕ್ಷಿಣ ವಲಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

ಕರ್ನಾಟಕದ ತಂಡವು ಒಟ್ಟು 1022 ಅಂಕಗಳೊಂದಿಗೆ ಅಗ್ರಸ್ಥಾನ ಪಡೆಯಿತು. ತೆಲಂಗಾಣ (425 ಅಂಕ) ಮತ್ತು ತಮಿಳುನಾಡು (414 ಅಂಕ) ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನದೊಂದಿಗೆ ಅಭಿಯಾನವನ್ನು ಮುಗಿಸಿದವು.

ಮೊದಲೆರಡು ದಿನಗಳಲ್ಲಿಯೂ ಮಿಂಚು ಹರಿಸಿದ್ದ ರಾಜ್ಯದ ಈಜುಪಟುಗಳು ಕೊನೆಯ ದಿನವೂ ಪದಕಗಳ ಬೇಟೆ ಮುಂದುವರಿಸಿದರು. 17 ವರ್ಷದೊಳಗಿನವರ ಬಾಲಕ ಮತ್ತು ಬಾಲಕಿಯರ 4x100 ಮೀ. ಫ್ರೀಸ್ಟೈಲ್ ರಿಲೆ ಸೇರಿದಂತೆ ಎಲ್ಲಾ ವಿಭಾಗಗಳ ರಿಲೆ ಸ್ಪರ್ಧೆಗಳಲ್ಲೂ ಪಾರಮ್ಯ ಸಾಧಿಸಿದರು.

ಬಾಲಕರ ಮತ್ತು ಬಾಲಕಿಯರ ವಾಟರ್ ಪೋಲೊ ತಂಡಗಳು ರನ್ನರ್‌ಅಪ್‌ನೊಂದಿಗೆ ಅಭಿಯಾನವನ್ನು ಮುಗಿಸಿದವು. ರಾಜ್ಯದ ಎರಡೂ ತಂಡಗಳು ಕೇರಳದ ವಿರುದ್ಧ ಮುಗ್ಗರಿಸಿದವು.

ಈಜು ಫಲಿತಾಂಶ: (17 ವರ್ಷದೊಳಗಿನವರು) ಬಾಲಕರು: 400 ಮೀ. ಫ್ರೀಸ್ಟೈಲ್: ಸ್ವರೂಪ್ ಧನುಚೆ (ಕರ್ನಾಟಕ, ಕಾಲ: 4ನಿ.22.14ಸೆ)–1, ರಾಘವ್ ಸ್ವಚ್ಛಂದಂ (ಕರ್ನಾಟಕ)–2, ಅಸ್ಜದ್ ಎಂ ಜಮೀಲ್ (ಪುದುಚೇರಿ)–3. **200 ಮೀ. ಬ್ರೆಸ್ಟ್‌ಸ್ಟ್ರೋಕ್:** ವೇದಾಂತ ವಿ.ಮಧಿರ (ಕರ್ನಾಟಕ, ಕಾಲ: 2ನಿ.08–41ಸೆ)–1, ಯಶ್ ಕಾರ್ತಿಕ್ (ಕರ್ನಾಟಕ)–2, ಸಮರ್ಥ್ ಪಿ.ಜೋಶಿ (ಕೇರಳ)–3. **100 ಮೀ. ಬ್ರೆಸ್ಟ್‌ಸ್ಟ್ರೋಕ್:** ಗಣೇಶ್ ಚಕ್ರಧರ್ ಜಕ್ಕಾ (ಆಂಧ್ರಪ್ರದೇಶ, ಕಾಲ: 1ನಿ.08–28ಸೆ)–1, ತನುಜ್ ಸಿಂಗ್ (ಕರ್ನಾಟಕ)–2, ಜೋರ್ಡನ್ ಡೊಮಿನಿಕ್ ಫ್ರಾಂಕ್ಲಿನ್ (ತೆಲಂಗಾಣ)–3. **4x100 ಮೀ. ಫ್ರೀಸ್ಟೈಲ್ ರಿಲೆ:** ಕರ್ನಾಟಕ (ಕಾಲ: 3ನಿ.43.19ಸೆ)–1, ತೆಲಂಗಾಣ–2, ಕೇರಳ–3 **ವಾಟರ್ ಪೋಲೊ:** ಫೈನಲ್: ಕೇರಳಕ್ಕೆ 12–6ರಿಂದ ಕರ್ನಾಟಕ ವಿರುದ್ಧ ಜಯ **ಬಾಲಕಿಯರು:** 400 ಮೀ. ಫ್ರೀಸ್ಟೈಲ್: ಅದಿತಿ ವಿನಾಯಕ ರೆಲೇಕರ್ (ಕರ್ನಾಟಕ, ಕಾಲ: 4ನಿ.47.38ಸೆ)–1, ಆರ್ಣ ಎಂ.ಒಇ. (ತಮಿಳುನಾಡು)–2, ಮಿಹಿತಾ ದತ್ತ (ಕರ್ನಾಟಕ)–3 **200 ಮೀ. ಬ್ರೆಸ್ಟ್‌ಸ್ಟ್ರೋಕ್:** ತನ್ಮಯಿ ಧರ್ಮೇಶ್ (ಕರ್ನಾಟಕ, ಕಾಲ: 2ನಿ.37.78ಸೆ)–1, ಆರ್ಣ ಹೆಗ್ಡೆ (ಕರ್ನಾಟಕ)–2, ಆವಂತಿಕಾ ಪ್ರದೀಪ್ (ಕೇರಳ)–3 **100 ಮೀ. ಬ್ರೆಸ್ಟ್‌ಸ್ಟ್ರೋಕ್:** ಪಾವನಿ ಸರಾಯು (ಆಂಧ್ರಪ್ರದೇಶ, ಕಾಲ: 1ನಿ.20.85ಸೆ)–1, ಸಮನ್ವಿ (ಕರ್ನಾಟಕ)–2, ತಿಸ್ಯ ಸೋನಾರ್ (ಕರ್ನಾಟಕ)–3 **4x100 ಫ್ರೀಸ್ಟೈಲ್ ರಿಲೆ:** ಕರ್ನಾಟಕ (4ನಿ.16.69ಸೆ)–1, ತೆಲಂಗಾಣ–2, ಕೇರಳ–3 **ವಾಟರ್ ಪೋಲೊ:** ಫೈನಲ್: ಕೇರಳಕ್ಕೆ 11–8ರಿಂದ ಕರ್ನಾಟಕ ತಂಡದ ವಿರುದ್ಧ ಗೆಲುವು.

ಕರ್ನಾಟಕ ಬಾಲಕಿಯರಿಗೆ ಪ್ರಶಸ್ತಿ

ಪಿಯು ವಿದ್ಯಾರ್ಥಿಗಳ ರಾಷ್ಟ್ರೀಯ ನೆಟ್‌ಬಾಲ್ ಟೂರ್ನಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಅಂತಿಮ ಕ್ಷಣದವರೆಗೂ ರೋಚಕವಾಗಿದ್ದ ಪಂದ್ಯದಲ್ಲಿ ಪಟ್ಟು ಬಿಡದೆ ಸೆಣಸಿದ ಕರ್ನಾಟಕ ಬಾಲಕಿಯರ ತಂಡ ಸ್ಕೂಲ್ ಗೇಮ್ಸ್ ಫೆಡರೇಷನ್ ಆಫ್ ಇಂಡಿಯಾ (ಎಸ್‌ಜಿಎಫ್‌ಐ) ಪದವಿಪೂರ್ವ ವಿದ್ಯಾರ್ಥಿಗಳ ರಾಷ್ಟ್ರೀಯ ನೆಟ್‌ಬಾಲ್ ಟೂರ್ನಿಯ ಚಾಂಪಿಯನ್ ಆಗಿ ಹೊರ ಹೊಮ್ಮಿತು. ಬಾಲಕರ ವಿಭಾಗದಲ್ಲಿ ಕರ್ನಾಟಕ ರನ್ನರ್ ಅಪ್ ಆಯಿತು.

ಶಾಲಾ ಶಿಕ್ಷಣ ಇಲಾಖೆ ಹಾಗೂ ಮಂಗಳೂರು ತಾಲ್ಲೂಕಿನ ಎಡಪದವು ಸ್ವಾಮಿ ವಿವೇಕಾನಂದ ಪದವಿಪೂರ್ವ ಕಾಲೇಜು ಆಶ್ರಯದಲ್ಲಿ ವಾಮಂಜೂರಿನ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಭವನದಲ್ಲಿ ನಡೆದ ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ಕರ್ನಾಟಕ 30–26ರಲ್ಲಿ ಕೇರಳವನ್ನು ಮಣಿಸಿತು.

ಲೀಗ್ ಪಂದ್ಯಗಳ ಹಂತದಿಂದಲೇ ಅಮೋಘ ಆಟ ಪ್ರದರ್ಶಿಸುತ್ತ ಬಂದಿರುವ ಆತಿಥೇಯ ಕಾಲೇಜಿನ ನಿಖಿತಾ ನಾಯಕತ್ವದ ತಂಡಕ್ಕೆ ಫೈನಲ್‌ನಲ್ಲಿ ಕೇರಳದ ಬಾಲಕಿಯರು ಪ್ರಬಲ ಪೈಪೋಟಿ ನೀಡಿದರು. ಆದರೆ ಕರ್ನಾಟಕ ತಂಡ ಆಕ್ರಮಣದ ಜೊತೆಯಲ್ಲಿ ಎಚ್ಚರಿಕೆಯ ಆಟವನ್ನೂ ಪ್ರದರ್ಶಿಸಿ ಜಯ ತಮ್ಮದಾಗಿಸಿಕೊಂಡರು.

ನಿತ್ಯಾಶ್ರೀ, ಇಂದು ಜಿ, ನಿಸರ್ಗ ಎಚ್.ಎಸ್, ಸಿಂಚನಾ, ರಕ್ಷಾ, ಸುಪ್ರಿಯಾ ಎಚ್.ಎಸ್, ದೀಪ್ತಿ, ಹರ್ಷಿತಾ ಎಲ್, ಅನ್ವಿತಾ, ನಿಕಿತಾ, ಲಾವಣ್ಯ, ಲಕ್ಷ್ಮೀ ಮಹಾದೇವ, ಸಾಹಿತ್ಯ ಎಂ.ಗೊಂಡಬಾಳ, ಸಂಧ್ಯಾ, ಹೇಮಾ ಮಣ್ಣೂರ, ತಪಸ್ಯಾ ನಾಯಕ್ ಮತ್ತು ದಿವ್ಯಾ ತಂಡದಲ್ಲಿದ್ದರು.

ಮಹಾರಾಷ್ಟ್ರವನ್ನು 39–17ರಲ್ಲಿ ಮಣಿಸಿದ ಪಂಜಾಬ್ ಮೂರನೇ ಸ್ಥಾನ ಗಳಿಸಿತು.

ಬಾಲಕರ ವಿಭಾಗದ ಫೈನಲ್‌ನಲ್ಲಿ ಕರ್ನಾಟಕ ಕೆಚ್ಚೆದೆಯಿಂದ ಹೋರಾಡಿ ವೀರೋಚಿತ ಸೋಲು ಅನುಭವಿಸಿತು. ಪಂಜಾಬ್ 37–35ರಲ್ಲಿ ಗೆಲುವು ದಾಖಲಿಸಿತು. ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಚಂಡೀಗಢವನ್ನು ಕೇರಳ 34–16ರಲ್ಲಿ ಮಣಿಸಿತು.



ಪ್ರಶಸ್ತಿ ಗೆದ್ದ ಕರ್ನಾಟಕ ಬಾಲಕಿಯರ ತಂಡದವರು ಮ್ಯಾನೇಜರ್ ಅಪರ್ಣಾ ಜೊತೆ ಸಂಭ್ರಮಿಸಿದರು

ಗೋವಾ ವಿರುದ್ಧ ಕರ್ನಾಟಕ ಮೇಲುಗೈ

ಪ್ರಜಾವಾಣಿ ವಾರ್ತೆ



ಸುವಿಕ್ ಗಿಲ್

ಬೆಂಗಳೂರು: ಎಡಗೈ ಸ್ಪಿನ್ನರ್ ಸುವಿಕ್ ಗಿಲ್ ಅವರ ಐದು ವಿಕೆಟ್ ಗೊಂಚಲಿನ ನೆರವಿನಿಂದ ಕರ್ನಾಟಕ ತಂಡವು ವಿಜಯ್ ಮರ್ಚೆಂಟ್ ಟ್ರೋಫಿ (16 ವರ್ಷದೊಳಗಿನವರ) ಎಲೀಟ್ ಕ್ರಿಕೆಟ್ ಟೂರ್ನಿಯ ಪಂದ್ಯದ ಮೊದಲ ದಿನವಾದ ಸೋಮವಾರ ಗೋವಾ ತಂಡವನ್ನು 160 ರನ್‌ಗಳಿಗೆ ಕಟ್ಟಿಹಾಕಿತು.

ಬ್ಯಾಟಿಂಗ್‌ನಲ್ಲಿಯೂ ಪಾರಮ್ಯ ಸಾಧಿಸಿದ ಆರೂಷ್ ಜೈನ್ ಬಳಗವು ದಿನದಾಟದ ಅಂತ್ಯಕ್ಕೆ 33 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 154 ರನ್ ಗಳಿಸಿದೆ.

ರಾಯಪುರದ ಆರ್‌ಡಿಸಿಎ ಮೈದಾನದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್‌ಗೆ ಇಳಿದ ಗೋವಾ ತಂಡಕ್ಕೆ ಸುವಿಕ್ (32ಕ್ಕೆ5) ಹಾಗೂ ಸುಕೃತ್ ಜೆ. (27ಕ್ಕೆ3) ಆಘಾತ ನೀಡಿದರು. ಆರಂಭ ಆಟಗಾರ ಅದೀಪ್ ಮಿಸ್ಕಿನ್ (68) ಅರ್ಧಶತಕ ಗಳಿಸಿದ್ದು ಬಿಟ್ಟರೆ ಉಳಿದ ಆಟಗಾರರು ಉಪಯುಕ್ತ ಕೊಡುಗೆ ನೀಡಲು ವಿಫಲರಾದರು. ಗೋವಾ 55 ಓವರ್‌ಗಳಲ್ಲಿ ಆಲೌಟಾಯಿತು.

ಇನಿಂಗ್ಸ್ ಆರಂಭಿಸಿದ ಕರ್ನಾಟಕ ತಂಡಕ್ಕೆ ಆರಂಭ ಆಟಗಾರರಾದ ನಿರಂಜನ್ ಅಶೋಕ್ (ಔಟಾಗದೇ 72) ಹಾಗೂ ಆರ್. ರೋಹಿತ್ ರೆಡ್ಡಿ (ಔಟಾಗದೇ 78) ಅವರು ಅಜೇಯ ಅರ್ಧಶತಕಗಳೊಂದಿಗೆ ಭದ್ರ ಬುನಾದಿ ಹಾಕಿಕೊಟ್ಟರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಗೋವಾ: 55 ಓವರ್‌ಗಳಲ್ಲಿ 160 (ಅದೀಪ್ ಮಿಸ್ಕಿನ್ 68; ಸುವಿಕ್ ಗಿಲ್ 32ಕ್ಕೆ5, ಸುಕೃತ್ ಜೆ. 27ಕ್ಕೆ3). ಕರ್ನಾಟಕ: 33 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 154 (ನಿರಂಜನ್ ಅಶೋಕ್ ಔಟಾಗದೇ 72, ಆರ್. ರೋಹಿತ್ ರೆಡ್ಡಿ ಔಟಾಗದೇ 78).

ಡಿಕೆಸಿಎ ಫಿಡೆ ರೇಟೆಡ್ ರಾಷ್ಟ್ರೀಯ ಚೆಸ್ ಟೂರ್ನಿ

ಐಎಂಗೆ ಸೋಲುಣಿಸಿದ 11ರ ಪೋರ

ಪ್ರಜಾವಾಣಿ ವಾರ್ತೆ

ಮಂಗಳೂರು: ಇಂಟರ್‌ನ್ಯಾಷನಲ್ ಮಾಸ್ಟರ್ ಬಾಲಸುಬ್ರಮಣ್ಯಂ ರಾಮನಾಥನ್ ವಿರುದ್ಧ ಜಯ ಸಾಧಿಸಿ ಕರ್ನಾಟಕದ 11 ವರ್ಷದ ಬಾಲಕ ಇಶಾನ್ ಭನ್ಸಾಲಿ ಇಲ್ಲಿ ನಡೆಯುತ್ತಿರುವ ಫಿಡೆ ರೇಟೆಡ್ ರಾಷ್ಟ್ರೀಯ ಕ್ಲಾಸಿಕಲ್ ಚೆಸ್ ಟೂರ್ನಿಯ ನಾಲ್ಕನೇ ದಿನವಾದ ಸೋಮವಾರ ಗಮನ ಸೆಳೆದರು.

ಬಾಲಸುಬ್ರಮಣ್ಯಂ ಅವರಿಗೆ ಟೂರ್ನಿಯಲ್ಲಿ ಎರಡನೇ ಶ್ರೇಯಾಂಕ ನೀಡಿದ್ದು 2039 ರೇಟಿಂಗ್ ಹೊಂದಿದ್ದಾರೆ. 1863 ರೇಟಿಂಗ್ ಇರುವ, 13ನೇ ಶ್ರೇಯಾಂಕಿತ ಇಶಾನ್ 8 ಸುತ್ತುಗಳ ಮುಕ್ತಾಯಕ್ಕೆ 7 ಪಾಯಿಂಟ್‌ಗಳೊಂದಿಗೆ ಅಗ್ರಸ್ಥಾನದಲ್ಲಿರುವ ಏಕೈಕ ಆಟಗಾರ ಎನಿಸಿಕೊಂಡರು.

ಅಗ್ರ ಶ್ರೇಯಾಂಕದ ಕೇರಳದ ಮಾರ್ತಾಂಡನ್ ಸೇರಿದಂತೆ ಐವರು 6.5 ಪಾಯಿಂಟ್‌ಗಳೊಂದಿಗೆ ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ. ಉತ್ತಮ ಟೈ ಬ್ರೇಕರ್ ಆಧಾರದಲ್ಲಿ ಗೋವಾದ ಜೋಶುವಾ ಟೆಲಿಸ್ ಎರಡನೇ ಸ್ಥಾನದಲ್ಲಿರುವವರ ಪಟ್ಟಿಯಲ್ಲಿ ಮೊದಲಿಗರಾಗಿದ್ದು ಕರ್ನಾಟಕದ ಗವಿಸಿದ್ದಯ್ಯ, ಗುಜರಾತ್‌ನ ಅಡಲ್ಜಾ ವಂಶ್ ಮತ್ತು ತಮಿಳುನಾಡಿನ ವಿಘ್ನೇಶ್ವರನ್ ಪಟ್ಟಿಯಲ್ಲಿರುವ ಇತರರು.



ಇಶಾನ್ ಭನ್ಸಾಲಿ

11 ವಯಸ್ಸಿನ ಮಹಾರಾಷ್ಟ್ರ ಆಟಗಾರ ವಿಹಾನ್ ರಾವ್ ಎದುರು 4ನೇ ಸುತ್ತಿನಲ್ಲಿ ಸೋತಿದ್ದ ಮಾರ್ತಾಂಡನ್ ನಂತರದ ಸುತ್ತುಗಳಲ್ಲಿ ಚೇತರಿಸಿಕೊಂಡರೂ ಅಗ್ರಸ್ಥಾನಕ್ಕೇರಲು ಸಾಧ್ಯವಾಗಲಿಲ್ಲ. ಮಂಗಳವಾರ ನಡೆಯಲಿರುವ ಕೊನೆಯ ಸುತ್ತಿನಲ್ಲಿ ಇಶಾನ್ ಭನ್ಸಾಲಿ ವಿರುದ್ಧ ಮಾರ್ತಾಂಡನ್ ಸೆಣಸುವರು.

ಎಂಟನೇ ಸುತ್ತಿನ ಪ್ರಮುಖ ಫಲಿತಾಂಶಗಳು: ಇಶಾನ್ ಭನ್ಸಾಲಿಗೆ ಬಾಲಸುಬ್ರಹ್ಮಣ್ಯಂ ರಾಮನಾಥನ್ ವಿರುದ್ಧ ಗೆಲುವು; ಮಾರ್ತಾಂಡನ್‌ಗೆ ಸಂಜಯ್ ಸಿಂಧಿಯಾ ವಿರುದ್ಧ, ಅಡಲ್ಜಾ ವಂಶ್‌ಗೆ ಸನೂಸ್ ಶಿಬು ವಿರುದ್ಧ ಜಯ. ಗವಿಸಿದ್ದಯ್ಯ ಮತ್ತು ವಿಘ್ನೇಶ್ವರನ್, ಜೋಶುವಾ ಮತ್ತು ಅನಿಲ್ ಕುಮಾರ್, ಇಂದ್ರಜಿತ್ ಮತ್ತು ಸಿದ್ಧಾರ್ಥ್, ಅಜೀಶ್ ಆ್ಯಂಟನಿ ಮತ್ತು ಋಷಿಕೇಶ್, ವೆಂಕಟನಾಗ ಮತ್ತು ರವೀಶ್ ಕೋಟೆ, ಜೋಶ್ವಿನ್ ಮತ್ತು ವೈಷ್ಣವ್ ನಡುವಿನ ಪಂದ್ಯ ಡ್ರಾ.

ವಿಶ್ವ ಬ್ಲಿಟ್ಝ್ ಚೆಸ್ ಚಾಂಪಿಯನ್‌ಷಿಪ್

ಮುನ್ನಡೆಯಲ್ಲಿ ಅರ್ಜುನ್ ಇರಿಗೇಶಿ

ದೋಹಾ (ಪಿಟಿಐ): ಹತ್ತನೇ ಶ್ರೇಯಾಂಕದ ಭಾರತದ ಅರ್ಜುನ್ ಇರಿಗೇಶಿ ಅವರು ಸೋಮವಾರ ಆರಂಭವಾದ ವಿಶ್ವ ಬ್ಲಿಟ್ಝ್ ಚೆಸ್ ಚಾಂಪಿಯನ್‌ಷಿಪ್‌ನ 11 ಸುತ್ತುಗಳ ನಂತರ ಅಗ್ರಸ್ಥಾನದಲ್ಲಿದ್ದಾರೆ.

ಫ್ರಾನ್ಸ್‌ನ ಮ್ಯಾಕ್ಸಿಂ ವೇಷಿಯರ್ ಲಗ್ರಾವ್ ಅವರೂ ಇಷ್ಟೇ ಅಂಕ ಗಳಿಸಿದ್ದರೂ ಟೈಬ್ರೇಕರ್‌ನಲ್ಲಿ ಸದ್ಯ ಎರಡನೇ ಸ್ಥಾನದಲ್ಲಿದ್ದಾರೆ.

ಈ ಚಾಂಪಿಯನ್‌ಷಿಪ್ ಎರಡು ದಿನ ನಡೆಯಲಿದೆ. ಓಪನ್ ವಿಭಾಗದಲ್ಲಿ 19 ಸುತ್ತುಗಳಿದ್ದು, ನಂತರ ಸೆಮಿಫೈನಲ್, ಫೈನಲ್ ಪಂದ್ಯಗಳು ನಡೆಯಲಿವೆ. ಮಹಿಳಾ ವಿಭಾಗದಲ್ಲಿ 15 ಸುತ್ತುಗಳಿದ್ದು, ಸೆಮಿಫೈನಲ್, ಫೈನಲ್ ಪಂದ್ಯಗಳು ನಡೆಯಲಿವೆ.

ಅರ್ಜುನ್ ಎಂಟು ಪಂದ್ಯಗಳನ್ನು ಗೆದ್ದು, ಎರಡು ಡ್ರಾ ಮಾಡಿಕೊಂಡು, ಒಂದು ಪಂದ್ಯ ಸೋತಿದ್ದಾರೆ. ರಷ್ಯಾದ ಡೇನಿಯಲ್ ದುಬೋವ್ (8.5) ಮೂರನೇ ಸ್ಥಾನದಲ್ಲಿದ್ದಾರೆ.



ಮಹಿಳೆಯರ ವಿಭಾಗದಲ್ಲಿ ಜರ್ಮನಿಯ ಎಲಿನ್ ರೋಬರ್ಸ್ (8.5 ಅಂಕ) ಅವರು 10 ಸುತ್ತುಗಳ ಬಳಿಕ ಅಗ್ರಸ್ಥಾನಕ್ಕೇರಿದ್ದಾರೆ. ರ್‍ಯಾಪಿಡ್ ವಿಭಾಗದಲ್ಲಿ ಚಾಂಪಿಯನ್ ಕಿರೀಟ ಧರಿಸಿದ ರಷ್ಯಾದ ಅಲೆಕ್ಸಾಂಡ್ರಾ ಗೊರ್ಯಾಚ್ಕಿನಾ (8) ಎರಡನೇ ಸ್ಥಾನದಲ್ಲಿದ್ದಾರೆ. ಉಜ್ಬೇಕಿಸ್ತಾನದ ಉಮಿದಾ ಒಮಾನೋವಾ (8) ಮತ್ತು ಬಲ್ಗೇರಿಯಾದ ಅಂಟೊನೇಟಾ ಸ್ಟೆಫಾನೋವಾ (8) ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನದಲ್ಲಿದ್ದಾರೆ.

